UNIVERSAL LIBRARY
OU_198022
UNIVERSAL LIBRARY

# ಪನ್ನಾಮತಿ

ಅಥವಾ

## (ಪ್ರಣಯಲೀಲಾ)

ಲೇಖಕ.—ಎಸ್. ಎ. ಕುಲಕರ್ಣಿ

ಪ್ರಕಾಶಕರು.—ಎಂ. ಎಸ್. ರಾವ್ ಕಂಪೆನಿ,

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು

ಬೆಂಗಳೂರು ಸಿಟಿ

*Price : Library Edition Rs. 1-8-0 ; Ordinary Rs. 1-6-0*

PRINTED AT

THE BANGALORE PRESS, MYSORE ROAD, BANGALORE CITY

1921

# ಪನ್ನಾಮತಿ

ಅಥವಾ

## (ಪ್ರಣಯಲೀಲಾ).

ಲೇಖಕ:—ಎಸ್. ಎ. ಕುಲಕರಣಿ,

ಅ॥ ಮಾಸ್ತರ್. ಗಜೇಂದ್ರಗಡ.

ಮೊದಲನೇಯ ಆವೃತ್ತಿ—೧,೦೦೦ ಪ್ರತಿಗಳು.

1921.

ಪ್ರಕಾಶಕರು:—ಎಂ. ಎಸ್. ರಾವ್ ಕಂಪೆನಿ,

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು, ಬೆಂಗಳೂರು ಸಿಟಿ.

(*All rights reserved by the author*).

[ಬೆಲೆ 1 ರೂ. 6 ಆ.

**ಚಂದ್ರಮತಿ, ಬೆಲೆ 8 ಆಣೆ.**

ರಾ. ಬ. ವೀರೇಶಲಿಂಗಂಪಂತಲು ಅವರಿಂದ ತೆಲುಗಿನಲ್ಲಿ ರಚಿತವಾದ ಪುಸ್ತಕದ ಕನ್ನಡ ಭಾಷಾಂತರ. ಬಾಲಕಿಯರು ಅಗತ್ಯವಾಗಿ ಸಂಗ್ರಹಿಸಿಡಬೇಕಾದ ಪುಸ್ತಕ. ಚಂದ್ರಮತಿಗೆ ಗುರುವು ಉಪದೇಶಿಸಿದ ವಿದ್ಯಾಭ್ಯಾಸವು ಇದರಲ್ಲಿ ವರ್ಣಿತವಾಗಿದೆ. ಹಿಂದೂಗಳಲ್ಲಿ ಆದರ್ಶರಮಣಿಯನ್ನಿಸಿಕೊಂಡ ಚಂದ್ರಮತಿಯ ಚರಿತ್ರೆಯೂ ಮತ್ತು ಹರಿಶ್ಚಂದ್ರನ ಕಥೆಯೂ ಇದರಲ್ಲಿ ವಿವರಗೊಂಡಿವೆ.

BANGALORE PRESS, MYSORE ROAD, BANGALORE CITY

**1st Edition, 1,000 copies,**

**1921.**

*Published by*

**M. S. Rao & Co.,**

Publishers & Book Sellers,

(*Firm recognized by the Government of Mysore.*)

Avenue Road, Bangalore City.

---

**ಸಂತಾಪಕ, ಬೆಲೆ 6 ಆಣೆ.**

ವೇ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳವರಿಂದ ರಚಿತವಾದ ಕಲ್ಪಿತ ಕಾದಂಬರಿ. ಸ್ತ್ರೀಸ್ವಭಾವವು ಎಷ್ಟು ಪವಿತ್ರವಾದುದೆಂಬುದನ್ನೂ, ಸುರಾಪಾನವು ನಿಂದ್ಯವೆಂಬುದನ್ನೂ, ವಂಚಕರಿಗೆ ಪರ್ಯವಸಾನದಲ್ಲಿ ವಿಪತ್ತುಗಳೇ ಉಂಟಾಗುವುವೆಂಬುದನ್ನೂ ಬೋಧಿಸುವುದು.

ಕರ್ನಾಟಕ ವಾಙ್ಮಯಾಭಿವೃದ್ಧಿಗಾಗಿ

ಯತ್ನಿಸುತ್ತಲಿರುವ

**ಗುರುವರ್ಯ ಎಮ್. ಪಿ. ಪೂಜಾರ**

ಕರ್ನಾಟಕ ಪಂಡಿತ, ಟ್ರೇನಿಂಗ ಕಾಲೇಜ ಫಾರಮೆನ್

ಧಾರವಾಡ

ಈ ಮಹನೀಯರಿಗೆ

ಇವರಿಂದ ಉಪಕೃತನಾದ ಲೇಖಕನು

ಈ ಪುಸ್ತಕವನ್ನು

ಸಾದರದಿಂದ ಅರ್ಪಿಸಿದ್ದಾನೆ

# ಪ್ರಸ್ತಾವನೆಯು.

ಜಗಜ್ಜಾಲಕನ ಪರಮಾನುಗ್ರಹದಿಂದ ಈ ಪುಸ್ತಕದ ಮುದ್ರಣಕಾರ್ಯವು ಮುಗಿದು, ಮೂರುವರೆ ಮುಹೂರ್ತಗಳಲ್ಲೊಂದಾದ ವರ್ಷಪ್ರತಿಪದೆಯ ಶುಭ ದಿನದಲ್ಲಿ ಪ್ರಸ್ತಾವನೆ ಬರೆಯುವ ಸುಯೋಗವನ್ನು ಹೊಂದಿದ್ದಕ್ಕಾಗಿ ತುಂಬಾ ಸಂತೋಷನಾಗುತ್ತಿದೆ. ನಾನು ಈ ಐತಿಹಾಸಿಕ ಕಾದಂಬರಿಯನ್ನು ಒಂದು ಬಂಗಾಲಿಯ ಪುಸ್ತಕವನ್ನವಲಂಬಿಸಿ ಬರೆದಿದ್ದೇನೆ. ಪದ್ಮಾವತಿಯು ಕಥೆಯ ನಾಯಿಕೆಯು. ಅಭಿಜ್ಞಾನಶಾಕುಂತಲದಲ್ಲಿಯ ಮುಂದಿನ ಕಥಾನಕಕ್ಕೆ ಕಳೆದುಹೋದ ಉಂಗುರವು ಕಾರಣನಾಗಿರುವಂತೆ ಈ ಕಾದಂಬರಿಯ ಸಂವಿಧಾನಕ್ಕೆ ಪದ್ಮಾವತಿಯ ಪ್ರಣಯಾಂಕುರವು ಕಾರಣೀಭೂತವಾಗಿರುವದರಿಂದ ನಾನು ಈ ಪುಸ್ತಕಕ್ಕೆ 'ಪ್ರಣಯಲೀಲಾ' ಎಂಬ ಬೇರೊಂದು ಹೆಸರಿಟ್ಟಿದ್ದೇನೆ. ಪದ್ಮಾವತಿಯಲ್ಲುಂಟಾದ ಪ್ರೇಮವು ಪಠಾಣರ * ರಾಜ್ಯಕ್ಕೆ ಮಹಾವಿಪತ್ತನ್ನುಂಟುಮಾಡಿತಾದರೂ, ಇವಳಲ್ಲಿಯ ಅನೇಕ ಸದ್ಗುಣಗಳು ವಾಚಕರ ಹೃದಯವನ್ನು ಸಮಾಧಾನಪಡಿಸದಿರವು. ಕಥಾನಾಯಿಕೆಯ ಈ ಉದಾತ್ತಗುಣಗಳಿಂದ ಪಾಠಕಮಹಾಶಯರು ಸಂತುಷ್ಟರಾಗುವರಾದರೆ, ನನ್ನ ಪ್ರಯತ್ನವು ಸಫಲವಾಯಿತೆಂದು ತಿಳಿಯುವೆನು.

ಹಿಂದುಸ್ಥಾನದ ರಾಜಕೀಯ ವಿಭಾಗಗಳಲ್ಲಿ ಕರ್ಣಾಟಕವು ಸ್ವತಂತ್ರವಾದುದೊಂದು ಭಾಗವಾಗಿಲ್ಲ. ಕನ್ನಡಿಗರು ಬೇರೆಬೇರೆ ರಾಜಕೀಯ ವಿಭಾಗಗಳಲ್ಲಿ ಹಂಚಿಹೋಗಿದ್ದಾರೆ. ಇದರಿಂದ ಇವರಾಡುವ ಭಾಷೆಗಳಲ್ಲಿ ತುಸು ಹೆಚ್ಚುಕಡಿಮೆಯುಂಟಾಗಿದೆ. ಈ ವ್ಯತ್ಯಾಸವನ್ನು ತೆಗೆದುಹಾಕಿ, ಧಾರವಾಡ—ಮೈಸೂರ—ಮದ್ರಾಸ ಕನ್ನಡಗಳನ್ನು ಏಕೀಕರಿಸಲು ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ಯತ್ನಿಸುತ್ತಲಿದ್ದಾರೆ. ಇವರ ಪ್ರಯತ್ನವು ಸಫಲವಾಗಬೇಕಾದರೆ, ಧಾರವಾಡದವರು ಬರೆದ ಪುಸ್ತಕಗಳನ್ನು ಮೈಸೂರಿನವರು ತಪಾಸಿಸುವದೂ, ಮೈಸೂರಿನವರು ಬರೆದ ಪುಸ್ತಕಗಳನ್ನು ಧಾರವಾಡದವರು ತಿದ್ದುವದೂ ಅವಶ್ಯವಾಗಿದೆ. ಈ ದೃಷ್ಟಿಯಿಂದ ಪ್ರಸ್ತುತಕಾದಂಬರಿಯನ್ನು ಬೆಂಗಳೂರಿನ ಪ್ರಸಿದ್ಧ ಗ್ರಂಥಕಾರರಾದ ಮ॥ ಎಮ್. ವಿ. ಶಾಸ್ತ್ರಿಗಳವರು ಕೇವಲ ನಿಸ್ವಾರ್ಥಬುದ್ಧಿಯಿಂದ ತಿದ್ದಿಕೊಟ್ಟು, ನನಗೂ ತನ್ಮೂಲಕ ಕನ್ನಡಬಾಸೆಗೂ ಮಹದುಪಕಾರ ಮಾಡಿದ್ದಾರೆ. ಈ ಮಹನೀಯರ ಉಪಕಾರವನ್ನು ಎಷ್ಟು ಸ್ಮರಿಸಿದರೂ ತೀರದು.

ಬೆಂಗಳೂರಿನ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಾದ ಎಮ್. ಎಸ್. ರಾವರವರು ಈ ಪುಸ್ತಕವನ್ನು ತಿದ್ದಿಸಿ, ಅಂದವಾಗಿ ಮುದ್ರಿಸಿ, ಪ್ರಕಾಶಪಡಿಸಿದ ಶ್ರೇಯವನ್ನು ಹೊಂದಿದ್ದಾರೆ. ಇವರ ವಿಷಯದಲ್ಲಿ ನಾನು ತುಂಬಾ ಕೃತಜ್ಞನಾಗಿದ್ದೇನೆ. ಈ ಪುಸ್ತಕವು ಆದಷ್ಟು ತೀವ್ರ ಪ್ರಸಿದ್ಧವಾಗುವದಕ್ಕಾಗಿ ಮಿ॥ ಎಚ್. ವ್ಯಾಸರಾಯರೂ, ಇವರ ಪತ್ನಿಯರೂ ನನಗೆ ಸಹಾಯ ಮಾಡಿದ್ದಾರೆ. ಈ ಪ್ರಸಂಗದಲ್ಲಿ ನಾನು ಇವರೀರ್ವರ ಉಪಕಾರವನ್ನು ಸ್ಮರಿಸದಿರಲಾರೆನು.

ವರ್ಷಪ್ರತಿಪದೆ.
೯-೪-೧೯೨೧.

ಸಜ್ಜನ ವಿಧೇಯ,
**ಎಸ್. ವಿ. ಕುಲಕರಣಿ.**

## ಪ್ರಕಾಶಕರ ವಿನಂತಿ.

**ಈ** ಗ್ರಂಥದ ಪ್ರಕಟನ ಕಾರ್ಯವನ್ನು ಕೈಗೊಂಡಮಾತ್ರದಿಂದಲೇ ಈ ಗ್ರಂಥಕರ್ತೃವಿಗೆ ಎಷ್ಟು ಉತ್ಸಾಹವುಂಟಾಗಿರುವುದೆಂಬುದನ್ನು ಸೂಚಿಸುವ ಸಲುವಾಗಿ ಅವರಿಂದ ಬರೆದು ಬಂದ ಪ್ರಸ್ತಾವನೆಯನ್ನು ಯಥಾವತ್ತಾಗಿ ಪ್ರಕಟೀಕರಿಸಿದೆ. ಇದರಿಂದಲೂ ಇತರ ಒಂದೆರಡು ಕಾರಣಗಳಿಂದಲೂ ಕನ್ನಡ ಬರಹಗಾರರಲ್ಲಿ ಅನೇಕರು ಬರೆದ ಪುಸ್ತಕಗಳನ್ನು ಪ್ರಕಟಗೊಳಿಸುವುದಕ್ಕೂ ಮಾರ್ಗವಿಲ್ಲದೆ ಹತಾಶರಾಗಿದ್ದಾರೆಂಬುದು ವ್ಯಕ್ತವಾಗುತ್ತದೆ. ಈ ಕೊರತೆಯನ್ನು ಪರಿಹರಿಸುವ ಕಾರ್ಯವು ಕೇವಲ ಕರ್ನಾಟಕ ಸಾಹಿತ್ಯಪರಿಷತ್ತಿನವರದೇ ಅಲ್ಲ; ಕನ್ನಡಭಾಷಾಭಿಮಾನಿಗಳಾದವರೆಲ್ಲರಿಗೂ ಕರ್ತವ್ಯವೆಂದು ಹೇಳಬಹುದು. ಬಹುಧನಸಂಗ್ರಹದಿಂದ ಸಾಧ್ಯವಾಗುವ ಈ ಮಹತ್ಕಾರ್ಯವನ್ನು ಪರಿಷತ್ತಿನವರು ಕೈಗೊಳ್ಳುವವರೆಗೂ ನಾವು ನಮ್ಮ ಶಕ್ತ್ಯನುಸಾರವಾಗಿ ಭಾಷಾಸೇವೆ ಮಾಡಲು ಉದ್ದೇಶಿಸಿ, ವರ್ಷ ಒಂದರಲ್ಲಿ ಇಂತಹ ನಾಲ್ಕಾರು ಪುಸ್ತಕಗಳನ್ನಾದರೂ ಪ್ರಕಟಿಸಬೇಕೆಂದು ಸಂಕಲ್ಪಿಸಿದೆವು. ಈ ಸಂಕಲ್ಪಸಿದ್ಧಿಗೆ ಸಹಕರಿಸುವುದರ ಮೂಲಕ ಶಕ್ತ್ಯನುಸಾರವಾಗಿ ಭಾಷಾಸೇವೆಮಾಡಿದ ಕೀರ್ತಿಯು ಈ ಗ್ರಂಥಕರ್ತೃಗಳಾದ ಮ॥ ಎಸ್. ವಿ. ಕುಲಕರಣಿಯವರಿಗೆ ಸೇರಿದ್ದು. ನಮ್ಮ ಈ ಪ್ರಯತ್ನಕ್ಕೆ ಪಾಠಕ ಮಹಾಶಯರ ಉತ್ತೇಜನವೂ ಸಿಗುವುದಾದರೆ ಈ ಮಾದರಿಯ ಉತ್ತಮ ಗ್ರಂಥಗಳಲ್ಲಿ ಕೆಲವಾದರೂ ಬೇಗಬೇಗ ಬೆಳಕಿಗೆ ಬರುವುವೆಂಬ ಭರವಸೆ ಕೊಡುತ್ತೇವೆ.

ಬೆಂಗಳೂರು,
೨೩-೪-೧೯೨೧.

**ಎಂ. ಎಸ್. ರಾವ್ ಕಂಪೆನಿ,**
ಪ್ರಕಾಶಕರು.

# ಅನುಕ್ರಮಣಿಕೆ.


| | | | |
|---|---|---|---|
| ೧ ನೆಯ | ಪರಿಚ್ಛೇದ | ಸಾಹಸ ... ... | ೧–೧೦ |
| ೨ | ,, | ಅಂಕುರ ... ... | ೧೦–೨೨ |
| ೩ | ,, | ಪರಿಚಯ ... ... | ೨೨–೩೦ |
| ೪ | ,, | ಶಹಾಜಾದಿಯ ಆಟ ... ... | ೩೦–೩೮ |
| ೫ | ,, | ಮತ್ತೊಂದು ಆಟ ... ... | ೩೮–೬೧ |
| ೬ | ,, | ಶಹಾಜಾದನ ಬಿಡುಗಡೆ ... ... | ೬೧–೭೩ |
| ೭ | ,, | ಸೇನಾಪತಿ ಅಫಶಾನ ... ... | ೭೩–೭೮ |
| ೮ | ,, | ವಿಚಾರಣೆ ... ... | ೭೯–೯೫ |
| ೯ | ,, | ಕಾರಾಗೃಹದಲ್ಲಿ ... ... | ೯೫–೧೦೫ |
| ೧೦ | ,, | ಅಪಶಾನನು ಮೊಗಲರ ಬಂದಿಯಾದನು | ೧೦೫–೧೧೪ |
| ೧೧ | ,, | ಪಂಜರದೊಳಗಿನ ಪಕ್ಷಿ ... | ೧೧೫–೧೨೦ |
| ೧೨ | ,, | ಪಠಾಣರು ದೇಶದ್ರೋಹಿಗಳೆಂದೂ ಆಗರು | ೧೨೦–೧೨೭ |
| ೧೩ | ,, | ಶಹಾಜಾದನ ಪತ್ರ ... ... | ೧೨೭–೧೩೩ |
| ೧೪ | ,, | ದುರ್ಗಾಧಿಪತಿ ... ... | ೧೩೩–೧೪೬ |
| ೧೫ | ,, | ದುರ್ಗಾಧಿಪತಿಯ ಆತ್ಮಹತ್ಯೆ ... | ೧೪೬–೧೫೭ |
| ೧೬ | ,, | ಶಹಾಜಾದಿಯ ವಿಚಾರತರಂಗ ... | ೧೫೭–೧೬೨ |
| ೧೭ | ,, | ಒಪ್ಪಂದ ... ... | ೧೬೨–೧೭೨ |
| ೧೮ | ,, | ಪ್ರೇಮವಿಹ್ವಲೆ ... ... | ೧೭೨–೧೮೦ |
| ೧೯ | ,, | ಪ್ರೇಮ ಪರಿಹಾಸ ... ... | ೧೮೦–೧೮೬ |
| ೨೦ | ,, | ಪ್ರಬಲನಾದ ಮತ್ಸರಿಯು ... | ೧೮೭–೧೯೯ |
| ೨೧ | ,, | ಶಹಾಜಾದನ ಉದಾರತೆ... ... | ೧೯೯–೨೦೪ |
| ೨೨ | ,, | ವಿರಹಾವಸ್ಥೆಯಲ್ಲಿ ... ... | ೨೦೪–೨೦೮ |
| ೨೩ | ,, | ಕರ್ಮಕ್ಕೆ ತಕ್ಕ ಫಲ ... ... | ೨೦೮–೨೧೬ |

# ಶುದ್ಧಿಪತ್ರಿಕೆ.

| ಪುಟ | ಸಾಲು | ಅಶುದ್ಧ | ಶುದ್ಧ |
|---|---|---|---|
| ೭ | ೮ | ಎರಡು ಶಿಕ್ಷೆಯನ್ನು | ಎರಡು ಶಿಕ್ಷೆಗಳನ್ನು |
| ೩೨ | ೬ | ಅತುಲಸ್ವರದಿಂದ | ಆಕುಲಸ್ವರದಿಂದ |
| ೩೫ | ೨ | ತರುವಾಯು–"ಅವಳು ನಗುತ್ತ | ತರುವಾಯು–ಅವಳು ನಗುತ್ತ" |
| ೭೩ | ೫ | ಪಟ್ಟಣ | ಗೃಹ |
| ೯೨ | ೧೩ | ಅವಶ್ಯಕ | ಆವಶ್ಯಕ |
| ೧೦೬ | ೧೩ | ದಾಸಿಯುಲನು | ದಾಸಿಯುಲರು |
| | ೨೦ | ತಪ್ಪು | ಕಪ್ಪ |
| ೧೦೭ | ೮ | ಹೇಗೆ | ಹೇಗೇ |
| ೧೧೪ | ೧೯ | ಹಿಂಡಾ | ಹಾಡಾ |
| ೧೩೪ | ೨೨ | ಕೇಳಿದ್ದನ್ನು | ಕೇಳಿದ್ದನು |
| ೧೩೯ | ೨೧ ) ೨೨–೨೩ ) | ಈ ವೇಳೆಯಲ್ಲಿ ಚಂದ್ರನು... ಅಸ್ತನಾಗಿದ್ದನು | ಆ ವೇಳೆಯಲ್ಲಿ ಚಂದ್ರನು ಮೇಘ ರಾಶಿಯಲ್ಲಿ ಮರೆಯಾಗಿದ್ದನು |
| ೧೪೦ | ೧ | ಘಂಭೀರ | ಗಂಭೀರ |
| ೧೪೧ | ೮ | ಪುರುಷ | ಪರುಷ |
| ೧೬೦ | ೨೦ | ವಿನಂತಿಯನ್ನೆಂದು | ವಿನಂತಿಯನ್ನೆಂದೂ |
| ೧೭೦ | ೧೨ | ಸ್ವತಂತ್ರರೂ | ಸ್ವತಂತ್ರರು |
| ೧೮೬ | ೧೧ | ತಿರುಕನು | ತಿರುಕನೂ |
| ೧೮೬ | ೧೪ | ಉದಾತ್ತ ವಿಚಾರಗಳಿಲ್ಲ | ಉದಾತ್ತ ವಿಚಾರಗಳಿಲ್ಲಿ |
| ೧೯೨ | ೧೬ | ನನಗೇನು | ನನಗೇನೂ |
| ೨೦೦ | ೨೫ | ಶಹ್ನಾ | ಶಹಾ |
| ೨೦೧ | ೨೨ | ನಿಷ್ಟುರ | ನಿಷ್ಠುರ |
| ೨೦೧ | ೨೨ | ಕಠೋರತೆಯು | ಕಠೋರತೆಯೂ |
| ೨೦೭ | ೧೫ | ರಶ್ಮೆ | ರಶ್ಮಿ |

## ಹೊಸ ಕಾದಂಬರಿಗಳು—ಎಂ. ವಿ. ಶಾಸ್ತ್ರಿಗಳಿಂದ.

---

**ಮುತ್ತಿನ ಸರ:**—ಇದೊಂದು ಕಾದಂಬರಿಮಾಲೆ. ಇದರಲ್ಲಿ ಮುತ್ತಿನಸರ, ರಾಯಭಾರ, ಅನಾಥಪ್ರೇತ, ಸನ್ಯಾಸಿನೀ, ಸುಷಮಾ ಮತ್ತು ವಿಷವಿವಾಹ-ಎಂಬ ಚಿಕ್ಕವೂ ದೊಡ್ಡವೂ ಆದ ಆರು ಮನೋಹರ ಕಾದಂಬರಿಗಳು ಇವೆ. ಆರೂ ಆರು ಮುತ್ತುಗಳೇ ಎಂದು ಬಲ್ಲವರು ಹೇಳುತ್ತಾರೆ. ಭಾಷಾಶುದ್ಧತೆಯೂ ವಿಷಯಪುಷ್ಟಿಯೂ ಉಳ್ಳ ಉತ್ತಮತರದ ಪುಸ್ತಕ. ಅವಕಾಶಕಾಲದಲ್ಲಿ ಓದುವುದಕ್ಕೂ ಸ್ತ್ರೀ-ಪುತ್ರಾದಿಗಳಿಗೆ ಬಹುಮಾನ ಕೊಡುವುದಕ್ಕೂ ಇದು ಯೋಗ್ಯವಾಗಿದೆ ಬೆಲೆ ೧೨ ಆಣೆ.

**ವಿಜಯಮಾಲೆ:**—ಇದೊಂದು ಬಂಗಾಳಿ ಕಥೆಯ ಭಾಷಾಂತರ. ಕಾರ್ಯದಕ್ಷನಾದ ಯುವಕ ವೇಣುಗೋಪಾಲನ ಚರಿತ್ರಾಂಶವು. ವಿದ್ಯಾವಂತನಾಗಿದ್ದರೂ ಸುಗುಣಿಯಾಗದ ನೀರೇಂದ್ರನಿಗೆ ಉಂಟಾದ ಪರಿಭವವೂ. ದೇಶಸೇವಾವ್ರತಸಾಧನೆಯಲ್ಲಿ ಸೀತಾಕುಮಾರಿಯು ತೋರಿದ ಆದರವೂ ವಾಚಕರ ಚಿತ್ತವನ್ನು ಸ್ವಲ್ಪಮಟ್ಟಿಗಾದರೂ ಕಲಕದೇ ಇರಲಾರವು. ಬೆಲೆ ೮ ಆ.

**ವಿಷವಲ್ಲರಿ:**—ಇದೊಂದು ವಿಯೋಗಾಂತವಾದ ಸಂಸಾರಚಿತ್ರ. ಕಥಾನಾಯಕನಾದ ನಿರ್ಮಲಕುಮಾರನು ವಿದ್ಯಾವಂತನೇ ಆಗಿದ್ದರೂ ಕೂಡ ದುರ್ಜನರ ಸಂಗದೋಷದಿಂದ ದುರ್ವಿಚಾರಗಳಿಗೆ ಪಕ್ಕಾಗಿ ಅದರಿಂದ ತನಗೂ ತನ್ನನ್ನು ನಂಬಿದವರಿಗೂ ಎಂತಹ ಅನರ್ಥವನ್ನು ತಂದುಕೊಂಡನೆಂಬುದನ್ನು ಓದುವಾಗ ಚಿತ್ತವೇಧಕವಾಗದಿರಲಾರದು. ಮುಖ್ಯವಾಗಿ ಪ್ರವಾಸಿಗಳಾಗಿರುವ ಯುವಕರನ್ನು ಇದು ಎಚ್ಚರಗೊಳಿಸುವುದು. ಬೆಲೆ ೮ ಆಣೆ.

**ಎಸ್. ವಿ. ಸೆಟ್ಟರ ಜೀವನಚರಿತ್ರೆ:**—ದಿವಂಗತರಾದ ಈ ಮಹನೀಯರ ಚರಿತ್ರೆಯನ್ನು ಕನ್ನಡಿಗರೆಲ್ಲರಿಗೂ ತಿಳಿಯುವಂತೆ ಬರೆದಿದೆ.

ಬೆಲೆ. ೪ ಆಣೆ.

ದೊರೆಯುವ ಸ್ಥಳ—**ಎಂ. ಎಸ್. ರಾವ್ ಕಂಪೆನಿ,**

ಪುಸ್ತಕ ವ್ಯಾಪಾರಿಗಳು, ಬೆಂಗಳೂರು ಸಿಟಿ.

# ಪನ್ನಾಮತಿ

## (ಅಥವಾ ಪ್ರಣಯಲೀಲಾ.)

### ಮೊದಲನೆಯ ಪರಿಚ್ಛೇದ.

ಸಾಹಸ.

ರಾತ್ರಿಯ ಮೊದಲನೆಯ ಪ್ರಹರವು ಕಳೆದುಹೋಗಿ ಎರಡನೆಯ ಪ್ರಹರವು ಆರಂಭವಾಗಿತ್ತು. ಶಾಂತತೆಯು ಕ್ರಮವಾಗಿ ಎಲ್ಲ ಕಡೆಯಲ್ಲಿಯೂ ವ್ಯಾಪಿಸುತ್ತಿರುವಾಗ ಲಾಹೋರಿನಲ್ಲಿರುವ ಮೊಗಲಬಾದಷಹನ ಅರಮನೆಯ ಖಾಸ ದಿವಾಣಖಾನೆಯಲ್ಲಿ ಬಹು ಜನರು ಕೂಡಿ ಆವುದೋ ಒಂದು ಗುರುತರವಾದ ರಾಜಕೀಯವಿಚಾರ ಮಾಡುತಲಿದ್ದರು. ನುಣುಪಾದ ಶ್ವೇತಶಿಲೆಯಿಂದ ನಿರ್ಮಿತವಾದ ಆ ಮಂದಿರದಲ್ಲಿ ಪ್ರಕಾಶಮಾನವಾದ ನೂರಾರು ದೀಪಗಳು ಉರಿಯುತಲಿದ್ದುವು. ಈ ಸ್ಫಟಿಕದೀಪಗಳ ಉಜ್ವಲಕಿರಣಗಳು ಅತ್ಯಂತ ನುಣುಪಾದ ಗೋಡೆಗಳಮೇಲೆ ಬಿದ್ದು, ವಿಲಕ್ಷಣ ಶೋಭೆಯನ್ನುಂಟುಮಾಡಿವೆ. ಬೆಳ್ಳಿ, ಬಂಗಾರಗಳಿಂದ ಕೆಚ್ಚಲ್ಪಟ್ಟ ಹಸ್ತಿದಂತನಿರ್ಮಿತವಾದ ಆಧಾರಗಳಲ್ಲಿ ಸುಗಂಧಪೂರ್ಣವಾದ ಹೂಮಾಲೆಗಳು ತೂಗಾಡುತ್ತಲಿವೆ. ರಾವಿ ನದಿಯ ಶೀತಲವಾದ ವಾಯುಪ್ರವಾಹವು ತೆರೆದ ಕಿಟಿಕಿಗಳ ಮಾರ್ಗವಾಗಿ ಬಂದು, ಚಿಂತಾಕಾತರರಾದ ವೀರಪುರುಷರ ವಿಶಾಲವಾದ ಹಣೆಯ ಬೆವರ ಹನಿಗಳನ್ನು ಆರಿಸುತ್ತಿದೆ. ಸಭೆಯಲ್ಲಿಯ ಜನರು ಬಹಳ ಹೊತ್ತಿನವರೆಗೆ ವಿಚಾರಮಾಡಿದರು; ಆದರೂ ಯಾವದೊಂದನ್ನೂ ಸ್ಥಿರಪಡಿಸಲು ಸಮರ್ಥ

ರಾಗಲಿಲ್ಲ. ಹೀಗೆ ಬಹುಕಾಲದವರೆಗೆ ಯಾವುದೂ ನಿರ್ಧಾರವಾಗದ ಕಾರಣ ಸಭಿಕರ ಮುಖದಮೇಲೆ ಬೇಸರದ ಲಕ್ಷಣವು ಕಂಡುಬರುತ್ತಲಿತ್ತು.

ಭಾರತದ ಭಾಗ್ಯವಿಧಾತನಾದ ಸಾಮ್ರಾಟ ಅಕಬರಷಹನು ದಿವಾಣಖಾನೆಯ ರತ್ನಖಚಿತವಾದುದೊಂದು ಉನ್ನತಾಸನದಲ್ಲಿ ಕುಳಿತಿರಲು ಸ್ವಲ್ಪ ಅಂತರದಮೇಲೆ ಅನೇಕ ವೀರರು ಮಂಡಿಸಿದ್ದರು. ಇವರಲ್ಲಿ ನಾಲ್ವರು ಮುಖ್ಯರಾಗಿದ್ದರು. ಈ ನಾಲ್ವರಲ್ಲಿ ತರ್ದಿಬೇಗ ಎಂಬವನೊಬ್ಬನು. ಸಾಮ್ರಾಟ ಅಕಬರಷಹನ ಪುತ್ರನಾದ ದಾನಿಯಲನು ಮತ್ತೊಬ್ಬನು. ಉಳಿದಿಬ್ಬರು ದಿಲ್ಲೀಶ್ವರನ ಕೃಪೆಯನ್ನು ಹೊಂದಿದ ಉಚ್ಚಪದಸ್ಥ ಸೇನಾಪತಿಗಳು.

ಅಕಬರನು ಮೌನಭಂಗವನ್ನು ಮಾಡಿ, "ಇಲ್ಲಿ ನಾಮಾಂಕಿತರಾದ ಸೇನಾಪತಿಗಳಿರುವಿರಿ. ಇಂದು ನಿಮ್ಮ ಪರೀಕ್ಷೆಯ ಸಮಯ ಒದಗಿದೆ. ಕೇವಲ ಎರಡುನೂರುಮಂದಿ ಸೈನಿಕರನ್ನು ಕರೆದುಕೊಂಡುಹೋಗಿ, ಗರ್ವಿಷ್ಠನಾದ ಅಫಜಾಯಿಸರದಾರ ಮಿರಾನ್‌ಶಹನನ್ನು ಬಂಧಿಸಿ ಹಿಡಿತರಬೇಕು; ಮತ್ತು ಅವನ ರಾಜಧಾನಿಯನ್ನು ಹಾಳುಮಾಡಿ ಬರಬೇಕು. ಈ ಸಾಹಸದ ಕೆಲಸವನ್ನು ಕೈಕೊಳ್ಳುವದಕ್ಕೆ ನಿಮ್ಮಲ್ಲಿ ಸಮರ್ಥರು ಯಾರು?" ಎಂದು ಕೇಳಿದನು.

ತರ್ದಿಬೇಗನು ಸಾಹಸಿಯಾದ ಸೇನಾಪತಿ. ಇವನು ನೆಲಮುಟ್ಟಿ ಸಲಾಂ ಮಾಡಿ, "ಜಹಾಪನಾ! ತಾವು ಹೇಳುತ್ತಿರುವ ಕಾರ್ಯ ಮಾಡುವುದಕ್ಕೆ ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ; ಆದರೆ ಕೇವಲ ಇನ್ನೂರುಮಂದಿ ಸೈನಿಕರ ಸಹಾಯದಿಂದ ಈ ಕೆಲಸವನ್ನು ಕಡೆಹಾಯಿಸುವುದು ಅಸಂಭವ; ಯಾಕೆಂದರೆ ಪಠಾಣರು ಸುರಕ್ಷಿತರಾಗಿದ್ದಾರೆ; ಅವರ ಸೈನ್ಯವೂ ಹೆಚ್ಚು. ಭದ್ರವಾದ ಕೋಟೆಯಲ್ಲಿ ಆಶ್ರಯಹೊಂದಿರುವ ಅವರ ಮೇಲೆ ಸಾಗಿಹೋಗಿ, ಅವರನ್ನು ನಾಶಮಾಡಬೇಕಾದರೆ ಹೆಚ್ಚು ಮಂದಿ ಸೈನಿಕರು ಆವಶ್ಯಕ. ಹೋದಸಾರಿ ನಾನು ಇದನ್ನರಿಯದೆ, ಒಮ್ಮೆಲೇ ಅವರಮೇಲೆ ಸಾಗಿಹೋಗಿ ಅನರ್ಥಕ್ಕೊಳಗಾಗಬೇಕಾಯಿತು" ಎಂದು ಬಿನ್ನವಿಸಿದನು.

ಬಾದಷಹನು ಹೆಚ್ಚುಗಂಭೀರತೆಯನ್ನು ತಳೆದು ಕ್ರೋಧಪೂರ್ಣಸ್ವರ ದಿಂದ ಹೇಳಿದನು: "ತರ್ದಿಬೇಗ! ಹೋದಸಾರಿ ನಿನ್ನ ಬುದ್ಧಿದೋಷ ದಿಂದ ಐನೂರುಜನ ಉತ್ತಮ ಮೊಗಲಸೈನಿಕರು ಪಠಾಣರ ಕಲ್ಲು ಹೊಡತಗಳಿಗೆ ಆಹುತಿಯಾದರು. ಸದ್ಯಃಕಾಲದಲ್ಲಿ ನಾಲ್ಕೂಕಡೆಯಲ್ಲಿ ಬಂಡಾಯಗಳೆದ್ದಿವೆ. ಈ ಸಂಕಟಸಮಯದಲ್ಲಿ ನಾನು ಅನರ್ಥವಾಗಿ ಸೇನೆಯನ್ನು ನಾಶಮಾಡಿಕೊಳ್ಳಲಿಚ್ಛಿಸುವುದಿಲ್ಲ. ಆದುದರಿಂದ ನಾನು ಹೇಳುತ್ತಿರುವ ಕಾರ್ಯವನ್ನು ಇನ್ನೂರುಮಂದಿ ಸೈನಿಕರ ಸಹಾಯದಿಂದಲೇ ಮಾಡತಕ್ಕದ್ದು. ಇದಕ್ಕೆ ನಿಮ್ಮಲ್ಲಿ ಯಾರೂ ಒಪ್ಪದಿದ್ದರೆ, ಮೊಗಲ ರಾಜ್ಯದಲ್ಲಿ ಸಾಹಸಿಗಳಾದ ಶೂರರು ಯಾರೂ ಇಲ್ಲವೆಂದು ಭಾವಿಸು ತ್ತೇನೆ; ಮತ್ತೂ ನಾನೇ ಹೋಗಿ, ಅಫಜಾಯಿದುರ್ಗವನ್ನು ಕೈವಶಮಾಡಿ ಕೊಂಡುಬರುತ್ತೇನೆ. ಸೇನಾಪತಿ, ನೀನು ವಿಜಾಪುರವನ್ನು ಕೈವಶಮಾಡಿ ಕೊಂಡು ವಿಶೇಷಗೌರವವನ್ನು ದೊರಕಿಸಿರುವೆ. ಆದರೆ ಆ ಗೌರವವು ಸದ್ಯದ ನಿನ್ನ ನಡತೆಯಿಂದ ಸಂಪೂರ್ಣವಾಗಿ ಇಲ್ಲದಂತಾಗುವದೆಂಬು ದನ್ನು ಮರೆಯಬೇಡ."

ತರ್ದಿಬೇಗನು ನಿರುತ್ತರನಾದನು. ಈ ಮೊದಲು ಅಕಬರನು ಇವನ ಕೈಕೆಳಗೆ ಐನೂರು ಶೂರಸೈನಿಕರನ್ನು ಕೊಟ್ಟು, ಅಫಜಾಯಿಸರದಾರ ನನ್ನು ಗೆಲ್ಲುವುದಕ್ಕೆ ಕಳುಹಿಸಿದ್ದನು. ಅದರಲ್ಲಿ ತರ್ದಿಬೇಗನು ಸೋತು ಬಂದಿದ್ದನು. ಅದರಿಂದ ಇವನ ಪೂರ್ವದ ಗೌರವವು ಇಲ್ಲದಂತಾಗಿತ್ತು. ಇದಕ್ಕಾಗಿ ಇವನು ಬಾದಷಹನಿಂದ ಬಹಳ ತಿರಸ್ಕಾರವನ್ನು ಹೊಂದ ಬೇಕಾಯಿತು. ಅದುಕಾರಣ ಇವನು ಹೆಚ್ಚು ಮಾತಾಡಲು ಮೋರೆಯಿಲ್ಲ ದವನಾಗಿದ್ದನು. ಇದರಿಂದ ತರ್ದಿಬೇಗನು ಹೇಡಿಯಾದೊಬ್ಬ ಸೇನಾ ಪತಿಯಾಗಿದ್ದನೆಂದು ವಾಚಕರ ಕಲ್ಪನೆಯಾಗಬಹುದು; ಆದರೆ ಅದು ನಿಜ ಸ್ಥಿತಿಯಲ್ಲ. ತರ್ದಿಬೇಗನು ಶೂರನೂ, ಅಸಮಸಾಹಸಿಯೂ ಆದ ಸೇನಾ ಪತಿ. ಪಠಾಣರ ಸೈನಿಕರ ಸಂಖ್ಯೆಯು ಹೆಚ್ಚಿತ್ತು. ಮೇಲಾಗಿ ಅವರು ಕಪಟತನದಲ್ಲಿ ಪ್ರವೀಣರಾಗಿದ್ದರು. ಕಾರಣ ತರ್ದಿಬೇಗನು ಕೇವಲ ಇನ್ನೂರು ಮಂದಿ ಸೈನಿಕರ ಸಹಾಯದಿಂದ ಅಫಗಾಣರ ಜಯಕ್ಕಾಗಿ

ಮುಂದುವರಿಯುವಂತೆ ಇರಲಿಲ್ಲ. ಆದ್ದರಿಂದ ಇವನು ಈ ಸಂದರ್ಭದಲ್ಲಿ ಮೌನವನ್ನವಲಂಬಿಸಲೇಬೇಕಾಯಿತು. ಈ ಕೆಲಸಕ್ಕೆ ಹೆಚ್ಚು ಸೈನಿಕರನ್ನು ಕಳುಹಿಸುವ ಇಚ್ಛೆಯು ಬಾದಷಹನಿಗಿರಲಿಲ್ಲ. ಅದರಿಂದವನು ಇಷ್ಟೇ ಸೈನಿಕರಿಂದ ಈ ಕಾರ್ಯಮಾಡಿಕೊಂಡು ಬರಬೇಕೆಂದು ಹಟಹಿಡಿದಿದ್ದನು.

ಅಕಬರನು ಆಡಿದಮಾತನ್ನು ತಿರುಗಿಸಲು ಎಂದೂ ಇಚ್ಛಿಸುತ್ತಿರಲಿಲ್ಲ. ಇವನ ಅಪ್ಪಣೆಯನ್ನು ಮುರಿಯುವ ಸಾಮರ್ಥ್ಯವು ಯಾರಿಗೂ ಇರಲಿಲ್ಲ. ಹಿಡಿದ ಹಟವನ್ನು ಬಿಡಿಸುವ ಧೈರ್ಯವು ಒಬ್ಬರಲ್ಲಿಯೂ ಇರಲಿಲ್ಲ. ಅಕಬರನ ಸ್ವಭಾವವೇ ಅಂಥದು!

ದಾನಿಯಲನು ಅಕಬರನ ಮೂರನೆಯಮಗ; ತಂದೆಯ ಅತ್ಯಂತ ಆದರಕ್ಕೆ ಪಾತ್ರನು. ಇವನು ತಂದೆಯ ಬಳಿಯಲ್ಲಿ ಕುಳಿತು, ಈ ವರೆಗೆ ನಡೆದಿರುವ ಆಲೋಚನೆಗಳನ್ನು ಕೇಳಿದ್ದನು; ಆದರೆ ತನ್ನ ಅಭಿಪ್ರಾಯವನ್ನು ತಿಳುಹುವುದಕ್ಕೆ ಮುಂದುವರಿದಿರಲಿಲ್ಲ.

ಈ ಸಮಯದಲ್ಲಿ ದಾನಿಯಲನು ಸಹಸಾ ಎದ್ದುನಿಂತು, ಬಾದಶಹನಿಗೆ ಕುರ್ನಿಸಮಾಡಿ, ಹೇಳಿದನು: "ಪೂಜ್ಯರಾದ ಪಿತರೆ, ಇಲ್ಲಿ ನೆರೆದವರಲ್ಲಿ ಸಾಹಸಿಗಳೂ, ಸಮರಕುಶಲರೂ ಆದ ಸೇನಾಪತಿಗಳು ಯಾರೂ ಇಲ್ಲವೆಂಬ ಗ್ರಹಿಕೆ ತಮಗಾಗಬಾರದು. ನಾನು ತಾವು ಹೇಳಿದಂತೆ ಇನ್ನೂರುಮಂದಿ ಸೈನಿಕರ ಸಹಾಯದಿಂದಲೇ ಕೆಲಸಮಾಡಿಕೊಂಡುಬರುತ್ತೇನೆ. ನಾನು ಏನೋ ಬಡಬಡಿಸುತ್ತಿರುವೆನೆಂಬ ಭಾವನೆಯಾಗಬಹುದು; ಆದರೆ ನಾನು ಸತ್ಯವಾಗಿಯೂ ಹೇಳುತ್ತೇನೆ; ಬಾದಶಹರವರ ಅನುಮತಿಯು ದೊರೆಯುವುದಾದರೆ, ನಾನು ಈ ಕೆಲಸಕ್ಕೆ ಮುಂದರಿದು ಕಾರ್ಯಸಾಧನೆಮಾಡಿಕೊಂಡು ಬರುತ್ತೇನೆ."

ಬಾದಶಹನು ಪಿಸ್ಮಿತನೇತ್ರನಾಗಿ ಒಮ್ಮೆ ಪ್ರಿಯಕುಮಾರನನ್ನು ನೋಡಿದನು. ಕುಮಾರನ ಮುಖದಲ್ಲಿ ದೃಢಪ್ರತಿಜ್ಞೆಯ ಚಿಹ್ನೆ ವ್ಯಕ್ತಗೊಂಡಿತ್ತು. ತರ್ದಿಬೇಗನು ಆಶ್ಚರ್ಯಾನ್ವಿತನಾಗಿ ದಾನಿಯಲನನ್ನು ಒಂದುಬಾರಿ ವಕ್ರದೃಷ್ಟಿಯಿಂದ ನೋಡಿ, ತಲೆತಗ್ಗಿಸಿಕೊಂಡನು. ಈ ಸಮಯದಲ್ಲವನ ಮುಖದಲ್ಲಿ ಪರಿಹಾಸವ್ಯಂಜಕವಾದ ಅವ್ಯಕ್ತಹಾಸ್ಯರೇಖೆಯು ಉದ್ಭ

ನಿಸಿ, ಅಲ್ಪಕಾಲದಲ್ಲಿಯೇ ಇಲ್ಲದಂತಾಗಿ ಹೋಯಿತು. ಅವನು ಮನಸ್ಸಿನಲ್ಲಿಯೇ ಭಾವಿಸಿದನು: "ಶಹಾಜಾದಾ ದಾನಿಯಲನಿಗೆ ಇಂಥ ದುರ್ಬುದ್ಧಿಯುಂಟಾಯಿತಲ್ಲ! ನಮ್ಮಂಥ ಅಭಿಜ್ಞರೂ ಸಾಹಸಿಗಳೂ ಆದ ವೀರಸೇನಾಪತಿಗಳು ಮಾಡಲಾಗದ ಕೆಲಸವನ್ನು ಇವನು ಮಾಡುವನೇ? ಭವಿಷ್ಯತ್ ಜ್ಞಾನವಿಲ್ಲದ ಇವನು ಇದೊಂದು ಸಹಜವಾದ ಕೆಲಸವೆಂದು ಭಾವಿಸಿದಂತೆ ಕಂಡುಬರುತ್ತಿದೆ. ಆದರೆ ಕೆಲಸವನ್ನು ಕೈಕೊಂಡಬಳಿಕ ಅನುಭವಕ್ಕೆ ಬಂದೀತು. ಇದರಲ್ಲಿ ಇವನು ಸಂಪೂರ್ಣವಾಗಿ ನಾಶಹೊಂದುವದರಲ್ಲಿ ಸಂದೇಹವಿಲ್ಲ. ಹೀಗೆ ಇವನು ಏತಕ್ಕಾಗಿ ತನ್ನ ನಾಶದ ಮಾರ್ಗದಲ್ಲಿ ಮುಂದಡಿಯನ್ನಿಡಲಿಚ್ಛಿಸುತ್ತಿರಬಹುದು? ಇದು ಪ್ರಾಯಃ ಸಾಮ್ರಾಟ ಅಕಬರಬಾದಶಹನ ಪುತ್ರನೆಂಬ ಗರ್ವದ ಅಭಿನಯವಾಗಿರಬಹುದೇ? ಅಥವಾ ಹುಚ್ಚರಾದ ರಾಜಪುತ್ರರ ಇಚ್ಛೆಯೇ ಹೀಗೆಯೋ?"

ತರ್ದಿಜೇಗನ ಮನಸ್ಸಿನ ಆಲೋಚನೆಗಳು ಅಲ್ಲಿಯೇ ವಿಲೀನಗೊಂಡುವು. ಕುಮಾರದಾನಿಯಲನ ಕಾರ್ಯದ ವಿರುದ್ಧವಾಗಿ ಅಕಬರಬಾದಶಹನ ಸಮ್ಮುಖದಲ್ಲಿ ಮಾತನಾಡುವ ಶಕ್ತಿ ಯಾರಲ್ಲಿಯೂ ಇರಲಿಲ್ಲ; ಏಕಂದರೆ ಈ ರಾಜಕುಮಾರನು ದಕ್ಷಿಣ ಹಿಂದುಸ್ಥಾನದಲ್ಲಿ ನಡೆದ ಯುದ್ಧಗಳಲ್ಲಿ ಬಹುಪರಾಕ್ರಮವನ್ನು ತೋರಿಸಿ ಹೆಸರುವಾಸಿಯಾಗಿದ್ದನು.

ದಿಲ್ಲಿಯಬಾದಶಹರ ಅಂತಃಪುರವೆಂದರೆ, ಇಂದ್ರನ ಎರಡನೆಯ ಅಮರಾವತಿಯೇ! ಕುಮಾರದಾನಿಯಲನು ಇಂಥ ವಿಲಾಸನಗರಿಯಲ್ಲಿ ಬೆಳೆದವನಾಗಿದ್ದಕಾರಣ ಅವನು ಸುಖೋಪಭೋಗಾಸಕ್ತನಾಗಿರುವದು ಅರಿದಲ್ಲ. ಆದರೂ ಇವನು ಶೂರ, ದೃಢಮತಿ. ಯಾವುದಾದರೊಂದು ಸಾಹಸದ ಕೆಲಸವನ್ನು ಒಮ್ಮೆ ಕೈಕೊಂಡನೆಂದರೆ ಅದನ್ನು ಕಡೆಹಾಯಿಸದೆ ಬಿಡುತ್ತಿರಲಿಲ್ಲ. ಅಕಬರನು ದಕ್ಷಿಣದಲ್ಲಿ ಯುದ್ಧಕ್ಕೆ ತೊಡಗಿದ್ದಾಗ, ಕುಮಾರದಾನಿಯಲನು ಇವನಬಳಿಯಲ್ಲಿದ್ದನು. ಆ ಸಮಯದಲ್ಲಿ ಕುಮಾರನ ಕೃತ್ಯಗಳನ್ನು ಕಂಡು, ಬಾದಶಹನು ಆನಂದಿತನಾಗಿ ಕುಮಾರನು ತನ್ನಂತೆಯೇ ದೃಢಪ್ರತಿಜ್ಞನೂ, ಜಾಣನೂ ಆಗಿರುವನೆಂಬುದನ್ನು ಮನಗಂಡಿದ್ದನು. ಕಾರಣ ದಾನಿಯಲನ ಮಾತುಗಳಲ್ಲಿ ಬಾದಶಹನಿಗೆ ನಂಬುಗೆಯಿದ್ದಿತು.

ಅಕಬರನು ಪಠಾಣರ ವಿರುದ್ಧವಾಗಿ ಎಷ್ಟೇ ಸೈನ್ಯ ಕಳುಹಿದರೂ, ಅದು ಅಫಗಾಣರ ಮೋಸಕ್ಕೆ ಈಡಾಗುವಂತಿದ್ದಿಲ್ಲ. ಅಫಜಾಯಿ ಸರದಾರನ ಮುಖ್ಯಪಟ್ಟಣವು ಪರ್ವತದಮೇಲಿದ್ದು, ದುರ್ಭೇದ್ಯವಾದ ಕೋಟೆಯ ಗೋಡೆಗಳಿಂದ ಭದ್ರವಾಗಿತ್ತು. ಅದರಿಂದವನ್ನು ಕೇವಲಶಕ್ತಿಯಿಂದ ಕೈವಶಮಾಡಿಕೊಳ್ಳುವುದು ಆಗದ ಮಾತಾಗಿತ್ತು. ಇದನ್ನು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬೇಕಾದರೆ, ಸೇನಾಪತಿಯು ಬಳಿಯಲ್ಲಿ ಬಹಳ ಚಾತುರ್ಯವಿರುವದು ಆವಶ್ಯಕವಾಗಿತ್ತು. ಕುಮಾರನ ಶೌರ್ಯ-ಸಾಹಸಗಳ ಖ್ಯಾತಿಯನ್ನು ಬಾದಶಹನು ಅರಿತವನಾಗಿದ್ದುದರಿಂದ ಅಫಗಾಣರನ್ನು ಹಣ್ಣಿಗೆ ತರಬೇಕಾದರೆ, ಕುಮಾರನಂಥ ಸೇನಾಪತಿಯೇ ಇರಬೇಕೆಂಬುದು ಅವನ ಭಾವನೆಯಾಗಿದ್ದಿತು. ಕುಮಾರನು ಈ ಕೆಲಸವನ್ನು ಮಾಡುವದಕ್ಕೆ ತಾನಾಗಿಯೇ ಒಪ್ಪಿಕೊಂಡದ್ದನ್ನು ನೋಡಿ, ಬಾದಶಹನಿಗೆ ಬಹಳ ಆನಂದವಾಯಿತು.

ತರ್ದಿಬೇಗನು ಅಫಜಾಯಿಸರದಾರನಮೇಲೆ ದಂಡೆತ್ತಿ ಹೋದಾಗ, ಪಠಾಣರು ಗುಡ್ಡದಮೇಲಿಂದ ದೊಡ್ಡದೊಡ್ಡ ಕಲ್ಲುಗಳನ್ನುರುಳಿಸಿ, ಬಹುಮಂದಿ ಮೊಗಲ ಸೈನಿಕರನ್ನು ಕೊಂದಿದ್ದರು. ಕಾರಣ ಬಾದಶಹನು ಪಠಾಣರ ಮೇಲೆ ಬಹಳ ಸಿಟ್ಟಾಗಿ ಯಾವುದೇ ರೀತಿಯಿಂದಾಗಲಿ, ಅವರ ಸೇಡನ್ನು ತೀರಿಸಿಕೊಳ್ಳುವ ಸ್ಥಿರಸಂಕಲ್ಪಮಾಡಿದ್ದನು.

ತರ್ದಿಬೇಗನು ದುಸ್ಸಾಹಸಿಕನಾದ ಸೇನಾಪತಿ; ಆದರೂ, ಹಿಂದೆ ಪಡೆದ ಜಯಗಳ ಮೂಲಕ ಬಹಳ ಗರ್ವಿಷ್ಠನಾಗಿದ್ದನು. ಈ ಗರ್ವದಿಂದಲೇ ಇವನು ಹಿಂದುಮುಂದು ವಿಚಾರಮಾಡದೆ ಒಂದೇ ಬಾರಿಗೆ ಪಠಾಣರ ಮೇಲೆ ಸಾಗಿಹೋದನು. ಇದರಿಂದ ಅನೇಕ ಜನರು ಪಟಪಟನೆ ಬಿದ್ದು ಸಾಯಬೇಕಾಯಿತು. ಇದಕ್ಕಾಗಿ ತಾನು ಬಾದಶಹನಿಂದ ಘೋರಶಿಕ್ಷೆ ಹೊಂದಬೇಕಾಗುವದೆಂದು ತರ್ದಿಬೇಗನು ಊಹಿಸಿದ್ದನು. ಆದರೆ ಅಕಬರನು ಕಠೋರ ದಂಡನೆಯನ್ನು ವಿಧಿಸಲಿಲ್ಲ; ಸಭಾಮಧ್ಯದಲ್ಲಿ ಕೇವಲ ಸಿಟ್ಟಿನಿಂದ ತಿರಸ್ಕಾರಮಾಡಿದನು. ಇಷ್ಟರಿಂದಲೇ ಬಾದಶಹನ ಕ್ರೋಧಾಗ್ನಿಯಿಂದ ತಾನು ಪಾರಾದುದನ್ನು ತಿಳಿದು, ತರ್ದಿಬೇಗನಿಗೆ ಬಹಳ ಆನಂದವಾಯಿತು. ಮನಸ್ಸಿನಲ್ಲಿಯೇ ದೇವರಿಗೆ ಅನೇಕ ಧನ್ಯವಾದಗಳನ್ನರ್ಪಿಸಿ

ದನು. ಇನ್ನು ಮುಂದೆ ಮತ್ತೆ ಇದೇ ಕೆಲಸವನ್ನು ಕೈಕೊಂಡು, ಸೋತು ಬರುವೆನಾದರೆ, ಬಾದಶಹನ ಕ್ರೋಧವಹ್ನಿಗೆ ಆಹುತಿಯಾಗುವೆನೆಂಬದು ಇವನಿಗೆ ಗೊತ್ತಿದ್ದಿತು. ಇವನು ಈ ಸಾರೆ ಪುನಃ ಸಾಹಸದ ಕೆಲಸವನ್ನು ಕೈಗೊಳ್ಳುವುದಕ್ಕೆ ಮುಂದರಿಯಲಿಲ್ಲ.

ಬಾದಶಹನಾದರೋ ತರ್ದಿಬೇಗನನ್ನೇ ಪುನಃ ಈ ಕೆಲಸಕ್ಕೆ ಕಳು ಹಿಸಿ ಪರೀಕ್ಷೆಮಾಡಬೇಕೆಂದಿದ್ದನು. ಅದಕ್ಕಾಗಿಯೇ, ತರ್ದಿಬೇಗನು ಸೋತುಬಂದದ್ದಕ್ಕಾಗಿ ಅವನಿಗೆ ಯಾವ ಶಿಕ್ಷೆಯನ್ನೂ ವಿಧಿಸಲಿಲ್ಲ. ಪುನಃ ಸೋತುಬಂದನೆಂದರೆ ಎರಡು ಶಿಕ್ಷೆಯನ್ನೂ ಒಮ್ಮೆಲೇ ವಿಧಿಸಬೇಕೆಂದು ಬಾದಷಹನ ಆಲೋಚನೆ. ಆದರೆ ತರ್ದಿಬೇಗನು ಹೇಗೋ ಈ ರಹಸ್ಯವನ್ನು ತಿಳಿದು, ಮೌನವನ್ನಾಶ್ರಯಿಸಿ ಕುಳಿತುಕೊಂಡಿದ್ದನು. ಇನ್ನು ಸಭೆಯಲ್ಲಿ ಬಾದಶಹನು ಹೇಳಿದ ಕಾರ್ಯಕ್ಕೆ ಯಾರೂ ಸಮ್ಮತಿಸದಿರುವಲ್ಲಿ, ಈ ಕೆಲ ಸದ ಭಾರವು ಪುನಃ ತರ್ದಿಬೇಗನ ಮೇಲೆಯೇ ಬೀಳುತ್ತಿತ್ತು. ತರ್ದಿಬೇ ಗನು ಈ ಪ್ರಸಂಗವೆಲ್ಲಿ ಬರುವುದೋ ಎಂಬ ಚಿಂತೆಯಲ್ಲಿದ್ದನು; ಏಕೆಂದರೆ ಬಾದಷಹನು ನೀನೇ ಹೋಗಬೇಕೆಂದು ತರ್ದಿಬೇಗನಿಗೆ ಅಪ್ಪಣೆಮಾಡಿದ ನಾದರೆ, ಅದರಂತೆ ನಡೆಯದಿರುವುದು ತರ್ದಿಬೇಗನಿಗೆ ಸಾಧ್ಯವಿರಲಿಲ್ಲ; ಆದರೆ ಮಧ್ಯದಲ್ಲಿ ಕುಮಾರದಾನಿಯಲನು ಬಾಯಿಹಾಕಿ, ಈ ಸಾಹಸ-ಮಯಕಾರ್ಯವನ್ನು ಕೈಕೊಳ್ಳಲೊಪ್ಪಿಕೊಂಡುದನ್ನು ಕೇಳಿ ಅವನು ನಿಶ್ಚಿಂತನಾದನು.

ಬಾದಶಹನು ಸ್ವಲ್ಪ ಹೊತ್ತಿನವರೆಗೆ ಗಂಭೀರಭಾವದಿಂದ ಕುಳಿತು, ಮಗನ ಮುಖವನ್ನು ನೋಡಿ: "ಪ್ರಿಯಕುಮಾರ, ನೀನು ಈಗ ಕೈಗೊಳ್ಳಲಿರುವ ಕಾರ್ಯವು ಎಂತಹದಿರುವದೆಂಬುವನ್ನು ವಿಚಾರಮಾಡಿರುವೆಯಾ? ಈ ಕಾರ್ಯವು ಅತ್ಯಂತ ಭಯಾನಕವೂ, ಬಹು ಕಷ್ಟಸಾಧ್ಯವೂ ಆದದ್ದು. ಇದನ್ನು ಕಡೆಹಾಯಿಸಬೇಕಾದರೆ ಸಂಕಟಪರಂಪರೆಯನ್ನನುಭವಿಸಬೇಕಾದೀತು!" ಎಂದು ಹೇಳಿದನು.

**ಕುಮಾರನು ಬಾದಶಹನಿಗೆ ಕುರ್ನಿಸಮಾಡಿ, ದರ್ಪಿತಭಾವದಿಂದ: "ಪೂಜ್ಯಪಿತರೆ, ದಿಲ್ಲಿಯ ಶ್ರೇಷ್ಠಸಾಮ್ರಾಟರಾದ ಅಕಬರಶಹರ ಮಗನಾಗಿ,**

ಸಂಕಟಮಯವಾದ ಈ ಕಾರ್ಯದ ಮಹತ್ವವನ್ನು ತಿಳಿಯದವನಾದರೆ, ನಾನು ರಾಜವಂಶದಲ್ಲಿ ಹುಟ್ಟಿದ್ದರ ಸಾರ್ಥಕವೇನು? ದಕ್ಷಿಣ ಹಿಂದುಸ್ಥಾನದ ಯುದ್ಧಗಳಲ್ಲಿ ತಾವು ನನ್ನ ಪರಾಕ್ರಮವನ್ನೂ ಕೌಶಲವನ್ನೂ ನೋಡಿರುವಿರಿ. ಹೀಗಿದ್ದೂ ಇಷ್ಟೊಂದು ಸಂದೇಹವೇಕೆ? ಇಷ್ಟು ಅವಿಶ್ವಾಸವೇಕೆ?"

ಬಾದಶಹನು ಅಭಿಮಾನಿಯಾದ ಮಗನ ಈ ಮಾತುಗಳಿಂದ ಪ್ರೀತನಾಗಿ ಹೇಳಿದನು: "ಕುಮಾರ, ನಾನು ಈ ಕೆಲಸದ ಸಂಪೂರ್ಣಭಾರವನ್ನು ನಿನ್ನಮೇಲೆ ಒಪ್ಪಿಸಿದ್ದೇನೆ. ಅಫಜಾಯಿಸರದಾರನಾದ ಖಾನಾನಶಹನು ನನ್ನ ಪತ್ರಕ್ಕೆ ಉದ್ಧಟತನದಿಂದ ಉತ್ತರ ಬರೆದಿದ್ದಾನೆ. ಅವನ ಈ ಗರ್ವವನ್ನು ನಾಶಮಾಡುವದಕ್ಕಾಗಿ ನೀನು ಅವನನ್ನು ಜೀವಿತಾವಸ್ಥೆಯಲ್ಲಿಯೇ ಆಗಲಿ, ಮೃತಾವಸ್ಥೆಯಲ್ಲಿಯೇ ಆಗಲಿ ಇಲ್ಲಿಗೆ ತರಬೇಕು. ಅಂದರೆ ನಾನು ನಿನ್ನನ್ನು ಹೊಸದಾಗಿ ಗೆದ್ದ ಪ್ರದೇಶದ ಸುಭೇದಾರನನ್ನಾಗಿ ಮಾಡುವೆನು. ಒಂದುವೇಳೆ ನೀನು ಪರಾಜಿತನಾಗುವೆಯಾದರೆ—"

ಬಾದಶಹನು ಮುಂದೆ ಏನೋ ಹೇಳತಕ್ಕವನಿದ್ದನು; ಆದರೆ ರಾಜಕುಮಾರ ದಾನಿಯಲನು ಬಾದಶಹನಿಗೆ ಮುಂದೆ ಮಾತಾಡಗೊಡದೆ: "ಆಗ್ಗೆ ಸಾಮ್ರಾಟರು ಈ ಬಾಲಕನಿಗೆ ಬೇಕಾದ ಶಿಕ್ಷೆ ವಿಧಿಸಬಹುದು. ಪರಾಜಯದ ಕಲಂಕವನ್ನು ಹೊತ್ತುಕೊಂಡ ನಾನು ಅದನ್ನು ಸುಮ್ಮನೆ ಸಹಿಸಿಕೊಳ್ಳುವೆನು. ಆ ಸಮಯದಲ್ಲಿ ನಾನು ದಿಲ್ಲೀಶ್ವರರ ಪುತ್ರನಾದ ಸುಲ್ತಾನ ದಾನಿಯಲನಾಗಿರುವೆನೆಂಬದನ್ನು ಸಂಪೂರ್ಣವಾಗಿ ಮರೆತುಬಿಡುವೆನು—ಯುದ್ಧದಲ್ಲಿ ಪರಾಜಯಹೊಂದಿದವನೂ, ಕಲಂಕಪೂರ್ಣನೂ, ದಂಡಾರ್ಹನೂ ಆದೊಬ್ಬ ಸೇನಾಪತಿಯಾಗಿರುವೆನೆಂದು ಭಾವಿಸುವೆನು."

ದಾನಿಯಲನ ಈ ತೇಜೋಗರ್ಭಿತ ವಾಕ್ಯಗಳನ್ನು ಕೇಳಿ, ಬಾದಶಹನು ಅತೀವ ಆನಂದಿತನಾದನು. ತರ್ದಿಬೇಗ ಮೊದಲಾದ ಸೇನಾಪತಿಗಳು ಲಜ್ಜಿತರಾದರು. ಅಂದಿನ ಸಭೆಯ ಕೆಲಸವು ಸಮಾಪ್ತವಾಯಿತು. ಸಾಮ್ರಾಟನೂ, ದಾನಿಯಲನೂ ಅಂತಃಪುರವನ್ನು ಪ್ರವೇಶಿಸಿದರು. ಸೇನಾ

ಪತಿಗಳು ತಮಗಾದ ಅಪಮಾನದ ದೆಸೆಯಿಂದ ಅಧೋಮುಖರಾಗಿ ಹೊರಟುಹೋದರು.

ದಾನಿಯಲನು ಶೂರರಾದ ಇನ್ನೂರು ಮಂದಿ ಸೈನಿಕರನ್ನು ಕರೆದುಕೊಂಡು ವಿಜಯಯಾತ್ರೆಗೆ ಹೊರಡಲು ಸಿದ್ಧನಾದನು. ಈ ಸಮಯದಲ್ಲಿ ಬಾದಶಹನು ಕುಮಾರನಿಗೆ ಹೇಳಿದನು: "ವತ್ಸ, ಬಹಳ ಎಚ್ಚರಿಕೆಯಿಂದ ಪ್ರತಿಯೊಂದು ಕೆಲಸವನ್ನೂ ಮಾಡು. ನೀನು ಆಲೋಚನಾ ಸಭೆಯಲ್ಲಿ ಸಕಲ ಸೇನಾಪತಿಗಳ ಮೇರೆಯು ತಗ್ಗುವಂತೆ ದರ್ಪದಿಂದ ಮಾತಾಡಿದೆ. ನಿನ್ನ ಈ ಅಭಿಮಾನವು ಕೇವಲ ಮಾತಿನಲ್ಲಿ ಸಮಾಪ್ತವಾಗದೆ, ಕಾರ್ಯತಃ ನಿದರ್ಶನಕ್ಕೆ ಬರುವುದು ಆವಶ್ಯಕವಾದುದೆಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊ. ಬಿಕ್ಕಟ್ಟಾದ ಪರ್ವತಪ್ರದೇಶವಮೇಲೆ ದೌಡುಮಾಡಿ, ವಿಜಯವನ್ನು ದೊರಕಿಸಬೇಕಾದರೆ ಸಾಮರ್ಥ್ಯಕ್ಕಿಂತಲೂ ಜಾಣತನವು ಹೆಚ್ಚಿಗೆ ಬೇಕಾಗುವದೆಂಬದನ್ನು ಮರೆಯಬೇಡ. ನಾನು ಚಿತೋಡವನ್ನು ಜಯಿಸಬೇಕಾದರೆ ಬಹಳ ಕಷ್ಟಪಡಬೇಕಾಯಿತು. ನನ್ನ ಚಾತುರ್ಯವನ್ನೆಲ್ಲಾ ವೆಚ್ಚಮಾಡಬೇಕಾಯಿತು. ಅಫಜಾಯಿ ಪಠಾಣರು ರಜಪೂತರಂತೆ ಹಟಗಾರರು. ಅವರು ಸಹಜವಾಗಿ ವಶರಾಗತಕ್ಕವರಲ್ಲ. ಸುಲಭವಾಗಿ ಸೋಲತಕ್ಕವರೂ ಅಲ್ಲ. ಈಗ ನೀನು ಬೇಕಾದಷ್ಟು ಧನವನ್ನು ತೆಗೆದುಕೊಂಡುಹೋಗು. ಪಠಾಣಸರದಾರರಲ್ಲಿ ಒಡಕುಹುಟ್ಟಿಸುವುದಕ್ಕೆ ಪ್ರಯತ್ನಿಸು. ಅಂದರೆ ನಿನ್ನ ಕೆಲಸವು ಸುಲಭವಾಗಿ ಸಾಧ್ಯವಾಗುವುದು. ಇದಕ್ಕಾಗಿ ಹಣವು ಎಷ್ಟಾದರೂ ವೆಚ್ಚವಾಗಲಿ; ಈ ವಿಷಯದಲ್ಲಿ ನೀನು ಕೃಪಣತೆ ತೋರಿಸಬೇಡ. ಮತ್ತೆ ಸೈನ್ಯವೂ, ಹಣವೂ ಬೇಕಾದರೆ ತಿಳುಹಿಸು. ನೀನು ಬೇಡಿದಷ್ಟು ಹಣವನ್ನೂ ಸೈನಿಕರನ್ನೂ ನಾನು ಕಳುಹಿಸಿಕೊಡುತ್ತೇನೆ. ಈ ಲಾಹೋರದುರ್ಗದಲ್ಲಿ ಐದುಸಾವಿರ ಮೊಗಲಸೈನಿಕರಿದ್ದಾರೆ. ಎಷ್ಟೇ ಸೈನ್ಯವು ನಾಶವಾದರೂ ಚಿಂತೆಯಿಲ್ಲ; ಪಠಾಣರ ಮುಯ್ಯನ್ನು ತೀರಿಸಿಕೊಳ್ಳಬೇಕಾಗಿದೆ. ಮುಖ್ಯವಾಗಿ ಪಠಾಣರು ವಿಶ್ವಾಸಘಾತಕರೂ, ಚತುರರೂ, ಮೊಗಲದ್ವೇಷಿಗಳೂ ಆಗಿರುವರೆಂಬುದನ್ನು ನೀನು ಲಕ್ಷ್ಯದಲ್ಲಿಟ್ಟುಕೊ. ಇನ್ನು ನೀನು ಪ್ರಯಾಣಮಾಡಿಬಾ; ವಿಜಯಲಕ್ಷ್ಮಿಯು ತೀವ್ರವೇ ನಿನ್ನನ್ನಾಲಿಂಗಿಸಲಿ!"

ಕುಮಾರನು ತಂದೆಯ ಚರಣಗಳಿಗೆ ವಂದಿಸಿ, ಅವನ ಆಶೀರ್ವಾದ ವನ್ನುಹೊಂದಿ, ಸೂರ್ಯೋದಯಕ್ಕೆ ಮೊದಲೇ ಲಾಹೋರಿನಿಂದ ಹೊರ ಟುನಡೆದನು. ಸಿದ್ರೆಯಲ್ಲಿ ವ್ಯೈಮರಿತ ಜನರು ಕುಮಾರನ ಈ ಅಭಿಯೋ ಗವನ್ನು ತಿಳಿಯಲಿಲ್ಲ.

ಮುಂದೆ ಏಳುದಿನಗಳಾದ ಮೇಲೆ, ಯಾವತೊಂದರೆಯೂ ಇಲ್ಲದೆ ಕುಮಾರನು ಅಫಜಾಯಿಯ ರಾಜಧಾನಿಯಿಂದ ಮೂರು ಹರದಾರಿ ದೂರ ದಲ್ಲಿರುವ ಪ್ರದೇಶಕ್ಕೆ ಬಂದನು; ಮತ್ತು ಅಲ್ಲಿಯೇ ತನ್ನ ಬೀಡುಬಿಟ್ಟು ಪಾಳ ಯಹಾಕಿದನು. ಈ ಮೊದಲು ಅಫಜಾಯಿದೇಶದಮೇಲೆ ದಂಡೆತ್ತಿ ಬಂದ ವರಲ್ಲಿ ಕೆಲವರು ಈಗ ಕುಮಾರನ ಬಳಿಯಲ್ಲಿದ್ದರು. ಅವರು ಇದೇಸ್ಥಳ ದಲ್ಲಿ ಛಾವಣಿಯನ್ನು ಸ್ಥಾಪಿಸುವದು ಯೋಗ್ಯವೆಂದು ಕುಮಾರನಿಗೆ ಆಲೋಚನೆ ಹೇಳಿದರು. ಕುಮಾರನು ಅಪರಿಚಿತಪ್ರದೇಶಕ್ಕೆ ಬಂದನಾ ದುದರಿಂದ, ಈ ಸೈನಿಕರ ಹೇಳಿಕೆಯಂತೆ ವ್ಯವಸ್ಥೆಮಾಡಲೇಬೇಕಾಯಿತು.

---

## ಎರಡನೆಯ ಪರಿಚ್ಛೇದ.

### ಅಂಕುರ.

ಶಹಾಜಾದಾ ದಾನಿಯಲನು ಕಿರಿದು ಎತ್ತರವೂ, ವಿಸ್ತಾರವೂ ಆದ ಒಂದು ಪ್ರದೇಶದಲ್ಲಿ ಛಾವಣಿ ಬಿಟ್ಟುಕೊಂಡಿದ್ದನು. ಈ ಸ್ಥಳದ ಹೆಸರು ನಿಮುಕ್‌ಶಹ. ನಿಸರ್ಗದೇವತೆಯ ಕೃಪೆಯಿಂದ ಈ ಸ್ಥಳವು ಬಹು ಮನೋಹರವಾಗಿತ್ತು. ಈ ಸ್ಥಳದಲ್ಲಿ ನಿಂತು ನೋಡಿದರೆ, ಸುತ್ತಲೂ ದೃಶ್ಯವು ಅತೀವಸುಂದರವಾಗಿ ಕಂಡು ಬರುತ್ತಿದ್ದಿತು. ಇಲ್ಲಿ ಸ್ವಚ್ಛವಾದ ನೀರಿನ ಕೆಲವು ಝರಿಗಳೂ, ಎರಡು ಗಿರಿ-ನದಿಗಳೂ ಇದ್ದು, ನೀರಡಿಸಿದ ವರಿಗೆ ಶಾಂತಿಯನ್ನುಂಟುಮಾಡುತಲಿದ್ದುವು. ಅದರಿಂದ ಸೈನಿಕರಿಗೆ ನೀರಿನ ಕೊರತೆಯಾಗುವಂತಿರಲಿಲ್ಲ. ಗಭೀರವಾದ ವನಮಧ್ಯದಲ್ಲಿ ಪಲ್ಲವಮಯವಾದ ಗಿಡಗಳಲ್ಲಿ ನಾನಾಜಾತಿಯ ಪಕ್ಷಿಗಳು ವಾಸಿಸುತ್ತಿದ್ದು ತಮ್ಮ ಸುಸ್ವರದಿಂದ ಇಲ್ಲಿ ವಾಸಿಸುತ್ತಿರುವವರ ಮನಸ್ಸನ್ನು ಆನಂದ

ಗೊಳಿಸುತ್ತಿದ್ದುವು. ಗಿರಿ-ನದಿಗಳ ಮೃದುತಾನಮಯವಾದ ನೀರವ ಸಂಗೀತವು ಕಿವಿಗೆ ಅತ್ಯಂತ ಇಂಪಾದದ್ದಾಗಿದ್ದಿತು. ವಿಶಾಲವಾದ ವನಭೂಮಿಯು ನಾಲ್ಕೂ ಕಡೆಯಲ್ಲಿ ವ್ಯಾಪಿಸಿ ಈ ಸ್ಥಳವು ಮನುಷ್ಯರ ವಾಸಕ್ಕೆ ಉತ್ತಮವಾಗಿತ್ತು.

ಅಫಜಾಯಿ-ಸರದಾರನ ಹೆಸರು ಮಿರಾನಶಹನೆಂದು ನಾವು ಹಿಂದೆ ಹೇಳಿದ್ದೇವೆ. ಇವನ ರಾಜಧಾನಿಯು ಮಿರಾನಗಡವು. ಇದು ಸಿಮುಕ್ ಶಹದಿಂದ ಮೂರು ಹರದಾರಿ ದೂರದಲ್ಲಿರುವದೊಂದು ಗುಡ್ಡದ ಅತ್ಯುಚ್ಚಭಾಗದಲ್ಲಿದೆ. ಸೈನಿಕರನ್ನು ಕರೆದುಕೊಂಡು, ಪರ್ವತವನ್ನು ಸಹಜವಾಗಿ ಏರಿಹೋಗುವದಕ್ಕೆ ಕೆಳಗಿನಿಂದ ಉತ್ತಮಮಾರ್ಗಗಳಿರಲಿಲ್ಲ. ತರ್ದಿಬೇಗನು ಕೇವಲ ಶರೀರಸಾಮರ್ಥ್ಯದ ಜೋರಿನಿಂದ ಈ ಪರ್ವತವನ್ನು ಏರಿಹೋಗುವದಕ್ಕೆ ಯತ್ನಿಸಿದ್ದರಿಂದಲೇ, ಮೊಗಲಸೈನಿಕರು ವಿಪತ್ತಿಗೊಳಗಾಗಬೇಕಾಯಿತು. ಇದನ್ನು ಕುಮಾರದಾನಿಯಲನು ಬಲ್ಲವನಾಗಿದ್ದನು. ಕಾರಣ ಇವನು ಒಮ್ಮೆಲೇ ಪರ್ವತವನ್ನು ಏರಿಹೋಗಲು ಪ್ರಯತ್ನಿಸಲಿಲ್ಲ. ದೂರದಲ್ಲಿ ಬೀಡುಬಿಟ್ಟುಕೊಂಡಿದ್ದು, ರಾಜಧಾನಿಯನ್ನು ಆಕ್ರಮಿಸುವ ಸುಲಭಮಾರ್ಗವನ್ನು ಕಂಡುಹಿಡಿಯುವ ಯತ್ನನಡೆಯಿಸಿದನು.

ನೋಡನೋಡುತ್ತಿರುವಷ್ಟರಲ್ಲಿ ಏಳು ದಿವಸಗಳು ಕಳೆದುಹೋದುವು. ಈ ಅವಧಿಯಲ್ಲಿ ಕುಮಾರನು ಧನದಾಸೆಯುಳ್ಳ ಒಬ್ಬಿಬ್ಬ ಪಠಾಣ ಸರದಾರರನ್ನು ಸ್ವಾಧೀನಮಾಡಿಕೊಳ್ಳುವ ಯತ್ನಮಾಡಿದನು; ಆದರೆ ಇವನ ಈ ಪ್ರಯತ್ನವು ನಿಷ್ಫಲವಾಯಿತು. ಇವನಿಂದ ನಿಯಮಿಸಲ್ಪಟ್ಟ ಗುಪ್ತಚಾರರು ನಾಲ್ಕೂ ಕಡೆಯಲ್ಲಿ ಅಡ್ಡಾಡುತಲಿದ್ದರು; ಆದರೆ ಇವರು ಪರ್ವತದ ಉನ್ನತಭಾಗದಲ್ಲಿರುತ್ತಿರುವ ರಾಜಧಾನಿಯಲ್ಲಿ ಪ್ರವೇಶಮಾಡುವುದಕ್ಕಿರುವ ಗುಪ್ತಮಾರ್ಗವನ್ನಾಗಲಿ, ಸಹಜಸಾಧ್ಯವಾದ ಮಾರ್ಗವನ್ನಾಗಲಿ ಕಂಡುಹಿಡಿಯಲು ಸಮರ್ಥರಾಗಲಿಲ್ಲ.

ಒಂದು ಗಭೀರರಾತ್ರಿಯಲ್ಲಿ ಶಹಾಜಾದಾ ದಾನಿಯಲನು ತನ್ನ ಶಿಬಿರದಲ್ಲಿ ಕುಳಿತುಕೊಂಡಿದ್ದನು. ರಾತ್ರಿಯ ಪ್ರಥಮಯಾಮವು ಕಳೆದು ದ್ವಿತೀಯಭಾಗವು ಪ್ರಾರಂಭವಾಗುತಲಿತ್ತು. ಆದರೆ ಆ ಸ್ಥಳವು ನಾಲ್ಕೂ

ದಿಕ್ಕುಗಳಲ್ಲಿ ಪರ್ವತದಿಂದ ಸುತ್ತುಗಟ್ಟಲ್ಪಟ್ಟು ಜನಶೂನ್ಯವಾದುದರಿಂದ ಮಧ್ಯರಾತ್ರಿಯು ಕಳೆದು ಹೋಗಿದೆಯೋ ಏನೋ ಎಂದು ಭಾಸವಾಗುತ್ತಿತ್ತು. ಶಾಂತತೆಯ ಸಾಮ್ರಾಜ್ಯವು ಎಲ್ಲ ಕಡೆಯಲ್ಲಿಯೂ ಹಬ್ಬಿತ್ತು. ದಾನಿಯಲನು ಮದಿರಾದೇವಿಯ ಪ್ರಿಯಭಕ್ತನಾಗಿದ್ದನು. ಕಾರಣ ಇವನಿಗೆ ಮೇಲಿಂದ ಮೇಲೆ ಮದ್ಯವು ಬೇಕಾಗುತಲಿತ್ತು. ಅದರಲ್ಲಿಯೂ ಯಾವುದಾದರೊಂದು ಗಹನವಿಚಾರದಲ್ಲಿ ತೊಡಗಿರುವಾಗ, ಮಿದುಳನ್ನು ಹೆಚ್ಚು ಉತ್ತೇಜಿತವಾಗಮಾಡುವುದಕ್ಕೆ ಮೇಲಿಂದ ಮೇಲೆ ಮದ್ಯಸೇವನೆ ಮಾಡುವನು. ಸುರಾದೇವಿಯ ಸೇವನೆಯಿಂದ ಬುದ್ಧಿಯು ಹೆಚ್ಚು ಪ್ರಖರವಾಗುವುದೆಂದೂ, ಇದರಿಂದ ಗಹನವಾದ ಆಲೋಚನೆಯು ಬೇಗನೆ ಬಗೆಹರಿವುದೆಂದೂ ಇವನ ಗ್ರಹಿಕೆಯಾಗಿತ್ತು. ಇದರಿಂದ ಇವನು ವಿಚಾರಮಾಡುವುದಕ್ಕೆ ಕುಳಿತಿರುವಾಗ ದಾಸಿಯರು ಮದಿರೆಯನ್ನು ಸಿದ್ಧಮಾಡಿಕೊಂಡು ನಿಂತಿರುತ್ತಿದ್ದರಲ್ಲದೆ ನಡುನಡುವೆ ಕುಮಾರನು ಬೇಡಿದಾಗ ಸುವರ್ಣಪಾತ್ರೆಯಲ್ಲಿ ಹಾಕಿ, ಅವನ ಕೈಯಲ್ಲಿ ಕೊಡುತ್ತಿದ್ದರು. ಅದನ್ನು ಸೇವಿಸಿ ಕುಮಾರನು ಪುನಃ ವಿಚಾರಪರನಾಗುತಿದ್ದನು.

ದಾನಿಯಲನು ಮನಸ್ಸಿನಲ್ಲಿ ಆಲೋಚಿಸಿದನು—"ಸುಮ್ಮನೆ ಹೀಗೆ ವೇಳೆಗಳೆಯುತ್ತ ಕುಳಿತುಕೊಂಡರೆ, ಉಪಯೋಗವೇನು? ಈವರೆಗೆ ಎಷ್ಟೋ ಗೂಢಚಾರರನ್ನು ಕಳುಹಿಸಿದೆನು. ಅವರಿಂದೇನೂ ಕೆಲಸವಾಗಲಿಲ್ಲ. ಇನ್ನುಮೇಲೆ ನಾನೇ ಈ ಕೆಲಸಕ್ಕೆ ನಿಂತುಕೊಳ್ಳಬೇಕು. ಇದಕ್ಕಾಗಿ ನಾನು ನಾಳಿನ ದಿನ ವೇಷಾಂತರದಿಂದ ಗುಡ್ಡದಮೇಲಿರುವ ಅರಣ್ಯಪ್ರವೇಶ ಮಾಡಬೇಕು. ಈ ವೇಳೆಯಲ್ಲಿ ಒಂದುವೇಳೆ ನನ್ನ ಜೀವಕ್ಕೆ ಎರವಾದರೆ— ಏನೂ ಅಡ್ಡಿಯಿಲ್ಲ; ಯಾಕಂದರೆ ನಾನು ಸಾಮ್ರಾಟನ ಕಾರ್ಯಕ್ಕಾಗಿ ಸತ್ತಂತಾಗುವುದು. ಒಂದುವೇಳೆ ಸುರಕ್ಷಿತನಾಗಿ ತಿರುಗಿ ಬರುವೆನಾದರೆ, ಮಾರ್ಗವನ್ನು ಗೊತ್ತು ಹಚ್ಚಿಕೊಂಡೇ ಬರುವೆನು. ಹೀಗಾದಲ್ಲಿ ಮಿರಾನಶಹನನ್ನು ಬಂದಿಯನ್ನಾಗಿ ಮಾಡಿ ಲಾಹೋರಿಗೆ ಕರೆದುಕೊಂಡು ಹೋಗುವುದು ಸುಲಭಸಾಧ್ಯ."

ಹೀಗೆ, ಬಹು ವಿಚಾರತರಂಗಗಳಿಂದ ಚಂಚಲವಾದ ಮನಸ್ಸನ್ನು ಸ್ಥಿರಪಡಿಸಿಕೊಳ್ಳುವುದಕ್ಕಾಗಿ, ದಾನಿಯಲನಿಗೆ ಮದ್ಯವು ಬೇಕಾಯಿತು.

ದಾಸಿಯು ಸಮೀಪದಲ್ಲಿಯೇ ನಿಂತಿದ್ದಳು. ಕುಮಾರನ ಮುಖಭಾವವನ್ನು ತಿಳಿದು, ಅವಳು ಒಂದು ಪಾತ್ರೆಯಲ್ಲಿ ಮದಿರೆಯನ್ನು ಹಾಕಿ, ಅವನ್ನು ದಾನಿಯಲನ ಮುಂದೆ ಹಿಡಿದಳು. ಕುಮಾರನು ಅದನ್ನು ತೆಗೆದುಕೊಂಡು, ಅದರಲ್ಲಿರುವ ಸುರೆಯನ್ನು ಸಂಪೂರ್ಣವಾಗಿ ಸೇವಿಸಿ, ಪಾತ್ರೆಯನ್ನು ದಾಸಿಯಕೈಯಲ್ಲಿ ಕೊಟ್ಟನು. ಇದರಿಂದ ದಾನಿಯಲನಿಗೆ ಸಮಾಧಾನವಾಗಿ ಪುನಃ ಅವನು ವಿಚಾರಕ್ಕೊಳಗಾದನು.

ಇಂತಹ ಪ್ರಶಾಂತ ಸಮಯದಲ್ಲಿ, ದೂರದಲ್ಲೆಲ್ಲೋ ಅಳುತ್ತಿರುವ ಧ್ವನಿ ಕೇಳಬಂದಿತು. ಆ ಸ್ವರವು ಗಭೀರವಾದ ವನದಲ್ಲಿ ಪ್ರತಿಧ್ವನಿತವಾಗಿ ಶಿಬಿರದಲ್ಲಿ ಕುಳಿತ ಕುಮಾರನಿಗೆ ಸ್ಪಷ್ಟವಾಗಿ ಕೇಳಿಸಿತು. ಇದನ್ನು ಕೇಳಿದ ಶಹಜಾದನು ಇದೊಬ್ಬ ರಮಣಿಯ ಕಂಠಸ್ವರವೆಂದು ಊಹಿಸಿದನು. ಇಂತಹ ರಾತ್ರಿಯಸಮಯದಲ್ಲಿ, ಈ ನಿರ್ಜನವನಪ್ರದೇಶದಲ್ಲಿ ಈ ರೀತಿ ಚೀತ್ಕಾರಮಾಡಿ ಅಳುತ್ತಿರುವವರಾರಾಗಿರಬಹುದು? ಎಂದು ಕುಮಾರನು ಸ್ವಲ್ಪ ಹೊತ್ತು ಆಲೋಚಿಸಿದನು. ತರುವಾಯ ಅವನು ತನ್ನಲ್ಲಿರುವದೊಂದು ಕೊಳಲನ್ನು ತೆಗೆದುಕೊಂಡು, ಮೆಲ್ಲನೆ ಊದಿದನು. ಕೂಡಲೆ ಇಬ್ಬರು ಶರೀರರಕ್ಷಕರು, ಬಂದು, ಕುರ್ನಿಸಮಾಡಿ,—"ಹುಜೂರ, ಅಪ್ಪಣೆಯೇನು!" ಎಂದು ಕೈಕಟ್ಟಿಕೊಂಡು ನಿಂತರು.

ಕುತೂಹಲಾವಿಷ್ಟನಾದ ದಾನಿಯಲನು—"ಸಮೀಪದಲ್ಲಿ ಯಾವಳೋ ಒಬ್ಬರಮಣಿಯು ಅಳುತ್ತಿರುವ ಸ್ವರವನ್ನು ಕೇಳಿದೆ. ಅದು ನಿಮಗೂ ಕೇಳಿರಬಹುದು. ವಿಚಾರಮಾಡಿನೋಡಲಾಗಿ, ಅವಳು ನಮ್ಮ ಶಿಬಿರದ ಬಳಿಯೇ ಇರಬಹುದಾಗಿ ಭಾಸವಾಗುತ್ತದೆ. ನೀವು ಹೋಗಿ ನೋಡಿಕೊಂಡುಬನ್ನಿ, ಅದರಿಂದ ನಿಜಸಮಾಚಾರವು ಗೊತ್ತಾಗುವದು. ಯಾರಾದರೂ ಅಪರಿಚಿತಮನುಷ್ಯರು ನಿಮಗೆ ಕಂಡುಬಂದರೆ, ಅವರನ್ನು ನನ್ನ ಬಳಿಗೆ ಕರದುಕೊಂಡು ಬನ್ನಿ. ಅವರಿಗೆ ಯಾವರೀತಿಯಿಂದಲೂ ಭಯವನ್ನುಂಟುಮಾಡಬೇಡಿರಿ," ಎಂದು ಹೇಳಿದನು.

ಪ್ರಹರಿಗಳು ಮತ್ತೆ ಕುರ್ನಿಸಮಾಡಿ, ಹೊರಟುಹೋದರು. ಮುಂದೆ ಹತ್ತುನಿಮಿಷಗಳ ತರುವಾಯ ಅವರು ಒಬ್ಬ ಹೆಂಗಸಿನ ಸಂಗಡ ದಾನಿಯಲನ ಶಿಬಿರವನ್ನು ಹೊಕ್ಕರು.

ಈ ಆಗಂತುಕರಮಣಿಯು ತರುಣಿ. ಇವಳು ಶಹಜಾದನ ಕೋಣೆಯಲ್ಲಿ ಪ್ರವೇಶಮಾಡಿದ ಕೂಡಲೇ ದೊಡ್ಡದನಿಯಿಂದ ಅಳತೊಡಗಿದಳು. ದಾನಿಯಲನು ವಿಸ್ಮಯಾಕುಲನಾಗಿ ಇವಳನ್ನು ನೋಡತೊಡಗಿದನು. ಇವಳು ಕಿಶೋರ–ಯೌವನಗಳ ಸಂಧಿಸ್ಥಲದಲ್ಲಿದ್ದು, ಅತೀವ ಸುಂದರಿಯಾಗಿದ್ದಳು. ಇವಳು ಧರಿಸಿದ ವಸ್ತ್ರಗಳು ಬೆಲೆಯುಳ್ಳವಾಗಿರಲಿಲ್ಲ. ಸ್ವಚ್ಛವೂ ಇರಲಿಲ್ಲ. ಇವು ಅಲ್ಲಲ್ಲಿ ಹರಿದು, ಧೂಳಿಯಿಂದ ಕೂಡಿದವಾಗಿದ್ದವು. ನೋಡಿದವರಿಗೆ ಇವಳೊಬ್ಬ ಗುಡ್ಡುಗಾಡು ಪ್ರದೇಶದಲ್ಲಿ ವಾಸಿಸುವ ಕಾಡುಮನುಷ್ಯಳೆಂದು ಬೋಧೆಯಾಗುತಿತ್ತು. ದಾನಿಯಲನು ಎದ್ದುನಿಂತು: “ ನಿನಗಿಲ್ಲಿ ಯಾವಭಯವೂ ಇಲ್ಲ. ಶಾಂತಳಾಗು. ನೀನಾರು? ನಿನ್ನ ತಾಯಿತಂದೆಗಳಾರು? ” ಎಂದು ಕೇಳಿದನು.

ಕುಮಾರನ ಮಾತುಗಳನ್ನು ಕೇಳಿ ಅವಳು ಶಾಂತಳಾದಂತೆ ನಟಿಸಿದಳು. ಅವಳು ದಿಟ್ಟತನದಿಂದ: “ ನನಗೆ ಬಹಳ ಹಸಿವು. ಮೊದಲು ಏನಾದರೂ ತಿನ್ನಲಿಕ್ಕೆ ಕೊಡು. ಅನಂತರ ಮಾತಾಡುವೆನು,” ಎಂದು ಹೇಳಿದಳು.

ರಮಣಿಯು ತನ್ನೊಡನೆ ಏಕವಚನದಿಂದ ಮಾತಾಡಿದ್ದನ್ನು ನೋಡಿ, ಶಹಾಜಾದನು ಇವಳೊಬ್ಬ ಕಾಡು ಹೆಂಗಸಾಗಿರುವಳೆಂದೂ, ಈವರೆಗೆ ಕೇವಲ ಗುಡ್ಡುಗಾಡಿನಲ್ಲಿ ಬೆಳೆದವಳೆಂದೂ, ಅದರಿಂದಿವಳಿಗೆ ಶ್ರೇಷ್ಠಜನರೊಡನೆ ಹೇಗೆ ವರ್ತಿಸಬೇಕೆಂಬುದು ಗೊತ್ತಿಲ್ಲವೆಂದೂ ಊಹಿಸಿದನು.

ದಾನಿಯಲನು ಪ್ರಸನ್ನಮುಖನಾಗಿ: “ ನೀನು ಇಲ್ಲಿಯೇ ಕುಳಿತುಕೊ. ನಾನು ನಿನಗೆ ಆಹಾರದ ಪದಾರ್ಥಗಳನ್ನು ತರಿಸಿಕೊಡುತ್ತೇನೆ, ” ಎಂದನು.

ಆ ರಮಣಿ ಸಮಾಧಾನವನ್ನು ಹೊಂದಿ, ಒಂದು ಮಖಮುಲ್‍ಮಂಡಿತವಾದ ಆಸನದಲ್ಲಿ ಕುಳಿತಳು. ಹಳ್ಳಿಗಾಡು ಮನುಷ್ಯರು ಶಹರಕ್ಕೆ ಹೋದರೆ ಅಲ್ಲಿಯ ವಸ್ತುಗಳನ್ನು ಆಶ್ಚರ್ಯದಿಂದ ನೋಡುತ್ತಿರುವಂತೆ ಅವಳು ಉತ್ಸುಕತೆಯಿಂದ ಆ ಕೋಣೆಯಲ್ಲಿಯ ಪ್ರತಿಯೊಂದು ವಸ್ತುವನ್ನೂ ಸೂಕ್ಷ್ಮರೀತಿಯಿಂದ ನೋಡತೊಡಗಿದಳು.

ಶಹಾಜಾದನ ಇಂಗಿತದಂತೆ, ಶರೀರರಕ್ಷಕರು ಕೂಡಲೇ ರಾಜ ಭೋಗೋಚಿತ ಆಹಾರದ ಪದಾರ್ಥಗಳನ್ನು ಆ ತರುಣಿಯ ಮುಂದಿರಿಸಿ ಹೊರಟುಹೋದರು. ತರುವಾಯ ಅಲ್ಪಕಾಲದಲ್ಲಿಯೇ ಇಬ್ಬರು ದಾಸಿಯರು ಬಂಗಾರದ ಪಾತ್ರೆಗಳಲ್ಲಿ ಸುವಾಸನೆಯ ನೀರನ್ನೂ, ಷರಬತ್ತನ್ನೂ ಆ ಯುವತಿಯ ಮುಂದೆ ತಂದಿಟ್ಟರು.

ಆ ಗ್ರಾಮ್ಯಯುವತಿಯು ಕುತೂಹಲಪೂರ್ಣದೃಷ್ಟಿಯಿಂದ ಬಂಗಾರದ ಆಭರಣಗಳನ್ನಿಟ್ಟುಕೊಂಡಿದ್ದ ಈ ದಾಸಿಯರನ್ನು ನೋಡಿ, ವಿಸ್ಮಯ ಪೂರ್ಣಭಾವದಿಂದ: "ಇವರು ನಿನಗೇನಾಗಬೇಕು? ಎಂದು ಕೇಳಿದಳು.

"ಇವರು ನನ್ನ ದಾಸಿಯರು."

"ಹಾಗಾದರೆ ನೀನು ಯಾರು?"

"ನಾನು ಅನಂತರ ಎಲ್ಲವನ್ನೂ ಹೇಳುವೆನು. ಮೊದಲು ನೀನು ಊಟಮಾಡಿ ಶಾಂತಳಾಗು," ಎಂದು ಕುಮಾರನು ಹೇಳಿದನು.

ಆ ರಮಣಿಯು ಖಾದ್ಯಪಾತ್ರೆಯಿಂದ ಮೂರು ನಾಲ್ಕು ಪದಾರ್ಥಗಳನ್ನು ಆರಿಸಿಕೊಂಡು, ಅವನ್ನು ತಿಂದಳು. ಇವಳು ತಿನ್ನುವ ರೀತಿಯು ಉನ್ಮಾದಗ್ರಸ್ತರಂತೆ ಇತ್ತು. ಒಮ್ಮೆ ನಗುತ್ತಿದ್ದಳು. ಮತ್ತೊಮ್ಮೆ ಗಂಭೀರ ಭಾವವನ್ನು ಧರಿಸುತಿದ್ದಳು. ತಿನ್ನುವದಕ್ಕಾಗಿ ಮುಂದಿರಿಸಿದ್ದ ಪದಾರ್ಥಗಳಲ್ಲಿ ಕೆಲವನ್ನು ತೆಗೆದುಕೊಂಡು ಅವನ್ನು ಆ ಕೋಣೆಯಲ್ಲಿ ಅತ್ತಿತ್ತ ಎರಚಿದಳು. ಕೆಲವನ್ನು ತಿಂದಳು. ಮತ್ತೆ ಕೆಲವನ್ನು ಕೈಯಿಂದ ತಿಕ್ಕಿ ನಾಶ ಮಾಡಿ ಅಲ್ಲಿಯೇ ಚಲ್ಲಿದಳು. ತರುವಾಯ ಅವಳು ನೀರನ್ನು ಕುಡಿದು, ಸಿಟ್ಟಾದವಳಂತೆ ನಟಿಸಿ, ಪಾತ್ರೆಯನ್ನೊತ್ತಟ್ಟಿಗೆ ಇರಿಸಿದಳು.

ಈ ದರಿದ್ರ ರಮಣಿಯ ಮನಸ್ಸಿನ ಸ್ಥಿತಿಯೂ, ಕೆಲಸಮಾಡುವ ಪದ್ಧತಿಯೂ ಉನ್ಮಾದಿನಿಯಂತಿರುವವೆಂಬುದನ್ನು ಶಹಜಾದನು ನೋಡಿದನು. ಆಹಾರವಾದನಂತರ ಆ ಯುವತಿ ಉದಾಸದೃಷ್ಟಿಯಿಂದ ಕೋಣೆಯ ನಾಲ್ಕೂ ಕಡೆಯಲ್ಲಿ ಆಡ್ಡಾಡಿದಳು. ಅನಂತರ ಅವಳು ದಾನಿಯಲನ ಬಳಿಗೆ ಬಂದು: "ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳಲೇ ಇಲ್ಲವಲ್ಲ! ನೀನು ಯಾರೆಂಬುದನ್ನು ಈಗಲಾದರೂ ಹೇಳು," ಎಂದು ಕೇಳಿದಳು.

"ಮೊದಲು ನೀನು ಯಾರೆಂಬದನ್ನು ಹೇಳು. ಆಮೇಲೆ ನಾನಾರೆಂಬದನ್ನು ನಿನಗೆ ಹೇಳುವೆನು," ಎಂದು ಕುಮಾರನು ಮುಗುಳುನಗೆಯಿಂದ ಹೇಳಿದನು.

"ನಾನು ಮುನ್ನಾ."

"ಬರಿ ಮುನ್ನಾ ಎಂದು ಹೇಳಿದರೆ ನನಗೆ ತಿಳಿಯುವುದು ಹೇಗೆ? ನೀನೆಲ್ಲಿರುವೆ?" ಎಂದು ಶಹಜಾದನು ಕೇಳಿದನು.

"ಈ ಗುಡ್ಡದಮೇಲಿರುವ ಅರಣ್ಯದಲ್ಲಿ. ಅಲ್ಲಿ ನನಗಾಗಿ ಒಂದು ಸಣ್ಣ ಗುಡಿಸಲು ಇದೆ."

"ನೀನು ಇಲ್ಲಿಗೆ ಹೇಗೆ ಬಂದೆ?"

"ಹಾದೀ ತಪ್ಪಿ!"

"ಈ ಕಡೆಗೆ ಏತಕ್ಕಾಗಿ ಬಂದಿದ್ದೆ?"

"ಕಟ್ಟಿಗೆಗಳನ್ನು ಒಯ್ಯುವುದಕ್ಕೆ, ಮತ್ತು ಹಣ್ಣುಗಳನ್ನು ಸಂಗ್ರಹಿಸಿಕೊಂಡು ಹೋಗುವುದಕ್ಕೆ."

"ಅಳುತ್ತಿದ್ದೆ ಏಕೆ?"

"ಹಸಿವೆಯನ್ನು ತಡೆಯಲಾರದೆ."

"ಈಗ ಹೊಟ್ಟೆಯು ಶಾಂತವಾಯಿತೇ?"

"ಇಲ್ಲ, ನನ್ನ ಹೊಟ್ಟೆ ತುಂಬಲಿಲ್ಲ. ಕಾರಣ ಈ ಪದಾರ್ಥಗಳು ನನಗೆ ಸವಿಹತ್ತಲಿಲ್ಲ."

"ನಿನಗೆ ಯಾವಪದಾರ್ಥಗಳು ಸೇರುವವು?"

"ರೊಟ್ಟಿ-ಹಿಂಡಿ, ಅಡವಿಯ ಹಣ್ಣು ಮುಂತಾದುವು."

"ಒಳ್ಳೇದು, ಇಂದು ರಾತ್ರಿ ನೀನು ಇಲ್ಲಿಯೇ ಇರು. ನಾಳೆ ಪ್ರಾತಃಕಾಲದಲ್ಲಿ ನಿನಗೆ ಇಷ್ಟವಾದ ಆಹಾರಪದಾರ್ಥಗಳನ್ನು ತರಿಸಿಕೊಡುವೆನು. ನಂತರ ನಿನ್ನೊಡನೆ ಸೇವಕರನ್ನು ಕಳುಹಿಸಿಕೊಡುವೆನು. ಅವರು ನಿನ್ನನ್ನು ಸುರಕ್ಷಿತವಾಗಿ ನಿನ್ನ ಮನೆಗೆ ಸೇರಿಸಿಬರುವರು.

ನಿನ್ನ ವೇಷ-ಭೂಷಣಗಳನ್ನು ನೋಡಿದರೆ ನೀನು ಪಠಾಣ ಜಾತಿಯ ವಳಂತೆ ಕಾಣುವೆ. ಇಂದು ನೀನು ಇಲ್ಲಿ ಇರಲಿಕ್ಕೆ ಯಾವ ತೊಂದರೆಯೂ ಇಲ್ಲ."

"ನೀನು ನಿನ್ನ ಪರಿಚಯವನ್ನು ಹೇಳಿದಹೊರತು, ನಾನು ಇಲ್ಲಿ ಇರಲಾರೆ. ನೀನು ನನಗೆ ಎಷ್ಟೋ ಪ್ರಶ್ನೆಗಳನ್ನು ಕೇಳಿದೆ. ಅವೆಲ್ಲಕ್ಕೂ ನಾನು ಉತ್ತರ ಕೊಟ್ಟೆನು. ಇನ್ನೂ ನೀನು ನಿನ್ನ ಪರಿಚಯವನ್ನು ಹೇಳಲೊಲ್ಲೆ. ನೀನು ಎಂಥ ವಿಲಕ್ಷಣ ಮನುಷ್ಯ?"

ಶಹಾಜಾದನು ಮೃದುಹಾಸ್ಯದಿಂದ—"ನಾನು ಬಾದಶಹನ ಮಗ," ಎಂದು ಹೇಳಿದನು.

"ಯಾವ ಬಾದಶಹ?"

"ನಾನು ಹಿಂದುಸ್ಥಾನದ ಬಾದಶಹರಾದ ಅಕಬರಶಹರವರ ಮೂರನೆಯ ಮಗ."

ತರುಣಿಯು ಗಹಗಹಿಸಿ ನಗುತ್ತ, ಶಹಾಜಾದನ ಮುಖವನ್ನು ನೋಡಿ—"ಓಹೊ! ಈಗ ತಿಳಿಯಿತು. ನೀನು ಅಫಜಾಯಿ-ಸರದಾರನ ಸಂಗಡ ಯುದ್ಧಮಾಡಲಿಕ್ಕೆ ಬಂದಿರುವೆಯಲ್ಲವೇ? ನಮ್ಮ ಈ ಪವಿತ್ರ ಭೂಮಿಯನ್ನು ಕೊಳ್ಳೆಹಚ್ಚಿ ಸುಟ್ಟುಬಿಡುವೆ. ನಮ್ಮ ತುಷಾರಸಿಕ್ತವಾದ ಕಲ್ಲುಗಳು ರಕ್ತದ ಪ್ರವಾಹದಲ್ಲಿ ತೇಲಿಹೋಗುವಂತೆ ಮಾಡುವೆ! ನಮ್ಮ ಬಾದಶಹನನ್ನು ಸೆರೆಹಿಡಿದುಕೊಂಡು ಹೋಗುವೆ. ಏಕೆ? ನಾನು ಹೇಳುವುದು ನಿಜವಾದುದಲ್ಲವೇ?"

"ಅಹುದು, ನೀನು ಹೇಳುವುದು ನಿಜ."

"ಆದರೆ ನೀನು ನಿನ್ನ ಈ ಉದ್ದೇಶವನ್ನು ಸಾಧ್ಯಮಾಡಿಕೊಳ್ಳಲಾರೆ. ಮುಖ್ಯವಾಗಿ, ನೀನು ಪಠಾಣರನ್ನು ಎಂದಿಗೂ ಜಯಿಸಲಾರೆ. ಹೀಗೆ ನೀನು ದಂಡೆತ್ತಿ ಬಂದಿರುವುದನ್ನು ನೋಡಿದರೆ, ಪಠಾಣರ ನಿಜಸ್ಥಿತಿಯನ್ನು ನೀನು ಚೆನ್ನಾಗಿ ಅರಿತಿಲ್ಲವೆಂಬಂತೆ ಕಾಣುವುದು. ಇದು ಹೇಗೇ ಇರಲಿ, ಈಗ ನಾನು ನಿಶ್ಚಯವಾಗಿ ಏನನ್ನೂ ಹೇಳಲಾರೆ;

ಏಕೆಂದರೆ ಜಯಾಪಜಯುಗಳನ್ನುಂಟುಮಾಡುವನು ದೇವರು. ನಾನು ನಿನ್ನ ಬಳಿಗೆ ಭಿಕ್ಷೆಗಾಗಿ ಬಂದಿದ್ದೇನೆ. ನನಗೇನಾದರೂ ಕೊಟ್ಟುಬಿಡು. ಅದನ್ನು ತೆಗೆದುಕೊಂಡು ನಾನು ಹೋಗುವೆನು. ದೇವರು ನನ್ನನ್ನು ಗುಡಿಸಲಿನಲ್ಲಿ ವಾಸಮಾಡುತ್ತಿರುವ ಒಬ್ಬ ದರಿದ್ರನ ಮಗಳನ್ನಾಗಿ ಹುಟ್ಟಿಸಿದ್ದಾನೆ. ಹೀಗಿರಲು ರಾಜರಾಜರ ಸುದ್ದಿಗಳು ನನಗೇಕೆ?"

ದಾಸಿಯುಲನು ಸುಮ್ಮನೆ ಕುಳಿತಿದ್ದನು. ಯುವತಿಯು ಹುಬ್ಬು ಗಂಟಿಕ್ಕಿ ಸಿಟ್ಟಿನಸ್ವರದಿಂದ "ನೀನು ಬಾದಶಹನ ಮಗನು! ನಾನು ನಿನ್ನ ಬಳಿಯಲ್ಲಿ ಭಿಕ್ಷೆ ಬೇಡಿದೆನು. ಆದರೂ ನೀನು ನನಗೇನೂ ಕೊಡಲಿಲ್ಲ!" ಎಂದು ಕೇಳಿದಳು.

"ಕೊಡುವೆನು," ಎಂದು ಹೇಳಿ, ದಾಸಿಯುಲನು ತನ್ನ ಮಖಮಲಿನ ಚೀಲದಲ್ಲಿರುವ ಐದು ಸುವರ್ಣ-ಮುದ್ರೆಗಳನ್ನು ಹೊರಗೆ ತೆಗೆದು, ಅವನ್ನು ಆ ತರುಣಿಯು ಮುಂದೆ ಹಿಡಿದು—"ಇಗೋ ತೆಗೆದುಕೋ," ಎಂದನು.

ಶಹಾಜಾದನು ಕೈಚಾಚಿ, ಅವನ್ನು ಕೊಡುವುದಕ್ಕೆ ಮುಂದರಿದನು; ಆದರೆ ಆ ಯುವತಿಯು ಅವುಗಳನ್ನು ತೆಗೆದುಕೊಳ್ಳಲಿಲ್ಲ. ಅವಳು ಅವುಗಳನ್ನು ತಿರಸ್ಕರಿಸಿ—"ಬಾದಶಾಹೀ, ದಾನವಿದೇ ಏನು? ಈಗ ಪಠಾಣರ ರಾಜ್ಯದಲ್ಲಿ ಮೊಗಲರ ನಾಣ್ಯಗಳು ನಡೆಯುವುದಿಲ್ಲ. ಇದನ್ನು ನೀನರಿಯೆಯಾ? ನಿನ್ನ ಈ ಬಂಗಾರದ ನಾಣ್ಯಗಳಿಂದ ನನಗೇನೂ ಉಪಯೋಗವಿಲ್ಲ." ಎಂದಳು.

"ಹಾಗಾದರೆ ನಿನಗೆ ಬೇಕಾದುದೇನು?" ಎಂದು ದಾಸಿಯುಲನು ಕೇಳಿದನು.

"ನಿನ್ನ ಕೈಯಲ್ಲಿ ಏನೋ ಚಕಚಕನೆ ಹೊಳೆಯುತ್ತದಲ್ಲ! ಅದೇನು?"

"ರನ್ನದುಂಗುರ."

"ಅದನ್ನು ನನಗೆ ಕೊಡು. ನೋಡುವುದಕ್ಕೆ ಬಹು ಸೊಗಸಾಗಿದೆ."

ಇದು ಉನ್ಮಾದಿನಿಯಾದಿವಳ ಕ್ಷಣಿಕ ಆಟವಾಗಿರಬಹುದೆಂದು ಶಹಾಜಾದನು ಭಾವಿಸಿ ಹಾಸ್ಯಮುಖನಾಗಿ—"ಈ ಉಂಗುರವನ್ನು ತೆಗೆದುಕೊಂಡು ನೀನೇನು ಮಾಡುವೆ?" ಎಂದು ಕೇಳಿದನು.

"ನಾನಿದನ್ನು ನನ್ನ ಬೆರಳಿನಲ್ಲಿ ಇಟ್ಟುಕೊಳ್ಳುವೆನು."

ಶಹಾಜಾದನು ಯಾವ ಸಂದೇಹವನ್ನೂ ತೆಗೆದುಕೊಳ್ಳದೆ, ತನ್ನ ಬೆರಳಿನಿಂದ ಉಂಗುರವನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು—"ಇಗೋ, ತೆಗೆದುಕೊ; ಆದರೆ ನಾನು ಈ ಉಂಗುರವನ್ನು ನನ್ನ ಕೈಯಿಂದಲೇ ನಿನ್ನ ಸುಂದರವಾದ ಬೆರಳಿನಲ್ಲಿ ಇರಿಸುತ್ತೇನೆ," ಎಂದನು.

"ಇಲ್ಲ, ಅದಾಗದು," ಎಂದು ಹೇಳಿ, ಆ ತರುಣಿ ದೂರಸರಿದು ನಿಂತಳು. ಇದು ಉನ್ಮಾದಿನಿಯಾದಿವಳ ಮತ್ತೊಂದು ಆಟವೆಂದು ಶಹಾಜಾದನು ಭಾವಿಸಿದನು; ಯಾಕಂದರೆ ಇವನಿಗೆ ಆ ತರುಣಿಯೊಡನೆ ಮಾತಾಡುವುದು ಒಂದುಬಗೆಯ ಆಟವೆಂದು ಬೋಧೆಯಾಗಿದ್ದಿತು; ಆ ತರುಣಿಯ ವಿಚಿತ್ರವೇಷ ಭಾಷಣಗಳನ್ನು ನೋಡಿ ಅವನಿಗೆ ಆನಂದವಾಗಿತ್ತು. ಆದುದರಿಂದವನು "ನೀನು ನನ್ನಮಾತಿಗೆ ಸಮ್ಮತಿಸುವುದಿಲ್ಲವಷ್ಟೇ? ಹಾಗಾದರೆ ಇದನ್ನು ಇಲ್ಲಿ ಇಟ್ಟುಬಿಡುವೆನು. ನೀನೇ ನಿನ್ನ ಬೆರಳಿನಲ್ಲಿ ಇಟ್ಟುಕೊ. ಅದು ನಿನಗೆ ಹೇಗೆ ಕಾಣುತ್ತದೆಂಬುವನ್ನು ನೋಡುತ್ತೇನೆ." ಎಂದು ಹೇಳಿದನು.

ಆ ಯುವತಿ ಉಂಗುರವನ್ನು ತೆಗೆದುಕೊಂಡು, ಅದನ್ನು ಒಂದೆರಡು ಸಾರಿ ತಿರುತಿರುವಿನೋಡಿ, ತನ್ನ ವಸ್ತ್ರದಲ್ಲಿ ಮುಚ್ಚಿಟ್ಟುಕೊಂಡು, ಗಂಭೀರ ಭಾವದಿಂದ,—"ನಾಳೆ ಹಗಲುಹೊತ್ತಿನಲ್ಲಿ ನಾನಿದನ್ನು ಚೆನ್ನಾಗಿ ಪರೀಕ್ಷೆ ಮಾಡಿನೋಡುವೆನು. ಇದು ನನಗೆ ಸರಿಕಾಣದಿದ್ದರೆ ಅಥವಾ ಖೋಟಾ ವಸ್ತುವಾಗಿದ್ದರೆ ನಾನಿದನ್ನು ತಿರುಗಿ ನಿನಗೆ ತಂದುಕೊಡುವೆನು." ಎಂದಳು.

ಹೀಗೆ ಹೇಳಿ ಉನ್ಮಾದಿನಿಯು ಹೊರಡುವುದಕ್ಕೆ ಸಿದ್ಧಳಾದಳು. ಇದನ್ನು ನೋಡಿ, ದಾನಿಯಲನು—"ನೀನು ಈಗ ಎಲ್ಲಿಗೆ ಹೋಗುವೆ?" ಎಂದು ಕೇಳಿದನು.

“ಈ ಶಿಬಿರದಲ್ಲಿ ಗಾಳಿಯಾಡುವುದಿಲ್ಲ. ಆದರಿಂದ ಬಹಳ ಸೆಕೆಯಾಗುತ್ತಿದೆ. ಇಷ್ಟೊಂದು ಸೆಕೆಯನ್ನು ನಾನು ಸಹಿಸಲಾರೆ; ಮತ್ತು ಇಂತಹ ಉತ್ತಮವಾದ ಹಾಸುಗೆಯಮೇಲೆ ಮಲಗಿದರೆ ನನಗೆ ನಿದ್ದೆಯೇ ಬರುವುದಿಲ್ಲ. ಇಂತಹ ಹಾಸುಗೆಯನ್ನು ನಾನೆಂದಿಗೂ ಕಂಡವಳಲ್ಲ.”

“ನಿಮ್ಮ ಅರಸನ ರಾಜಧಾನಿ ಇಲ್ಲಿಗೆ ಎಷ್ಟುದೂರದಲ್ಲಿದೆ? ನೀನು ಕೇಳಿದ ಯಾವತ್ತು ಪ್ರಶ್ನೆಗಳಿಗೆ ನಾನು ಉತ್ತರಕೊಟ್ಟೆನು. ನೀನು ನನ್ನ ಇದೊಂದು ಮಾತಿಗೆ ಉತ್ತರ ಕೊಡಲಾರೆಯಾ?” ಎಂದು ಕುಮಾರನು ಕೇಳಿದನು.

“ಗುಡ್ಡವನ್ನು ಸುತ್ತಿಕೊಂಡು ರಾಜಧಾನಿಗೆ ಹೋಗಬೇಕಾದರೆ ಇಲ್ಲಿಂದ ನಾಲ್ಕೈದು ಹರಿದಾರಿ ನಡೆಯಬೇಕಾಗುವುದು; ಆದರೆ ಸರಳ ಮಾರ್ಗದಿಂದ ಹೋದರೆ ಅಷ್ಟುದೂರವಾಗುವುದಿಲ್ಲ. ಈ ಶಿಬಿರದ ಹೊರಗೆ ನಿಂತು ನೋಡುವೆಯಾದರೆ ನಮ್ಮ ಬಾದಶಹರ ಅರಮನೆ ನಿನಗೆ ಕಾಣುವುದು. ಈಗ ನೀನು ನನ್ನೊಡನೆ ಬಾ. ಅಂದರೆ ನಾನು ನಿನಗೆ ನಮ್ಮ ಅರಸರ ಅರಮನೆಯನ್ನು ತೋರಿಸುವೆನು,” ಎಂದು ಹೇಳಿದಳು.

ಆ ಉನ್ಮಾದಿನಿಯು ಮತ್ತೇನೂ ಮಾತಾಡದೆ, ತ್ವರಿತಗತಿಯಿಂದ ಶಿಬಿರದ ಹೊರಗೆ ಬಂದಳು. ಶಹಾಜಾದನು ಬೇರೆ ಉಪಾಯವನ್ನು ಕಾಣದೆ, ಅವಳ ಬೆನ್ನುಹತ್ತಿ ಬಂದನು. ಯುವತಿಯು ಮುಂದೆಮುಂದೆ ನಡೆದಳು. ದಾನಿಯಲನು ಅವಳನ್ನನುಸರಿಸಿದನು. ಶಿಬಿರದಿಂದ ಸ್ವಲ್ಪ ದೂರ ಬಂದಬಳಿಕ ಆ ಉನ್ಮಾದಿನಿಯು ಸಹಸಾ ನಿಂತುಕೊಂಡು, ಆಕಾಶದಕಡೆಗೆ ಬೆರಳುಮಾಡಿ ತೋರಿಸಿ—“ಅಗೋ ಅಲ್ಲಿ ನೋಡು. ದೂರದಲ್ಲೊಂದು ನೀಲವರ್ಣದ ತಾರಿಗೆಯು ಹೊಳೆಯುತ್ತಿರುವುದು. ಅದು ನಿನಗೆ ಕಾಣುತ್ತದೆಯೋ?” ಎಂದು ಕೇಳಿದಳು.

ಶಹಾಜಾದನು ಮುಗುಳುನಗೆನಕ್ಕು—“ನಕ್ಷತ್ರವು ನೀಲವರ್ಣದ್ದಿಂದಾದರೂ ಇರಬಹುದೇ?” ಎಂದು ಕೇಳಿದನು.

"ನಿಮ್ಮ ದೇಶದಲ್ಲಿ ನೀಲವರ್ಣದ ತಾರಿಕೆಯಿರಲಿಕ್ಕಿಲ್ಲ; ಆದರೆ ನಮ್ಮ ದೇಶದಲ್ಲಿ ನಿಶ್ಚಯವಾಗಿಯೂ ಇದೆ. ಅತ್ತ ಚೆನ್ನಾಗಿ ನೋಡು. ದೂರದಲ್ಲಿ ಎತ್ತರವಾದ ಎರಡು ವೃಕ್ಷಗಳು ಕಾಣುತ್ತಿರುವುವು. ಅವುಗಳ ಸಂದುಗಳೊಳಗೆ ನೋಡು. ಪರ್ವತದ ಮೇಲ್ಭಾಗದಲ್ಲಿ ಉಜ್ವಲವಾದು ದೊಂದು ನೀಲಿಯಬಣ್ಣದ ಪ್ರಕಾಶವು ಹೇಗೆ ಹೊಳೆಯುತ್ತಲಿರುವುದು. ಈ ಪ್ರಕಾಶಕ್ಕೆ ನಾವು 'ನೀಲತಾರಾ' ಎಂದೆನ್ನುತ್ತೇವೆ."

ಶಹಾಜಾದನು ಸೂಕ್ಷ್ಮದೃಷ್ಟಿಯಿಂದ ನೋಡಿದನು. ಉನ್ಮಾದಿನಿಯ ಮಾತಿನಲ್ಲಿ ತಥ್ಯವಿರುವಂತೆ ಅವನಿಗೆ ಕಂಡುಬಂದಿತು. ಬಹುದೂರದಲ್ಲಿ ತಾರಕಾಖಚಿತವಾದ ಅಖಂಡನೀಲಾಕಾಶದ ಕೆಳಗೆ, ನಿಜವಾಗಿಯೂ ಒಂದು ಉಜ್ವಲವಾದ ನೀಲ ವರ್ಣದ ಪ್ರಕಾಶವು ಹೊಳೆಯುತ್ತಿರುವುದನ್ನು ಅವನು ಕಂಡನು.

ದಾನಿಯಲನು ಕಾಣುತ್ತಿರುವ ಆ ಪ್ರಕಾಶದ ಕಡೆಗೆ ಕೆಲವು ವೇಳೆ ಯವರೆಗೆ ದೃಷ್ಟಿಯನ್ನಿರಿಸಿ—"ಈ ಪ್ರಕಾಶವು ಮಿರಾನಶಹನ ಅರಮನೆ ಯದೇನು?" ಎಂದು ಕೇಳಿದನು.

ಶಹಾಜಾದನ ಈ ಪ್ರಶ್ನೆಗೆ ಯಾರು ಉತ್ತರವನ್ನು ಕೊಡಬೇಕು? ಅವನು ವಿಸ್ಮಯಪಟ್ಟು ಸುತ್ತಲೂ ನೋಡಿದನು. ಯಾರೂ ಕಾಣಲಿಲ್ಲ. ಆ ಉನ್ಮಾದಿನಿಯು ಎಲ್ಲಿಯೋ ಅದೃಶ್ಯಳಾಗಿ ಹೋಗಿದ್ದಳು. ದಾನಿಯ ಲನು ಶಿಬಿರದ ಸುತ್ತಲೂ ಹುಡಿಕಿನೋಡಿದನು; ಆದರೆ ಅವಳು ಎಲ್ಲಿಯೂ ಕಾಣಿಸಲಿಲ್ಲ.

ದಾನಿಯಲನು ವಿಸ್ಮಿತನಾಗಿ ಪುನಃ ತನ್ನ ಶಿಬಿರಕ್ಕೆ ಬಂದನು. ಪ್ರಹ ರಿಗಳನ್ನು ಕರೆದು ಅವರಿಗೆ—"ಈ ವರೆಗೆ ನನ್ನ ಬಳಿಯಲ್ಲಿದ್ದ ಹುಚ್ಚಿಯು ಈ ಕತ್ತಲೆಯಲ್ಲಿ ಎಲ್ಲಿಯೋ ಓಡಿಹೋಗಿದ್ದಾಳೆ. ನೀವು ಅವಳೆಲ್ಲಿರುವ ಳೆಂಬುದನ್ನು ಹುಡುಕಿ ಸಿಕ್ಕಿದರೆ ಅವಳನ್ನು ನನ್ನ ಬಳಿಗೆ ಕರೆದುಕೊಂಡು ಬನ್ನಿ. ಅಯ್ಯೋ! ಆ ನಿರ್ಭಾಗ್ಯಳ ಅವಸ್ಥೆಯನ್ನು ನೋಡಿ, ನನಗೆ ಬಹಳ ಕನಿಕರವುಂಟಾಗುತ್ತಿದೆ!" ಎಂದು ಹೇಳಿದನು.

ಪ್ರಹರಿಗಳು ಅವಳನ್ನು ಹುಡುಕುವುದಕ್ಕೆ ಹೊರಟುಹೋದರು. ಕೈಯಲ್ಲಿ ಉರಿಯುತ್ತಿರುವ ದೀವಟಿಗೆಗಳನ್ನು ಹಿಡಿದುಕೊಂಡು ಬಹುಕಾಲದವರಿಗೆ ಆ ಅರಣ್ಯದಲ್ಲೆಲ್ಲಾ ಕಡೆಯಲ್ಲಿಯೂ ಹುಡುಕಿದರು. ಆದರೆ ಆ ಉನ್ಮಾದಿನಿಯನ್ನು ಅವರು ಕಾಣಲಿಲ್ಲ. ಅವರು ಬಂದು, ಕುಮಾರ ದಾನಿಯಲನಿಗೆ ಈ ಸುದ್ದಿಯನ್ನು ಅರುಹಿದರು.

ಆ ಉನ್ಮಾದಿನಿಯು ಅಂಧಕಾರದಲ್ಲಿ ಒಮ್ಮೆಲೆ ಅದೃಶ್ಯಳಾಗಿ ಅರಣ್ಯವನ್ನು ದಾಟಿ, ಪರ್ವತದ ಮುಖದಲ್ಲಿರುವ ಒಂದು ಗುಪ್ತಸ್ಥಳಕ್ಕೆ ಬಂದಳು. ಈ ಸ್ಥಳದಲ್ಲಿ ಬಲಿಷ್ಠರಾದ ಇಬ್ಬರು ಸೇವಕರು ಒಂದು ಸಣ್ಣ ಡೋಲಿಯನ್ನಿಟ್ಟುಕೊಂಡು ಇವಳ ಮಾರ್ಗಪ್ರತೀಕ್ಷೆಯನ್ನು ಮಾಡುತಲಿದ್ದರು. ಆ ತರುಣಿಯು ಬಂದ ಕೂಡಲೇ ಈ ಸೇವಕರು ಎದ್ದುನಿಂತು ಸಲಾಂ ಮಾಡಿ—"ಅವ್ವಾ, ಅಪ್ಪಣೆಯೇನು?" ಎಂದು ವಿನಯದಿಂದ ಕೇಳಿದರು.

"ಸರಳಮಾರ್ಗವಾಗಿ ಕರೆದುಕೊಂಡು ಹೋಗಿ ನನ್ನನ್ನು ಆದಷ್ಟು ತೀವ್ರ ಅರಮನೆಗೆ ಸೇರಿಸಿ" ಎಂದು ಆ ತರುಣಿಯು ತನ್ನ ಸೇವಕರಿಗೆ ಅಪ್ಪಣೆಮಾಡಿದಳು.

ತರುಣಿಯು ಡೋಲಿಯಲ್ಲಿ ಕುಳಿತುಕೊಂಡಳು. ಸೇವಕರು ಅದನ್ನು ಹೊತ್ತುಕೊಂಡು ತ್ವರಿತಗತಿಯಿಂದ ಮುಂದೆಸಾಗಿದರು. ಇವರು ಸುಮಾರು ಒಂದು ತಾಸಿನಲ್ಲಿ ಅರಮನೆಯ ಗುಪ್ತದ್ವಾರದ ಬಳಿಗೆ ಬಂದರು. ಒಳಗೆ ಕುಳಿತ ರಮಣಿಯು ಶಿಬಿಕೆಯಿಂದಿಳಿದು ಅಂತಃಪುರವನ್ನು ಹೊಕ್ಕಳು.

## ಮೂರನೆಯ ಪರಿಚ್ಛೇದ.

### ಪರಿಚಯ.

ವಾಚಕರೆ, ಹಿಂದಿನ ಪರಿಚ್ಛೇದದಲ್ಲಿ ಹೇಳಿದ ಸಂಗತಿಯನ್ನೋದಿದ ನೀವು, ಆ ವಿಚಿತ್ರ ರಮಣಿಯು ಯಾರೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಕುತೂಹಲರಾಗಿರಬಹುದು. ನಾವು ಈಗ ಅವಳ ಪರಿಚಯವನ್ನು ಹೇಳುವೆವು.

ಮಧ್ಯರಾತ್ರಿಯು ಕಳೆದುಹೋಗಿತ್ತು. ಅಂತಃಪುರವಲ್ಲೆಲ್ಲ ಶಾಂತತೆ ಪಸರಿಸಿತ್ತು. ನಮ್ಮ ಪೂರ್ವಪರಿಚಿತ ರಮಣಿಯು ತನ್ನ ಕೋಣೆಯಲ್ಲಿ ಪ್ರವೇಶಿಸಿದಳು. ಸ್ನಿಗ್ಧವೂ ಸುಗಂಧಪೂರ್ಣವೂ ಆದ ಒಂದೆರಡು ದೀಪಗಳು ಆ ಕೋಣೆಯಲ್ಲಿ ಉರಿಯುತಲಿದ್ದುವು. ದಾಸಿಯೊಬ್ಬಳು ತನ್ನ ಯಜಮಾನಿಯ ಮಾರ್ಗಪ್ರತೀಕ್ಷೆಮಾಡುತ್ತ, ಇನ್ನುವರೆಗೆ ಎಚ್ಚತ್ತು ಕುಳಿತಿದ್ದಳು. ಒಡೆಯಳು ಬಂದುದನ್ನು ನೋಡಿ ಅವಳಿಗೆ ಬಹಳ ಆನಂದವಾಯಿತು. ಬಂದ ಯುವತಿಯು ತನ್ನ ವೇಷಾಂತರದ ವಸ್ತ್ರಗಳನ್ನು ತೆಗೆದು ಹೊಸ ಬಟ್ಟೆಗಳನ್ನು ಧರಿಸತೊಡಗಿದಳು. ದಾಸಿಯು ವಿಸ್ಮಯಾಕುಲಳಾಗಿ ಇದನ್ನು ನೋಡುತ್ತ ಕುಳಿತುಕೊಂಡಳು. ಅಲ್ಪಕಾಲದ ಹಿಂದೆ ಶಿಬಿರದಲ್ಲಿ ಕಾಣಿಸಿಕೊಂಡು ಅಳುತ್ತಲಿದ್ದ ಆ ಉನ್ಮಾದಿನಿಯು ಮಾಯಾಬಲದಿಂದ ಈಗ ಪರಮಸುಂದರಿಯಾದ ರಾಜಕುಮಾರಿಯಾಗಿ ಪರಿಣಮಿಸಿದ್ದಾಳೆ.

ಈ ತರುಣಿಯು ಅಫಜಾಯಿ-ಸರದಾರ ಮಿರಾನಶಹನ ಏಕಮಾತ್ರ ಪ್ರಿಯಪುತ್ರಿ. ಇವಳ ಹೆಸರು ಪನ್ನಾಮತಿ. ಕೋಣೆಯಲ್ಲಿ ಕುಳಿತ ಇವಳ ದಾಸಿಯ ಹೆಸರು ಮುನ್ನಾ.

ದಾಸಿಯು ಕುತೂಹಲದಿಂದ,—"ಶಹಾಜಾದಿ, ನಿನ್ನ ಈ ವೇಷಾಂತರವನ್ನು ನೋಡಿದರೆ, ನೀನು ಯಾವುದೋ ಒಂದು ಮಹತ್ಕಾರ್ಯ ಮಾಡಿಕೊಂಡು ಬಂದಂತೆ ತೋರುತ್ತಿದೆ. ನಿನ್ನೆ ಮಧ್ಯಾಹ್ನದಲ್ಲಿ ನಾನೂ ನೀನೂ ಕೂಡಿ, ಪೀರಪಹಾಡದಲ್ಲಿರುವ ಫಕೀರನ ದರ್ಶನಕ್ಕಾಗಿ ಹೋಗಿದ್ದೆವಷ್ಟೆ? ತಿರುಗಿಬರುವಾಗ ನೀನು ನನಗೆ ಮನೆಗೆ ಹೋಗಲಪ್ಪಣೆಕೊಟ್ಟು, ಎಲ್ಲಿಯೋ ಹೊರಟುಹೋದೆ. ನಿನ್ನ ಈ ನಡತೆಯಿಂದ ನನಗೆ ಆಶ್ಚರ್ಯವಾಯಿತು. ಆದರೂ ನಾನು ನಿನ್ನ ಅಪ್ಪಣೆಯಂತೆ ಮನೆಗೆ ಬಂದೆನು. ನನಗೆ ಸಮಾಧಾನವೆಷ್ಟುಮಾತ್ರವೂ ಇರಲಿಲ್ಲ. ನೀನೆಲ್ಲಿಗೆ ಹೋಗಿರಬಹುದು? ಏತಕ್ಕಾಗಿ ಹೋಗಿರಬಹುದು? ಸಂಕಟಕ್ಕೊಳಗಾಗಿರಬಹುದೇ? ಈ ಮೊದಲಾದ ಚಿಂತೆಗಳಿಂದ ನಾನು ನಿನ್ನ ಹಾದಿ ನೋಡುತ್ತ ಈವರೆಗೂ ಎಚ್ಚತ್ತು ಕುಳಿತುಕೊಳ್ಳಬೇಕಾಯಿತು. ಮಧ್ಯರಾತ್ರಿಯು ಮೀರಿಹೋಗಿದೆ. ಇಷ್ಟು ಹೊತ್ತಿನವರೆಗೆ ನೀನೆಲ್ಲಿಗೆ ಹೋಗಿದ್ದೆ? ಯಾವ ಕಾರ್ಯಕ್ಕಾಗಿ ಹೀಗೆ ವೇಷಾಂತರಧರಿಸಬೇಕಾಯಿತು?"

ರಾಜಕುಮಾರಿಯು ದಾಸಿಯ ಈ ಮಾತುಕೇಳಿ, ಮುಗುಳುನಗೆ ನಕ್ಕು, ಸಮೀಪದಲ್ಲಿರುವ ಕನ್ನಡಿಯಲ್ಲಿ ತನ್ನ ಮುಖವನ್ನು ನಿರೀಕ್ಷಿಸಿ— "ಇಂದು ಸಾಯಂಕಾಲ ತಂದೆಯವರು ನನ್ನನ್ನು ಏತಕ್ಕಾದರೂ ಕರೆಸಿದ್ದ ರೇನು?" ಎಂದು ಕೇಳಿದಳು.

"ಇಲ್ಲ, ಅವರು ನಿನ್ನನ್ನು ಕರೆಕಳುಹಿಸಲೂ ಇಲ್ಲ, ನಿನ್ನನ್ನು ಹುಡು ಕುತ್ತ ಇಲ್ಲಿಗೆ ಬರಲೂ ಇಲ್ಲ. ವೇಷವನ್ನು ಹಾಕಿಕೊಳ್ಳುವುದಕ್ಕೆ ಈಹೊಲಸು ಅರಿವೆಗಳು ನಿನಗೆಲ್ಲಿ ದೊರೆತವು? ಈ ವೇಷದಿಂದ ನೀನೆಲ್ಲಿಗೆ ಹೋಗಿದ್ದೆ? ಇದನ್ನು ಮೊದಲು ಹೇಳು," ಎಂದು ದಾಸಿಯು ಕುತೂಹಲದಿಂದ ಕೇಳಿದಳು.

"ಮೊಗಲರು ನಮ್ಮ ಈ ರಾಜ್ಯವನ್ನು ಗೆದ್ದುಕೊಂಡು ಹೋಗುವ ದಕ್ಕಾಗಿ ದಂಡೆತ್ತಿ ಬಂದಿರುವುದನ್ನು ನೀನು ಬಲ್ಲೆಯಷ್ಟೆ? ಪೀರಪಹಾಡದಿಂದ ಬರುವದಾರಿಯ ಸಮೀಪದಲ್ಲಿಯೇ ಮೊಗಲರು ಶಿಬಿರಬಿಟ್ಟುಕೊಂಡಿರುವುದು ನನಗೆ ಗೊತ್ತಿತ್ತು. ಮೊಗಲರ ಸೇನಾಪತಿ ಯಾರು? ಅವನೆಷ್ಟು ಸೈನಿಕರನ್ನು ಕರೆದುಕೊಂಡು ಬಂದಿರುವನು? ಮೊಗಲರನ್ನು ಎದುರಿಸಿ ಸೋಲಿಸಬೇಕಾ ದರೆ ನಾವು ಎಷ್ಟು ಪರಿಶ್ರಮಪಡಬೇಕಾದೀತು? ಇವೇ ಮೊದಲಾದ ಸಂಗತಿ ಗಳನ್ನು ತಿಳಿದುಕೊಳ್ಳುವುದಕ್ಕಾಗಿ ನಾನು ಈ ವೇಷಾಂತರವನ್ನು ಹೊಂದ ಬೇಕಾಯಿತು. ಇಂದು ದೇವರು ನನ್ನಮೇಲೆ ಸಂಪೂರ್ಣಪ್ರಸನ್ನನಾಗಿದ್ದು ದರಿಂದಲೇ ನಾನು ಶತ್ರುಗಳ ಶಿಬಿರದಲ್ಲಿ ಪ್ರವೇಶಮಾಡಿದ್ದರೂ ಯಾವ ವಿಪತ್ತನ್ನೂ ಹೊಂದಲಿಲ್ಲ."

"ಒಂದುವೇಳೆ ಈ ಸಮಯದಲ್ಲಿ ನೀನು ವಿಪತ್ತಿಗೊಳಗಾಗಿದ್ದರೆ ಏನುಮಾಡುತ್ತಿದ್ದೆ? ನಿನ್ನ ಛದ್ಮವೇಷವು ಶತ್ರುಗಳಿಗೆ ಗೊತ್ತಾಗಿ, ಅವರು ನಿನ್ನನ್ನು ಹಿಡಿದುಹಾಕಿದ್ದರೆ ಎಷ್ಟು ಅನರ್ಥವಾಗುತ್ತಿತ್ತು!"

"ಮುನ್ನಾ, ನಾನಿದನ್ನು ಅರಿಯೆನೇನು? ಆದರೆ ಪಠಾಣ ರಮಣಿ ಯರನ್ನು ತಮ್ಮ ಬಲದಿಂದ ಹಿಡಿದುಹಾಕಲು ಸಮರ್ಥರಾದ ಮೊಗಲ ರನ್ನು ನಾನಿದುವರೆಗೆ ಕಂಡಿಲ್ಲ. ನಾನು ಈ ಆತ್ಮವಿಶ್ವಾಸದಿಂದಲೇ ನಿರ್ಭ ಯಳಾಗಿ ಮೊಗಲರ ಶಿಬಿರವನ್ನು ಹೊಕ್ಕೆನು."

"ನೀನು ಮೊಗಲರ ಶಿಬಿರವನ್ನು ಪ್ರವೇಶಿಸಿದ್ದಾದರೂ ಹೇಗೆ?"

"ನಾನು ಯಾವ ವೇಷದಿಂದ ಮೊಗಲರ ಛಾವಣಿಯಲ್ಲಿ ಹೊಕ್ಕಿದ್ದೆನೆಂಬುವನ್ನು ನೀನು ನೋಡಿರುವೆಯಷ್ಟೆ? ಈ ವೇಷವನ್ನು ಧರಿಸುವುದಕ್ಕಾಗಿ ಬೇಕಾಗುವ ಬಟ್ಟೆಗಳನ್ನು ಸೇವಕರಿಂದ ತರಿಸಿದೆನು. ತರುವಾಯ ನನ್ನ ವಸ್ತ್ರಗಳನ್ನು ಕಳೆದು, ಆ ಬಟ್ಟೆಗಳನ್ನು ಧರಿಸಿ, ನಾನೊಬ್ಬ ಅಡವಿಯ ಹುಡಿಗಿಯಾದೆನು. ನನ್ನ ಮೊದಲಿನ ಬಟ್ಟೆಗಳನ್ನು ಸೇವಕರ ಕೈಯಲ್ಲಿ ಕೊಟ್ಟು, ಒಂದು ಗುಪ್ತಸ್ಥಳದಲ್ಲಿ ನನ್ನ ಹಾದೀನೋಡುತ್ತ ಕುಳಿತುಕೊಳ್ಳಬೇಕೆಂದು ಅವರಿಗೆ ಅಪ್ಪಣೆ ಮಾಡಿದೆನು. ಆಮೇಲೆ ನಾನು ಶಿಬಿರದ ಕಡೆಗೆಹೋಗಿ, ಸಮೀಪದಲ್ಲಿರುವ ಅಡವಿಯಲ್ಲಿ ಕೆಲವು ವೇಳೆಯವರೆಗೆ ಅಡಗಿಕೊಂಡು ಕುಳಿತಿದ್ದೆನು. ಮುಂದೆ ಅನುಕೂಲಸಮಯವನ್ನು ನೋಡಿಕೊಂಡು ಹೊರಬಿದ್ದೆನು. ಅನಂತರ ನಡೆದ ಸಂಗತಿಯು ಅತಿ ವಿಸ್ಮಯಜನಕವಾಗಿದೆ."

ಹೀಗೆ ಪನ್ನಾಮತಿಯು ತಾನು ಆ ರಾತ್ರಿಯಲ್ಲಿ ಮಾಡಿದ ಯಾವತ್ತೂ ಕೆಲಸಗಳನ್ನು ದಾಸಿಗೆ ಹೇಳಿದಳು. ಇದನ್ನು ಕೇಳಿ ದಾಸಿಯು ಆಶ್ಚರ್ಯಕ್ಕೂ ಆನಂದಕ್ಕೂ ಪಾರವಿಲ್ಲವಾಯಿತು. ಅವಳು ವಿಸ್ಮಯದಿಂದ "ಶಹಜಾದಿ, ನೀನು ಇಂದು ಮಾಡಿದ ಕೆಲಸವು ಅತಿಶಯ ಮಹತ್ವದ್ದಾಗಿದೆ. ನಿನ್ನ ಈ ಸಾಹಸವನ್ನು ಕೇಳಿ, ವೀರಪುರುಷರು ಕೂಡ ಬೆರಳು ಕಚ್ಚಿಕೊಳ್ಳುವಹಾಗಿದೆ. ಒಬ್ಬನಾದರೂ ಗಂಡುಮಗನಿಲ್ಲವೆಂದು ಅಸಮಾಧಾನಪಡುತ್ತಿರುವ ನಮ್ಮ ಬಾದಷಹರು ನೀನು ಮಾಡಿದ ಈ ವೀರಪುತ್ರೋಚಿತಕಾರ್ಯವನ್ನು ಕೇಳಿದರೆ, ಅವರಿಗೆ ಆನಂದವಾಗದಿರದು. ಬಾದಶಹರವರು ಮೊಗಲರ ರಹಸ್ಯಗಳನ್ನರಿತು ಬರುವುದಕ್ಕೆ ಅನೇಕ ಗುಪ್ತಚಾರರನ್ನು ಕಳಿಸಿದ್ದರಂತೆ; ಆದರೆ ಅವರಲ್ಲೊಬ್ಬನೂ ಕೂಡ ಈ ಕೆಲಸವನ್ನು ಮಾಡಿಕೊಂಡು ಬರಲಿಕ್ಕೆ ಸಮರ್ಥನಾಗಲಿಲ್ಲವೆಂದು ಜನರು ಮಾತಾಡುತ್ತಿರುವುದನ್ನು ಕೇಳಿದ್ದೇನೆ. ಹೀಗೆ ಬಹುಜನರ ಸಾಹಸಭರದಿಂದಾಗದ ಕಾರ್ಯವನ್ನು ನೀನು ಅನಾಯಾಸವಾಗಿ ಮಾಡಿಕೊಂಡು ಬಂದುದನ್ನು ನೋಡಿದರೆ ಯಾರುತಾನೇ ನಿನ್ನನ್ನು ಸ್ತುತಿಸರು? ನಿಜವಾಗಿಯೂ ನೀನು ಬಹು ಚತುರೆ." ಎಂದಳು.

ಪನ್ನಾಮತಿಯು ಆ ರಾತ್ರಿಯಲ್ಲಿ ಬಹಳ ಶ್ರಮಪಟ್ಟಿದ್ದಳಾದಕಾರಣ ತುಂಬಾ ದಣಿದಿದ್ದಳು. ಆದುದರಿಂದವಳು ದಾಸಿಯನ್ನು ಕುರಿತು—"ಮುನ್ನಾ, ಈಗ ರಾತ್ರಿ ಬಹಳವಾಗಿದೆ. ನಾವಿನ್ನು ಮಲಗಿಕೊಳ್ಳೋಣ." ಎಂದು ಹೇಳಿದಳು.

ಇಬ್ಬರೂ ಮಲಗಿಕೊಂಡರು. ಇವರು ಬಹುದಿವಸಗಳಿಂದ ಒಂದೇ ಹಾಸುಗೆಯಮೇಲೆ ಮಲಗುತ್ತ ಬಂದಿದ್ದರು. ದಾಸಿಗೆ ನಿದ್ರೆ ಬಂದಿರಲಿಲ್ಲ. ಅದರಿಂದವಳು ಶಹಾಜಾದಿಯನ್ನು ಕುರಿತು—"ಇನ್ನೊಂದುಮಾತು ಕೇಳ ಬೇಕೆಂಬ ಪ್ರಬಲವಾದ ಇಚ್ಛೆ ನನಗಿದೆ. ನಮ್ಮ ಶತ್ರುಗಳಾದ ಮೊಗಲರ ಸೇನಾಪತಿಯಾದ ಕುಮಾರದಾನಿಯಲನು ನೋಡುವುದಕ್ಕೆ ಹೇಗೆ ಇದ್ದಾನೆ? ಹೇಳು ನೋಡೋಣ," ಎಂದು ಕೇಳಿದಳು.

ಪನ್ನಾಮತಿಯು ನಕ್ಕು—"ಅವನು ಬಹಳ ಒಳ್ಳೆಯಮನುಷ್ಯ. ನೋಡುವುದಕ್ಕೆ ಬಹು ಸುಂದರ. ಅವನ ಕಣ್ಣು, ಮೂಗು ಮೊದಲಾದ ಅವಯವಗಳು ಚಿತ್ರದಲ್ಲಿ ಬರೆದಂತೆ ಬಹು ಮನೋಹರವಾಗಿವೆ; ಮತ್ತು ಅವನು ಜನರೊಡನೆ ಬಹಳ ಸರಳರೀತಿಯಿಂದ ವ್ಯವಹರಿಸುವನು. ನಾನು ಮೊದಲಿನಿಂದಲೂ 'ನೀನು, ತಾನು' ಎಂದು ಏಕವಚನದಿಂದಲೇ ಮಾತಾಡುತ್ತ ಬಂದೆನು. ಇದಕ್ಕವನು ಎಷ್ಟುಮಾತ್ರವೂ ಸಿಟ್ಟಿಗೇಳಲಿಲ್ಲ. ಒಂದು ವೇಳೆ ಅವನು ಯುದ್ಧದಲ್ಲಿ ಸೋತು ನಮ್ಮ ಬಂದಿಯಾಗುವನಾದರೆ, ಅವನೊಡನೆ ನಿನ್ನ ವಿವಾಹವನ್ನು ಮಾಡಿಬಿಡುವೆನು," ಎಂದು ಹೇಳಿದಳು.

ದಾಸಿಯು ಹಾಸ್ಯಮುಖಳಾಗಿ,—"ಎಷ್ಟು ಸರಸವಾಗಿ ಮಾತನಾಡಿದೆ! ನನ್ನಂಥ ದಾಸಿಯು ರಾಜಪುತ್ರನನ್ನು ಕಟ್ಟಿಕೊಂಡು ಮಾಡುವುದೇನು? ಅವನಾದರೂ ಇದಕ್ಕೆ ಒಪ್ಪುವನೇ? ನೀನು ಈ ಪರಿಶ್ರಮವನ್ನು ವಹಿಸುವ ಕಾರಣವಿಲ್ಲ. ನನಗೊಬ್ಬ ಸಾಮಾನ್ಯ ಗಂಡನಾದರೆ ಸಾಕು. ಅಷ್ಟರಿಂದಲೇ ನಾನು ಸುಖಿ. ನೀನು ಶಹಾಜಾದಿ. ನಿನಗೆ ರಾಜಪುತ್ರರ ಆವಶ್ಯಕತೆಯುಂಟು. ಬೇಕಾದರೆ ನೀನೇ ಅವನನ್ನು ಲಗ್ನಮಾಡಿಕೊಳ್ಳಬಹುದು," ಎಂದು ಹೇಳಿದಳು.

ಈ ಮೇರೆಗೆ ಇವರು ತುಸುಹೊತ್ತು ನಗೆಚಾಟಿಕೆಯ ಮಾತುಗಳ ನ್ನಾಡಿದ ತರುವಾಯ, ನಿದ್ರಾದೇವಿಯು ಇವರನ್ನಾಶ್ರಯಿಸಿದಳು.

ಪನ್ನಾಮತಿಯು ಪ್ರಭಾತಕಾಲದಲ್ಲೆದ್ದು, ಪ್ರಾತಃಕೃತ್ಯಾದಿಗಳನ್ನು ಮುಗಿಸಿ, ಅರಮನೆಯ ಮಿನಾರದ(Tower)ಮೇಲೇರಿಹೋದಳು. ಅವಳು ಅಲ್ಲಿ ನಿಂತುಕೊಂಡು, ನಿನ್ನೆರಾತ್ರಿಯಲ್ಲಿ ನೋಡಿಬಂದ ಶಹಾಜಾದನ ಶಿಬಿರವು ಕಾಣಿಸುವುದೋ ಹೇಗೋ ಎಂಬುದನ್ನು ನೋಡಿದಳು. ಅವಳಿಗೆ ಶಹಾಜಾದನ ಛಾವಣಿಯು ಕಂಡುಬರಲಿಲ್ಲ; ಯಾಕಂದರೆ ಆ ಶಿಬಿರವು ಕಾಣಿಸುವಂಥ ಸ್ಥಳದಲ್ಲಿರಲಿಲ್ಲ. ದಾನಿಯಲನು ಶತ್ರುಗಳಿಗೆ ದೂರದಿಂದ ತನ್ನ ವಾಸಸ್ಥಳವು ಕಾಣಿಸಬಾರದೆಂಬ ವಿಚಾರದಿಂದಲೇ ಇಂಥದೊಂದು ಸ್ಥಳದಲ್ಲಿ ಬೀಡು ಬಿಟ್ಟುಕೊಂಡಿದ್ದನು. ಇದನ್ನು ತಿಳಿದವಳಾದ ಪನ್ನಾಮತಿಯು ಮೊಗಲರು ಬುದ್ಧಿಶಾಲಿಗಳಾಗಿರುವರೆಂದು ಊಹಿಸಿದಳು.

ಪನ್ನಾಮತಿಯು ಮಿನಾರದಿಂದಿಳಿದು ತನ್ನ ಕೋಣೆಯಲ್ಲಿ ಪ್ರವೇಶಿಸತಕ್ಕವಳಿದ್ದಳು. ಇಷ್ಟರಲ್ಲಿ ತನ್ನೆದುರಿಗೆ ತನ್ನ ತಂದೆಯು ಬರುತ್ತಿರುವದನ್ನು ಕಂಡಳು. ಮಿರಾನಶಹನು ಗತರಾತ್ರಿಯಲ್ಲಿ ಅನೇಕ ಕೆಲಸಗಳ ಮೂಲಕ ಮಗಳ ದರ್ಶನವನ್ನು ತೆಗೆದುಕೊಂಡಿರಲಿಲ್ಲವಾಗಿ ಅವನು ಈ ಪ್ರಾತಃಕಾಲದಲ್ಲಿ ಮಗಳನ್ನು ಮಾತಾಡಿಸುವದಕ್ಕೆ ಬಂದಿದ್ದನು.

ಪನ್ನಾಮತಿಯು ಆದರದಿಂದ ತನ್ನ ತಂದೆಯ ಕೈಯನ್ನು ಹಿಡಿದುಕೊಂಡು, ಪ್ರೇಮಪೂರ್ಣಸ್ವರದಿಂದ—"ಅಪ್ಪಾ, ನನ್ನ ಕೋಣೆಗೆ ನಡೆ. ಅಲ್ಲಿ ನಿನಗೊಂದು ಆಶ್ಚರ್ಯಕರವಾದ ವಸ್ತುವನ್ನು ತೋರಿಸುವೆನು," ಎಂದಳು.

ಮಿರಾನಶಹನು ವಿಸ್ಮಿತಮುಖನಾಗಿ—"ನೀನು ತೋರಿಸತಕ್ಕ ಅಂಥ ವಸ್ತುವಾವದೂ ಯಾವುದು, ನೋಡೋಣ ನಡೆ," ಎಂದು ಹೇಳಿದನು.

ಪನ್ನಾಮತಿಯು ಬಹಳ ಹುಡುಗಾಟಿಕೆಯ ಸ್ವಭಾವದವಳಾಗಿದ್ದಳು. ಮಿರಾನಶಹನು ಮಗಳ ಈ ನಡತೆಯನ್ನು ತಿರಸ್ಕರಿಸುತಿರಲಿಲ್ಲ; ಮೇಲಾಗಿ ಉತ್ತೇಜನ ಕೊಡುತಲಿದ್ದನು. ಮಗಳ ಈ ತರದ ಆಟವನ್ನು ನೋಡಿ, ಅವನಿಗೆ ಆನಂದವಾಗುತ್ತಿತ್ತು. ಇವನಿಗೆ ಬೇರೆ ಮಕ್ಕಳಿರಲಿಲ್ಲ. ಪನ್ನಾಮತಿಯು

ಚಿಕ್ಕವಳಿರುವಾಗಲೇ ಹೆಂಡತಿ ಸತ್ತುಹೋದಳು. ಮಾತೃಹೀನಳಾದ ಈ ಬಾಲಿಕೆಯನ್ನು ಮಿರಾನಶಹನು ಅತ್ಯಾದರದಿಂದ ಈವರೆಗೆ ಪಾಲಿಸುತ್ತ ಬಂದಿದ್ದನು. ಮಗಳ ವಿಷಯದಲ್ಲಿ ಸಿಟ್ಟುಮಾಡಿದರೆ, ಅವಳು ತಾಯಿಯನ್ನು ಸ್ಮರಿಸಿ ದುಃಖಿಸುವಳೆಂಬ ಭೀತಿಯಿಂದ ಮಿರಾನಶಹನು ಮಗಳನ್ನೆಂದೂ ತಿರಸ್ಕರಿಸಿರಲಿಲ್ಲ. ಅವಳನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚೆಂದು ತಿಳಿದು ಅತೀವ ಅಚ್ಚೆಯಿಂದ ಪಾಲಿಸಿದನು. ಪನ್ನಾಮತಿಯು ಈಗ ಪ್ರಾಯುವವಳಾಗಿದ್ದಳು. ಆದರೂ ಬಾಲ್ಯಕಾಲದಲ್ಲಿಯ ಅಚ್ಚೆಯ ಮೂಲಕ ಉಂಟಾದ ಹುಡುಗಾಟಿಕೆಯ ಸ್ವಭಾವವಿನ್ನೂ ಹೋಗಿಲ್ಲ. ಈ ಅವಧಿಯಲ್ಲಿ ಅನೇಕ ಸರದಾರಪುತ್ರರು ಇವಳನ್ನು ಲಗ್ನಮಾಡಿಕೊಳ್ಳುವವಕ್ಕೆ ಹಾತೊರೆಯುತ್ತ ಬೆನ್ನುಕಾಯುತ್ತಿದ್ದರು. ಆದರೂ ಮಿರಾನಶಹನು ಬಹು ದಿನಗಳವರೆಗೆ ಪ್ರೀತಿಯಿಂದ ಸಾಕಿಸಲಹಿದ ಏಕಮಾತ್ರಪುತ್ರಿಯು ಕಣ್ಣು ಮರೆಯಾಗಿ ಹೋಗುವಳೆಂಬುದನ್ನು ಸಹಿಸಲಾರದವನಾಗಿ ಆ ಕನ್ಯಾಪ್ರಾರ್ಥಿಗಳ ಮಾತಿಗೆ ಸಮ್ಮತಿಸಲಿಲ್ಲ.

ಮಿರಾನಶಹನು ಹಾಸ್ಯಮುಖನಾಗಿ—"ಮಗೂ, ಏನೋ ತೋರಿಸುತ್ತೇನೆಂದು ಹೇಳಿದೆಯಲ್ಲ! ಅದೆಲ್ಲಿದೆ? ನೋಡೋಣ ತೋರಿಸು," ಎಂದು ಕೇಳಿದನು.

ಪನ್ನಾಮತಿಯು ಹಸ್ತಿದಂತ ನಿರ್ಮಿತವಾದುದೊಂದು ಸಣ್ಣ ಪೆಟ್ಟಿಗೆಯಲ್ಲಿರುವ ಬಹುಮೂಲ್ಯವಾದ ಉಂಗುರವನ್ನು ತೆಗೆದು, ಅದನ್ನು ತಂದೆಯ ಇದಿರಿಗೆ ಹಿಡಿದಳು.

ಮಿರಾನಶಹನು ಈ ಉಂಗುರವನ್ನು ನೋಡಿದನು. ಇದರಲ್ಲಿ ಅಮೂಲ್ಯವಾದ ರತ್ನವಿದೆ. ಇಂತಹ ಬಹುಮೂಲ್ಯ ರತ್ನವು ಇವನ ರಾಜಬೊಕ್ಕಸದಲ್ಲಿರಲಿಲ್ಲ; ಅಲ್ಲದೆ ಈ ಉಂಗುರವನ್ನು ಉಪಹಾರರೂಪವಾಗಿ ಅವನು ತನ್ನ ಮಗಳಿಗೆ ಎಂದೂ ಕೊಟ್ಟಿದ್ದಿಲ್ಲ. ಹೀಗಿರಲು ಇವಳು ಈ ಉಂಗುರವನ್ನು ಎಲ್ಲಿ ದೊರಕಿಸಿಕೊಂಡಿರಬಹುದು? ಎಂಬ ವಿಚಾರವು ಮಿರಾನಶಹನನ್ನಾವರಿಸಿತು. ಅದರಿಂದವನು ಆಶ್ಚರ್ಯದಿಂದ—"ಕುಮಾರಿ, ಈ ಬಹುಮೂಲ್ಯವಾದ ಉಂಗುರವು ನಿನಗೆ ಎಲ್ಲಿ ಸಿಕ್ಕಿತು?" ಎಂದು ಕೇಳಿದನು.

ಪನ್ನಾಮತಿಯು ಗಂಭೀರಭಾವದಿಂದ—“ಅಪ್ಪಾ, ನಾನಿದನ್ನು ಒಬ್ಬರ ಬಳಿಯಲ್ಲಿ ಭಿಕ್ಷೆಯನ್ನು ಬೇಡಿ ತಂದಿದೇನೆ,” ಎಂದು ಹೇಳಿದಳು.

ಮಿರಾನಶಹನು ತಿರಸ್ಕಾರಪೂರ್ಣಸ್ವರದಿಂದ—“ಈ ಪರ್ವತಪ್ರದೇಶದ ಏಕಛತ್ರಾಧಿಪತಿಯಾದ ಮಿರಾನಶಹನ ಮಗಳಿಗೆ ದಾನಕೊಡತಕ್ಕ ದೊಡ್ಡ ದಾತಾರನಾದರೂ ಯಾವನು?” ಎಂದು ಕೇಳಿದನು.

ಪನ್ನಾಮತಿಯು ಸಹಾಸ್ಯಮುಖದಿಂದ—“ಅಪ್ಪಾ, ಇಂಥ ದಾತೃದಳಿಲ್ಲವೆಂದು ನೀನು ತಿಳಿದಿರುವೆಯಾ? ನಮ್ಮ ಈ ಗುಡ್ಡಗಾಡು ರಾಜ್ಯದ ಸಮೀಪದಲ್ಲಿಯೇ ಬಂದಿಳಿದು, ತನ್ನ ನಾಶದ ಮಾರ್ಗಪ್ರತೀಕ್ಷೆಯನ್ನು ಮಾಡುತ್ತ ಕುಳಿತುಕೊಂಡಿರುವ ಸುಲ್ತಾನದಾನಿಯಲನು ಈ ಉಂಗುರವನ್ನು ನನಗೆ ದಾನವಾಗಿ ಕೊಟ್ಟನು,” ಎಂದು ಹೇಳಿದಳು.

ಇನ್ನು ಹೆಚ್ಚುಕಾಲದವರೆಗೆ ತಂದೆಯನ್ನು ಈ ಮೇರೆಗೆ ಆಶ್ಚರ್ಯದ ಸ್ಥಿತಿಯಲ್ಲಿರಿಸುವುದು ಯೋಗ್ಯವಲ್ಲವೆಂದು ತಿಳಿದು, ಪನ್ನಾಮತಿಯು ಗತರಾತ್ರಿಯಲ್ಲಿ ನಡೆದ ಯಾವತ್ತೂ ಸಂಗತಿಯನ್ನು ಹೇಳಿದಳು.

ಮಿರಾನಶಹನು ಆ ಉಂಗುರವನ್ನು ತನ್ನ ಕೈಯಲ್ಲಿ ತೆಗೆದುಕೊಂಡು, ಅದನ್ನು ಸೂಕ್ಷ್ಮರೀತಿಯಿಂದ ನೋಡಿದನು. ಆ ಉಂಗುರದಲ್ಲಿ ಸುಲ್ತಾನದಾನಿಯಲನ ಹೆಸರು ಬರೆಯಲ್ಪಟ್ಟಿದ್ದಿತು. ಇದನ್ನು ನೋಡಿದ ಮಿರಾನಶಹನಿಗೆ ಮಗಳ ಮಾತಿನಲ್ಲಿ ಸಂಪೂರ್ಣವಿಶ್ವಾಸವುಂಟಾಯಿತು. ಆಗವನು ಮಗಳನ್ನು ಹತ್ತರದಲ್ಲಿ ಕುಳ್ಳಿರಿಸಿಕೊಂಡು, ಆದರದಿಂದ ಮೈಯ್ದಡವಿ—“ಮಗೂ, ನಿನ್ನ ಸಾಹಸಕ್ಕೆ ಎಣೆಯಿಲ್ಲ. ಗಂಡಸರನ್ನೂ ಕೂಡ ನಾಚಿಸುವಂಥ ಕೆಲಸಮಾಡಿರುವೆ. ನಾನು ಮೊಗಲರ ರಹಸ್ಯವನ್ನು ತಿಳಿದು ಬರುವುದಕ್ಕಾಗಿ ಬುದ್ಧಿವಂತರಾದ ಮೂವರು ಅಧಿಕಾರಿಗಳನ್ನು ನಿಯಮಿಸಿದ್ದೆನು. ಅವರು ಐದಾರು ದಿನಗಳವರೆಗೆ ಬಹು ಪರಿಶ್ರಮಬಟ್ಟರಂತೆ. ಆದರೂ ಅವರಿಂದ ನನಗೇನೂ ಉಪಯೋಗವಾಗಲಿಲ್ಲ; ಅವರಿಂದ ನನಗೆ ವಿಶೇಷ ಸಂಗತಿಗಳಾವುವೂ ತಿಳಿಯಲಿಲ್ಲ. ನೀನು ಒಂದೇರಾತ್ರಿಯಲ್ಲಿ ಇಷ್ಟೊಂದು ಸಂಗತಿಗಳನ್ನು ತಿಳಿದುಕೊಂಡು ಬಂದಿರುವೆ. ಇದಕ್ಕಾಗಿ

ನಾನು ನಿನ್ನನ್ನು ಹೊಗಳದಿರಲಾರೆನು. ಆದರೂ ನೀನು ಹೆಂಗಸು. ಇಂತಹ ಕೆಲಸಕ್ಕೆ ತೊಡಗುವುದು ನಿನಗೆ ತರವಲ್ಲ; ಇದರಿಂದ ಒಮ್ಮೊಮ್ಮೆ ಬಹಳ ಸಂಕಟಕ್ಕೊಳಗಾಗಬೇಕಾಗುವುದು. ಇನ್ನು ನೀನು ಈ ತರದ ಪ್ರವೃತ್ತಿಯನ್ನು ಹೊಂದಬೇಡ. ನಾನಿದ್ದೇನೆ. ನನ್ನ ಸೈನಿಕರಿದ್ದಾರೆ. ಮೊಗಲರಿದ್ದಾರೆ. ನಾನೂ ನನ್ನ ಸೇವಕರೂ ಮೊಗಲರನ್ನು ಸಹಜವಾಗಿ ಹಣ್ಣಿಗೆ ತರಬಲ್ಲೆವು. ಹೀಗಿರಲು ನೀನು ವ್ಯರ್ಥವಾಗಿ ಶ್ರಮಪಟ್ಟು, ಸಂಕಟದಲ್ಲಿ ಬೀಳಲೆತ್ನಿಸುವದು ಸಂಗತವಾದೀತೇ?" ಎಂದು ಅಂದನು.

ಪನ್ನಾಮತಿಯು ನಗುತ್ತ—"ಅಪ್ಪಾ, ನನಗಾರ ಹೆದರಿಕೆ? ದೇವರು ನನಗೆ ಸಹಾಯಕನಾಗಿದ್ದಾನೆ. ಮತ್ತು ನಾನು ಪಠಾಣಸರದಾರನಾದ ಮಿರಾನಶಹನ ಮಗಳು. ಹೀಗಿರಲು ಶತ್ರುಗಳಿಗೆ ಹೆದರಬೇಕೆ?" ಎಂದು ಕೇಳಿದಳು.

ಮುದ್ದುಮಗಳ ವೀರಾಂಗನೋಚಿತವಾದ ಈ ಮಾತುಗಳನ್ನು ಕೇಳಿ, ಮಿರಾನಶಹನಿಗೆ ಬಹಳ ಆನಂದವಾಯಿತು.

## ನಾಲ್ಕನೆಯ ಪರಿಚ್ಛೇದ.

### ಶಹಾಜಾದಿಯ ಆಟ.

"ನೀನು ಯಾರು? ಅಲ್ಲಿಯೇ ನಿಂತುಕೊ. ಒಂದು ಹೆಜ್ಜೆ ಮುಂದೆ ಬಂದರೂ, ಮರಣತಪ್ಪದು." ಹೀಗೆ ಮಾತಾಡುವ ಸ್ವರವು ರಮಣಿಯ ಕಂಠದ್ದಾಗಿತ್ತು. ಈ ಮಾತುಗಳನ್ನು ಕೇಳುತ್ತಿರುವವನು ಶಸ್ತ್ರಾಸ್ತ್ರಗಳಿಂದ ಸಜ್ಜಿತನಾದ ವೀರಪುರುಷನು.

ಈ ವೀರಪುರುಷನು ಅಸ್ಫುಟಸ್ವರದಿಂದ—"ನನ್ನ ಕಣ್ಣಿಗಂತೂ ಇಲ್ಲಿ ಯಾರೂ ಕಾಣಿಸುವುದಿಲ್ಲ. ಹೀಗಿರಲು ನನ್ನನ್ನು ಕುರಿತು ಹೀಗೆ ಯಾರು

ಮಾತಾಡುತ್ತಿರಬಹುದು? ಅವರೆಲ್ಲಿರಬಹುದು?" ಎಂದು ಅಂದು ಕೊಂಡನು.

ನಾಲ್ಕು ದಿಕ್ಕುಗಳಲ್ಲಿಯೂ ಎತ್ತರವಾದ ಪರ್ವತದ ಸಾಲುಗಳು. ಹಿಂದೆಮುಂದೆ, ಎಡಬಲಭಾಗಗಳಲ್ಲಿ ಕಠಿಣವಾದ ಪಾಷಾಣಸ್ತೂಪಗಳು. ಆದರಿಂದ ರಮಣಿಯು ಕಂಠದಿಂದ ಹೊರಟ ಸ್ವರವು ಪ್ರತಿಧ್ವನಿತವಾಗಿ ಅದು ಈ ವೀರನಿಗೆ ಸ್ಪಷ್ಟವಾಗಿ ಕೇಳಿಸಿತು. ಮಧ್ಯಾಹ್ನದ ಸಮಯ. ಪ್ರಖರವಾದ ಸೂರ್ಯಕಿರಣಗಳಿಂದ ಅಲ್ಲಿಯ ಕಲ್ಲುಗಳು ಕಾದು ಬೆಂಕಿಯಂತೆ ಸುಡುತಲಿದ್ದವು.

ಆ ಅಸ್ತ್ರಧಾರಿಯಾದ ಸೈನಿಕನು ವಿಸ್ಮಿತನೇತ್ರನಾಗಿ ಸುತ್ತಲೂ ನೋಡಿದನು. ಯಾರನ್ನೂ ಕಾಣಲಿಲ್ಲ. ಆದರಿಂದ ತಾನು ವೃಥಾ ಭ್ರಮೆ ಹೊಂದಿರುವೆನೆಂದು ಭಾವಿಸಿದನು. ಆದರೆ ಉತ್ತರಕ್ಷಣದಲ್ಲಿಯೇ ಅವನ ಈ ಕಲ್ಪನೆಯು ಇಲ್ಲದಂತಾಯಿತು: ಅವನು ರಮಣಿಯ ಧ್ವನಿಯನ್ನು ಸ್ಪಷ್ಟವಾಗಿ ಕೇಳಿ ಬಗೆಬಗೆಯ ವಿಚಾರಕ್ಕೊಳಗಾಗಬೇಕಾಯಿತು.

"ಇಲ್ಲಿ ನನ್ನನ್ನು ಹೀಗೆ ಎಚ್ಚರಿಸುತ್ತಿರುವವರು ಯಾರಾಗಿರಬಹುದು? ಅವರು ನನ್ನೆದುರಿಗೆ ಬಂದು ನಿಂತು ಸ್ಪಷ್ಟವಾಗಿ ಏಕೆ ಹೇಳುತ್ತಿಲ್ಲ? ಅವರು ಅದೃಶ್ಯರಾಗಿ ಆಕಾಶಮಾರ್ಗದಲ್ಲಿ ಸಂಚರಿಸುವವರಾಗಿರಬಹುದೇ? ನಾನು ಕೇಳಿದ ಸ್ವರವಂತೂ ಕೋಮಲೆಯಾದ ರಮಣಿಯ ಕಂಠಸ್ವರ! ಅವಳು ಯಾರಿರಬಹುದು? ಮನುಷ್ಯಳಾಗಿರಲಿಕ್ಕಿಲ್ಲವೇ? ಒಂದುವೇಳೆ ಇದು ಯಾವಳೋ ಒಬ್ಬ ವನದೇವಿಯ ಸಾವಧಾನವಾಣಿಯಾಗಿರಬಹುದೇ? ಏನೇ ಇರಲಿ, ಮುಂದಕ್ಕೆ ಹೋಗುವೆನಾದರೆ ಎಲ್ಲವೂ ತಿಳಿಯುವದು. ಒಂದುವೇಳೆ ನಾನು ಅವಳ ಹೇಳಿಕೆಯಂತೆ ಸಂಕಟಕ್ಕೊಳಗಾಗುವೆನಾದರೆ ಮಾಡುವದೇನು? ಏನೂ ಅಡ್ಡಿಯಿಲ್ಲ. ಸಾಹಸಭರದಿಂದ ಇಲ್ಲಿಗೆ ಬಂದಿದ್ದೇನೆ. ಅಂದ ಬಳಿಕ ಹೆದರಿ ಹಿಂಜರಿದು ಉಪಯೋಗವಿಲ್ಲ," ಎಂದು ಆಲೋಚಿಸಿ ಆ ಸೈನಿಕನು ಕರವಸ್ತ್ರದಿಂದ ಕಪೋಲದ ಘರ್ಮಬಿಂದುಗಳನ್ನೊರಸಿಕೊಂಡು, ದೀರ್ಘನಿಶ್ವಾಸಬಿಟ್ಟು, ಮುಂದೆ ನಡೆದನು.

ಪುನಃ ಅದೇ ರಮಣಿಯ ಕಂಠದಿಂದುಚ್ಚರಿತ ಸಾವಧಾನವಾಣಿ—"ಸ್ಥಿರನಾಗು. ಅಲ್ಲಿಯೇ ನಿಂತುಕೋ. ಮುಂದಡಿಯನ್ನಿಡುವೆಯಾದರೆ ಮೃತ್ಯುಮುಖದಲ್ಲಿ ಬೀಳುವೆ."

ಆ ಸೈನಿಕನು ಮುಂದೆ ಹೋಗುವ ಧೈರ್ಯವನ್ನು ಹೊಂದಲಿಲ್ಲ. ಅಲ್ಲಿಯೇ ನಿಂತುಕೊಂಡನು. ಯಾರೋ ತನ್ನನ್ನು ತಡೆದು ನಿಲ್ಲಿಸುತ್ತಿರುವಂತೆ ಅವನಿಗೆ ಬೋಧೆಯಾಯಿತು. ಅವನು ಅತುಲಸ್ವರದಿಂದ—"ನೀನು ಯಾರು? ಎಲ್ಲಿರುವೆ? ಈರೀತಿ ನನ್ನನ್ನು ಮೇಲಿಂದಮೇಲೆ ಎಚ್ಚರಗೊಳಿಸುತ್ತಿರುವೆಯೇಕೆ? ನೀನು ಮನುಷ್ಯಳೊ? ಅಥವಾ ಈ ವನದೇವಿಯೋ? ನಾನು ಬಹಳ ಸಂದೇಹಕ್ಕೊಳಗಾಗಿದ್ದೇನೆ," ಎಂದನು.

ಸಹಸಾ ಓರ್ವ ಪರಮಸುಂದರಿಯಾದ ತರುಣಿಯು ಆ ಸೈನಿಕನ ಎದುರಿಗೆ ಬಂದು ನಿಂತುಕೊಂಡಳು. ಯೌವನವು ಅವಳ ಯಾವತ್ತು ಅವಯವಗಳಿಗೆ ಹೆಚ್ಚು ಸೌಂದರ್ಯವನ್ನೂ, ಮನೋಹರತೆಯನ್ನೂ ದಯಪಾಲಿಸಿತ್ತು. ಬೆನ್ನ ಮೇಲೆ ಇಳಿಬಿದ್ದ ಅಚ್ಚ ಕಪ್ಪಾದ ಕೇಶರಾಶಿಯೂ ನಲಿನೀರಾಗರಂಜಿತವಾದ ಅಪೂರ್ವ ವದನಶೋಭೆಯೂ, ವಿದ್ಯುದ್ದ್ಯಾಮದಂತಿರುವ ಕಟಾಕ್ಷವೂ, ಸ್ಫುರಿತಾಧರದಲ್ಲಿಯ ತಿರಸ್ಕಾರಸೂಚಿತ ಹಾಸ್ಯವೂ ಉಳ್ಳ ಅವಳನ್ನು ಸೈನಿಕನು ನೋಡಿದನು. ಅವಳ ಕೈಯಲ್ಲಿ ಧನುವಿದ್ದು, ಕಟಿಪ್ರದೇಶದಲ್ಲಿ ಹರಿತವಾದೊಂದು ಚೂರಿಯಿತ್ತು.

ಸೈನಿಕನು ಅವಳನ್ನು ನೋಡಿ, ವಿಸ್ಮಿತನಾದನು. ಚಕಿತದೃಷ್ಟಿಯಿಂದ ಕ್ಷಣಕಾಲದವರೆಗೆ ಅವಳ ಸರ್ವಾಂಗಗಳಲ್ಲಿ ಹೊಳೆಯುತ್ತಿರುವ ಸೌಂದರ್ಯವನ್ನು ನಿರೀಕ್ಷಿಸಿ,—" ನೀನಾರು ? " ಎಂದು ಕೇಳಿದನು.

ಆ ರಮಣಿಯು ತಿರಸ್ಕಾರಪೂರ್ಣಸ್ವರದಿಂದ—" ಮೊಗಲ ! ನೀನು ಶಿಷ್ಟಾಚರಣೆಗಳನ್ನು ಅಭ್ಯಾಸಿಸಲಿಲ್ಲವೇ? ನೀನು ನಿನ್ನ ಪರಿಚಯವನ್ನು ಹೇಳದೆ, ಓರ್ವ ಅಬಲೆಯ ಪರಿಚಯವನ್ನು ಕೇಳುತ್ತಿರುವೆ. ಇದನ್ನು ನೋಡುತ್ತಿರಲು ನೀನು ಅಸಭ್ಯ ಮನುಷ್ಯನಿರುವಂತೆ ತೋರುವೆ," ಎಂದು ಹೇಳಿದಳು.

ರಮಣಿಯ ಮಾತನ್ನು ಕೇಳಿ, ಆ ಸೈನಿಕನಿಗೆ ನಾಚಿಕೆಯುಂಟಾಯಿತು. ಸ್ವಲ್ಪ ಸಿಟ್ಟೂ ಬಂದಿತು.

ಅವನು—"ನಾನು ಹೋಗುತ್ತಿರುವಾಗ, ನನ್ನನ್ನು ನಿಷೇಧಿಸಿದವಳು ನೀನೆ ಏನು?" ಎಂದು ಕೇಳಿದನು.

"ಹೌದು, ನಾನೇ ನಿನ್ನನ್ನು ತಡೆದೆನು."

"ಅದೇಕೆ?"

"ಮೊಗಲ ಸೇನಾಪತಿ, ನೀನು ಕಳ್ಳನಂತೆ ನಮ್ಮ ಅಧೀನತೆಯ ಈ ರಾಜ್ಯದ ಸೀಮೆಯಲ್ಲಿ ಪ್ರವೇಶಿಸುವುದಕ್ಕೆ ಯತ್ನಿಸಿದ್ದೇಕೆ?"

"ನಾನು ಮೊಗಲರವನೆಂದು ನಿನಗಾರು ಹೇಳಿದರು?"

"ನಾನು ನೋಡಿದ ಕೂಡಲೇ ಮೊಗಲರನ್ನು ಗುರ್ತಿಸಬಲ್ಲೆನು. ಮೊಗಲರ ನಡಿಗೆಯು ಅಡವಿಯ ಪಕ್ಷಿಗಳಿಗಿಂತಲೂ ಹೆಚ್ಚು ಚಪಲತೆಯುಳ್ಳದೆಂಬುದನ್ನು ನಾನು ಬಲ್ಲೆ. ಮೊಗಲರಾದರೂ ಈ ರಾಜ್ಯದ ಪಠಾಣರನ್ನು ಬಲ್ಲರು; ಯಾಕಂದರೆ ಹಿಂದೊಮ್ಮೆ ಅವರು ಈ ದೇಶದ ಪಠಾಣರೊಡನೆ ಯುದ್ಧಮಾಡಿ, ಇವರ ಶಕ್ತಿಯನ್ನು ಪರೀಕ್ಷೆಮಾಡಿದ್ದಾರೆ. ಆ ಸಮಯದಲ್ಲಿ ಪಠಾಣರು ಮೊಗಲರಿಗೆ ಚೆನ್ನಾಗಿ ಕೈ ತೋರಿಸಿದ್ದಾರೆ. ಆದರೂ ಅಕಬರ ಬಾದಶಹನು ಪುನಃ ನಮ್ಮ ಮೇಲೆ ದಂಡೆತ್ತಿ ಬಂದಿರುವನಂತೆ. ನೀನು ಮೊಗಲನಾಗಿರುವುದಲ್ಲದೆ, ಅಕಬರಷಹನ ಗುಪ್ತ ಚಾರನೂ ಆಗಿರುವೆಯೆಂಬುದನ್ನು ನಾನು ಚೆನ್ನಾಗಿ ಬಲ್ಲೆ."

"ಸಾಹಸಿಯಾದ ರಮಣಿಯೆ, ದೇವರು ನಿನಗೆ ಕೇವಲ ರೂಪಸಂಪದವನ್ನಷ್ಟೇ ಕೊಟ್ಟಿರುವನೆಂದಲ್ಲ; ಅತಿಶಯ ಚಾತುರ್ಯವನ್ನೂ ದಯಪಾಲಿಸಿರುವನು. ನೀನು ಬುದ್ಧಿಶಾಲಿನಿಯಾದ ತರುಣಿಯಾಗಿರುವೆ. ಈ ಪಠಾಣ ರಾಜ್ಯದಲ್ಲಿ ನಿನ್ನಂತಹ ನಾರಿಯರು ಇನ್ನೂ ಇರುವರೇನು?"

ರಮಣಿಯು ವಿದ್ರೂಪ ಪೂರ್ಣಸ್ವರದಿಂದ—"ಇರದೆ ಏನು? ಪ್ರತಿಮನೆಗಳಲ್ಲಿ ನನ್ನಂತಿರುವ ಅನೇಕ ಪಠಾಣಸ್ತ್ರೀಯರನ್ನು ನೀನು ನೋಡಬಹುದಾಗಿದೆ." ಎಂದು ಹೇಳಿದಳು.

ಸೈನಿಕನು ಕೆಲಹೊತ್ತು ಏನೋ ಆಲೋಚಿಸಿ, ನಗೆಮೊಗದಿಂದ— "ನಾನು ನೀನಾರೆಂಬುದನ್ನು ತಿಳಿದುಕೊಳ್ಳಲು ಆತುರನಾಗಿದ್ದೇನೆ. ನನಗಾವರೋ ನಿನ್ನ ವಿಷಯವಾಗಿ ಬಹಳ ಸಂದೇಹವುಂಟಾಗುತ್ತಿದೆ," ಎಂದನು.

"ಯಾತರ ಸಂದೇಹ!"

"ನೀನು ದುರ್ಗಾಧಿಪತಿಯಾದ ಮಿರಾನಶಹನ ಮಗಳಿರಬಹುದೆಂದು ನನಗೆ ತೋರುತ್ತದೆ." ರಮಣಿಯು ದರ್ಷಿತಸ್ವರದಿಂದ— "ನಿನ್ನ ಅನುಮಾನವು ಸತ್ಯವಾದುದು. ನಿಜವಾಗಿಯೂ ನಾನು ಮಿರಾನಷಹನ ಮಗಳು. ನನ್ನ ಹೆಸರು ಪನ್ನಾಮತಿ. ನಿನ್ನ ಹೆಸರೇನು?" ಎಂದು ಕೇಳಿದಳು.

"ಅನೇಕ ಕಾರಣಗಳಮೂಲಕ ನಾನದನ್ನು ಹೇಳಲಿಕ್ಕೆ ಇಚ್ಛೆಯಿಲ್ಲದವನಾಗಿದ್ದೇನೆ."

"ನಿನ್ನ ಇಚ್ಛೆಯು ಇರಲಿ, ಇಲ್ಲದಿರಲಿ! ಆದರೆ ಇದನ್ನು ನೀನು ಹೇಳಲೇಬೇಕು. ಒಲ್ಲೆನೆಂದರೆ ನಡೆಯದು. ನೀನು ಒಳ್ಳೆಯಮಾತಿನಿಂದ ಹೇಳದಿದ್ದರೆ, ಕಠೋರ ಉಪಾಯಗಳಿಂದ ಹೇಳಿಸಬೇಕಾಗುವುದು. ನೀನು ಆಗ್ರಹಕ್ಕೊಳಗಾಗುವಿಯಾದರೆ, ವಿಷದಿಂದ ಕೂಡಿದ ನನ್ನ ಈ ತೀಕ್ಷ್ಣಬಾಣವು, ನಿನ್ನಿಂದ ನಿನ್ನ ಪರಿಚಯವನ್ನು ಹೇಳಿಸುವುದು," ಹೀಗೆಂದು ಹೇಳಿ ಆ ರಮಣಿಯು ಗಹಗಹಿಸಿ ನಕ್ಕಳು.

"ನಿನ್ನ ಈ ಬಾಣವು, ನನ್ನನ್ನು ಸೋಲಿಸುವ ಮೊದಲೇ, ನನ್ನ ಈ ಖಡ್ಗಕ್ಕೆ ಆಹುತಿಯಾಗಿ, ಇಭ್ಭಾಗವಾಗಿ ಹೋಗುವುದು."

"ಆಗಬಹುದು," ಎಂದು ಹೇಳಿ, ಆ ರಮಣಿಯು ಹುಬ್ಬುಗಂಟಿಕ್ಕಿ, ಚಪಲತೆಯಿಂದ ಹೆದೆಯೇರಿಸಿ ಬಾಣವನ್ನೆಸೆದಳು. ಆ ಬಾಣವು ಸೈನಿಕನ ಉಷ್ಣೀಯಕ್ಕೆ ಬಡೆದು, ಅದನ್ನು ಹಾರಿಸಿಬಿಟ್ಟಿತು.

ಸೈನಿಕನು ವಿಸ್ಮಿತನಾಗಿ ಪನ್ನಾಮತಿಯ ಮುಖವನ್ನು ನೋಡುತ್ತ— "ರಮಣಿಯೆ, ಪಠಾಣರ ಬಾಣಗಳು ಮೊಗಲರ ಬಾಣಗಳಿಗಿಂತ ಹೆಚ್ಚು ಶಕ್ತಿಶಾಲಿಗಳೆಂಬುದನ್ನಿಂದು ನಾನು ಮನಗಂಡೆನು," ಎಂದು ಹೇಳಿದನು.

ರಮಣಿಯು ಓಡಿಹೋಗಿ ಬಿದ್ದಿದ್ದ ಶಿರೋಭೂಷಣವನ್ನು ಎತ್ತಿತಂದು, ಆ ಸೈನಿಕನ ಕೈಯಲ್ಲಿ ಕೊಟ್ಟಳು. ತರುವಾಯ —"ಅವಳು ನಗುತ್ತ ಪಠಾಣನಾರಿಯರ ಎಂದೂ ಹುಸಿಹೋಗದ ಗುರಿಯನ್ನು ನೋಡಿದಿಯಾ? ಈಗಲೂ ಓಡಿಹೋಗುವ ಸಮಯವಿದೆ. ಕಾರಣ ತೀವ್ರವೇ ಗುಡ್ಡವನ್ನಿ ಳಿದು ನಿನ್ನ ವಾಸಸ್ಥಳಕ್ಕೆ ಹೋಗು. ನಾನು ನಿನಗೆ ಇಳಿದುಹೋಗು ವದಕ್ಕಿರುವ ಸುಲಭ ಮಾರ್ಗವನ್ನು ತೋರಿಸಿಕೊಡುತ್ತೇನೆ. ನನ್ನ ಬಾಣ ದಿಂದ ನಿನ್ನ ಉಷ್ಣೀಯವಷ್ಟೆ ಹಾರಿಹೋಯಿತು; ಆದರೆ ನೀನು ಪಠಾಣ ಸರದಾರರ ತೀಕ್ಷ್ಣ ಆಯುಧಗಳ ಎದುರಿಗೆ ನಿಲ್ಲುವೆಯಾದರೆ, ನಿನ್ನ ಈ ರುಂಡವು ದೇಹದಿಂದ ಹಾರಿಹೋಗುವುದೆಂಬುದನ್ನೆಂದೂ ಮರೆಯ ಬೇಡ. ಕಾರಣ ಆದಷ್ಟು ತೀವ್ರ ಪಠಾಣರ ಕೈಯಿಂದ ಪಾರಾಗಿ ಹೋಗು ವುದಕ್ಕೆ ಯತ್ನಿಸು," ಎಂದು ಹೇಳಿದಳು.

ವಿಸ್ಮಯ ಮುಗ್ಧನಾದ ಆ ಸೈನಿಕನು ಮನಸ್ಸಿನಲ್ಲಿ ಏನೇನೋ ಆಲೋಚಿಸಿ, ಗಂಭೀರ ಭಾವವನ್ನು ತಳೆದು—"ಪಠಾಣ ರಮಣಿಯೆ, ನಾನು ಪ್ರಾಣಗಳ್ಳನೆಂದು ನಿನ್ನ ಭಾವನೆಯೆ? ನಾನೊಬ್ಬ ಶೂರಸೇನಾ ಪತಿ. ಮೇಲಾಗಿ ಐನೂರು ಮೊಗಲಸೈನಿಕರು ಈ ಪರ್ವತದ ಅಂಚಿನಲ್ಲಿ ವಾಸಿಸುತ್ತಿದ್ದು, ನನ್ನ ಅಪ್ಪಣೆಯನ್ನು ನಿರೀಕ್ಷಿಸಿಕೊಂಡಿದ್ದಾರೆ. ಹೀಗಿರಲು ನಿನ್ನ ಮಾತುಗಳಿಗೆ ನಾನು ಭಯಪಡುವೆನೆ?" ಎಂದು ಹೇಳಿದನು.

"ಐವತ್ತು ಜನ ಅಫಜಾಯಿ ಪಠಾಣರು ಈ ಪ್ರಾಸಾದದ ಪೌಳಿಯಲ್ಲಿ ದ್ರಾಕ್ಷಿಯಹಣ್ಣುಗಳನ್ನು ಸೇವಿಸುತ್ತ ಕುಳಿತಿದ್ದಾರೆ. ಅವರ ಆಯುಧ ಗಳು ಶತ್ರುಗಳ ರಕ್ತವನ್ನು ಕುಡಿಯುವುದಕ್ಕೆ ಹಾತೊರೆಯುತ್ತಿವೆ. ನನ್ನ ಅಪ್ಪಣೆಯಾಗುವುದೊಂದೇ ತಡ! ಆ ವೀರಪಠಾಣರು ಗುಡ್ಡವನ್ನೇರಿ ಬಂದು, ನಿನ್ನ ಐನೂರು ಜನರನ್ನು ನುಚ್ಚುನುಚ್ಚಾಗಿ ಮಾಡಿಬಿಡುವರು. ಪಠಾ ಣರ ಶಕ್ತಿಯನ್ನು ನೀನು ಅರಿಯೆಯೆಂದಲ್ಲ; ಹೋದಸಾರಿ ಮೊಗಲರು ಪಠಾಣರ ಕೈಗೆ ಸಿಕ್ಕಿ, ಚೆನ್ನಾಗಿ ಅನುಭವತೆಗೆದುಕೊಂಡಿದ್ದಾರೆ. ಆದರೂ ನಿಮ್ಮ ಆ ಬಾದಶಹನಾದ ನಿರ್ಲಜ್ಜ ಅಕಬರಷಹನು, ಒಮ್ಮೆ ಅಪಮಾ ನಿತನಾಗಿದ್ದರೂ ಅದನ್ನು ಮರೆತು, ಪುನಃ ನಿಮ್ಮನ್ನು ಕಳುಹಿಸಿರುವನು.

ನೀನು ಬುದ್ಧಿವಂತನಾಗಿರುವೆಯಾದರೆ, ನನ್ನ ಹೇಳಿಕೆಯಂತೆ ವರ್ತಿಸು," ಎಂದು ಆ ರಮಣಿಯು ಹೇಳಿದಳು.

ಈ ಮಾತನ್ನು ಕೇಳಿ, ಕುಮಾರನಿಗೆ ಬಹಳ ಸಿಟ್ಟು ಬಂದಿತು. ಅವನು ಯಾವುದೇ ಉಪಾಯದಿಂದಾಗಲಿ ಈ ರಮಣಿಯನ್ನು ಸೆರೆಹಿಡಿಯ ಬೇಕೆಂದು ಆಲೋಚಿಸಿದನು. "ಈ ಪ್ರಸಂಗದಲ್ಲಿ ನನ್ನ ಉದ್ದೇಶಸಿದ್ಧಿ ಗಾಗಿ ಇವಳನ್ನು ಕೊಲ್ಲುವ ಪ್ರಸಂಗ ಬಂದರೂ ಚಿಂತೆಯಿಲ್ಲ; ಇದ ನ್ನಾದರೂ ಮಾಡಬಹುದಾಗಿದೆ. ಈ ರಮಣಿಯಾದರೋ ಸಾಮಾನ್ಯ ಳಾಗಿರುವಂತೆ ತೋರುವುದಿಲ್ಲ. ಇವಳಿಂದ ನನ್ನ ಕೆಲಸಕ್ಕೆ ಬಹಳ ವಿಘ್ನ ಗಳು ಬರುವ ಸಂಭವವುಂಟು. ಈ ಪ್ರಸಂಗದಲ್ಲಿ ಇವಳು ಅನಾಯಾಸ ವಾಗಿ ನನ್ನ ಕೈಯಲ್ಲಿ ಸಿಕ್ಕಿಬಿದ್ದಿರುವಳು. ಈಗ ನಾನು ಹಿಂದೆಮುಂದೆ ನೋಡಿದರೆ ಪೂಜ್ಯಪಿತರೂ, ದಿಲ್ಲಿಯಬಾದಶಹರೂ ಆದ ಅಕಬರಷಹರಿಗೆ ದ್ರೋಹಮಾಡಿದಂತಾಗುವುದಲ್ಲದೆ, ಕರ್ತವ್ಯ ಪರಾಙ್ಮುಖನಾದುದಕ್ಕೆ ದೇವರಬಳಿಯಲ್ಲಿಯೂ ಅಪರಾಧಿಯಾಗುವೆನು." ಸೈನಿಕನು ಈ ಮೇರೆಗೆ ಯೋಚಿಸಿ, ತುಸು ಮುಂದಕ್ಕೆ ಬಂದು—"ಮನೋಹರೆ, ನೀನು ಅತ್ಯಂತ ಸುಂದರಿಯಾಗಿರುವೆ. ನಿನ್ನನ್ನು ನೋಡಿದರೆ ಅಪ್ಸರೆಯನ್ನು ನೋಡು ತ್ತಿರುವಂತೆ ಬೋಧೆಯಾಗುತ್ತಿದೆ," ಎಂದು ಅಂದನು.

ಪನ್ನಾಮತಿಯು ಮುಗುಳುನಗೆ ನಗುತ್ತ—"ನಿನ್ನ ವರ್ಣನೆಯು ಹಾಗೇ ಮುಂದೆ ಸಾಗಲಿ. ಮೊಗಲರಲ್ಲಿ ಸೌಂದರ್ಯವನ್ನು ತಿಳಿದು ಕೊಳ್ಳುವ ಶಕ್ತಿಯು ಎಷ್ಟುಮಟ್ಟಿಗಿದೆ? ರಮಣಿಯರನ್ನು ಸಂತೋಷಪಡಿ ಸುವುದಕ್ಕೆ ಅವರು ಎಷ್ಟು ಮಟ್ಟಿಗೆ ಸಮರ್ಥರಾಗಿದ್ದಾರೆ? ಎಂಬುದನ್ನು ನಾನು ನೋಡಬೇಕಾಗಿದೆ," ಎಂದು ಹೇಳಿದಳು.

ಆ ಮೊಗಲಸೇನಾಪತಿಯು ಮಂದಹಾಸ್ಯದಳೆದು—"ಸುಂದರಿ, ನೀನು ಅತ್ಯಂತನಿಷ್ಠುರಳಾಗಿರುವೆ. ನಾನಾದರೋ ನಿನ್ನ ರೂಪವನ್ನು ನೋಡಿ ಮೋಹಿತನಾಗಿ ಹೋಗಿದ್ದೇನೆ. ಈ ಗುಡ್ಡಗಾಡು ಪ್ರದೇಶದಲ್ಲಿ ಇಂತಹ ಅಪ್ಸರೋಪಮಳಾದ ರಮಣಿಯಿರುವಳೆಂಬುದನ್ನು ಇಂದು ಮನಗಂಡೆನು. ರೂಪತೃಷೆಯಿಂದ ಮುಗ್ಧನಾದ ನನಗೆ ನಿನ್ನನ್ನು ನೋಡಿ

ನೋಡಿದಂತೆ ನಾನೇನು ಸ್ವಪ್ನರಾಜ್ಯದಲ್ಲಿರುವೆನೋ, ಏನೋ, ಎಂದು ಭಾಸವಾಗುತ್ತಿದೆ," ಎಂದು ಹೇಳಿದನು.

"ಸೇನಾಪತಿ, ನೀನು ಹೇಳುತ್ತಿರುವುದು ಸತ್ಯವಾದುದು. ನಿಜವಾಗಿಯೂ ನೀನು ಸ್ವಪ್ನರಾಜ್ಯದಲ್ಲಿರುವೆ. ನಿನ್ನನ್ನು ಇದೇಸ್ಥಿತಿಯಲ್ಲಿರಗೊಡುವುದು ನನಗೆ ಸರಿಯಾಗಿ ಕಾಣಿಸಲೊಲ್ಲದು. ಆದುದರಿಂದ ನಿನ್ನನ್ನೀಗಲೆ ಈ ಸ್ವಪ್ನರಾಜ್ಯದಿಂದ ಹೊರದೂಡಿಸಿಬಿಡುವೆನು." ಹೀಗೆಂದು ಹೇಳಿ, ಪನ್ನಾಮತಿಯು ತನ್ನಲ್ಲಿರುವದೊಂದು ಕೊಳಲನ್ನು ಹೊರಗೆತೆಗೆದು, ಅದನ್ನು ಊದಿದಳು. ಕೊಳಲಿನ ಸ್ವರವು ಆಕಾಶದಲ್ಲಿ ಲೀನವಾಯಿತೋ ಇಲ್ಲವೋ ಎನ್ನುವಷ್ಟರಲ್ಲಿ ಇಪ್ಪತ್ತೈದುಜನ ಬಲಿಷ್ಠ ಅಫಗಾನರು ಅವಳ ಮುಂದೆ ಬಂದು ನಿಂತು, ಆಯುಧವನ್ನೆತ್ತಿಹಿಡಿದು ಆದರದಿಂದ ಸಲಾಂ ಮಾಡಿ—"ಅವ್ವಾ, ಅಪ್ಪಣೆಯೇನು?" ಎಂದು ಕೇಳಿದರು.

ಪನ್ನಾಮತಿಯ ಕಣ್ಣುಗಳು ಉರಿಯುತಲಿದ್ದುವು. ಅವಳು ಕಠೋರ ಸ್ವರದಿಂದ ಪ್ರಹರಿಗಳನ್ನು ಕುರಿತು "ಈ ಮೊಗಲಸೈನಿಕನನ್ನು ಬಂದಿಯನ್ನಾಗಿಮಾಡಿ ದುರ್ಗಾಧಿಪತಿಗಳಿಗೊಪ್ಪಿಸಿರಿ. ಬಹುಸಾಹಸಭರದಿಂದಲೂ ಚಾತುರ್ಯದಿಂದಲೂ ತಮ್ಮ ಪುತ್ರಿಯು ಈ ಕೆಲಸವನ್ನು ಮಾಡಿದಳೆಂದು ಅವರಿಗೆ ಶ್ರುತಪಡಿಸಿರಿ," ಎಂದು ಅಪ್ಪಣೆಮಾಡಿದಳು.

ಮೊಗಲಸೈನಿಕನು ಘೋರವಿಪತ್ತಿಗೊಳಗಾದನು. ಅವನು ತಾನಾಗಿಯೇ ಬಂದು, ಪ್ರಯತ್ನಪೂರ್ವಕವಾಗಿ ಶತ್ರುಗಳ ಕೈಯಲ್ಲಿ ಸಿಕ್ಕುಬಿದ್ದಂತಾಯಿತು. ಈ ಸಂಕಟದಿಂದ ಪಾರಾಗುವುದು ಅವನಿಗೆ ಸಾಧ್ಯವಾದ ಕೆಲಸವಾಗಿರಲಿಲ್ಲ. ಪಠಾಣರಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಅವನೇನಾದರೂ ಪ್ರಯತ್ನಮಾಡಿದ್ದರೆ, ಅದು ನಿಷ್ಫಲವಾಗುತ್ತಿತ್ತಲ್ಲದೆ, ಮತ್ತಿಷ್ಟು ವಿಪತ್ತಿನಲ್ಲಿ ಬೀಳಬೇಕಾಗುತ್ತಿತ್ತು. ಅದಕ್ಕಾಗಿ ಅವನು ಬಿಡುಗಡೆಗಾಗಿ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಅವನು ಪನ್ನಾಮತಿಯಕಡೆಗೆ ತಿರಸ್ಕಾರಪೂರ್ಣದೃಷ್ಟಿಯನ್ನು ಚೆಲ್ಲಿ—"ಕಠೋರಳೆ, ಈ ಗುಡ್ಡಗಾಡು ಪ್ರದೇಶದಲ್ಲಿಯ ರಮಣಿಯರ ಹೃದಯವೂ ಕೂಡ ಕಲ್ಲಿನಿಂದ ನಿರ್ಮಿತವಾದುದೆಂಬುದು ನಿನ್ನೀಕೃತ್ಯದಿಂದ ವ್ಯಕ್ತವಾಗುತ್ತದೆ!" ಎಂದು ಹೇಳಿದನು.

ಪನ್ನಾಮತಿಯು ಸ್ಫುರಿತಾಧರದಲ್ಲಿ ಮೃದುಹಾಸ್ಯದಳೆದು, ವಿದ್ರೂಪ ಸ್ವರದಿಂದ ಹೇಳಿದಳು—"ಮೊಗಲರು ನಮ್ಮ ಚಿರಶತ್ರುಗಳು. ನೀನು ವೀರಸೇನಾಪತಿಯಾಗಿ ಕಳ್ಳನಂತೆ ದುರ್ಗವನ್ನು ಪ್ರವೇಶಿಸಲು ಹವಣಿಸಿ ನಮಿನ್ಮಾರಾಜ್ಯದ ಚಿರಸ್ವತಂತ್ರತೆಯನ್ನು ಹರಣಮಾಡುವುದಕ್ಕಾಗಿ ಟೊಂಕ ಕಟ್ಟಿರುವೆ. ಇಂಥ ನಿನ್ನ ಹುಡುಗಾಟಿಕೆಯ ಪ್ರೇಮಕ್ಕೆ ಇದೇ ತಕ್ಕ ಪ್ರತಿಫಲವೆಂದು ನನಗೆ ತೋರುತ್ತಿದೆ."

ಪನ್ನಾಮತಿಯು ಹೆಚ್ಚುಕಾಲ ಅಲ್ಲಿ ನಿಲ್ಲಲಿಲ್ಲ. ಅವಳು ಬೇರೊಂದು ಕಡೆಗೆ ಹೊರಟುಹೋದಳು. ಪಠಾಣರು ಮೊಗಲಸೇನಾಪತಿಯನ್ನು ಸೆರೆ ಹಿಡಿಯುವುದಕ್ಕೆ ಮುಂದುವರಿದರು. ಸೇನಾಪತಿಯು ಯಾವತೊಂದರೆಯನ್ನೂ ಕೊಡಲಿಲ್ಲ. ಹಣೆಬರಹದಂತೆ ಆಗಲೇಬೇಕೆಂದು ಅವನು ಸಮಾಧಾನಹಚ್ಚಿಕೊಂಡು ಸುಮ್ಮನೆ ನಿಂತುಕೊಂಡಿದ್ದನು. ಪಠಾಣರು ಇವನನ್ನು ಹಿಡಿದು ತೆಗೆದುಕೊಂಡುಹೋಗಿ ಕಾರಾಗಾರದಲ್ಲಿರಿಸಿ, ದುರ್ಗಾಧಿಪತಿಯಾದ ಮಿರಾನಶಹನಿಗೆ ಈ ಸುದ್ದಿ ತಿಳುಹಿಸಿದರು.

## ಐದನೆಯ ಪರಿಚ್ಛೇದ.

### ಶಹಾಜಾದಿಯ ಮತ್ತೊಂದು ಆಟ.

ಪನ್ನಾಮತಿಯು ದಾನಿಯಲನ ಬಳಿಯಿಂದ ಹೊರಟು ತ್ವರಿತಗತಿಯಿಂದ ಉದ್ಯಾನವನ್ನು ಹೊಕ್ಕಳು. ಈ ಉದ್ಯಾನವು ಅನೇಕ ಫಲಪುಷ್ಪವೃಕ್ಷಗಳಿಂದ ಶೋಭಾಯಮಾನವಾಗಿ ಅರಮನೆಗೆ ಸೇರಿದಂತೆ ಇದ್ದಿತು. ಶಹಾಜಾದಿಯು ಈ ತೋಟದಲ್ಲಿ ಸ್ಫಟಿಕಶಿಲಾನಿರ್ಮಿತವಾದ ಆಸನದ ಮೇಲೆ ಕುಳಿತುಕೊಂಡು ವಿಚಾರಿಸಹತ್ತಿದಳು.—"ಈಗ ನಾನು ಮಾಡಿದ ಕೆಲಸವು ಸರಿಯಾದುದೆ? ಮನಸ್ಸಿಗಾದರೋ ಬಹಳ ಅಸಮಾಧಾನವಾಗಿದೆ. ಹೀಗೇಕೆ ಆಗಿರಬಹುದು? ನಿಜವಾಗಿ ನನಗೆ ಆನಂದವಾಗಬೇಕಾಗಿತ್ತು. ಯಾಕಂದರೆ ಮೊಗ

ಲರಿಗೂ ಪಠಾಣರಿಗೂ ಚಿರಶತ್ರುತ್ವವಿದೆ; ಮೊಗಲರು ನಮ್ಮ ನಾಶಕ್ಕಾಗಿ ಪ್ರಯತ್ನಿಸುತ್ತಿದ್ದಾರೆ; ಒಮ್ಮೆ ಸೋತುಹೋದವರಾದರೂ ಪುನಃ ಉತ್ಸಾಹಿತರಾಗಿ ದಂಡೆತ್ತಿ ಬಂದಿದಾರೆ; ಈ ಪ್ರಸಂಗದಲ್ಲಿ ನಾನು ಮೊಗಲಸೇನಾಪತಿಯನ್ನು ಹಿಡಿದೆ. ಆ ಸೇನಾಪತಿ ಸಾಮಾನ್ಯನಲ್ಲ. ಬಾದಶಹನ ಪ್ರಿಯಪುತ್ರ. ಬಾದಶಹನ ಮಗನು ನಮ್ಮ ಸರ್ವನಾಶಕ್ಕಾಗಿ—ಪಠಾಣರ ಸ್ವಾತಂತ್ರ್ಯಹರಣಕ್ಕಾಗಿ ಹೀಗೆ ಟೊಂಕಕಟ್ಟಿಕೊಂಡು ಬಂದಾಗ, ಅನಾಯಾಸವಾಗಿ ನಮ್ಮ ಕೈಸೇರುವುದು ಸಾಮಾನ್ಯಸಂಗತಿಯೇ? ಅನೇಕ ಮಂದಿ ವೀರರು ಬಹು ಪ್ರಯತ್ನ ಪೂರ್ವಕವಾಗಿ ಈ ಕೆಲಸಕ್ಕೆ ತೊಡಗಿದ್ದರೂ ಕೂಡ ಕೃತಕಾರ್ಯರಾಗುತ್ತಿದ್ದರೋ ಇಲ್ಲವೊ ಎಂಬುದು ಸಂದೇಹದ ಸಂಗತಿಯಾಗಿದೆ. ಹೀಗಿರುವಾಗ ನಾನು ಆಟವಾಡಿದಂತೆ ಅವನನ್ನು ಬಲೆಯಲ್ಲಿ ಹಿಡಿದೆನು. ಇದರಿಂದ ಪಠಾಣರೆಲ್ಲರೂ ನನ್ನನ್ನು ಹೊಗಳದಿರಲಾರರು. ಇದರಿಂದ ನನಗೆ ಆನಂದವಾಗಬೇಡವೆ? ಆದರೆ ಆನಂದಕ್ಕೆ ಬದಲಾಗಿ ಅಸಮಾಧಾನವಾಗುತ್ತಿದೆ. ಮನಸ್ಸೇ, ಇದಕ್ಕೆ ನೀನೇ ಉತ್ತರ ಹೇಳು; ಹೀಗೇಕೆ ಆಗುತ್ತಿರಬಹುದು?

ತಂದೆಯ ಕ್ರೋಧವು ಅತಿಭಯಂಕರವಾದದ್ದು. ಅವರು ಈ ಬಂದಿಯನ್ನು ಕ್ಷಮಿಸಲಾರರು. ಅದರಿಂದ ಈ ಸೈನಿಕನು ತಂದೆಯ ಸಿಟ್ಟಿಗೆ ಆಹುತಿಯಾಗುವುದರಲ್ಲಿ ಸಂದೇಹವಿಲ್ಲ. ಆದರೆ ನನಗೇನು? ಒಬ್ಬ ಮೊಗಲನ ಮರಣಕ್ಕಾಗಿ ನಾನು ಚಿಂತಿಸುವುದೇಕೆ? ಪ್ರತಿದಿನವೂ ಎಷ್ಟುಮಂದಿ ಸಾಯುವುದಿಲ್ಲ? ಅದರಲ್ಲಿಯೂ ಇವನು ಶತ್ರುವು. ಅಂದಬಳಿಕ ಇವನ ಮರಣದ ಗಣನೆಯನ್ನು ನಾನೇಕೆ ಮಾಡಬೇಕು? ಹಾಗಾದರೆ ನನಗೆ ಅಸಮಾಧಾನವಾದುದೇಕೆ ? ನನಗಾದರೋ ಏನೂ ತಿಳಿಯದಾಗಿದೆ.

ನಿಜವಾಗಿಯೂ ಶಹಾಜಾದನು ಸುಂದರನು; ಸರಲಸ್ವಭಾವದವನು. ಇದಕ್ಕಾಗಿ ನನಗೆ ಅಸಮಾಧಾನವೇ? ನಮ್ಮ ದೇಶದಲ್ಲಿ ಸುಂದರರೆಷ್ಟು ಮಂದಿಯಿಲ್ಲ! ಸರಳಸ್ವಭಾವದವರೆಷ್ಟು ಮಂದಿಯಿಲ್ಲ! ಆದರೆ ಇವರೆಲ್ಲರಿಗಾಗಿ ನಾನು ವ್ಯಥಿತಳಾಗಿರುವೆನೆ? ಇಂಥವಳು ಒಬ್ಬ ಶತ್ರುವು ಮರಣಕ್ಕೊಳಗಾಗಬಹುದೆಂದು ಖೇದಪಡುವದೆಲ್ಲಿಯ ಮಾತು! ಆದರೂ ಮನಸ್ಸು

ಕೇಳಲೊಲ್ಲದು. ಮನಸ್ಸೆ, ವಿವೇಕವನ್ನು ತಂದುಕೊ. ದೇಶಹಿತಕ್ಕಾಗಿ ಒಂದು ಮಹತ್ಕಾರ್ಯ ಮಾಡಿದೆನೆಂದು ಆನಂದಿಸು. ಶತ್ರುವು ಕೈಯಲ್ಲಿ ಸಿಕ್ಕಿದಾಗ, ಅವನನ್ನು ಹಿಡಿವುದಃ ನನ್ನ ಕರ್ತವ್ಯ. ನಾನು ನನ್ನ ಕರ್ತವ್ಯ ಮಾಡಿದ್ದೇನೆ."

ಹೀಗೆ ಸಮಾಧಾನ ತಂದುಕೊಳ್ಳಲು ಯತ್ನಿಸಿದರೂ, ಅವಳಿಗೆ ಸಮಾಧಾನವಾಗಲಿಲ್ಲ. ಅವಳು ಆ ಸ್ಥಳದಿಂದೆದ್ದು, ತೋಟದಲ್ಲಿ ಸಂಚರಿಸತೊಡಗಿದಳು. ಒಂದೆಡೆಯಲ್ಲಿ ದ್ರಾಕ್ಷಿಯ ಗಿಡಗಳು ಫಲಭಾರದಿಂದ ಶೋಭಿಸುತ್ತಿದ್ದುವು. ಪನ್ನಾಮತಿಯು ಇವುಗಳಲ್ಲಿಯ ಕೆಲಹಣ್ಣುಗಳನ್ನು ತೆಗೆದುಕೊಂಡು ಮುಂದೆ ಸಾಗಿದಳು. ಮತ್ತೊಂದೆಡೆಯಲ್ಲಿ ಗುಲಾಬಿಯ ಗಿಡಗಳು ಅರಳಿದ ಪುಷ್ಪಗಳಿಂದ ಶೋಭಾಯಮಾನವಾಗಿದ್ದುವು. ಪನ್ನಾಮತಿಯು ಉತ್ತಮವಾದ ಕೆಲಹೂಗಳನ್ನೆತ್ತಿಕೊಂಡು, ಮತ್ತೆ ಹೋಗಿ ಶಿಲಾಸನದಲ್ಲಿ ಕುಳಿತಳು. ಆದರೂ ಅವಳ ಮನಸ್ಸಿನ ಹುರಹುರಿ ಹೋಗಲಿಲ್ಲ. ಅವಳು ಅಲ್ಲಿಂದೆದ್ದು, ತನ್ನ ಕೋಣೆಯನ್ನು ಹೊಕ್ಕಳು.

ಪನ್ನಾಮತಿಯು ಕೋಣೆಯಲ್ಲಿ ಪ್ರವೇಶಿಸಿ ನಿಲುಗನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡಳು. ಅವಳ ಮುಂಗುರುಳು ಅಸ್ತವ್ಯಸ್ತವಾಗಿ ಅತ್ತಿತ್ತಹಾರಾಡುತಲಿದ್ದಿತು. ಅವಳು ಕನ್ನಡಿಯ ಇದಿರಿನಲ್ಲಿ ನಿಂತು, ಮುಂಗುರುಳನ್ನು ತಿದ್ದಿಕೊಂಡು ತಾನು ತಂದಿದ್ದ ದ್ರಾಕ್ಷೆಯ ಹಣ್ಣುಗಳಲ್ಲಿ ಒಂದೆರಡನ್ನು ಬಾಯಲ್ಲಿ ಹಾಕಿಕೊಂಡು—"ಅಹಾ! ಎಷ್ಟು ರುಚಿಯಾಗಿದೆ!" ಎಂದುಕೊಂಡಳು.

ಅನಂತರ ಅವಳು ಒಂದು ಬೆಳ್ಳಿಯ ಪುಷ್ಪಪಾತ್ರೆಯನ್ನು ತೆಗೆದುಕೊಂಡು, ತಾನು ತಂದಿರುವ ಹೂಗಳನ್ನು ಅದರಲ್ಲ ವ್ಯವಸ್ಥೆಯಿಂದಿರಿಸಿ ಒಂದೆರಡು ಹೂಗಳನ್ನು ತಾನು ಧರಿಸಿಕೊಂಡಳು. ಬಳಿಕ ಕನ್ನಡಿಯ ಬಳಿಗೆ ಬಂದು—"ನಮ್ಮ ಈ ಗುಡ್ಡುಗಾಡು ಭೂಮಿಯಲ್ಲಿ ಸುಗಂಧಪೂರ್ಣವಾದ ಎಂಥ ಉತ್ತಮ ಕುಸುಮಗಳಿವೆ? ಇಂಥ ಹೂಗಳು ಇನ್ನೆಲ್ಲಿ ತಾನೆ ಆದಾವು!" ಎಂದು ಹೇಳಿ ಅಭಿಮಾನಪಟ್ಟುಕೊಂಡಳು.

ಆ ವೇಳಗೆ ಯಾರೋ ಬಾಗಿಲಬಳಿ ನಿಂತು—"ಪನ್ನಾಬೇಗಮ, ನಿನ್ನ ಭಾವನೆ ಎಷ್ಟುಮಾತ್ರವೂ ಸುಳ್ಳಲ್ಲ!" ಎಂದು ಇವಳಮಾತಿಗೆ ಉತ್ತರ ಹೇಳಿದರು.

ಪನ್ನಾಮತಿ ಮುಖವೆತ್ತಿ ನೋಡಿದಳು. ಒಬ್ಬ ತರುಣನು ಅವಳೆದು ರಿಗೆ ನಿಂತು—"ಶಹಾಜಾದಿ, ನನ್ನ ಸಲಾಂ ಸ್ವೀಕರಿಸಿ ನನ್ನಿಂದ ಏನಾದರೂ ಅಪರಾಧವಾಗಿದ್ದರೆ ಕ್ಷಮಿಸಬೇಕು," ಎಂದನು.

ಪನ್ನಾಮತಿಯು ಕೃತ್ರಿಮಕೋಪದಿಂದ—"ನೀನು ಬಹಳ ಅಸಭ್ಯ ನಾಗಿರುವೆ. ನಿನ್ನ ತಪ್ಪು ಒಂದಲ್ಲ, ಎರಡಲ್ಲ; ಅನೇಕ. ಇವುಗಳಲ್ಲಿ ಯಾ ವುದನ್ನು ಕ್ಷಮಿಸಲಿ? ಅಫಶಾನ, ಅದಿರಲಿ ಬಿಡು. ವಿಶೇಷ ವರ್ತಮಾನ ವೇನು? ಈ ವೇಳೆಯಲ್ಲಿ ಇಲ್ಲಿಗೇಕೆ ಬಂದೆ?" ಎಂದು ಕೇಳಿದಳು.

ಅಫಶಾನನು ಹತ್ತಿರ ಕುಳಿತು ಗಂಭೀರಭಾವದಿಂದ—"ನಾನು ತಂದ ವರ್ತಮಾನವು ಅಸಾಧಾರಣವಾದದ್ದಾಗಿದೆ," ಎಂದು ಹೇಳಿದನು.

"ನಿನ್ನ ಗಂಭೀರಮುಖವನ್ನು ನೋಡಿ, ನಾನಿದನ್ನು ಮೊದಲೇ ಊಹಿಸಿದೆ. ಅದೇನು ಹೇಳು, ನೋಡೋಣ."

"ಬಹು ಚಾತುರ್ಯದಿಂದ ನೀನು ಮೊಗಲ ಸೇನಾಪತಿಯನ್ನು ಹಿಡಿದೆಯಷ್ಟೆ? ಬಾದಷಹರವರು ಸರದಾರರ ಆಲೋಚನೆಯಂತೆ, ಅವನಿಗೆ ಪ್ರಾಣದಂಡನೆ ವಿಧಿಸಿದ್ದಾರೆ. ನಾಳೆ ಬೆಳಿಗ್ಗೆಯೇ ಆಳವಾದು ದೊಂದು ಹಳ್ಳದಲ್ಲಿ ಅವನನ್ನು ಜೀವಂತವಾಗಿ ಹುಗಿದು ಬಿಡುವರು."

"ಬಂದಿಯು ಯಾರ ಸ್ವಾಧೀನದಲ್ಲಿದ್ದಾನೆ?"

"ನನ್ನ ಸ್ವಾಧೀನದಲ್ಲಿ."

ಕೇಳಿ ಪನ್ನಾಮತಿಯು ಏನೋ ಆಲೋಚಿಸಿ,—"ಒಳಿತಾಯಿತು. ನೀನು ಬಂದಿಯ ವಿಷಯದಲ್ಲಿ ಯಾವ ತರದ ಕಠೋರವರ್ತನವನ್ನೂ ಆಚರಿಸಬೇಡ; ಇನ್ನು ಅವನ ಆಯುಷ್ಯವು ಅತ್ಯಲ್ಪ! ಅಯ್ಯೋ! ಸರಲನಾದ ಅವನು ನನ್ನ ಬುದ್ಧಿ ದೋಷದಿಂದ ಮರಣಕ್ಕೊಳಗಾಗಬೇಕಾಯಿತು!"

"ಅವನು ನಮ್ಮ ಬಾದಶಹರ ಶತ್ರು; ನಮ್ಮ ದೇಶದ ಸ್ವಾತಂತ್ರ್ಯ ಹರಣಕ್ಕಾಗಿ ಟೊಂಕ ಕಟ್ಟಿದವರಲ್ಲಿ ಪ್ರಮುಖನು; ಗುಪ್ತ ರೀತಿಯಿಂದ ಸೈನಿಕರನ್ನು ಕರೆದುಕೊಂಡು ನಮ್ಮ ಅರಮನೆಯನ್ನು ಆಕ್ರಮಿಸಲಿಕ್ಕೆ ಬಂದವನು. ಒಂದು ವೇಳೆ ಅವನ ಈ ಪ್ರಯತ್ನವು ಸಾಧ್ಯವಾಗಿದ್ದಿದ್ದರೆ ನಾವು ಬಹಳ ಸಂಕಟಕ್ಕೊಳಗಾಗಬೇಕಾಗುತಿದ್ದಿತು. ಇಂಥವನ ವಿಷಯದಲ್ಲಿ ಇಷ್ಟೊಂದು ಕರುಣೆ ಏಕೆ?"

ಪನ್ನಾಮತಿಯು ವಿಸ್ಮಿತನೇತ್ರಳಾಗಿ, ಅಫಶಾನನನ್ನು ನೋಡುತ್ತ— "ಅಫಶಾನ, ನೀನು ಹೇಳುವುದೇನು? ಪ್ರಬಲಶತ್ರುವಿನ ವಿಷಯವಾಗಿ ದಯದೋರಬಾರದೆ? ಶತ್ರುವಾದರೇನಾಯಿತು? ಹೀನಸ್ಥಿತಿಯನ್ನು ಹೊಂದಿದಬಳಿಕ ಎಲ್ಲರೂ ದಯೆಗೆ ಪಾತ್ರರು. ಛಿ! ನೀನು ಎಂಥ ಕ್ಷುದ್ರ ಮನಸ್ಸಿನವನಿರುವೆ!"

ಅಫಶಾನನು ತನ್ನ ತಪ್ಪನ್ನು ತಿಳಿದನು. ಅವನು ತನ್ನ ಮಾತನ್ನು ಸುಧಾರಿಸಿಕೊಳ್ಳುವುದಕ್ಕಾಗಿ—"ಶಹಾಜಾದಿ, ಹೀಗನ್ನುವದರಲ್ಲಿ ಬೇರೆ ಉದ್ದೇಶವೇನೂ ಇರಲಿಲ್ಲ. ಏನೋ ಲೋಕವಾಡಿಕೆಯ ಮಾತಾಡಿದೆ. ಇದರಿಂದ ಒಂದುವೇಳೆ ನಿನಗೆ ಅಸಮಾಧಾನವಾಗಿದ್ದರೆ, ಅದಕ್ಕಾಗಿ ನನ್ನನ್ನು ಕ್ಷಮಿಸು. ಪನ್ನಾಮತಿ, ನೀನು ನನ್ನವಳು. ಈ ಯುದ್ಧವು ಮುಗಿದಕೂಡಲೇ ನಿಶ್ಚಯವಾಗಿಯೂ ನಮ್ಮಿರ್ವರ ವಿವಾಹವಾಗುವುದು. ನಾನು ವಿನೋದಕ್ಕಾಗಿ ಏನಾದರೊಂದು ಮಾತನಾಡಿದರೆ, ಅದಕ್ಕೆ ನೀನು ವಿಪರೀತಾರ್ಥವನ್ನು ಕಲ್ಪಿಸಿ, ಕೋಪಮಾಡುತ್ತಿರುವೆ. ಇದೊಂದು ಮಾತ್ರ ನಿನ್ನ ದೋಷ."

ಪನ್ನಾಮತಿಯು ಮತ್ತೂ ಕೋಪಿಸಿಕೊಂಡವಳಂತೆ ನಟಿಸಿ,—"ಅಫಶಾನ, ಒಳ್ಳೇದು. ನಿನ್ನ ಈ ಅಪರಾಧಕ್ಕೆ ಸರಿಯಾದ ಪ್ರಾಯಶ್ಚಿತ್ತವನ್ನು ಒಂದು ದಿನ ವಿಧಿಸುವೆನು. ಈ ರೀತಿ ನನ್ನನ್ನು ಜರಿದಾಡುವೆಯಾ?" ಎಂದಳು.

ಅಫಶಾನನು ಪನ್ನಾಮತಿಯನ್ನು ಪ್ರೀತಿಸುತ್ತಿದ್ದನು. ಇವಳ ವರ್ಣವು ಗುಲಾಬಿಯ ಬಣ್ಣವನ್ನು ಹೀಯಾಳಿಸುತ್ತಿತ್ತು; ಕಟಾಕ್ಷವು ಆಕಾಶದಲ್ಲಿಯ

ವಿದ್ಯುತ್ತಿಗಿಂತಲೂ ಪ್ರಖರವಾಗಿತ್ತು; ಕೋಗಿಲೆಗಳು ಇವಳ ಸ್ವರವನ್ನು ಕೇಳಿ, ಲಜ್ಜಿತವಾಗಿ, ಅರಣ್ಯಮಧ್ಯದಲ್ಲಿ ಮೋರೆ ತಪ್ಪಿಸಿಕೊಂಡಿರುತ್ತಿದ್ದವು. ಇಂತಹ ಇವಳು ದುರ್ಗಾಧಿಪತಿಯ ಏಕಮಾತ್ರ ಪ್ರಿಯಪುತ್ರಿ. ಮಿರಾನಶಹನ ತರುವಾಯ ರಾಜ್ಯಕ್ಕೆ ಇವಳೇ ಉತ್ತರಾಧಿಕಾರಿಣಿ. ಅಫಶಾನನು ಇವಳನ್ನು ಪ್ರೀತಿಸದೆ ಏನು ಮಾಡಿಯಾನು? ಅವನು ಮೊಳಕಾಲನ್ನೂರಿ ಕುಳಿತು, ಹಾಸ್ಯಮುಖನಾಗಿ, ಕೈಜೋಡಿಸಿಕೊಂಡು — "ಪನ್ನಾಬೇಗಮ, ಈ ಗುಲಾಮನ ಅಪರಾಧವನ್ನು ಕ್ಷಮಿಸು. ಇವನು ಇನ್ನುಮೇಲೆ ಎಂದೂ ಇಂಥ ಅಪರಾಧಮಾಡುವುದಿಲ್ಲ" ಎಂದು ದೈನ್ಯದಿಂದ ಹೇಳಿಕೊಂಡನು.

ಅಫಶಾನನ ಈ ಕೃತ್ಯವನ್ನು ನೋಡಿ, ಪನ್ನಾಮತಿಯು ಹೊಃ! ಹೊಃ ಎಂದು ಗಟ್ಟಿಯಾಗಿ ನಕ್ಕಳು. ಈ ನಗುವು ತಿರಸ್ಕಾರಸೂಚಕವೋ, ಅಥವಾ ಪ್ರಣಯಸೂಚಕವೋ ಅಫಶಾನನು ಗೊತ್ತುಮಾಡಲಾರದೆ ಹೋದನು. ಅವನು ಮುಗ್ಧನಂತೆ ಕೆಲಹೊತ್ತು ಪನ್ನಾಮತಿಯ ಮುಖದ ಕಡೆನೋಡಿ—"ಶಹಾಜಾದಿ, ನೀನು ಹೀಗೆ ಹಠಾತ್ತಾಗಿ ನಗತೊಡಗಿದ್ದೇಕೆ?" ಎಂದನು.

"ನಿನ್ನ ಮಾತನ್ನು ಕೇಳಿ ನನಗೆ ನಗುಬಂದಿತು. ಅದಕ್ಕಾಗಿ ನಕ್ಕೆನು. ನನ್ನ ಬಾದಶಹನೆಲ್ಲಿ? ಅಂದಬಳಿಕ ನಾನು ಬೇಗಮಳಾಗುವುದು ಹೇಗೆ? ನನ್ನ ಬಾದಶಹನು ಸದ್ಯಕ್ಕೆ ಸ್ವಪ್ನರಾಜ್ಯದಲ್ಲಿರುವನು. ಅಂದಬಳಿಕ ನಾನೂ ಸ್ವಪ್ನರಾಜ್ಯದ ಬೇಗಮಳೇ."

ಅಫಶಾನನು, 'ನಾನೇ ನಿನ್ನ ಸ್ವಪ್ನರಾಜ್ಯದ ಬಾದಶಹನು' ಎಂದು ಹೇಳಬೇಕೆಂದು ಮಾಡಿದ್ದನು. ಈ ಮಾತು ಅವನ ತುದಿನಾಲಿಗೆಯವರೆಗೆ ಬಂದು, ತಿರುಗಿಹೋಯಿತು; ಈ ಮಾತು ಹೇಳುವ ಧೈರ್ಯ ಅವನಿಗಾಗಲಿಲ್ಲ.

ಅಫಶಾನನು ದುರ್ಗಾಧಿಪತಿಯಾದ ಮಿರಾನಶಹನ ಸೇನಾಪತಿ. ಬಾಲ್ಯಕಾಲದಿಂದಲೂ ತಂದೆ ತಾಯಿಗಳಿಲ್ಲದವನು. ಇವನ ತಂದೆ ಒಬ್ಬ ಪಠಾಣ ಸರದಾರನಾಗಿದ್ದನು. ಅವನು ಸಾಯುವ ಮುಂದೆ ತನ್ನ ಸಣ್ಣ

ಸಂಸ್ಥಾನವನ್ನೂ, ಸಮಸ್ತ ಸಂಪತ್ತನ್ನೂ, ಅಫಶಾನನನ್ನೂ ಮಿರಾನಶಹನಿಗೆ ಒಪ್ಪಿಸಿದನು. ಮಿರಾನಶಹನೇ ಈವರೆಗೆ ಇವನನ್ನು ಮಗನಂತೆ ಕಾಪಾಡಿದನು. ಇದರಿಂದ ಪನ್ನಾಮತಿಯೂ, ಅಫಶಾನನೂ ಬಾಲ್ಯದಿಂದ ಏಕತ್ರ ಬಳೆದರು. ಮುಂದೆ ಯೌವನಕಾಲದಲ್ಲಿಯೂ ಕೂಡ, ಇವರಿಬ್ಬರ ಬಳಿಕೆಗೆ ಯಾವ ಪ್ರತಿಬಂಧವೂ ತೋರಲಿಲ್ಲ. ಅಫಶಾನನು ಶಕ್ತಿಶಾಲಿಯಾದ ವೀರನು. ಪನ್ನಾಮತಿಗೆ ಬಿಲ್ಲುಬಾಣಗಳನ್ನುಪಯೋಗಿಸಲು ಕಲಿಸಿದವನು ಇವನೇ. ಆದುದರಿಂದವನು ಪನ್ನಾಮತಿಯ ಬಾಲ್ಯಸಹಚರನೂ ಗುರುವೂ ಆಗಿದ್ದನು. ಸದ್ಯಕ್ಕೆ ತಾನು ಮಿರಾನಶಹನ ಸಂಬಳದ ನವಕರನಾಗಿದ್ದರೂ, ಕಾಲಕ್ರಮದಲ್ಲಿ ಪನ್ನಾಮತಿಯ ಪಾಣಿಗ್ರಹಣಮಾಡಿ, ಬಾದಶಹನಾಗುವೆನೆಂದು ಮನಸ್ಸಿನಲ್ಲಿಯೇ ಅಫಶಾನನು ಎಣಿಕೆಹಾಕುತ್ತಿದ್ದನು.

ಆಕಾಶದಲ್ಲಿ ಮೇಘವೆದ್ದಿತೆಂದರೆ, ಸಹಸಾ ಚಂದ್ರನು ಕಾಂತಿಹೀನನಾಗುವಂತೆ, ಪನ್ನಾಮತಿಯ ಮನಸ್ಸಿನಲ್ಲಿ ಯಾವುದೋ ವಿಚಾರವು ಉದ್ಭವಿಸಿ, ಅವಳ ಮುಖವನ್ನು ಬಾಡಿಸಿತು. ಆದರೆ ಈ ಭಾವವು ಕ್ಷಣಿಕವಾದುದು. ಅದರಿಂದಲೇ ಅಫಶಾನನು ಇದನ್ನು ನೋಡಲಿಲ್ಲ.

ಪನ್ನಾಮತಿಯು—“ಅಫಶಾನ, ಮೊಗಲಬಂದಿಯು ಇಲ್ಲಿಗೆ ಯಾವ ಉದ್ದೇಶದಿಂದ ಬಂದಿದ್ದನೆಂಬದು ನಿನಗೆ ತಿಳಿಯಿತೇನು?” ಎಂದು ಹೇಳಿ ಬೇರೆ ಪ್ರಸ್ತಾಪವನ್ನೆತ್ತಿದಳು.

“ಕೈಯಲ್ಲಿ ಸಿಕ್ಕ ಬಳಿಕ, ಅವನ ರಹಸ್ಯವು ನಮಗೆ ತಿಳಿಯದಿರುವುದೇ? ಇಪ್ಪತ್ತೈದುಜನ ಸಶಸ್ತ್ರಸೈನಿಕರು ಅವನೊಡನೆ ಬಂದಿದ್ದರು. ಅವನು ಈ ಸೈನಿಕರನ್ನು ಬಳಿಯಲ್ಲಿರುವ ಅರಣ್ಯದಲ್ಲಿ ಅಡಗಿಸಿಟ್ಟು, ದುರ್ಗವನ್ನು ಪ್ರವೇಶಿಸುವ ಮಾರ್ಗವನ್ನು ಗೊತ್ತುಹಚ್ಚುವುದಕ್ಕಾಗಿ ಬಂದಿದ್ದನು. ಸುಲಭವಾದ ದಾರಿಯನ್ನು ಕಂಡುಹಿಡಿದು, ಮಧ್ಯರಾತ್ರಿಯಲ್ಲಿ ಸೈನಿಕರೊಡನೆ ಕೋಟೆಯಲ್ಲಿ ಹೊಕ್ಕು, ಮಿರಾನಶಹರನ್ನು ಬಂದಿಗಳನ್ನಾಗಿ ಮಾಡಿಕೊಂಡು ಹೋಗುವುದು ಅವನ ಉದ್ದೇಶವೆಂದು ತೋರುತ್ತದೆ. ನಮ್ಮ ಬಾದಶಹರನ್ನೊಬ್ಬರನ್ನು ಸೆರೆಹಿಡಿದರೆ, ತನ್ನ ಕೆಲಸವು ಅನಾಯಾಸ

ವಾಗಿ ಸಾಧ್ಯವಾಗುವುದೆಂದು ಅವನು ಆಲೋಚಿಸಿರಬಹುದು. ಈ ಸೈನಿಕನ ವೇಷಭೂಷಣಗಳನ್ನು ನೋಡಿದರೆ ಇವನೊಬ್ಬ ಪ್ರಸಿದ್ಧ ಮೊಗಲ ಸೇನಾಪತಿಯಾಗಿರಬಹುದೆಂದು ಊಹಿಸಬಹುದಾಗಿದೆ. ಇಪ್ಪತ್ತೈದುಜನ ಮೊಗಲಸೈನಿಕರು ಸಮೀಪದ ಅರಣ್ಯದಲ್ಲಿ ಅಡಗಿಕೊಂಡು ಕುಳಿತಿರುವ ಸುದ್ದಿಯನ್ನು ನಮ್ಮ ಗುಪ್ತಚಾರರು ತಂದರು. ಕೂಡಲೇ ನಾನು ನೂರು ಸೈನಿಕರನ್ನು ಕರೆದುಕೊಂಡು ಹೋಗಿ, ಅವರನ್ನು ನಾಲ್ಕುಕಡೆಯಲ್ಲಿ ಮುತ್ತಿದೆ. ಅಲ್ಲಿ ಒಂದು ಸಣ್ಣ ಯುದ್ಧವಾಯಿತು. ಕೆಲವುಮಂದಿ ಮೊಗಲ ಸೈನಿಕರು ಓಡಿಹೋದರು. ಹತ್ತುಮಂದಿಯನ್ನು ಬಂದಿಗಳನ್ನಾಗಿ ಮಾಡಿಕೊಂಡು ಇಲ್ಲಿಗೆ ತಂದಿದ್ದೇನೆ"—

"ನಾನು ನಿನ್ನನ್ನು ಪ್ರೀತಿಸುವುದು ಇದಕ್ಕಾಗಿಯೇ. ವಿಪತ್ತಿನ ಸಮಯದಲ್ಲಿ ನಿನ್ನ ಬುದ್ಧಿಯು ತೀಕ್ಷ್ಣವಾಗಿ, ನಿನ್ನಿಂದ ಉತ್ತಮಕೆಲಸಗಳನ್ನು ಮಾಡಿಸುತ್ತಿರುವುದು. ಇದನ್ನು ನಾನು ಹಿಂದಿನಸಾರಿ ಆದ ಯುದ್ಧದಲ್ಲಿಯೇ ನೋಡಿದ್ದೇನೆ. ಈಗಲೂ ನೋಡುತ್ತಿದ್ದೇನೆ. ಅದಿರಲಿ, ಮುಖ್ಯ ಬಂದಿಯನ್ನು ಪಾರಾಗದಂಥ ಸ್ಥಳದಲ್ಲಿ ಇರಿಸಿರುವಿಯಷ್ಟೇ? ಯಾಕಂದರೆ ಮೊಗಲರು ಮಹಾಚತುರರು. ಅವರು ಯಾವುದಾದರೊಂದು ರೀತಿಯಿಂದ ಓಡಿಹೋಗುವ ಪ್ರಯತ್ನಮಾಡದಿರರು. ಕಾರಣ ನೀನು ಎಚ್ಚರಿಕೆಯಿಂದಿರುವುದು ಒಳಿತಾದುದು," ಎಂದು ಪನ್ನಾಮತಿ ನಗುತ್ತ ಹೇಳಿದಳು.

ಅಫಘಾನನು ತನ್ನ ಜೇಬಿನಲ್ಲಿದ್ದ ಚೂರಿಯನ್ನು ಹೊರಗೆ ತೆಗೆದು, ಅದನ್ನು ಪನ್ನಾಮತಿಗೆ ತೋರಿಸಿ, ಅಭಿಮಾನದಿಂದ ಹೇಳಿದನು—"ನಬಾಬನಂದಿನಿ, ತಮ್ಮ ಚಿರಶತ್ರುಗಳಾದ ಚಪಲ ಮೊಗಲರೊಡನೆ ಯಾವರೀತಿ ವ್ಯವಹರಿಸಬೇಕೆಂಬುದನ್ನು ಪಠಾಣರು ಚೆನ್ನಾಗಿ ತಿಳಿದವರಾಗಿದ್ದಾರೆ. ಸೆರೆಸಿಕ್ಕ ಮೊಗಲಸೇನಾಪತಿಯನ್ನು ಯಾವರೀತಿಯಿಂದ ಪ್ರತಿಬಂಧದಲ್ಲಿರಿಸಬೇಕೆಂಬುದು ನಮಗೆ ಗೊತ್ತಿದೆ. ಅದರಿಂದ ನೀನು ನಿಶ್ಚಿಂತಳಾಗಿರು. ಬಂದಿಯು ನನ್ನ ಆಧೀನದಲ್ಲಿದ್ದಾನೆ. ನೀನು ಸಂದೇಹಪಡಲು ಯಾವ ಕಾರಣವೂ ಇಲ್ಲ. ನಾಳೆ ಪ್ರಾತಃಕಾಲದಲ್ಲಿ ಅವನ ರುಂಡವನ್ನು ತಂದು, ನಿನಗೆ ತೋರಿಸುವೆನು."

"ದೈವಭೋಗವನ್ನು ತಪ್ಪಿಸಿಕೊಳ್ಳುವುದು ಯಾರಿಂದಲೂ ಆಗದೆಂದು ಬುದ್ಧಿವಂತರು ಹೇಳುತ್ತಾರೆ. ಇದಕ್ಕೆ ಈ ಮೊಗಲಸೇನಾಪತಿ ಉತ್ತಮ ಉದಾಹರಣಸ್ವರೂಪನಾಗಿದ್ದಾನೆ—ಇಲ್ಲದಿದ್ದರೆ ಅವನು ಈ ಸ್ಥಿತಿಯಲ್ಲಿ ನನ್ನ ಕಣ್ಣಿಗೆ ಬೀಳುತ್ತಿದ್ದನೆಲ್ಲಿ? ಅಫಶಾನ, ರಾತ್ರಿ ಬಹಳವಾದಂತೆ ತೋರುತ್ತಿದೆ. ನನಗೆ ನಿದ್ದೆ ಬಂದಿದೆ."

ಅಫಶಾನನು ಶಹಾಜಾದಿಯ ಅಪ್ಪಣೆ ಹೊಂದಿ, ಹೊರಡಲುದ್ಯುಕ್ತನಾದನು. ಈ ಸಮಯದಲ್ಲಿ ಪನ್ನಾಮತಿಯು ನಗುತ್ತ—"ಅಫಶಾನ, ನೀನು ನಾನು ಸ್ವತಃ ತಯಾರಿಸಿದ ಸಿರಾಜಿಯಿಂದ ಮಿಶ್ರಿತವಾದ ಷರಬತ್ತನ್ನು ಸೇವಿಸುವುದಕ್ಕೆ ಇಚ್ಛಿಸುವಿಯಲ್ಲವೇ? ನಿಲ್ಲು, ನಾನು ಸಿದ್ಧಮಾಡಿ ತರುವೆನು. ಹೋಗುವಮುಂದ ಒಂದೆರಡು ಬಟ್ಟಲು ಸಿರಾಜಿ ಕುಡಿದು ಹೋಗು. ಅದರಿಂದ ರಾತ್ರಿ ಅಪ್ಸರೆಯರ ಸುಖಸ್ವಪ್ನ ನೋಡುವೆ," ಎಂದು ಹೇಳಿದಳು.

'ರೋಗಿ ಬಯಸಿದ್ದೂ ಹಾಲೋಗರ; ವೈದ್ಯ ಹೇಳಿದ್ದೂ ಹಾಲೋಗರ' ಎಂಬುದೊಂದು ಗಾದೆಯುಂಟು. ಅಫಶಾನನ ಸ್ಥಿತಿಯೂ ಹೀಗೆಯೇ ಆಯಿತು. ಅವನು ಇಷ್ಟು ತೀವ್ರ ಪನ್ನಾಮತಿಯನ್ನು ಬಿಟ್ಟುಹೋಗುವ ಮನಸ್ಸಿಲ್ಲದವನಾಗಿದ್ದನು; ಅವಳು ತನಗೆ ನಿದ್ದೆಬಂದಿದೆಯೆಂದು ಸೂಚಿಸಿದ ಮೂಲಕ, ಅಫಶಾನನು ಅನಿವಾರ್ಯಹಕ್ಕಾಗಿ ಎದ್ದು ಹೊರಡಬೇಕಾಯಿತು. ಇಷ್ಟರಲ್ಲಿ ಅವಳಿಗೆ ಏನು ತಿಳಿಯಿತೋ ಏನೋ! ಪುನಃ ಅಫಶಾನನನ್ನು ಕರೆದಳು. ಇಷ್ಟೆ ಅಲ್ಲ; ಸಿರಾಜವನ್ನು ಸೇವಿಸಿ ಹೋಗುವುದಕ್ಕೆ ಆದರದಿಂದ ಒತ್ತಾಯ ಮಾಡಿದಳು. ಅಫಶಾನನಿಗೆ ಬಹಳ ಆನಂದವಾಯಿತು. ಅವನು ನಿಶ್ಚಯವಾಗಿಯೂ ಪನ್ನಾಮತಿಯು ತನ್ನನ್ನು ಪ್ರೀತಿಸುವಳೆಂದು ಭಾವಿಸಿದನು. ಪನ್ನಾಮತಿಯು ಅಫಶಾನನಿಗೆ ಹಿಂದೆ ಈ ರೀತಿಯಿಂದ ಎಂದೂ ಒತ್ತಾಯಮಾಡಿದ್ದಿಲ್ಲವೆಂದಲ್ಲ; ಆದರೆ ಇಂದಿನ ಒತ್ತಾಯದ ರೀತಿಯೇ ಬೇರೆ.

ಅಫಶಾನನು ಶಹಾಜಾದಿಯ ಮಾತು ಮೀರಲಾರದವನಂತೆ ನಟಿಸಿ, ಪುನಃ ಕುಳಿತನು. ಪನ್ನಾಮತಿಯು ನಗೆಮೊಗದಿಂದ—"ಅಫಶಾನ,

ಇಲ್ಲಿಯೇ ಕುಳಿತುಕೊ. ನಾನೇ ಹೋಗಿ, ಸಿರಾಜಿಯನ್ನು ಸಿದ್ಧಪಡಿಸಿ ತರುವೆನು." ಎಂದು ಹೇಳಿ ಹೊರಟುಹೋದಳು.

ಪನ್ನಾಮತಿಯ ಕೈ ಕೆಳಗೆ ಎಂಟು--ಹತ್ತುಜನ ಪರಿಚಾರಿಕೆಯರಿದ್ದರು. ಪನ್ನಾಮತಿಯು ಇವರಲ್ಲೊಬ್ಬಳಿಗೆ ಅಪ್ಪಣೆ ಮಾಡಿದ್ದರೆ, ಕೂಡಲೇ ಸಿರಾಜಿಯು ತಯಾರಾಗಿ ಬರುತ್ತಿತ್ತು. ಹೀಗಿರಲು ಅವಳು ಸ್ವತಃ ಹೋದುದನ್ನು ನೋಡಿ, ಅಫಶಾನನು ಇದಕ್ಕೆ ತನ್ನ ಮೇಲಿರುವ ಇವಳ ಪರಮಾನುರಾಗವೇ ಕಾರಣವೆಂದು ಭಾವಿಸಿದನು. ತಾನು ಕಾಮಿ! ಆದ ರಿಂದ ಅವನು ಯುವತಿಯ ಪ್ರತಿಯೊಂದು ಕೃತ್ಯವೂ ತನಗನುಕೂಲವೆಂದೇ ಭಾವಿಸುವುದು ಸಾಧಾರಣವೇ. ಮುಂದೇನು ಆಗುವುದೋ ಯಾರು ಬಲ್ಲರು?

ಪನ್ನಾಮತಿಯು ಷರಬತ್ತಿನಿಂದ ಕೂಡಿದ ಸಿರಾಜಿಯ ಪಾತ್ರೆಯನ್ನೂ, ಫಲಾಹಾರದ ಪದಾರ್ಥಗಳನ್ನೂ ತೆಗೆದುಕೊಂಡು ಬಂದು, ಅಫಶಾನನ ಮುಂದಿರಿಸಿದಳು; ಮತ್ತು ಹೆಚ್ಚು ಆದರ ತೋರಿಸುವುದಕ್ಕಾಗಿ ಸಿರಾಜಿಯನ್ನು ಸಣ್ಣದೊಂದು ಸುವರ್ಣದ ಪಾತ್ರೆಯಲ್ಲಿ ಹಾಕಿ, ಅದನ್ನು ಅಫಶಾನನ ಕೈಯಲ್ಲಿ ಕೊಡಹೋದಳು.

ಅಫಶಾನನು ಮನಸ್ಸಿನಲ್ಲಿ ಭಾವಿಸಹತ್ತಿದ್ದನು—"ಇವಳು ನಿಶ್ಚಯವಾಗಿಯೂ ನನ್ನನ್ನು ಪ್ರೀತಿಸುವಳು. ಇಲ್ಲದಿದ್ದರೆ ಇಷ್ಟೊಂದು ಆದರವನ್ನು ತೋರಿಸುತ್ತಿದ್ದಳೇಕೆ! ಇವರಲ್ಲಿ ವಿಶೇಷವಾದರೂ ಏನು? ನಾನೇನು ಸಾಮಾನ್ಯನೇ? ಇಂದು ಇವಳು ಬಾದಶಹನ ಮಗಳೂ, ನಾನು ಸಂಬಳದ ನವಕರನೂ ಆಗಿರುವುದು ನಿಜ. ಆದರೂ ನಾನು ಬಾದಶಹನ ಮುಖ್ಯ ಸೇನಾಪತಿಯೂ, ಸ್ನೇಹಿತನ ಮಗನೂ ಆಗಿದ್ದೇನೆ. ಅಫಜಾಯಿ ರಾಜ್ಯದ ಸೇನಾಸೂತ್ರವೆಲ್ಲವೂ ನನ್ನ ಕೈಯಲ್ಲಿದೆ. ಮೊಗಲರು ಈ ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವದಕ್ಕೆ ವಿಶ್ವಪ್ರಯತ್ನ ಮಾಡುತ್ತಿದ್ದಾರೆ. ಈ ಪ್ರಸಂಗದಲ್ಲಿ ಬಾದಶಹನು ನನಗನುಕೂಲನಾಗಿ ವರ್ತಿಸಲೇಬೇಕು. ನಾನು ಬುದ್ಧಿಚಾತುರ್ಯದಿಂದ ಒಮ್ಮೆ ಮೊಗಲರನ್ನು ಹಿಂದಕ್ಕಟ್ಟಿದ್ದೇನೆ.

ಈಗಲೂ ಅವರನ್ನು ನಾನು ನಿಶ್ಚಯವಾಗಿಯೂ ಸೋಲಿಸುವೆನೆಂಬುದನ್ನು ಬಾದಶಹನು ಬಲ್ಲನು. ಹೀಗಿರುವಾಗ ಬಾದಶಹನು ನನಗೆ ವಿರೋಧವಾಗುವುದೆಂತು? ಇಷ್ಟು ದಿವಸಗಳವರೆಗೆ ಅವನು ನನ್ನನ್ನು ಅಳಿಯನನ್ನಾಗಿ ಮಾಡಿಕೊಳ್ಳದಿರುವದೇ ಆಶ್ಚರ್ಯದ ಸಂಗತಿಯಾಗಿದೆ."

ಅಫಶಾನನು ಈ ಮೇರೆಗೆ ವಿಚಾರಮಗ್ನನಾಗಿರುವ್ವದನ್ನು ನೋಡಿ, "ಸೇನಾಪತಿ, ಏನೋ ಬಹಳ ವಿಚಾರ ನಡೆದಂತಿದೆ. ಆ ಹಾಳು ವಿಚಾರವೀಗೇಕೆ? ಮೊದಲು ಈ ಸಿರಾಜಿಯನ್ನು ಸೇವಿಸು" ಎಂದು ಹೇಳಿ ಸುರಾಪಾತ್ರೆಯನ್ನವನ ಕೈಯಲ್ಲಿ ಕೊಟ್ಟಳು.

ಅಫಶಾನನು ಅದನ್ನು ಆದರದಿಂದ ತೆಗೆದುಕೊಂಡು, ಅದನ್ನು ಗಟಗಟನೆ ಕುಡಿದುಬಿಟ್ಟನು. ತರುವಾಯ ಅವನು ಸಮಾಧಾನವನ್ನು ವ್ಯಕ್ತಪಡಿಸಿ—"ಮತ್ತೇನು ವಿಚಾರಿಸಲಿ? ನಿನ್ನೀ ಭುವನಮೋಹನ ರೂಪವೇ ನನ್ನ ಆಲೋಚನೆಯ ಏಕಮಾತ್ರ ವಿಷಯ. ಸುಂದರಿ, ದೇವರ ಸೃಷ್ಟಿಯಲ್ಲಿ ನೀನು ಅಪೂರ್ವಳಾಗಿರುವೆ. ನಿನ್ನೀ ಅಪ್ರತಿಮಲಾವಣ್ಯದ ಉಪಭೋಗವನ್ನು ಹೊಂದುವವನು ಧನ್ಯನು. ಇದಕ್ಕಾಗಿ ದೇವರು ಯಾವನನ್ನು ನಿರ್ಮಿಸಿರುವನೋ ಏನೋ!" ಎಂದು ಹೇಳಿದನು.

ಪನ್ನಾಮತಿಯು ಅಫಶಾನನ ಬಳಿಯಲ್ಲಿ ಕುಳಿತು, ಅವನ ಎರಡೂ ಕೈಗಳನ್ನು ಸ್ನೇಹಭರದಿಂದ ಹಿಡಿದುಕೊಂಡು—"ಅಫಶಾನ, ಇದರ ಉತ್ತರವನ್ನು ನಾನು ಕೊಡಬೇಕೇನು? ಅಫಜಾಯಿ ದುರ್ಗಾಧಿಪತಿಯ ಮಗಳಾದ ಈ ಪನ್ನಾಮತಿಯು ಭವಿಷ್ಯತ್ಕಾಲದಲ್ಲಿ ಯಾರ ಪಾಣಿಗ್ರಹಣಮಾಡುವಳೆಂಬುದನ್ನು ನಿನ್ನಮನಸ್ಸು ನಿನಗೆ ಹೇಳುವುದಿಲ್ಲವೆ? ನಿನ್ನ ಕಣ್ಣುಗಳು ನಿನಗೆ ತೋರಿಸಿಕೊಡುವುದಿಲ್ಲವೆ?" ಎಂದು ಅಂದಳು.

ಹೀಗೆಹೇಳಿ ಸುರಮಾರಂಜಿತವಾದ ವಿಶಾಲನೇತ್ರದಿಂದ ಒಂದು ತೀಕ್ಷ್ಣ ಬಾಣವನ್ನೆಸೆದು, ಮನೋಹರವಾದ ಅಧರದಲ್ಲಿ ಮೃದುಹಾಸ್ಯವನ್ನು ತಂದುಕೊಂಡು, ಪನ್ನಾಮತಿಯು ಪುನಃ ಪಾತ್ರೆಯನ್ನು ಮದಿರೆಯಿಂದ ತುಂಬಿದಳು; ಮತ್ತು ಅದನ್ನು ಅಫಶಾನನ ಕೈಯಲ್ಲಿ ಕೊಟ್ಟು, ಕುಡಿಯುವಂತೆ ಹೇಳಿದಳು.

"ನೀನು ಕುಡಿಯಲಿಲ್ಲವಲ್ಲ!" ಎಂದು ಅಫಶಾನನು ಅಂದನು.

"ನಾನು ಅನಂತರ ಕುಡಿಯುವೆನು. ಮೊದಲು ನಿನ್ನದಾಗಲಿ. ನನಗೆ ಇಷ್ಟೊಂದು ಆಗ್ರಹಮಾಡುವದೇಕೆ? ಸುಮ್ಮನೆ ಕೊಟ್ಟದ್ದನ್ನು ಕುಡಿದರಾಯಿತು. 'ಸುಂದರಿಯ ಕೈಯ್ಯ ಸುರೆಯನ್ನು ಉಪೇಕ್ಷಿಸುವವನು ಕೇವಲ ಕಾಡುಮನುಷ್ಯನು,' ಎಂದು ಹಾಫಿಜಕವಿ ಹೇಳಿದ್ದಾನೆ."

"ಸಾದಿಕವಿಯು 'ರಮಣಿಯ ಉಚ್ಛಿಷ್ಟಸುರೆಯನಲ್ಲದೆ, ಬೇರೆಮದಿರೆಯನ್ನು ಸ್ಪರ್ಶಮಾಡುವ ಕಾಡುಮನುಷ್ಯನು ಪಿಶಾಚನ ದಾಸನಾಗುವನು' ಎಂದು ಹೇಳಿದ್ದನ್ನು ನೀನರಿಯೆಯಾ?" ಎಂದು ಅಫಶಾನನು ಮುಗುಳುನಗೆಯಿಂದ ಅಂದನು.

"ನಾವೀಗ ಕವಿಗಳ ಹಾಳುವಚನಗಳನ್ನು ತೆಗೆದುಕೊಂಡು ವಾದವಿವಾದ ಮಾಡುತ್ತ ಕುಳಿತುಕೊಳ್ಳುವ ಸಮಯವಲ್ಲ. ನಾನು ನಿನ್ನ ಪ್ರೀತಿಪಾತ್ರಳಾದ ಸನ್ನಾರಾಣಿ. ನಾನು ಕೊಟ್ಟ ಈ ಎರಡನೇ ಪಾತ್ರೆಯಲ್ಲಿಯ ಸುರೆಯನ್ನು ಸೇವಿಸಲೇಬೇಕೆಂದು ನಿನಗೆ ಅಪ್ಪಣೆ ಮಾಡುತ್ತೇನೆ. ನನ್ನ ಆಜ್ಞೆಯನ್ನು ಪಾಲಿಸುವಿಯೋ, ಇಲ್ಲವೋ?" ಹೀಗೆಂದು ಹೇಳಿ ಸನ್ನಾಮತಿ ಕೃತ್ರಿಮಕೋಪತಂದುಕೊಂಡು, ಸ್ವಲ್ಪದೂರ ಸರಿದುನಿಂತಳು.

"ಸುಂದರಿ, ಹೀಗೆ ಕೋಪಗೊಳ್ಳಬೇಡ. ನಾನು ನಿನ್ನ ದಾಸನ ದಾಸ. ಹಾಸ್ಯಮುಖದಿಂದ ಹೊರಟ ನಿನ್ನ ಪ್ರತಿಯೊಂದು ಅಪ್ಪಣೆಯನ್ನೂ ತಪ್ಪದೆ ಪಾಲಿಸುವೆನು. ಹೀಗಿರಲು ವ್ಯರ್ಥವಾಗಿ ನನ್ನಮೇಲೆ ಕೋಪಗೊಳ್ಳುವುದೇಕೆ?" ಎಂದು ಅಫಶಾನನು ಬೇಡಿಕೊಂಡನು.

ಸನ್ನಾಮತಿಯು ಪುನಃ ಅಫಶಾನನ ಹತ್ತಿರ ಕುಳಿತುಕೊಂಡು— "ಅಫಶಾನ, ನೀನು ನನ್ನನ್ನು ಬಹಳವಾಗಿ ಪ್ರೀತಿಸುತ್ತಿರುವೆ. ಇಲ್ಲದೆ ಹೋದರೆ, ನಾನು ಸಿಟ್ಟಿಗೆದ್ದಿದ್ದಾಗ, ನೀನು ಈ ರೀತಿ ಬೇಡಿಕೊಳ್ಳುತ್ತಿದ್ದೆಯಾ? ನಾನು ನಿನ್ನೊಡನೆ ಹುಡುಗಾಟಿಕೆ ಮಾಡುವುದಿಲ್ಲ. ಸತ್ಯವಾಗಿ ಹೇಳುತ್ತೇನೆ. ರಮಣಿಯರನ್ನು ಯಾವರೀತಿಯಿಂದ ಪ್ರೀತಿಸಬೇಕೆಂಬುದನ್ನು ನೀನು ಚನ್ನಾಗಿ ಅರಿತಿರುವೆ. ನಾನು ಅಜ್ಞಾನಿಯಾದ ಹೆಂಗಸು. ಆದುದರಿಂದ ರೂಪಗರ್ವದಿಂದಲೂ, ಅಭಿಮಾನದ ಅಹಂ

ಕಾರದಿಂದಲೂ ಉತ್ತಮ ಸಂಧರ್ಭವನ್ನು ವ್ಯರ್ಥವಾಗಿ ಕಳೆದುಕೊಳ್ಳು ತ್ತಿರುವೆನು. ನೀನು ನನ್ನನ್ನು ಕ್ಷಮಿಸು," ಎಂದು ಹಾಸ್ಯಮುಖಿಯಾಗಿ ಹೇಳಿದಳು.

ಅಫಶಾನನಿಗೆ ಬಹಳ ಆನಂದವಾಯಿತು; ಅವನು ಪನ್ನಾಮತಿಯ ಮುಖದಿಂದ ಹೊರಟ ಈ ತರದ ಮಾತನ್ನೆಂದೂ ಕೇಳಿರಲಿಲ್ಲ. ಸಾಯಂ ಕಾಲದ ತಂಗಾಳಿಯು ತಂದ ಉದ್ಯಾನಕುಸುಮಗಳ ಸುವಾಸನೆಯೂ, ಕೋಣೆಯಲ್ಲಿಯ ಲೋಬಾನದ ಸುಗಂಧವೂ, ಪನ್ನಾಮತಿ ಧರಿಸಿದ ಮೃಗ ಮದವಾಸನೆಯೂ, ಸಿರಾಜಿಯ ಮದ್ಯದಲ್ಲಿ ಬೆರೆತು, ಅಫಶಾನನನ್ನು ಸ್ವಪ್ನರಾಜ್ಯಕ್ಕೆ ಒಯ್ದವು. ಅವನು ಕೈಯಲ್ಲಿಯ ಮದಿರೆಯನ್ನು ಸಂಪೂ ರ್ಣವಾಗಿ ಕುಡಿದುಬಿಟ್ಟನು. ಆದರಿಂದವನು ಕಣ್ಣುಮುಚ್ಚತೊಡಗಿ ದನು; ಅನೇಕ ಸುಖಸ್ವಪ್ನಗಳನ್ನು ನೋಡಹತ್ತಿದನು. ಅರ್ಧಜಾಗ್ರತಾ ವಸ್ಥೆಯಲ್ಲಿರುವ ಅವನ ಕಣ್ಣಿಗೆ ಪನ್ನಾಮತಿಯು ಅಪ್ಸರೆಯರಿಗಿಂತಲೂ, ಹೆಚ್ಚುರೂಪವತಿಯಾಗಿ ಕಂಡಳು. ಅವನು ಭಾವಿಸಹತ್ತಿದನು.—"ನಾನು ಪ್ರತ್ಯಹವೂ ಪ್ರೇಮದೃಷ್ಟಿಯಿಂದ ನೋಡುತ್ತಬಂದಿರುವ ಪನ್ನೆಯು ಇವ ಳಲ್ಲ. ಅವಳಿಗೆ ಇಷ್ಟೊಂದು ಸೌಂದರ್ಯವೆಲ್ಲಿಂದ ಬರಬೇಕು? ಅಹಾ! ಎಂಥ ಭುವನಮೋಹನಸೌಂದರ್ಯವಿದು! ಇವಳ ಮುಖದಲ್ಲಿ, ಕಣ್ಣು ಗಳಲ್ಲಿ, ನೋಟದಲ್ಲಿ, ಇತರ ಪ್ರತಿಯೊಂದು ಅವಯವಗಳಲ್ಲಿ ಮೋಹಿಸೀ ಶಕ್ತಿಯು ಸ್ಪಷ್ಟವಾಗಿ ಕಾಣುತ್ತಿರುವುದು." ಅವನು ವಿಹ್ವಲನಾಗಿ ಏಕದೃ ಷ್ಟಿಯಿಂದ ಪನ್ನಾಮತಿಯ ಮುಖವನ್ನು ನೋಡುತ್ತ ಕುಳಿತುಕೊಂಡನು.

ಪನ್ನಾಮತಿಯು ತನ್ನ ಔಷಧವು ನಾಟಿದ್ದನ್ನು ತಿಳಿದಳು. ಅವಳು ತ್ವರೆ ಯಿಂದ ಪುನಃ ಬಟ್ಟಲನ್ನು ಮದಿರೆಯಿಂದ ತುಂಬಿ, ಅದನ್ನು ಅಫಶಾನನ ಮುಂದೆ ಹಿಡಿದಳು. ಅರ್ಧಸಚೇತನ ಮಂತ್ರಮುಗ್ಧನಾದ ಅಫಶಾನನು ಪನ್ನಾಮತಿಯ ಇಚ್ಛಾಶಕ್ತಿಯ ಅಧೀನನಾಗಿ, ಆ ಪಾತ್ರೆಯಲ್ಲಿಯ ಸುರೆ ಯನ್ನು ಸಂಪೂರ್ಣವಾಗಿ ಸೇವಿಸಿದನು.

ಪನ್ನಾಮತಿಯು ಅತ್ಯಾದರದಿಂದ ಅಫಶಾನನ ಕೈಹಿಡಿದು—"ಅಫ ಶಾನ, ಹೀಗೆ ನನ್ನನ್ನು ಏಕದೃಷ್ಟಿಯಿಂದ ನೋಡುತ್ತಿರುವೆಯೇಕೆ? ನನ್ನ

ಮುಖದಲ್ಲೇನಿದೆ? ಬಹುಕಾಲದಿಂದ ಒಂದೇ ರೀತಿಯಲ್ಲಿ ನನ್ನಮುಖ ನೋಡುತ್ತಿರುವೆಯಲ್ಲ! ಇಂದು ನಿನ್ನ ಅವಸ್ಥೆಯು ಹೀಗೇಕೆ ಆಯಿತು? ಇಷ್ಟೊಂದು ನೂತನಮೋಹವೇಕೆ?" ಎಂದು ಸಲಿಗೆಯಿಂದ ಕೇಳಿದಳು.

"ಮನೋಹರಿ, ನಾನು ಬಹುದಿವಸಗಳಿಂದ ನಿನ್ನೀ ಭುವನ ಮೋಹನರೂಪವನ್ನು ನೋಡುತ್ತಬಂದಿದೇನೆ; ಆದರೆ ಆ ದೃಷ್ಟಿಯಲ್ಲಿ ನಿನ್ನ ನಿಜಸೌಂದರ್ಯವನ್ನು ತಿಳಿದುಕೊಳ್ಳುವ ಶಕ್ತಿ ಇರಲಿಲ್ಲ. ಇಂದು ನನ್ನ ಕಣ್ಣಿನಲ್ಲಿ ನವೀನಶಕ್ತಿಯುಂಟಾಗಿದೆ. ಆ ಶಕ್ತಿಯ ಬಲದಿಂದ ನಿನ್ನನ್ನು ನೋಡುತ್ತಿದ್ದೇನೆ. ನನ್ನೆದುರಿಗೆ ಶ್ರೇಷ್ಠತಮಳಾದ ಅಪ್ಸರೆಯೋರ್ವಳು ನಿಂತಂತೆಯೂ, ಅವಳು ಸುವರ್ಣಪಾತ್ರೆಯಲ್ಲಿ ಮೋಹಮಯವಾದ ಮದಿರೆಯನ್ನು ತುಂಬಿ ನನ್ನ ಕೈಗೆ ಕೊಡುತ್ತಿರುವಂತೆಯೂ ನನಗೆ ಬೋಧೆಯಾಗುತ್ತಿದೆ. ಇಂದು ನಿನ್ನ ಸಕಲ ಅವಯುವಗಳಲ್ಲಿ ಲಾವಣ್ಯ ರಸವು ಉಕ್ಕುತ್ತಿರುವಂತೆ ತೋರುತ್ತಿದೆ. ಇಂದು ನಿನ್ನ ದೃಷ್ಟಿ ಮಧುರ; ನಿನ್ನ ಮುಖವು ಮಧುರ; ನಿನ್ನ ಹಾಸ್ಯವು ಮಧುರ; ನಿನ್ನ ಈ ನೀಲ ವರ್ಣದ ಆವರಣವು ಮೇಘೋಪಮವಾಗಿದ್ದು, ಮುಖವು ಮೇಘಾವೃತ ವಾದ ಚಂದ್ರನಂತಿದೆ. ನಿನ್ನ ಈ ಶ್ರೇಷ್ಠಶರೀರವು ಸೂಕ್ಷ್ಮವಾದ ನೀಲವರ್ಣದ ಆವರಣದಿಂದ ಆಚ್ಛಾದಿತವಾಗಿದೆ. ಇದನ್ನು ನೋಡಿ ನನಗೆ ವಿದ್ಯುತ್ತಿನ ದೀಪ್ತಿಯನ್ನು ಕಡಿಮೆ ಮಾಡುವದಕ್ಕಾಗಿ ನೀಲಮೇಘವು ಅದನ್ನಾವರಿಸಿಕೊಂಡಿದೆಯೋ ಏನೋ ಎಂದು ಭಾಸವಾಗುತ್ತಿದೆ. ನಿನ್ನ ಈ ರಕ್ತೋತ್ಪಲ ಗಂಡ ಪ್ರದೇಶದಲ್ಲಿ ಅಪೂರ್ವಮಾಧುರ್ಯವು ಹೊಮ್ಮಿ ಕಾಣುತ್ತಿದೆ. ನಿನ್ನ ಈ ರತ್ನಾಲಂಕಾರಗಳ ಸಮೂಹವು, ದೀಪದಪ್ರಕಾಶದ ಸಹಾಯದಿಂದ ಸಂಧ್ಯಾಕಾಲದ ತಾರಕೆಗಳಂತೆ ಶೋಭಾಯಮಾನ ವಾಗಿದೆ. ವಿರಹಾನಲದಿಂದ ದಗ್ಧವಾಗುತ್ತಿರುವ ನನ್ನೀಹೃದಯವು ನಿನ್ನ ಈ ಅಪೂರ್ವಸೌಂದರ್ಯರಸಪಾನವನ್ನು ಎಷ್ಟುಮಾಡಿದರೂ ಶಾಂತವಾಗಲೊಲ್ಲದು. ಸುಂದರಿ, ಹೀಗೆಬಾ. ನೀನು ನನ್ನ ಜೀವನಸರ್ವಸ್ವಳಾಗಿರುವೆ. ನನ್ನ ಹತ್ತಿರಬಂದು ಕುಳಿತುಕೊ. ನನ್ನ ಹೃದಯದಲ್ಲಿ ಹೇಗೆ ಗೊಂದಲವೆದ್ದಿದೆಯೆಂಬದನ್ನು ಪರೀಕ್ಷಿಸಿ ನೋಡು. ನಿನ್ನ ಈ ಕೋಮಲ

ಹಸ್ತಸ್ಪರ್ಶದಿಂದಲಾದರೂ ನನ್ನ ಹೃದಯವು, ಶಾಂತತೆಯನ್ನುಹೊಂದಲಿ.” ಎಂದು ಅಫಶಾನನು ವಿಕಾರವಶನಾಗಿ ಬಡಬಡಿಸಿದನು.

ಪನ್ನಾಮತಿಯು ಯಾವುದೋ ಒಂದು ಗಭೀರ ಉದ್ದೇಶವನ್ನಿಟ್ಟುಕೊಂಡು, ಅದರ ಸಾಧ್ಯಕ್ಕಾಗಿ ಈ ನಾಟಕವನ್ನು ಹೂಡಿದ್ದಳು. ಪ್ರಯತ್ನಪೂರ್ವಕವಾಗಿ ಅಫಶಾನನನ್ನು ಮರುಳುಗೊಳಿಸತೊಡಗಿದ್ದಳು. ಅವಳು ಮತ್ತೊಂದು ಸಮ್ಮೋಹನ ಕಟಾಕ್ಷವನ್ನು ಅಫಶಾನನ ಮೇಲೆಸೆದು, ಮದಿರಾಪಾತ್ರೆಯನ್ನು ತುಂಬಿ, ಅದನ್ನವನ ಮುಂದೆ ಹಿಡಿದು—“ಈ ಸಿರಾಜವು ಅತ್ಯುತ್ತಮವಾದುದು. ಇಂದೇ ಇಸ್ಪಹಾನದಿಂದ ಬಂದಿದೆ. ಈವರೆಗೆ ಸೇವಿಸಿದ ಮದ್ಯದಿಂದ ನಿನಗೆ ತುಸು ಅಮಲು ಬಂದಂತೆ ತೋರುತ್ತದೆ. ಇದು ಹೋಗುವದಕ್ಕಾಗಿ, ಈ ಸಾರೆಯ ಮದಿರೆಯಲ್ಲಿ ತುಸು ಗುಲಾಬವನ್ನು ಕೂಡಿಸಿಕೊಡುವೆನು. ಅಂದರೆ ನಿನ್ನ ಅಮಲಿಲ್ಲವೂ ಇಳಿದು ಹೋಗುವುದು; ಮನಸ್ಸಿಗೆ ಹೆಚ್ಚು ಸಮಾಧಾನವಾಗುವುದು,” ಎಂದು ಹೇಳಿದಳು. ತರುವಾಯ ಅವಳು ತನ್ನ ಕೈಯಲ್ಲಿಯ ಸುರೆಯಲ್ಲಿ ತುಸುಗುಲಾಬದ ನೀರನ್ನು ಕೂಡಿಸಿ, ಅದನ್ನು ಅಫಶಾನನ ಕೈಯಲ್ಲಿ ಕೊಟ್ಟಳು. ಅಫಶಾನನು ಅದನ್ನು ಕುಡಿದುಬಿಟ್ಟನು. ಇದರಿಂದ ಅವನಿಗೆ ನಿದ್ರೆಯು ಬಂದಂತಾಯಿತು. ಕಾರಣ ಅವನು ಕುಳಿತುಕೊಳ್ಳಲು ಸಮರ್ಥನಾಗದೆ, ಅಲ್ಲಿಯೇ ಉರುಳಿದನು.

ಹೀಗೆ ಅಫಶಾನನು ನಿಶ್ಚೇಷ್ಟನಾದುದನ್ನು ತಿಳಿದು, ಪನ್ನಾಮತಿಗೆ ಆನಂದವಾಯಿತು. ಅವಳು ಪ್ರಸನ್ನಮುಖಿಯಾಗಿ ಕಿಟಕಿಯ ಹತ್ತಿರ ಬಂದು ನಿಂತಳು. ಅವಳ ಎದೆ ಹಾರಹತ್ತಿತು. “ತನ್ನ ಕೆಲಸವು ಸಾಧ್ಯವಾಗಬಹುದೇ ಹೇಗೆ? ಏನಾದರೂ ವಿಪರೀತ ಪ್ರಸಂಗ ಬಂದರೆ ಹೇಗೆ?” ಇವೇ ಮೊದಲಾದ ವಿಚಾರಗಳುದಯಿಸಿ, ಅವಳನ್ನು ಚಿಂತಾಕುಲಳನ್ನಾಗಿ ಮಾಡಿದುವು. ಅವಳು ಮರ್ಮಭೇದಕವಾದ ದೀರ್ಘನಿಶ್ವಾಸಬಿಟ್ಟು— “ಖೋದಾ, ನಾನು ಕೈಕೊಂಡ ಕೆಲಸವು ಯಾವ ವಿಘ್ನವೂ ಇಲ್ಲದೆ, ಕಡೆಹಾಯುವಂತೆ ಸಹಾಯಕನಾಗು,” ಎಂದು ದೇವರನ್ನು ಬೇಡಿದಳು.

ಪನ್ನಾಮತಿಯು ಪುನಃ ಅಫಶಾನನ ಬಳಿಗೆ ಬಂದಳು. ಅಫಶಾನನು ಘೋರನಿದ್ರೆಯಲ್ಲಿ ಮುಳುಗಿಹೋಗಿದ್ದನು. ಪನ್ನಾಮತಿಯು ಇವನ ಇರವನ್ನು ಸೂಕ್ಷ್ಮರೀತಿಯಿಂದ ಪರೀಕ್ಷಿಸಿ ಸಮಾಧಾನಪಟ್ಟು—"ಇನ್ನು ಇವನಿಂದ ನನ್ನ ಕೆಲಸಕ್ಕೆ ವಿಘ್ನವಾಗುವಂತಿಲ್ಲ. ಈಗ ರಾತ್ರಿ ಬಹಳವಾದಂತಿದೆ. ಬೆಳಗಾಗಲಿಕ್ಕೆ ಸುಮಾರು ಆರು ತಾಸಿನ ಅವಕಾಶವಿರಬಹುದು. ಇಷ್ಟರಲ್ಲಿಯೇ ನಾನು ನನ್ನ ಕೆಲಸವನ್ನು ಕಡೆಹಾಯಿಸಿಕೊಳ್ಳಬೇಕು," ಎಂದು ಮನಸ್ಸಿನಲ್ಲಿ ಅಂದುಕೊಂಡಳು.

ತರುವಾಯ ಅವಳು ಸಾವಧಾನತೆಯಿಂದ ಅಫಶಾನನ ಜೇಬಿನಲ್ಲಿ ಕೈಹಾಕಿ, ಕಾರಾಗಾರದ ಕೀಲಿಯ ಕೈಯನ್ನು ಮೆಲ್ಲಗೆ ಹೊರಗೆ ತೆಗೆದಳು. ಅದನ್ನು ಉತ್ತಮರೀತಿಯಿಂದ ಪರೀಕ್ಷೆಮಾಡಿ, ಅದೇ ಸೆರೆಮನೆಯ ಬೀಗದಕೈಯೆಂಬುದನ್ನು ಮನಗಂಡಳು. ಆಮೇಲೆ ಅವಳು ನಾಲ್ಕೂಕಡೆಗೆ ಭಯಚಕಿತನೇತ್ರಳಾಗಿ ನೋಡಿ, ಆ ಬೀಗದಕೈಯನ್ನು ಪುನಃ ಅಫಶಾನನ ಜೇಬಿನಲ್ಲಿರಿಸುವುದಕ್ಕೆ ಹೋದಳು. ಆದರೆ ಏನು ತಿಳಿಯಿತೋ ಏನೋ! ಮುಂದಕ್ಕೆ ಹಾದ ಕೈಯನ್ನು ಹಿಂದಕ್ಕೆ ತೆಗೆದುಕೊಂಡಳು.

ಸೆರೆಮನೆಯ ಕೀಲಿಯ ಕೈಯನ್ನು ತೆಗೆದುಕೊಂಡು, ಪನ್ನಾಮತಿಯು ಪುನಃ ಕಿಟಕಿಯಹತ್ತಿರ ಹೋದಳು. ಕೋಣೆಯಲ್ಲಿ ಸುಗಂಧಪೂರ್ಣವಾದ ಎಣ್ಣೆಯಿಂದ ಕೂಡಿದ ದೀಪಗಳು ಉರಿಯುತಲಿದ್ದುವು. ಮಂದವಾದ ಗಾಳಿ ಕೋಣೆಯನ್ನು ಪ್ರವೇಶಿಸುತ್ತಿದ್ದಿತು. ಅದರಿಂದ ದೀಪಗಳು ಒಮ್ಮೊಮ್ಮೆ ಕಂಪಿತವೂ, ಒಮ್ಮೊಮ್ಮೆ ಶಾಂತವೂ ಆಗಿರುತ್ತಿದ್ದುವು. ಪನ್ನಾಮತಿಯು ಪುನಃ ಆ ಚಾವಿಯನ್ನು ನೋಡಿದಳು. ಅವಳ ಮನಸ್ಸಿಗೆ ಸಮಾಧಾನವಿರಲಿಲ್ಲ. ಕೈಗೊಂಡ ಕೆಲಸದ ವಿಷಯವಾಗಿ ಘೋರವಾದ ಚಿಂತೆಯು ಅವಳನ್ನಾವರಿಸಿತ್ತು. ಅವಳು ಅನೇಕವಾಗಿ ವಿಚಾರಮಾಡಿದಳು. ತಾನು ಮಾಡುತ್ತಿರುವ ಕಾರ್ಯವು ಸರಿಯಾದುದೇ ಹೇಗೆ? ಅದರಿಂದ ಯಾರಿಗೆ ಎಷ್ಟರ ಲಾಭವಾಗಬಹುದು? ಯಾರಿಗೆ ಹಾನಿಯಾಗಬಹುದು? ತಾನು ಯಾವರೀತಿಯಿಂದ ಸಂಕಟಕ್ಕೊಳಗಾಗಬಹುದು? ಇವೇ ಮೊದಲಾದ ಪ್ರಶ್ನೆಗಳು ಅವಳ ಮನಸ್ಸಿನಲ್ಲಿ ಉದ್ಭವಿಸಿ, ಅಲ್ಲಿಯೇ

ಅಳಿಸಿಹೋದುವು. ಅವಳು ಕೃತಸಂಕಲ್ಪದಿಂದ ಚ್ಯುತಳಾಗಲಿಲ್ಲ. ಏನೇ ಆಗಲಿ, ಕೈಕೊಂಡ ಕಾರ್ಯವನ್ನು ಮಾಡಿಯೇ ಮುಗಿಸಬೇಕೆಂದು ಭಾವಿಸಿದಳು. ಅದಕ್ಕಾಗಿ ಅವಳು—"ಮೆಹರಬಾನ, ಖೋದಾ! ಇಂದುರಾತ್ರಿಯಮಟ್ಟಿಗಾದರೂ ನನ್ನ ಹೃದಯದಲ್ಲಿ ಬಲವನ್ನುಂಟುಮಾಡು; ಪ್ರಾಣದಲ್ಲಿ ಶಕ್ತಿಯನ್ನುಂಟುಮಾಡು. ಇದರಿಂದ ನಾನು ನನ್ನ ಕೆಲಸವನ್ನು ಕೊನೆಗಾಣಿಸುವೆನು. ತರುವಾಯ ನನ್ನ ಈ ಕೆಲಸಕ್ಕಾಗಿ ನೀನು ಎಷ್ಟೇ ಕಷ್ಟತಮಶಿಕ್ಷೆಯನ್ನು ವಿಧಿಸಿದರೂ, ನಾನದನ್ನು ಸಂತೋಷದಿಂದ ಅನುಭವಿಸುವೆನು." ಎಂದು ದೇವರನ್ನು ಪ್ರಾರ್ಥಿಸಿಕೊಂಡಳು.

ದಾಸಿಯು ದಿನವೂ ಇದೇಕೋಣೆಯಲ್ಲಿ ಮಲಗುತ್ತಿದ್ದಳು; ಆದರೆ ಇಂದು ಬೇರೊಂದು ಕೋಣೆಯಲ್ಲಿ ತನ್ನ ಮಾರ್ಗಪ್ರತೀಕ್ಷೆ ಮಾಡುತ್ತ ಕುಳಿತುಕೊಳ್ಳುವಂತೆ ಪನ್ನಾಮತಿಯು ಅವಳಿಗೆ ಆಜ್ಞಾಪಿಸಿದ್ದಳು. ದಾಸಿಗೆ ನಿದ್ರೆಬಂದಿತ್ತು. ಆದರೂ ಒಡೆಯಳ ಮಾತನ್ನು ಮೀರಲಾರದೆ ಎಚ್ಚತ್ತು ಇರಬೇಕಾಯಿತು. ಪನ್ನಾಮತಿಯು ಇಷ್ಟುಹೊತ್ತಿನವರೆಗೆ ಯಾವಕೆಲಸ ಮಾಡುತ್ತಿರಬಹುದು? ತನ್ನನ್ನು ಎರಡನೆಯಕಡೆಗೆ ಕಳಿಸಿದ್ದೇಕೆ? ಇವೇ ಮೊದಲಾದ ವಿಚಾರಗಳು ದಾಸಿಯ ಮನಸ್ಸಿನಲ್ಲಿ ಬಂದುವು. ಆದರೆ ಅವುಗಳಿಗೆ ಸಮರ್ಪಕವಾದ ಉತ್ತರವನ್ನು ಕಂಡುಹಿಡಿಯಲು ಅವಳು ಸಮರ್ಥಳಾಗಲಿಲ್ಲ. ಹಿಂದುಗಡೆ ಒಡೆಯಳ ಮುಖದಿಂದ ತಿಳಿದುಕೊಳ್ಳಬೇಕೆಂದು ಭಾವಿಸಿದಳು. ಕುತೂಹಲವಶಳಾಗಿ, ಬಂದ ನಿದ್ರೆಯನ್ನು ತಡೆದು ಪನ್ನಾಮತಿಯ ಬರುವಿಕೆಯನ್ನೇ ಕಾಯ್ದು ಕುಳಿತಳು.

ಪನ್ನಾಮತಿಯು ದಾಸಿಯಿದ್ದ ಕೋಣೆಯಬಳಿಗೆಬಂದು, "ಮುನ್ನಾ" ಎಂದು ಮೃದುಸ್ವರದಿಂದ ಕರೆದಳು.

ಮುನ್ನೆಯು ಕೂಡಲೇ ಹೊರಗೆಬಂದು, "ಪನ್ನಾ, ಸುದ್ದಿಯೇನು?" ಎಂದಳು.

"ನನ್ನ ಔಷಧವು ನಾಟಿದೆ. ಅಫಜಾನನು ಘೋರನಿದ್ರೆಯಲ್ಲಿ ಮೈಮರೆತಿದ್ದಾನೆ. ಸೆರೆಮನೆಯ ಕೀಲಿಯಕೈ ನನ್ನ ಆಧೀನಕ್ಕೆ ಬಂದಿದೆ."

"ನೀನೇನನ್ನುವಿಯೋ ನನಗೆ ತಿಳಿಯದು. ಎಲ್ಲವನ್ನೂ ಸ್ಪಷ್ಟವಾಗಿ ಹೇಳು. ಕಾರಾಗಾರದ ಬೀಗದಕ್ಕೆ ತೆಗೆದುಕೊಂಡು ನೀನೇನುಮಾಡುವೆ?"

"ಆ ಮೊಗಲ-ಸೇನಾಪತಿಯನ್ನು ಸೆರೆಯಿಂದ ಬಿಡುಗಡೆ ಮಾಡುವೆನು."

"ಸಬಾಜನಂದಿನಿ, ನೀನೇನನ್ನುವೆ? ಇದು ನಿನಗೆ ಎಷ್ಟುಮಾತ್ರವೂ ಹಿತಕಾರಕವಾಗಲಿಕ್ಕಿಲ್ಲ. ಇದರಿಂದ ನೀನು ಸಂಕಟಕ್ಕೊಳಗಾಗುವುದಲ್ಲದೆ, ನಮ್ಮ ಈ ರಾಜ್ಯಕ್ಕೇ ಅಹಿತಮಾಡಿದಂತಾಗುವುದು. ಇಂತಹ ಕೆಲಸ ಮಾಡಬೇಡ."

"ನಾನು ಅನ್ಯಾಯದ ಕೆಲಸವನ್ನೆಂದೂ ಮಾಡುವುದಿಲ್ಲ. ಆ ಸೇನಾ ಪತಿಯನ್ನು ಹಿಡಿದುಕೊಟ್ಟಿದ್ದೇನೆ. ಅದರಿಂದ ಅವನನ್ನು ಬಿಡು ಗಡೆಮಾಡುವ ಅಧಿಕಾರವೂ ನನಗುಂಟು. ನನ್ನ ಸದಸದ್ವಿವೇಕಬುದ್ಧಿಯು ಈ ಕೆಲಸವನ್ನು ಸಮ್ಮತಿಸುತ್ತಿರುವುದು."

"ನೀನು ಈ ಕೆಲಸವನ್ನು ಹೇಗೆಮಾಡುವೆ? ಬರೇಬೀಗದಕ್ಕೆ ಯೊಂದು ದೊರೆತರೇನಾಯಿತು? ಕಾರಾಗಾರವನ್ನು ಇಬ್ಬರು ಪ್ರಹರಿಗಳು ಕಾಯುತ್ತಿದ್ದಾರೆ. ಅವರ ಕಣ್ಣು ಹೇಗೆ ತಪ್ಪಿಸುವೆ?"

"ಹಿಮ್ಮತಖಾನನು ಈ ಕೆಲಸಮಾಡುವುದಕ್ಕೆ ಒಪ್ಪಿಕೊಂಡಿದ್ದಾನೆ. ಅವನು ಒಬ್ಬ ಪ್ರಹರಿಯನ್ನು ಮಾದಕ ಪದಾರ್ಥಸೇವನೆಯಿಂದ ನಿಶ್ಚೇಷ್ಟಿತನಾಗುವಂತೆ ಮಾಡುವನಂತೆ. ಬೇರೊಬ್ಬನು ಅವನ ಸ್ನೇಹಿತ ನಾಗಿರುವನಂತೆ. ಕಾರಣ ಅವನನ್ನು ಹೇಗಾದರೂ ಹಾದಿಗೆತರುವೆನೆಂದು ಹಿಮ್ಮತಖಾನನು ಹೇಳಿದ್ದಾನೆ."

"ಒಂದುವೇಳೆ ನೀನು ಬಂದಿಯನ್ನು ಬಿಡುಗಡೆ ಮಾಡಿದೆಯೆಂದು ತಿಳಿದುಕೊ. ಇದರಿಂದ ಮುಂದೆ ಏನಾಗಬಹುದೆಂಬುದನ್ನು ಆಲೋಚಿ ಸಿರುವಿಯಾ? ಸುಮ್ಮನಿದ್ದರೆ ಅಫಶಾನನು ಮೃತ್ಯುವಿಗೊಳಗಾಗಬೇಕಾ ಗುವುದು. ಇಲ್ಲವಾದರೆ ನೀನು ಮಾಡಿದ ಈ ಕೆಲಸವನ್ನು ಬಹಿರಂಗ ಪಡಿಸಿ, ತಾನು ಪಾರಾಗಬೇಕಾಗುವುದು. ಅದರಿಂದ ನೀನು ಸಂಕಟಕ್ಕೊ ಳಗಾಗುವೆ."

"ಅಫಶಾನನು ನನ್ನನ್ನು ಅತೀವ ಪ್ರೀತಿಸುತ್ತಿರುವುದರಿಂದ, ಅವನು ನನಗೆ ಪ್ರತಿಕೂಲವಾದ ಸಂಗತಿಗಳನ್ನು ಎಂದೂ ಬಹಿರಂಗ ಪಡಿಸಲಾರನು."

"ಹಾಗಾದರೆ ನೀನು ಅವನು ಸಾಯಬೇಕೆಂದು ಇಚ್ಛಿಸುವಿಯೇನು? ಅವನ ಪ್ರೀತಿಗೆ ಇದೇ ಪ್ರತಿಫಲವೇ? ಎಂತಹ ಮಾತುಗಳನ್ನಾಡುತ್ತಿರುವೆ."

"ಪನ್ನಾಮತಿಯು ದೇಹದಲ್ಲಿ ಪ್ರಾಣವಿರುವವರೆಗೆ, ಅಫಶಾನನಿಗೆ ಅಪಾಯಮಾಡುವ ಶಕ್ತಿ ಯಾರಲ್ಲಿಯೂ ಇಲ್ಲ. ನಾನು ನಿಶ್ಚಿಂತಳಾಗಿ, ಅಫಶಾನನು ಸಾಯುವದನ್ನು ಸಂತೋಷದಿಂದ ನೋಡುತ್ತ ಕುಳಿತಿರುವೆ ನೆಂಬುದು ನಿನ್ನ ಭಾವನೆಯೆ?"

"ನನಗೆ ಏನೂ ತಿಳಿಯದು. ನಿನ್ನ ಮನಸ್ಸಿಗೆ ಬಂದಂತೆಮಾಡು. ಆದರೂ ಈ ಪ್ರಸಂಗದಲ್ಲಿ ನಾನು ನಿನಗೆ ಈ ಕೆಲಸವು ತಕ್ಕುದಲ್ಲವೆಂದು ಮಾತ್ರ ಸೂಚಿಸದಿರಲಾರೆನು; ಇದರಿಂದ ನೀನು ಸಂಕಟಕ್ಕೊಳಗಾಗುವೆ. ಈ ವಿಪತ್ತುಗಳು ನಿನಗೆ ಇತರರಿಂದ ಬಂದವುಗಳಲ್ಲ; ಇವನ್ನು ನೀನೇ ನಿನಗಾಗಿ ತಂದುಕೊಂಡಂತೆ ಆಗುವುದು. ನೀನು ಈ ಯಾವತ್ತೂ ಸಂಕಟಗಳಿಂದ ಹೇಗೆ ಪಾರಾಗುವೆಯೆಂಬುವದನ್ನು ತಿಳಿಯಲಾರದವಳಾಗಿದ್ದೇನೆ."

ಪನ್ನಾಮತಿಯು ಸ್ವಲ್ಪಕಾಲ ಆಲೋಚಿಸಿ—"ಸಖಿ, ಇಹಜಗತ್ತಿನಲ್ಲಿ ಮಾನವೀಜೀವಿತವು ಅತ್ಯಂತ ಅಸ್ಥಿರ. ಇಂದು ಇದ್ದವರು ನಾಳೆ ಇರುವರೆಂಬ ನಿಯಮವಿಲ್ಲ. ಹೀಗಿರುವಾಗ ನಾನು ಸಂಕಟಗಳಿಗೆ ಹೆದರಲೇ? ಮೇಲಾಗಿ ಮನುಷ್ಯರ ಕೈಯಲ್ಲಿ ಏನೂ ಇಲ್ಲ. ದೈವಪ್ರೇರಣೆಯಂತೆ ಮನುಷ್ಯರು ಪ್ರತಿಯೊಂದು ಕೆಲಸವನ್ನೂ ಮಾಡುತ್ತಾರೆ. ದೇವರ ಇಚ್ಛೆಗೆ ವಿರುದ್ಧವಾಗಿ ಕೆಲಸಮಾಡುವ ಶಕ್ತಿ ಮನುಷ್ಯರಲ್ಲಿಲ್ಲ. ಈ ಕೆಲಸವನ್ನು ನಾನು ಮಾಡುವೆನೆಂದೆನ್ನುವುದಕ್ಕಿಂತ, ದೇವರು ಮಾಡಿಸುವನೆಂಬುದು ಯೋಗ್ಯವಾದುದು. ನಾನು ಇದನ್ನು ಮಾಡಬೇಕು, ಇದನ್ನು ಮಾಡಬಾರದು, ಇದರಲ್ಲಿ ಲಾಭವಿಲ್ಲ, ಇದರಿಂದ ಸಂಕಟಕ್ಕೊಳಗಾಗುವೆನು, ಇವೇಮೊದಲಾದ ವಿಚಾರಗಳನ್ನು ಮಾಡುತ್ತ ಕುಳಿತುಕೊಳ್ಳುವುದರಲ್ಲಿ ಅರ್ಥವೇನು? ಕಾರಣ ನಾವು ಯಾವ ವಿಚಾರವನ್ನೂ ಮಾಡದೆ,

ದೇವರ ಪ್ರೇರಣೆಯಂತೆ ಕೆಲಸಮಾಡುತ್ತ ಹೋಗಬೇಕು. ವಿಪತ್ತನ್ನು ತರುವವನೂ ಅವನೇ. ಅದನ್ನು ಪರಿಹರಿಸುವವನೂ ಅವನೇ. ಈಗ ಹೆಚ್ಚಿಗೆ ಮಾತಾಡಲಿಕ್ಕೆ ಅವಕಾಶವಿಲ್ಲ. ಇನ್ನು ನಾವು ನಮ್ಮ ಕೆಲಸಕ್ಕೆ ತೊಡಗೋಣ." ಎಂದು ಹೇಳಿ, ತನ್ನಲ್ಲಿರುವದೊಂದು ಕೊಳಲನ್ನು ಹೊರಗೆ ತೆಗೆದು, ಮೆಲ್ಲನೆ ಊದಿದಳು. ಕೂಡಲೇ ಸಂಪೂರ್ಣವಾಗಿ ವಸ್ತ್ರಾವೃತವಾದೊಂದು ಛಾಯಾಮೂರ್ತಿಯು ಕೋಣೆಯ ಹೊರಭಾಗದಲ್ಲಿ ಕಾಣಿಸಿಕೊಂಡಿತು.

ತರುವಾಯ ಆ ಮೂರ್ತಿ ಕೋಣೆಯೊಳಗೆ ಬಂದಿತು. ಪನ್ನಾಮತಿಯು ಅದರ ಸಮೀಪಕ್ಕೆಹೋಗಿ, ಅದರ ಕಿವಿಯಲ್ಲಿ—"ಹಿಮ್ಮತಖಾ, ಅಫಶಾನನು ಹೆಚ್ಚಾಗಿ ಮದ್ಯಸೇವಿಸಿ, ನನ್ನ ಕೋಣೆಯಲ್ಲಿ ಎಚ್ಚರವಿಲ್ಲದೆ ಬಿದ್ದಿದ್ದಾನೆ. ಅವನ ದೇಹವನ್ನು ಅಂಗಳದಲ್ಲಿರಿಸಿಬಾ. ತರುವಾಯ ಮುಂದೆ ಮಾಡತಕ್ಕ ಕೆಲಸವನ್ನು ಹೇಳುವೆನು. ನನ್ನ ಜನನಿಯು ಸಾಯುವ ಮುಂದೆ, ನನ್ನನ್ನು ನಿನ್ನ ಕೈಯಲ್ಲಿ ಕೊಟ್ಟುಹೋದಳೆಂದು, ನೀನೇ ನನಗೆ ಅನೇಕ ಸಾರಿ ಹೇಳಿರುವೆ; ಮತ್ತು ನೀನು ನನ್ನನ್ನು ಇದುವರೆಗೆ ಮಗಳಂತೆ ಜೋಪಾನಮಾಡಿರುವೆ. ಇಂದು ನಾನು ನಿನಗೆ ಹೇಳುತ್ತಿರುವ ಕೆಲಸವು ಬಹಳ ಬಿಕ್ಕಟ್ಟಿನದು. ಇದರಿಂದ ನೀನು ಮುಂದೆ ವಿಪತ್ತಿಗೊಳಗಾಗುವ ಸಂಭವವುಂಟು. ಆದರೂ ನೀನು ನನಗಾಗಿ ಈ ಕೆಲಸಮಾಡುವೆಯೆಂದು ನಾನು ನಂಬಿದ್ದೇನೆ--ಕಾರಾಗಾರದ ವರ್ತಮಾನವು ಒಳಿತಾಗಿದೆಯೆ?" ಎಂದು ಪಿಸುಗುಟ್ಟಿದಳು. "ಎಲ್ಲವೂ ಸರಿಯಾಗಿದೆ. ಆಬಗ್ಗೆ ಆಲೋಚನೆಮಾಡಬೇಡಿ," ಎಂದು ಹೇಳಿ ಹಿಮ್ಮತಖಾನನು ಪನ್ನಾಮತಿಯ ಅಪ್ಪಣೆಯಂತೆ ಕೆಲಸಮಾಡುವುದಕ್ಕೆ ಹೊರಟುಹೋದನು.

ಹಿಮ್ಮತನು ಬೇರೊಬ್ಬ ವಿಶ್ವಾಸಪಾತ್ರನಾದ ಸೇವಕನನ್ನು ಕರೆದುಕೊಂಡು, ಪನ್ನಾಮತಿಯ ಕೋಣೆಯನ್ನು ಪ್ರವೇಶಿಸಿದನು. ಅಫಶಾನನು ಎಚ್ಚರವಿಲ್ಲದೆ ಬಿದ್ದಿದ್ದನು. ಇಬ್ಬರೂಕೂಡಿ ಅಫಶಾನನ ದೇಹವನ್ನು ಮೆಲ್ಲನೆ ಎತ್ತಿ, ಅದನ್ನು ಹೊತ್ತುಕೊಂಡುಬಂದು, ಅಂಗಳದಲ್ಲಿ ಶ್ವೇತಶಿಲೆಯಿಂದ ನಿರ್ಮಿತವಾದ ಒಂದು ಜಗುಲಿಯಮೇಲೆ ಇರಿಸಿದರು.

ಹಿಮ್ಮತಖಾನನು ಪುನಃ ಪನ್ನಾಮತಿಯ ಬಳಿಗೆಬಂದು—"ಅವ್ವಾ, ನೀವು ಹೇಳಿದಂತೆ ಮಾಡಿಬಂದೆನು. ಇನ್ನು ಎರಡನೆಯ ಅಪ್ಪಣೆ?" ಎಂದು ಕೇಳಿದನು.

"ಸೆರೆಮನೆಯ ಕಾವಲುಗಾರರ ವಿಷಯವಾಗಿ ಮಾಡತಕ್ಕುದನ್ನು ಮಾಡಿರುವೆಯಾ?"

"ಅವ್ವಾ, ಈ ಹಿಮ್ಮತನು ಹೇಳಿದಂತೆ ನಡೆಯುವುದಕ್ಕೆ ಎಂದೂ ತಪ್ಪುವವನಲ್ಲ. ನೀವು ಹೇಳಿದಂತೆ ಯಾವತ್ತು ವ್ಯವಸ್ಥೆ ಮಾಡಿದ್ದಾನೆ. ಒಬ್ಬನಿಗೆ ಗಾಂಜಿಯಿಂದ ಕೂಡಿದ ಷರಬತ್ತನ್ನು ಕುಡಿಸಿದ್ದಾನೆ. ಅವನು ಎಚ್ಚರವಿಲ್ಲದೆ ಬಿದ್ದುಕೊಂಡಿದಾನೆ. ಬೇರೊಬ್ಬನು ನಿಮ್ಮ ಸುವರ್ಣ ಮುದ್ರೆಯ ಚೀಲವನ್ನು ನೋಡಿದಕೂಡಲೇ ನಮ್ಮ ಕೆಲಸಕ್ಕೆ ಅನುಕೂಲ ನಾಗುವನು. ಇನ್ನು ತಡಮಾಡಬೇಡಿ. ಆಕಾಶದಲ್ಲಿ ಮೋಡಗವಿದು, ಮಳೆಯಾಗುವ ಲಕ್ಷಣಗಳೂ ತೋರುತ್ತಿವೆ."

ಪನ್ನಾಮತಿಯು ಕಿಟಕಿಯೊಳಗಿಂದ ಆಕಾಶದ ಕಡೆಗೆ ನೋಡಿದಳು. ಆಗಸವು ಮೇಘಾವೃತವಾಗಿತ್ತು. ಮಿಂಚು ಮಿಂಚುತಲಿತ್ತು. ಬಿರುಗಾಳಿ ಬೀಸುತಲಿತ್ತು. ಸ್ವಲ್ಪ ಸಮಯದೊಳಗಾಗಿಯೇ ದೊಡ್ಡ ಮಳೆಯಾಗುವುದೆಂದು ಭಾವಿಸಬಹುದಾಗಿತ್ತು.

ಪನ್ನಾಮತಿ ಬಂಗಾರದ ನಾಣ್ಯಗಳಿಂದ ತುಂಬಿದ್ದೊಂದು ಚೀಲವನ್ನು ಹಿಮ್ಮತನ ಕೈಯಲ್ಲಿ ಕೊಟ್ಟು "ನೀನು ಸೆರೆಮನೆಯ ಮಾರ್ಗವನ್ನು ಸ್ವಚ್ಛವಾಗಿರಿಸು. ನಾನು ಸ್ವಲ್ಪ ಹೊತ್ತಿನಲ್ಲಿಯೇ ಅಲ್ಲಿಗೆ ಬರುತ್ತೇನೆ," ಎಂದು ಹೇಳಿದಳು.

ಹಿಮ್ಮತಖಾನನು ಪನ್ನಾಮತಿಯ ಆದೇಶದಂತೆ ಕೆಲಸ ಮಾಡಲು ಹೊರಟುಹೋದನು. ಇವನು ಪನ್ನಾಮತಿಯನ್ನು ಚಿಕ್ಕಂದಿನಿಂದ ಸಂರಕ್ಷಿಸಿದವನು. ಅಲ್ಲದೆ ದುರ್ಗಾಧಿಪತಿಯ ಏಕಮಾತ್ರಪುತ್ರಿಯಾದ ಇವಳು ಮುಂದೆ, ಈ ರಾಜ್ಯದ ಬೇಗಮಳಾಗುವಳೆಂಬುದು ಇವನಿಗೆ ಗೊತ್ತಿದ್ದುದರಿಂದ, ಅವನು ಇವಳ ವಿಷಯವಾಗಿ ಭಕ್ತಿಪೂರ್ವಕವಾದ ಪ್ರೇಮವನ್ನು ವಹಿಸಿ ಆಕೆಯ ಅಪ್ಪಣೆಯನ್ನು ತಪ್ಪದೆ ಪಾಲಿಸುತ್ತಿದ್ದನು.

ಸಾಧಾರಣ ತರಗತಿಯ ಬಂದಿಗಳನ್ನಿರಿಸುವುದಕ್ಕೆ ದುರ್ಗದಲ್ಲಿ ಒಂದು ಸೆರೆಮನೆ ಇತ್ತು. ಆದರೆ ಮಿರಾನಶಹನು ಮೊಗಲ ಸೇನಾಪತಿಯನ್ನು ಈ ಸೆರೆಮನೆಯಲ್ಲಿ ಇರಿಸದೆ ತನ್ನ ಅರಮನೆಯಲ್ಲಿರುವದೊಂದು ಭದ್ರವಾದ ಕೋಣೆಯಲ್ಲಿ ಇರಿಸಿದ್ದನು. ಸಾಧಾರಣ ಜನರಿಗಾಗಿ ಇರುವ ಕಾರಾಗಾರವು ಬಹಳ ಕೆಟ್ಟದಾಗಿತ್ತು. ಇದು ಹೊಲಸಿನಿಂದ ಕೂಡಿದ್ದುದಲ್ಲದೆ, ಇದರಲ್ಲಿ ಬೆಳಕೂ ಸಾಕಾದಷ್ಟು ಇರಲಿಲ್ಲ. ಆದರೆ ಸೇನಾಪತಿಯು ಇರುವ ಸೆರೆಮನೆಯು ಹೀಗಿರಲಿಲ್ಲ. ಇದನ್ನು ನೋಡಲು ಮಿರಾನಶಹನು ಮೊಗಲ ಬಂದಿಯ ವಿಷಯವಾಗಿ ಕರುಣೆಯುಳ್ಳವನಾಗಿದ್ದನೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಇದಕ್ಕೆ ಕಾರಣವೂ ಇದ್ದಿತು. ಮಿರಾನಶಹನು ಮೊಗಲ ಬಂದಿಯ ಮುಖಚರ್ಯೆಯನ್ನು, ವೇಷಭೂಷಣಗಳನ್ನು ನೋಡಿ, ಇವನು ಸಾಮಾನ್ಯ ಮನುಷ್ಯನಾಗಿರದೆ, ಶ್ರೇಷ್ಠಕುಲದಲ್ಲಿ ಹುಟ್ಟಿದ ಗೌರವಾನ್ವಿತ ಸೇನಾಪತಿಯಾಗಿರಬಹುದೆಂದು ಭಾವಿಸಿದ್ದನು.

ಕಳೆದ ದಿನದ ಸಾಯಂಕಾಲದಲ್ಲಿ ಗುಪ್ತದರಬಾರಿನಲ್ಲಿ ಮೊಗಲ—ಬಂದಿಯ ವಿಚಾರಣೆಯಾಗಿತ್ತು. ಈ ದರಬಾರಿನಲ್ಲಿ ಮಿರಾನಶಹನೂ, ಇವನ ಐದುಮಂದಿ ಮುಖ್ಯ ಸರದಾರರೂ ಇದ್ದರು. ಮಿರಾನಶಹನು ಈ ಬಂದಿಗೆ ಪ್ರಾಣದಂಡನೆಯನ್ನು ವಿಧಿಸದೆ, ಸಾಮಾನ್ಯವಾದುದೊಂದು ಶಿಕ್ಷೆಯನ್ನು ವಿಧಿಸಬೇಕೆಂಬ ಇಚ್ಛೆಯನ್ನು ಪ್ರಕಟಮಾಡಿದ್ದನು. ಆದರೆ ಸರದಾರರು ಇದಕ್ಕೆ ಒಪ್ಪಲಿಲ್ಲ. ಅವರು ಏಕಮತರಾಗಿ, ಕೈದಿಗೆ ಪ್ರಾಣದಂಡನೆವಿಧಿಸಬೇಕೆಂದು ಹಟಹಿಡಿದರು. ಮಿರಾನಶಹನು ನಿರುಪಾಯನಾಗಿ ಇದಕ್ಕೆ ಒಪ್ಪಿಕೊಳ್ಳಬೇಕಾಯಿತು. ಈ ಸಮಯದಲ್ಲಿ ಅವನ ಮನಸ್ಸಿನಲ್ಲಿ ಇವನು ಯಾರಾಗಿರಬಹುದೆಂಬ ವಿಚಾರವು ಉದ್ಭವಿಸಿತು. ತನ್ನ ಮಗಳು ತೋರಿಸಿದ ಉಂಗುರದ ಸ್ಮರಣೆ ಅವನಿಗಾಯಿತು. ಆದರಿಂದವನು ಈ ಬಂದಿಯು ಶಾಹಾಜಾದಾ ದಾನಿಯಲನಾಗಿರಬಹುವೇ ಹೇಗೆ? ಎಂದು ಸಂದೇಹಿಸಿದನು. "ಇವನು ಒಂದು ವೇಳೆ ಶಹಾಜಾದಾನಾಗಿದ್ದರೆ ಮುಂದೆಮಾಡತಕ್ಕುದೇನು? ದಾನಿಯಲನನ್ನು ನಾವು ಈ ರೀತಿಕೊಂದೆವಾದರೆ ಅಕಬರನು ಸುಮ್ಮನಿರುವನೇ? ಅವನು ಕ್ರೋಧವಶನಾಗಿ ಈ ಅಘಜಾಯಿ ದುರ್ಗ

ವನ್ನು ನೆಲಸಮಮಾಡುವುದರಲ್ಲಿ ಸಂದೇಹವಿಲ್ಲ. ಆದರೆ ಇವನು ದಾನಿಯಲನಲ್ಲವೆಂದೂ ಹೇಳಲಿಕ್ಕೆಬರುವಂತಿದೆ; ಯಾಕಂದರೆ ಪನ್ನಾಮತಿಯು ದಾನಿಯಲನನ್ನು ಬಲ್ಲಳು. ಒಂದುವೇಳೆ ಇವನೇ ಶಾಹಾಜಾದನಾಗಿರುವಲ್ಲಿ, ಅವಳು ನನಗೆ ತಿಳಿಸದೆ ಇರುತ್ತಿರಲಿಲ್ಲ. ಮತ್ತೊಂದು ಮಾತೇನೆಂದರೆ ಸಾಮ್ರಾಟನ ಮಗನು ಈತರದ ಅವಿವೇಕತೆಯ ಕಾರ್ಯವನ್ನು ಕೈಕೊಳ್ಳುವ ಸಂಭವವಿರಲಿಲ್ಲ. ಇದು ಶತ್ರುಗಳ ದುರ್ಗ. ಈ ದುರ್ಗದಲ್ಲಿ ಏಕಾಕಿಯಾಗಿ ಬರಲಿಕ್ಕೆ ಯಾವಶತ್ರುವಿಗಾದರೂ ಧೈರ್ಯವಾದೀತೇ? ಆದರೂ ಇವನು ಯಾವಸಂಕೋಚವೂ ಇಲ್ಲದೆ, ಕೋಟೆಯಲ್ಲಿ ಪ್ರವೇಶಿಸುವುದಕ್ಕೆ ಯತ್ನಮಾಡಿದನು. ಇದನ್ನು ನೋಡುತ್ತಿರಲು ಇವನು ಶಹಾಜಾದನಾಗಿರದೆ, ಯಾವನೋ ಒಬ್ಬ ಉನ್ಮಾದಗ್ರಸ್ತ ಮೊಗಲಸೈನಿಕನಾಗಿರಬಹುದೆಂದು ತರ್ಕಿಸಬಹುದಾಗಿದೆ. ವಿಚಾರಣೆಯ ಕಾಲದಲ್ಲಿ ನಾನು ಇವನ ಪರಿಚಯುವನ್ನು ಕೇಳಿದೆನು; ಆದರೆ ಇವನು ಯಾವ ಉತ್ತರವನ್ನೂ ಕೊಡಲಿಲ್ಲ. ಅದರಿಂದ ಸಿಟ್ಟಿಗೆದ್ದ ಸರದಾರರು ಇವನಿಗೆ ಮರಣದಂಡನೆ ವಿಧಿಸಿದರು. ಆದರೂ ನಾಳೆ ಮುಂಜಾನೆ ಇವನಿಗೆ ಮತ್ತೊಮ್ಮೆ ಪ್ರಶ್ನೆಮಾಡಿ, ಏನೂ ಹೇಳದಿದ್ದರೆ, ಶಿಕ್ಷೆಯನ್ನು ಅಮಲಿನಲ್ಲಿ ತರಬೇಕೆಂದು ಗೊತ್ತಾಗಿದೆ. ಅದರಂತೆ ನಾಳೆ ಪ್ರಶ್ನೆಮಾಡುವೆನು. ಒಂದುವೇಳೆ ಇವನು ಅದಕ್ಕೆ ಸರಿಯಾದ ಉತ್ತರಕೊಟ್ಟರೆ, ಶಿಕ್ಷೆಯನ್ನು ತಗ್ಗಿಸಬಹುದಾಗಿದೆ. ಇವನು ನಿಜವಾಗಿಯೂ ದಾನಿಯಲನಾಗಿದ್ದರೆ, ನಾವಿವನಿಗೆ ಮರಣದಂಡನೆಯನ್ನು ವಿಧಿಸುವದು ತರವಲ್ಲ. ಇದರಿಂದ ನಾನೂ, ನನ್ನ ಪ್ರಜೆಗಳೂ ಘೋರಸಂಕಟಕ್ಕೊಳಗಾಗಬೇಕಾಗುವುದು.” ಮಿರಾನಶಹನು ಈ ಮೇರೆಗೆ ಆಲೋಚಿಸಿ, ಬಂದಿಯ ವ್ಯವಸ್ಥೆಯನ್ನು ಸರಿಯಾಗಿಡಿಸಿದನು. ಬಂದಿಯ ರಕ್ಷಣೆಯ ಭಾರವನ್ನು ಸಾಮಾನ್ಯ ಮನುಷ್ಯನ ಕೈಯಲ್ಲಿ ಕೊಡದೆ, ಮುಖ್ಯ ಸೇನಾಪತಿಯಾದ ಅಫಶಾನನಿಗೆ ಒಪ್ಪಿಸಿದನು.

ತರುವಾಯ ಮಿರಾನಶಹನು ಸೆರೆಸಿಕ್ಕ ಹತ್ತುಜನ ಮೊಗಲಸೈನಿಕರ ಬಳಿಗೆಹೋಗಿ ಅವರನ್ನು ಬಹುವಿಧವಾಗಿ ಪ್ರಶ್ನಿಸಿದನು; ಆದರೆ ಅವರು ಇವನ ಯಾವ ಪ್ರಶ್ನೆಗೂ ಉತ್ತರಕೊಡಲಿಲ್ಲ. ಅವರನ್ನು ಬೇಕಾದಷ್ಟು

ಹೆದರಿಸಿದನು. ಆದರೂ ಅವರು ತಮ್ಮ ರಹಸ್ಯವನ್ನು ಪ್ರಕಟಮಾಡಲಿಲ್ಲ; ಅದರಿಂದ ಮಿರಾನಶಹನು ನಿರಾಶನಾಗಿ ತನ್ನ ಮಲಗುವ ಕೋಣೆಗೆ ಹೊರಟುಹೋದನು.

ದಿನವೂ ಮಲಗುವ ಮುಂದೆ, ಮಿರಾನಶಹನು ಮಗಳ ದರ್ಶನ ತೆಗೆದುಕೊಳ್ಳುತ್ತಿದ್ದನು. ಆದರೆ ಇಂದು ಅವನು ಬಹಳ ಬಳಲಿದವನಾಗಿದ್ದನು. ರಾತ್ರಿಯೂ ಬಹಳವಾಗಿತ್ತು. ಅದರಿಂದವನಿಗೆ ವಿಶ್ರಾಂತಿಯು ಅತ್ಯಾವಶ್ಯಕವೆನಿಸಿತು. ಅವನು ಬೇರೆಕಡೆಗೆಹೋಗದೆ, ಹಾಸುಗೆಯಮೇಲೆ ಬಿದ್ದುಕೊಂಡನು. ಇದರಿಂದ ಪನ್ನಾಮತಿಯ ಸಂಕಲ್ಪಸಿದ್ಧಿಗೆ ಅನುಕೂಲವಾಯಿತು.

# ಆರನೆಯ ಪರಿಚ್ಛೇದ.

## ಶಹಾಜಾದನ ಬಿಡುಗಡೆ.

ಮಧ್ಯರಾತ್ರಿಯು ಮೀರಿದೆ. ನಾಲ್ಕುಕಡೆಯಲ್ಲಿ ಶಾಂತತೆ ಪಸರಿಸಿದೆ. ಅರಮನೆಯಲ್ಲಿರುವದೊಂದು ಕೋಣೆ. ಇದರಲ್ಲಿ ಒಂದು ಹಳೆಮಂಚ; ಅದರಮೇಲೆ ಶುಭ್ರವರ್ಣದ ಹಾಸುಗೆ. ಈ ಹಾಸುಗೆಯಮೇಲೆ ಒಬ್ಬ ಕೈದಿ ಕುಳಿತುಕೊಂಡು, ಆಲೋಚನೆಮಾಡುತ್ತಿದ್ದಾನೆ.

ಸಮೀಪದಲ್ಲಿಯೇ ಖಾದ್ಯಪದಾರ್ಥಗಳಿಂದ ತುಂಬಿದ ಪಾತ್ರೆ. ಇದರಲ್ಲಿಯ ಪದಾರ್ಥಗಳು ಉತ್ತಮ ತರಗತಿಯವು. ರಾಜೋಚಿತ ಖಾದ್ಯಪೇಯ ಪದಾರ್ಥಗಳು. ಆದರೂ ಕೈದಿಯು ಇವುಗಳನ್ನು ಮುಟ್ಟಿರಲಿಲ್ಲ. ಯಾಕಂದರೆ ಶತ್ರುಗಳು ಈ ಪದಾರ್ಥಗಳಲ್ಲಿ ವಿಷವನ್ನು ಕೂಡಿಸಿ, ತಂದಿರಿಸಿರಬಹುದೆಂದು ಅವನು ಭಯಪಟ್ಟಿದ್ದನು.

ಆಕಾಶದಲ್ಲಿ ಮೇಘಗರ್ಜನೆಯಾಯಿತು. ಕೈದಿಯು ಗೋಡೆಯ ಮೇಲ್ಭಾಗದಲ್ಲಿರುವದೊಂದುಕಿಟಕಿಯಲ್ಲಿ ನೋಡಿದನು. ಹೊರಗೆ ಕತ್ತಲೆ

ದಟ್ಟವಾಗಿ ಕವಿದಿತ್ತು; ಏನೂ ಕಾಣಿಸುವಂತಿರಲಿಲ್ಲ. ಮೇಲಿಂದಮೇಲೆ ಮಿಂಚುತ್ತಿರುವ ಮಿಂಚಿನ ಪ್ರಕಾಶದಿಂದ ಅತ್ಯಲ್ಪ ಕಾಲದವರೆಗೆ ಬಾಹ್ಯ ಸೃಷ್ಟಿಯನ್ನು ನೋಡಬಹುದಾಗಿತ್ತು. ಗಾಳಿಯ 'ಸೊಯ್' ಎಂಬ ಸಪ್ಪಳವು ಕೇಳಬರುತ್ತಿತ್ತು. ಸಣ್ಣ ಮಳೆಯೂ ಆಗುತಲಿತ್ತು.

ಬಂದಿಯು ಎದ್ದುನಿಂತು ಸುತ್ತಲೂ ನೋಡಿದನು. ಅವನ ಆ ಬಾಡಿದ ಮುಖದಲ್ಲಿ ತುಸುನಗೆಯು ಮಿನುಗತೊಡಗಿತು. ಅವನು ತನ್ನಲ್ಲಿಯೇ ಆಲೋಚಿಸತೊಡಗಿದನು—"ಈ ಸೆರೆಮನೆಯಿಂದ ಓಡಿಹೋಗುವುದಕ್ಕೆ ಇದು ಒಳ್ಳೆಸಮಯ. ದೇವರು ನನಗೆ ಸಹಾಯಕನಾದರೆ ಆದೀತು. ಈ ಕಿಟಕಿಯ ಎರಡು ಸಲಾಕಿಗಳನ್ನು ನಾನು ಅನಾಯಾಸವಾಗಿ ಕೀಳಬಹುದಾಗಿದೆ. ಈ ಸಮಯದಲ್ಲಿ ನಾನು ಹೊರಬೀಳುವೆನಾದರೆ, ನನ್ನನ್ನು ಹಿಡಿಯಲಿಕ್ಕೆ ಯಾರೂ ಬರಲಾರರು. ಆದರೆ ನನ್ನ ಈ ಕೆಲಸವು ಸರಿಯಾದುದಾಗಬಹುದೇ? ನಾನು ದಿಲ್ಲಿಯ ಬಾದಶಹನ ಮಗನು. ಸದ್ಯಕ್ಕೆ ಸಂಕಟಕ್ಕೊಳಗಾಗಿರುವುದು ನಿಜ. ಆದರೂ ನಾನು ಹೀನಕೆಲಸವನ್ನು ಮಾಡಬಾರದು. ನಾನು ಕಳ್ಳನಂತೆ, ಈ ಸೆರೆಮನೆಯಿಂದ ಪಾರಾಗಿ ಹೋಗಲು ಯತ್ನಿಸುವದು ಯೋಗ್ಯವಾಗಲಾರದು. ಏನೇ ಆಗಲಿ, ಬಂದುದನ್ನು ಅನುಭವಿಸಲೇ ಬೇಕು. ದೇವರು ನನಗೆ ಈ ಸಂಕಟವನ್ನುಂಟುಮಾಡಿದಾನೆ. ಅಂದಬಳಿಕ ಈ ವಿಪತ್ತಿನಿಂದ ನನ್ನನ್ನು ಪಾರುಮಾಡುವವನೂ ಅವನೇ. ನಾನು ಹೀಗೆ ಹೀನ ವಿಚಾರಗಳನ್ನು ಮಾಡತೊಡಗುವುದು ಯುಕ್ತವಾದುದಲ್ಲ."

ಈ ವೇಳೆಯಲ್ಲಿ ಯಾರೋ ಕಾರಾಗಾರದ ಬಾಗಿಲನ್ನು ತೆರೆಯುತ್ತಿರುವ ಸಪ್ಪಳ ಕೇಳಬಂದಿತು. ಬಂದಿಯು ಚಮಕಿತನಾಗಿ ದೂರ ಸರಿದು ನಿಂತು ಆಲೋಚಿಸತೊಡಗಿದನು—"ಇಂಥ ಅಪರಾತ್ರಿಯಲ್ಲಿ ಈ ಸೆರೆಮನೆಯ ಬಾಗಿಲನ್ನು ಯಾರು ತೆಗೆಯುತ್ತಿರಬಹುದು? ಅವರ ಉದ್ದೇಶವೇನಿರಬಹುದು? ಅವರು ನನ್ನನ್ನು ಗುಪ್ತರೀತಿಯಿಂದ ಕೊಲ್ಲುವುದಕ್ಕೆ ಬಂದಿರಬಹುದೇ? ಕಠೋರರಾದ ಈ ಪಠಾಣರು ಆಚರಿಸದ ನೀಚಕಾರ್ಯಗಳಿಲ್ಲ. ಇವರು ಎಂತಹ ಹೀನತಮಕೆಲಸಗಳನ್ನೂ ಮಾಡುವುದಕ್ಕೆ ಹೇಸುವವ

ರಲ್ಲ. ಮುಖ್ಯವಾಗಿ ನನ್ನದೇ ತಪ್ಪು. ನಾನು ಏಕಾಂಗಿಯಾಗಿ ದುರ್ಗವನ್ನು ಪ್ರವೇಶಿಸಲು ಯತ್ನಿಸದಿದ್ದರೆ ಈ ಪ್ರಸಂಗವೆಲ್ಲಿ ಬರುತ್ತಿತ್ತು? ಆ ಅಪರಾಧದ ಪ್ರಾಯಶ್ಚಿತ್ತವನ್ನನುಭವಿಸುವ ಪ್ರಸಂಗವು ಈಗ ಬಂದಿದೆ. ಬಂದುದನ್ನು ಅನುಭವಿಸಿಯೇ ತೀರಬೇಕು. ಒಲ್ಲೆನೆಂದರೆ ಬಿಡದು. ಆದರೆ ಈ ಸಮಯದಲ್ಲಿ ನನ್ನ ಬಳಿಯಲ್ಲಿ ಒಂದು ಆಯುಧವಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಅದರಿಂದ ಸುಯೋಗದೊರೆತಲ್ಲಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬಹುದಾಗಿತ್ತು. ಆದರೆ ನನ್ನ ಬಳಿಯಲ್ಲಿ ಒಂದು ಸಣ್ಣ ಚೂರಿಯೂ ಕೂಡ ಇಲ್ಲ. ಈ ಪ್ರಸಂಗದಲ್ಲಿ ನಾನು ಮಾಡುವುದೇನು."

ಸೆರೆಮನೆಯ ಬಾಗಿಲು ತೆರೆಯಿತು. ಯಾವತ್ತು ಅವಯವಗಳನ್ನು ಕಪ್ಪುಬಣ್ಣದ ಆವರಣದಿಂದ ಮುಚ್ಚಿಕೊಂಡಿದ್ದ ಒಂದು ವ್ಯಕ್ತಿ ಮೆಲ್ಲನೆ ನಡೆದುಬಂದು, ಶಹಾಜಾದನ ಮುಂದುಗಡೆ ನಿಂತುಕೊಂಡಿತು.

ಶಹಾಜಾದನು ವಿಸ್ಮಯದಿಂದ—"ನೀನು ಯಾರು? ಕೊಲೆಗಡಕ! ಗುಪ್ತರೀತಿಯಿಂದ ನನ್ನನ್ನು ಕೊಲ್ಲುವುದಕ್ಕಾಗಿ ಬಂದಿರುವೆಯಾ?" ಎಂದನು.

ಆಗಂತುಕ ವ್ಯಕ್ತಿಯು ಯಾವ ಮಾತನ್ನೂ ಆಡಲಿಲ್ಲ. ಎದುರಿನಲ್ಲಿ ಸುಮ್ಮನೆ ನಿಂತುಕೊಂಡಿತು. ಅದರ ಮುಖವೂ ಕೂಡ, ಕಪ್ಪುವಸ್ತ್ರದಿಂದ ಆಚ್ಛಾದಿತವಾಗಿತ್ತು. ಅದರಿಂದದು ಹೆಣ್ಣೋ, ಗಂಡೋ ಎಂಬುದನ್ನು ತಿಳಿಯಲಿಕ್ಕೆ ಮಾರ್ಗವಿರಲಿಲ್ಲ.

"ನೀನು ಬಂದ ಕೆಲಸವನ್ನು ಮಾಡಿಕೊಂಡು ಹೋಗು. ನಿನ್ನ ಕೆಲಸಕ್ಕೆ ಎಷ್ಟುಮಾತ್ರವೂ ವಿಘ್ನಮಾಡುವುದಿಲ್ಲ. ನಾನು ನನ್ನ ಬುದ್ಧಿದೋಷದಿಂದ ಕೆಟ್ಟಕೆಲಸವನ್ನು ಮಾಡಿ, ಹೀಗೆ ಬಂದಿಯಾಗಿದ್ದೇನೆ. ಅದರ ಪ್ರಾಯಶ್ಚಿತ್ತವನ್ನು ಅನುಭವಿಸಲೇಬೇಕು. ಮೇಲಾಗಿ ನನ್ನ ಬಳಿಯಲ್ಲಿ ನಿನಗೆ ವಿಘ್ನವನ್ನುಂಟುಮಾಡುವ ಯಾವ ಶಕ್ತಿಯೂ ಇಲ್ಲ." ಎಂದು ದಾನಿಯಲನು ಪುನಃ ಹೇಳಿದನು.

ಆಗಂತುಕ ವ್ಯಕ್ತಿಯು ತನ್ನ ಮುಖದ ಹೊದಿಕೆಯನ್ನು ತೆಗೆಯಿತು. ಕಾರಾಗಾರದಲ್ಲಿ ಒಂದು ದೀಪವು ಉರಿಯುತಲಿತ್ತು. ಆದರೆ ಅದರ ಪ್ರಕಾಶವು ಅಷ್ಟೊಂದಿಲ್ಲ. ಸುಮ್ಮನೆ ಮಿನುಗುತ್ತಿದ್ದಿತು.

ಶಹಾಜಾದನು ಅತ್ಯಾಶ್ಚರ್ಯದಿಂದ—"ನೀನು ಯಾರು? ನೀನು ಯಾರು?" ಎಂದು ಕೇಳಿದನು.

ಆಗಂತುಕವ್ಯಕ್ತಿಯು ತನ್ನ ಮೈಮೇಲಿನ ಕಪ್ಪುವಸ್ತ್ರದ ಹೊದಿಕೆಯನ್ನು ತೆಗೆದು, ಅದನ್ನು ಒತ್ತಟ್ಟಿಗಿಟ್ಟು, ದೀಪದ ಸಮೀಪದಲ್ಲಿ ಬಂದು ನಿಂತು—"ಶಹಾಜಾದಾ, ನೀನು ನನ್ನನ್ನು ಗುರ್ತಿಸಲಾರೆಯಾ?" ಎಂದು ಕೇಳಿತು.

ದಾನಿಯಲನು ವಿಸ್ಮಯಾಕುಲದೃಷ್ಟಿಯಿಂದ ಆ ವ್ಯಕ್ತಿಯನ್ನು ಸ್ವಲ್ಪ ಹೊತ್ತು ನಿರೀಕ್ಷಿಸಿ,—"ಇದೇನು ಪನ್ನಾಮತಿ! ನೀನು! ನನ್ನನ್ನು ಕೊಲ್ಲುವುದಕ್ಕೆ ಬಂದಿರುವಿಯಾ? ಒಳಿತಾಯಿತು ಬಾ. ನಾನು ನಿನ್ನ ಕೌಶಲದಿಂದಲೇ ಇಂದು ಬಂಧಿಯಾಗಿದ್ದೇನೆ, ನಿನ್ನ ಕೈಯಿಂದಲೇ ಮರಣಹೊಂದಬೇಕೆಂಬ ಇಚ್ಛೆ ನನಗಿದೆ. ನೀನು ಪಠಾಣರಮಣಿ. ಮುಯ್ಯನ್ನು ತೀರಿಸಿಕೊಳ್ಳುವದಕ್ಕೆ ಎಂಥ ಕ್ರೂರಕೆಲಸವನ್ನಾದರೂ ಮಾಡಬಲ್ಲೆ. ಯಾವ ಸಂಕೋಚವೂ ಇಲ್ಲದೆ, ನೀನು ನಿನ್ನ ಕೆಲಸವನ್ನು ಕಡೆಹಾಯಿಸು. ನಾನು ನಿನಗೆ ಯಾವ ತೊಂದರೆಯನ್ನೂ ಕೊಡುವುದಿಲ್ಲ." ಎಂದು ಹೇಳಿದನು.

"ಶಹಾಜಾದಾ, ಹೆಚ್ಚಾಗಿ ಮಾತಾಡುವ ಸಮಯವಿದಲ್ಲ. ನಾನು ನಿನ್ನ ವಿಷಯವಾಗಿ ಯಾವ ಅನ್ಯಾಯವನ್ನಾಚರಿಸಿರುವೆನೆಂಬುದನ್ನು ಬಲ್ಲೆನು; ಮತ್ತು ಅದಕ್ಕೆ ಏನುಮಾಡಿ, ಬರತಕ್ಕ ಪಾಪವನ್ನು ತಪ್ಪಿಸಿಕೊಳ್ಳಬೇಕೆಂಬುದನ್ನೂ ಬಲ್ಲೆನು. ನಾನು ಯಾವವಿಚಾರವನ್ನೂ ಮಾಡದೆ ನಿನ್ನನ್ನು ಹಿಡಿದುಕೊಟ್ಟೆನು. ಇದೊಂದು ನನ್ನ ಅನ್ಯಾಯದಕೆಲಸವಾಯಿತು. ಈಗ ನಾನು ನಿನ್ನನ್ನು ಈ ಸೆರೆಮನೆಯಿಂದ ಬಿಡುಗಡೆಮಾಡುವುದಕ್ಕೆ ಬಂದಿದ್ದೇನೆ," ಎಂದು ಪನ್ನಾಮತಿಯು ಹೇಳಿದಳು.

"ಪನ್ನಾಮತಿ, ಇದರಲ್ಲಿ ನಿನ್ನ ತಪ್ಪು ಏನೂ ಇಲ್ಲ. ನಾನು ಬುದ್ಧಿಪೂರ್ವಕವಾಗಿ ಶತ್ರುಗಳ ರಹಸ್ಯವನ್ನರಿತುಕೊಳ್ಳುವುದಕ್ಕೆ ಇಲ್ಲಿಗೆ ಬಂದಿದ್ದೆ. ಆಗ ನಿನ್ನ ಕೈಯಲ್ಲಿ ಸಿಕ್ಕೆನು. ಶತ್ರುಗಳ ವಿಷಯವಾಗಿ ಕಠೋರವಾದ

ಆಚರಣೆಯನ್ನು ಆಚರಿಸುವುದು ಎಲ್ಲರಿಗೂ ಸ್ವಾಭಾವಿಕವಾದುದು. ಅವರಲ್ಲಿಯೂ ಗುಡ್ಡುಗಾಡು ಪ್ರದೇಶದಲ್ಲಿ ಬಳೆದ ಪಠಾಣರು ಈ ಕೆಲಸದಲ್ಲಿ ಹೆಚ್ಚು ಮುಂದಾಳುಗಳು."

"ನೀನು ಹೇಳುವುದು ಸತ್ಯವಾಗಿದ್ದರೂ, ನಾನು ಅಪರಾಧಿನಿಯಾಗಿರುವುದರಲ್ಲಿ ಸಂದೇಹವಿಲ್ಲ. ನೀನು ದುರ್ಗಪ್ರವೇಶದ ಮಾರ್ಗವನ್ನರಿತಿರಲಿಲ್ಲ. ನಾನೇ ಇದನ್ನು ನಿನಗೆ ತೋರಿಸಿಕೊಟ್ಟೆನು; ಮತ್ತು ನಿನ್ನನ್ನು ಮೋಸಗೊಳಿಸಿ, ನೀನು ಇಲ್ಲಿಯವರೆಗೆ ಬರುವಂತೆ ಮಾಡಿದೆನು. ನೀನು ನನ್ನ ಮೋಸವನ್ನರಿಯದೆ ಇಲ್ಲಿಗೆ ಬಂದೆ. ಒಂದುವೇಳೆ ನೀನು ಬುದ್ಧಿವಂತನಾಗಿ ಇಲ್ಲಿಗೆ ಬಾರದೇಹೋಗಿದ್ದರೆ, ಈ ವಿಪತ್ತನ್ನು ಹೊಂದುತ್ತಿರಲಿಲ್ಲ. ಒಂದುದಿನ ರಾತ್ರಿಯಲ್ಲಿ ನೀನು ನಿನ್ನ ಶಿಬಿರದಲ್ಲಿ ಕುಳಿತುಕೊಂಡಾಗ, ಒಬ್ಬ ಅಡವಿಯ ಹುಡುಗಿ ನಿನ್ನ ಬಿಡಾರಕ್ಕೆ ಬಂದಿದ್ದಳು. ನಿನಗೆ ಈ ಸಂಗತಿ ಸ್ಮರಣೆಯಿದೆಯೇ?"

"ಆ ಸಂಗತಿಗೂ ನಿನಗೂ ಸಂಬಂಧವೇನು?"

"ಸಂಬಂಧವಿಲ್ಲದಿಲ್ಲ. ನಾನೇ ಆ ಅಡವಿಯ ಹುಡುಗಿ. ಆ ವೇಷವನ್ನು ಹಾಕಿಕೊಂಡು ನಿನ್ನ ಬಳಿಗೆ ಬಂದಿದ್ದೆನು."

"ದುರ್ಗಾಧಿಪತಿಯ ಮಗಳಾದ ನೀನು, ಆ ಉನ್ಮಾದಿನಿಯ ವೇಷಹಾಕಿಕೊಂಡು ಬಂದಿದ್ದೆಯಾ? ಇದನ್ನು ನಂಬಲಾರೆನು," ಎಂದು ವಿಸ್ಮಯದಿಂದ ದಾನಿಯಲನಂದನು.

"ಅಹುದು. ನಾನೇ ಆ ವೇಷದಿಂದ ನಿನ್ನ ಶಿಬಿರಕ್ಕೆ ಬಂದಿದ್ದೆ. ಇದಕ್ಕೆ ನನ್ನ ಬಳಿಯಲ್ಲಿ ಪ್ರಮಾಣವಿದೆ. ನೀನದನ್ನು ನೋಡಲಿಚ್ಛಿಸುವೆಯಾ?"

ಹೀಗೆಹೇಳಿ ಪನ್ನಾಮತಿಯು ತನ್ನಲ್ಲಿರುವ ಉಂಗುರವನ್ನು ತೆಗೆದು, ಅದನ್ನು ದಾನಿಯಲನ ಮುಂದೆ ಹಿಡಿದು—"ರಾಜಪುತ್ರ, ಈ ಉಂಗುರವನ್ನು ನೋಡು. ಇದು ಯಾರದೆಂಬುದನ್ನು ಗುರುತಿಸಬಲ್ಲೆಯಾ?" ಎಂದು ಕೇಳಿದಳು.

ಶಹಾಜಾದನು ಆ ಉಂಗುರವು ತನ್ನದೆಂಬುದನ್ನು ಮನಗಂಡನು. ಇದನ್ನು ತಾನು ಉನ್ಮಾದಿನಿಯೆಂತಿರುವ ಒಬ್ಬ ಅಡವಿಯ ಹುಡುಗಿಗೆ ಉಪಹಾರರೂಪವಾಗಿ ಕೊಟ್ಟಿದ್ದನೆಂಬದನ್ನು ಸ್ಮರಿಸಿಕೊಂಡನು.

ಶಹಾಜಾದನು ಕುತೂಹಲದಿಂದ—"ನೀನು ಹೀಗೆ ಛದ್ಮವೇಷದಿಂದ ನನ್ನ ಸಿಬಿರಕ್ಕೆ ಏಕೆ ಬಂದಿದ್ದೆ? ಇದರಲ್ಲಿ ನಿನ್ನ ಉದ್ದೇಶವೇನಿದ್ದಿತು?" ಎಂದು ಕೇಳಿದನು.

"ನಿಮ್ಮ ಸೈನ್ಯವೆಷ್ಟು? ನಿಮ್ಮ ಯುದ್ಧೋಪಯೋಗೀಸಾಮಾನುಗಳೆಷ್ಟು? ಇವನ್ನು ಸ್ವತಃ ನೋಡುವುದಕ್ಕಾಗಿ ನಾನು ಹಾಗೆ ಬರಬೇಕಾಯಿತು."

"ಆ ವೇಳೆಯಲ್ಲಿ ನಿನ್ನ ವೇಷವು ಹೊರಬಿದ್ದು, ನೀನು ನನ್ನ ಕೈಯಲ್ಲಿ ಸಿಕ್ಕಿದ್ದರೆ?"

"ಹಿಡಿಯುವುದಕ್ಕೆ ನಿನಗೆ ಬೇಡವೆಂದವರಾರು? ಹಿಡಿಯಬೇಕಾಗಿತ್ತು. ಈ ಪನ್ನಾಮುತಿಯನ್ನು ಹಿಡಿದುಹಾಕುವ ಸಾಮರ್ಥ್ಯವು ಯಾರಿಗೂ ಇಲ್ಲವೆಂಬ ಆತ್ಮವಿಶ್ವಾಸವೆನಗಿದೆ."

"ಈ ರಮಣಿಯು ನಿಶ್ಚಯವಾಗಿ ಶಕ್ತಿಶಾಲಿನಿಯೂ, ಚತುರಳೂ ಆಗಿರುವುದರಲ್ಲಿ ಸಂದೇಹವಿಲ್ಲ. ಒಂದು ವೇಳೆ ನನಗೆ ಇಂಥ ರಮಣಿಯ ಸಹಾಯವು ದೊರೆತಿದ್ದರೆ ಎಷ್ಟೋ ಒಳಿತಾಗುತಿತ್ತಲ್ಲ!" ಎಂದು ದಾಸಿಯುಲನು ಮನಸ್ಸಿನಲ್ಲಿಯೇ ಭಾವಿಸಿದನು.

ಶಹಾಜಾದನು ವಿಚಾರಮಗ್ನನಾಗಿರುವುದನ್ನು ತಿಳಿದು ಪನ್ನಾಮುತಿ—"ರಾಜಕುಮಾರ, ಹೀಗೆ ಮಾತಾಡುತ್ತ ಕುಳಿತುಕೊಳ್ಳುವುದಕ್ಕೆ ನನಗೆ ಸಮಯವಿಲ್ಲ. ನಾನು ನನ್ನ ಜೀವವನ್ನು ವಿಪತ್ತಿನಲ್ಲಿ ಕೆಡವಿ, ನಿನ್ನನ್ನು ಬಂಧಮುಕ್ತನನ್ನಾಗಿ ಮಾಡುವುದಕ್ಕೆ ಬಂದಿದ್ದೇನೆ. ಈಗ ನೀನು ಯಾವ ಮಾತನ್ನೂ ಆಡದೆ, ನನ್ನೊಡನೆ ಬಂದುಬಿಡು," ಎಂದು ಹೇಳಿದಳು.

"ಹೀಗೆ ನೀನು ನನ್ನನ್ನು ಬಿಡುಗಡೆ ಮಾಡುವುದರಲ್ಲಿ ನಿನ್ನ ಉದ್ದೇಶವೇನು?"

"ನಾನು ನಿನ್ನನ್ನು ಮೋಸಗೊಳಿಸಿ, ನೀನು ಇಲ್ಲಿಗೆ ಬರುವಂತೆ ಮಾಡಿದೆನು. ಇದೊಂದು ನನ್ನ ಅನ್ಯಾಯದ ಕೆಲಸ. ಇದರಿಂದ ನನಗೆ ಬರತಕ್ಕ ಪಾಪವನ್ನು ಕಳೆದುಕೊಳ್ಳುವುದಕ್ಕಾಗಿ, ನಿನ್ನನ್ನು ಇಲ್ಲಿಂದ ಪಾರು ಮಾಡಬೇಕಾಗಿದೆ. ಮೇಲಾಗಿ ನಾನು ಒಂದು ದಿವಸ ನಿನ್ನ ಆತಿಥ್ಯವನ್ನು ಸ್ವೀಕರಿಸಿದ್ದೇನೆ. ಆ ಪ್ರಸಂಗದಲ್ಲಿ ನೀನು ನನ್ನೊಡನೆ ಬಹಳ ಸರಳತನದಿಂದ ವರ್ತಿಸಿದೆ. ನಿನ್ನ ವಿಷಯವಾಗಿ ನನಗೆ ಪೂಜ್ಯಬುದ್ಧಿಯುಂಟಾಗಿದೆ. ಇನ್ನು ಹೆಚ್ಚಿಗೆ ಮಾತಾಡಿ ಉಪಯೋಗವಿಲ್ಲ. ಹೊರಡುವುದಕ್ಕೆ ಸಿದ್ಧನಾಗು. ಕಾವಲುಗಾರರು ಧನದಾಶೆಯಿಂದ ನನ್ನ ಅಂಕಿತರಾಗಿದ್ದಾರೆ. ಅವರು ನಿನಗೆ ತಡೆಮಾಡಲಾರರು. ಹೊರಗೆ ಕುದುರೆ ಸಿದ್ಧವಾಗಿದೆ. ಮಾರ್ಗ ತೋರಿಸುವುದಕ್ಕಾಗಿ ಒಬ್ಬ ಸೇವಕನೂ ಇದ್ದಾನೆ. ನೀನು ಹೊರಬೀಳುವುದೊಂದೇ ತಡ. ನಿನ್ನನ್ನು ನನ್ನ ಸೇವಕನು ಸುಖರೂಪವಾಗಿ ನಿನ್ನ ಶಿಬಿರಕ್ಕೆ ಸೇರಿಸುವನು. ಇನ್ನು ವಿಚಾರಮಾಡುತ್ತ ಕುಳಿತುಕೊಳ್ಳಬೇಡ. ಇಬ್ಬರೂ ಅನರ್ಥಕ್ಕೊಳಗಾಗಬೇಕಾಗುವುದು."

ಶಹಾಜಾದನು ವಿಸ್ಮಿತನೇತ್ರನಾಗಿ, ಪನ್ನಾಮತಿಯ ಮುಖ ನೋಡಿ,— "ನಬಾಬ ನಂದಿನಿ, ನೀನು ನನ್ನ ವಿಷಯದಲ್ಲಿ ತೋರಿಸುತ್ತಿರುವ ಈ ದಯೆಯಿಂದ ನಾನು ಪ್ರೀತನಾಗಿದ್ದೇನೆ. ಇದಕ್ಕಾಗಿ ನಾನು ನಿನ್ನ ಆಭಾರ ಮನ್ನಿಸುವೆನು. ನಿನ್ನ ಈ ವ್ಯವಹಾರದಿಂದ ಪರ್ವತಾಂತರ್ಗತವಾದ ಪಾಷಾಣ ಹೃದಯರ ರಾಜ್ಯದಲ್ಲಿಯೂ ಕೂಡ ಗುಣಗ್ರಾಹಿಗಳೂ, ಉದಾರಹೃದಯರೂ ಇರುವರೆಂಬುದನ್ನು ಮನಗಂಡೆನು. ಈಗ ನಾನು ನಿನ್ನ ಇಚ್ಛೆಯನ್ನು ಪೂರ್ಣಮಾಡಲಾರೆನು; ಈ ಸ್ಥಳವನ್ನು ಬಿಟ್ಟುಹೋಗುವ ಮನಸ್ಸು ನನಗಿಲ್ಲ."

"ಅದೇಕೆ?"

"ಪ್ರಚಂಡ ಪರಾಕ್ರಮಿಗಳೂ ಹಿಂದುಸ್ಥಾನದ ಏಕಛತ್ರಾಧಿಪತಿಗಳೂ ಆದ ಅಕಬರ ಬಾದಶಹರವರ ಮಗನಾಗಿ, ಒಬ್ಬ ರಮಣಿಯ ಸಹಾಯಗೊಂಡು ಕಾರಾಗಾರದಿಂದ ಪಾರಾಗಿ ಹೋಗುವುದು ಲಾಂಛನಾಸ್ಪದವಾದ ಸಂಗತಿಯಲ್ಲವೇ? ಈ ಕಲಂಕವು ನನಗೆ ಮೃತ್ಯುವಿಗಿಂತಲೂ ಹೆಚ್ಚಿನದೆಂದು ತೋರುತ್ತಿದೆ."

"ರಾಜಕುಮಾರ, ನೀನು ನಿನಗೊದಗತಕ್ಕ ಮುಂದಿನ ಅವಸ್ಥೆಯನ್ನು ಅರಿಯೆ. ಆದಕ್ಕಾಗಿ ಹೀಗೆ ಮಾತಾಡುತ್ತಿರುವೆ. ಕಠೋರ ಹೃದಯುರಾದ ಈ ಪಠಾಣರು ನಿನಗೆ ಮರಣದಂಡನೆ ವಿಧಿಸಿದ್ದಾರೆ. ನಾಳೆ ಮುಂಜಾವಿನಲ್ಲಿಯೇ ನಿನ್ನನ್ನು ಆಳವಾದ ತೆಗ್ಗಿನಲ್ಲಿ ಹುಗಿದುಬಿಡುವರು."

"ಉದಾರ ಹೃದಯಳೆ, ನಾನು ಸೇನಾಪತಿಯಾಗಿ ಯುದ್ಧಮಾಡಲು ಇಲ್ಲಿಗೆ ಬಂದಿದ್ದೇನೆ. ಹೀಗಿರುವಲ್ಲಿ ಮೃತ್ಯುವಿನ ಭೀತಿ ನನಗೆತ್ತಣದು? ನಾನು ಮರಣವನ್ನು ಅತಿಕ್ಷುದ್ರವೆಂದು ಭಾವಿಸುತ್ತಿರುವೆನು. ಈ ಶಿಕ್ಷೆಯನ್ನು ಸಂತೋಷದಿಂದ ಸಹಿಸಿಕೊಳ್ಳುವೆನು; ಆದರೆ ಇದರಿಂದ ನಿಮ್ಮ ಈ ಪಠಾಣರ ರಾಜ್ಯಕ್ಕೆ ಒಳಿತಾಗದೆಂಬುದನ್ನು ಮರೆಯದಿರು. ನನ್ನ ಒಂದು ಹನಿ ರಕ್ತವು ಈ ಭೂಮಿಯಮೇಲೆ ಬೀಳುವುದಾದರೆ, ಅದರಿಂದ ಪ್ರಚಂಡವಾದ ದಾವಾನಲವು ಹುಟ್ಟುವುದು. ಅದರಿಂದ ನಿಮ್ಮ ತಂದೆಯ ರಾಜ್ಯವು ನಾಶವಾಗುವುದು; ಪಠಾಣ ಸರದಾರರು ಭಸ್ಮೀಭೂತರಾಗುವರು; ಈ ಉನ್ನತವಾದ ಪರ್ವತವು ನಿಶ್ಚಯವಾಗಿಯೂ ಸ್ಮಶಾನದಂತೆ ಸಮಭೂಮಿಯಾಗಿ ಪರಿಣಮಿಸುವುದು."

"ರಾಜಪುತ್ರ, ನಾನು ಇವೆರಡನ್ನೂ ಆಗಗೊಡುವುದಿಲ್ಲ. ನಿನ್ನನ್ನು ಪಾರುಮಾಡುವೆನು. ನನ್ನ ದೇಶವನ್ನು ರಕ್ಷಿಸುವೆನು. ಇನ್ನು ಹೊರಡು. ಬೆಳಗಾಗುವುದಕ್ಕೆ ಇನ್ನು ಸ್ವಲ್ಪ ಅವಧಿಯದೆ. ಅಷ್ಟರಲ್ಲಿಯೇ ನನ್ನ ಕೆಲಸವು ಮುಗಿಯಬೇಕಾಗಿದೆ."

ದಾಸಿಯಲನು ಕೆಲವು ಹೊತ್ತಿನವರೆಗೆ ಏನೋ ಆಲೋಚಿಸಿ, ತರುವಾಯ—"ದಯಾಶಾಲಿನಿ, ನಾನು ನಿನ್ನ ಮಾತಿಗೆ ಒಪ್ಪಲಾರೆನು. ಈ ಮೇರೆಗೆ ಹೀನರೀತಿಯಿಂದ ಪಲಾಯನಮಾಡುವುದಕ್ಕೆ ನಾನು ಎಷ್ಟು ಮಾತ್ರವೂ ಸಮ್ಮತಿಸುವುದಿಲ್ಲ. ನನ್ನ ಹವ್ಯಾಸವನ್ನು ಬಿಟ್ಟುಬಿಡು. ನೀನು ಈ ವರೆಗೆ ತೋರಿಸಿದ ಉದಾರ ವ್ಯವಹಾರಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ನಿನ್ನ ಈ ಉಪಕಾರವನ್ನು ನಾನೆಂದೂ ಮರೆಯುವುದಿಲ್ಲ. ಒಂದು ವೇಳೆ ನಾನು ಪಠಾಣರ ಶಿಕ್ಷೆಗೊಳಗಾಗಿ ಮೃತ್ಯುವನ್ನುಹೊಂದಿದರೆ, ಸ್ವರ್ಗದಲ್ಲಿಯಾದರೂ ನಿನ್ನ ಈ ಉಪಕಾರವನ್ನು ಸ್ಮರಿಸುವೆನು." ಎಂದು ಹೇಳಿದನು.

"ರಾಜಕುಮಾರ, ಹೀಗೆ ನೀನು ಹಟಹಿಡಿದು, ಕಾಲಕ್ಷೇಪಮಾಡುತ್ತ ಕುಳಿತುಕೊಂಡರೆ, ಯಾರಿಗೂ ಸುಖವಿಲ್ಲ. ನೀನೂ ಕೆಟ್ಟುಹೋಗುವೆ. ನಮ್ಮನ್ನೂ ಕೆಡಿಸುವೆ. ಹೀಗೆಮಾಡುವುದರಿಂದ ಲಾಭವೇನು? ಅಫಶಾನನು ಈಗ ನನ್ನನ್ನು ನೋಡಿದ್ದಾದರೆ, ನಾನು ಘೋರವಿಪತ್ತಿಗೊಳಗಾಗುವೆನು."

ಇದರಿಂದಲೂ ದಾನಿಯಲನು ಕದಲಲಿಲ್ಲ. ಪನ್ನಾಮತಿಯು ಇನ್ನು ಹೀಗೆ ಮಾತಾಡುತ್ತ ಹೋಗುವದು ಸರಿಯಲ್ಲವೆಂದು ಭಾವಿಸಿ, ತನ್ನ ವಸ್ತ್ರದಲ್ಲಿ ಮುಚ್ಚಿಟ್ಟುಕೊಂಡುಬಂದಿದ್ದ ಹರಿತವಾದ ಚೂರಿಯನ್ನು ಹೊರತೆಗೆದು—"ರಾಜಪುತ್ರ, ನೀನು ನನ್ನ ಮಾತಿನಂತೆ, ಈ ಸೆರೆಮನೆಯನ್ನು ಬಿಟ್ಟು ಹೊರಡುವುದಕ್ಕೆ ಒಡಂಬಡದಿದ್ದರೆ, ನಾನು ನಿನ್ನ ಸಮಕ್ಷದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವೆನು. ಇದು ನಿನಗೆ ಇಷ್ಟವಾಗಿದೆಯೋ?" ಎಂದು ಕೇಳಿದಳು.

ಆಗ ಪನ್ನಾಮತಿಯ ಕಣ್ಣುಗಳು ಬೆಂಕಿಯಂತೆ ಉರಿಯುತಲಿದ್ದುವು. ಅವಳ ಮುಖದಲ್ಲಿ ದೃಢಪ್ರತಿಜ್ಞೆಯು ಹೊರಹೊಮ್ಮಿ ಕಾಣುತ್ತಿತ್ತು. ಅವಳು ಆ ಹದವಾದ ಆಯುಧವನ್ನು ಎದೆಯಲ್ಲಿ ಚುಚ್ಚಿಕೊಳ್ಳುವುದಕ್ಕಾಗಿ ಯತ್ನಿಸಿದಳು. ಈ ಸಮಯದಲ್ಲಿ ದಾನಿಯಲನು ಅವಳ ಕೈಯನ್ನು ಹಿಡಿದನು. ಪನ್ನಾಮತಿಯು ನಿರುಪಾಯಳಾಗಿ ನಿಂತುಕೊಂಡಳು. ಶಹಾಜಾದನು—"ನಬಾಬನಂದಿನಿ, ದೇವ ಸೃಷ್ಟಿಯಲ್ಲಿ ನೀನು ಅಪೂರ್ವ ರಹಸ್ಯಮಯಿಯಾದ ಹೆಂಗಸಾಗಿರುವೆ! ಒಂದುದಿನ ನೀನು ಉನ್ಮಾದಿನಿಯಾದ ಅಡವಿಯ ರಮಣಿಯಾಗಿ ನನ್ನ ಶಿಬಿರವನ್ನು ಹೊಕ್ಕು, ನನ್ನನ್ನು ಮೋಸಪಡಿಸಿದೆ. ಈ ದುರ್ಗವನ್ನು ಪ್ರವೇಶಿಸುವ ಗುಪ್ತಮಾರ್ಗವನ್ನು ತೋರಿಸಿಕೊಟ್ಟೆ. ನಾನು ನಿನ್ನ ಮೋಸವನ್ನರಿಯದೆ ಏಕಾಂಗಿಯಾಗಿ ಇಲ್ಲಿಗೆ ಬಂದೆನು. ಆಗ ನೀನೇ ನನ್ನನ್ನು ಹಿಡಿದುಕೊಟ್ಟು, ಬಂದಿಯನ್ನಾಗಿ ಮಾಡಿಸಿದೆ. ಈಗ ನೀನೇ ನನ್ನನ್ನು ಬಂಧಮುಕ್ತನನ್ನಾಗಿ ಮಾಡುವುದಕ್ಕೆ ಪ್ರಯತ್ನಿಸುತ್ತಿರುವೆ. ಪರಸ್ಪರವಿರೋಧವಾದ ನಿನ್ನೀ ಕಾರ್ಯಗಳನ್ನು ನೋಡಿ, ನನಗೇನೂ ತಿಳಿಯದಾಗಿದೆ. ನಿನ್ನ ರಹಸ್ಯವೇ ಯಾರಿಗೂ ಗೊತ್ತಾಗದು.

ಈಗ ನೀನು ಹೇಳಿದಂತೆ ನಡೆಯುವದಕ್ಕೆ ಒಪ್ಪುತ್ತೇನೆ. ಹೇಳು, ಈಗ ನಾನೆಲ್ಲಿಗೆ ಹೋಗಲಿ?" ಎಂದು ಅಂದನು.

ದಾನಿಯಲನ ಈ ಮಾತುಗಳನ್ನು ಕೇಳಿ, ಪನ್ನಾಮತಿಯ ಮುಖವು ಪ್ರಫುಲ್ಲವಾಯಿತು. ಅವಳು—"ರಾಜಪುತ್ರ, ಈಗ ನೀನು ಯಾವ ಮಾತನ್ನೂ ಆಡದೆ ನನ್ನೊಡನೆ ಬಂದುಬಿಡು." ಎಂದು ಹೇಳಿದಳು.

ಪನ್ನಾಮತಿಯು ಮುಂದೆ ನಡೆದಳು. ದಾನಿಯಲನು ಅವಳನ್ನು ಅನುಸರಿಸಿದನು. ಇಬ್ಬರೂ ಕಾರಾಗಾರದಿಂದ ಹೊರಬಿದ್ದು, ಗುಪ್ತಮಾರ್ಗವಾಗಿ ದುರ್ಗದಿಂದ ಪಾರಾಗಿ, ಬಳಿಯಲ್ಲಿರುವ ಒಂದು ಉದ್ಯಾನವನ್ನು ಪ್ರವೇಶಿಸಿದರು. ಹಿಮ್ಮತಖಾನನು ಇವರ ಹಿಂದೆ ಬಂದಿದ್ದನು.

ಈ ಉದ್ಯಾನಕ್ಕೆ ನಾಲ್ಕುಕಡೆಯಲ್ಲಿ ಎತ್ತರವಾದ ಕಲ್ಲಿನಗೋಡೆಗಳಿದ್ದುವು. ಪಶ್ಚಿಮದಿಕ್ಕಿನಗೋಡೆಯಲ್ಲಿ ಪಾರಾಗಿಹೋಗುವುದಕ್ಕೆ ಒಂದು ಕಬ್ಬಿಣದ ಬಾಗಿಲಿದ್ದಿತು. ಪನ್ನಾಮತಿ ತನ್ನಲ್ಲಿರುವ ಬೀಗದಕೈಯಿಂದ ಈ ಬಾಗಿಲನ್ನು ತೆರೆದು, ಹಿಮ್ಮತಖಾನನನ್ನು ಕುರಿತು—"ಕುದುರೆ ಎಲ್ಲಿದೆ?" ಎಂದಳು.

"ಪರ್ವತದ ಕೆಳಭಾಗದಲ್ಲಿ ಸಿದ್ಧವಾಗಿ ನಿಂತಿದೆ."

"ಎರಡು ಕುದುರೆಗಳಿರುವುವಷ್ಟೇ?"

"ಅಹುದು, ತಮ್ಮ ಅಪ್ಪಣೆಯಂತೆ ಎರಡು ಕುದುರೆಗಳನ್ನು ಸಿದ್ಧವಾಗಿರಿಸಿ ಬಂದಿದ್ದೇನೆ."

"ನೀನು ಈ ಶಹಾಜಾದನನ್ನು ಕರೆದುಕೊಂಡುಹೋಗಿ, ಇವರನ್ನು ಇವರ ಶಿಬಿರಕ್ಕೆ ಸುರಕ್ಷಿತವಾಗಿ ಮುಟ್ಟಿಸಿ, ಬೆಳಗಾಗುವುದರೊಳಗಾಗಿ ಈ ಸುದ್ದಿಯನ್ನು ನನಗೆ ಹೇಳು."

ಹಿಮ್ಮತಖಾನನು ಸಲಾಂಮಾಡಿ—"ಅವ್ವಾ, ನೀವು ಹೇಳಿದಂತೆ ವರ್ತಿಸುವೆನು," ಎಂದುಹೇಳಿದನು. ಶಹಾಜಾದನು ಪನ್ನಾಮತಿಯ ಮುಖದ ಕಡೆಗೆನೋಡಿದನು. ತನ್ನನ್ನು ಪಾರುಮಾಡಿದುದರಿಂದ ಅವಳಿಗೆ ಸಂತೋಷವಾಗಿದೆಯೆಂಬದನ್ನು ಅವಳ ಮುಖಭಾವದಿಂದ ತಿಳಿದನು. ಅವನು ಕೃತಜ್ಞನಾಗಿ—"ನಬಾಬನಂದಿನಿ, ನಿನ್ನ ಉಪಕಾರವು ಬಹಳ

ನಾಯಿತು. ಇದನ್ನು ತೀರಿಸಲು ನಾನು ಸಮರ್ಥನಿರುವೆನೋ ಇಲ್ಲವೋ ಎಂಬುದನ್ನು ಹೇಳಲಾರೆ; ಆದರೆ ಇದನ್ನೆಂದಿಗೂ ಮರೆಯೆನೆಂಬುದನ್ನು ಮಾತ್ರ ಹೇಳದಿರಲಾರೆ. ”

ಪನ್ನಾಮತಿಯು ಹಾಸ್ಯಮುಖಿಯಾಗಿ—“ ರಾಜಕುಮಾರ, ಇದರಲ್ಲಿ ನಾನು ಮಾಡಿದ ಅಂಥ ಶತಕೃತ್ಯವೇನೂ ಇಲ್ಲ. ಅಂದಮೇಲೆ ನನ್ನ ಉಪಕಾರವೆಲ್ಲಿಯದು? ಈಗ ನಾನೊಂದು ಕೆಲಸಮಾಡುವುದಕ್ಕೆ ಮರೆತಿದ್ದೇನೆ,” ಎಂದು ಹೇಳಿ, ತನ್ನ ಬೆರಳಲ್ಲಿರುವ ಉಂಗುರವನ್ನು ಕಡೆಗೆತೆಗೆದು—“ ನಾನು ಈ ಉಂಗುರವನ್ನು ನಿನ್ನಕಡೆಯಿಂದ ದಾನವಾಗಿ ತೆಗೆದುಕೊಂಡಿದ್ದೆನು. ನಾನು ಯಾವ ಉದ್ದೇಶದಿಂದ ಇದನ್ನು ತೆಗೆದುಕೊಂಡಿದ್ದೆನೋ ಆ ಉದ್ದೇಶವು ಸಾಧ್ಯವಾದಂತಾಯಿತು. ಇನ್ನು ಇದರ ಉಪಯೋಗವು ನನಗಿಲ್ಲ. ನಾನು ಈ ಉಂಗುರವನ್ನು ನಿನ್ನಕಡೆಯಿಂದ ತೆಗೆದುಕೊಳ್ಳುವಮುಂದೆ, ಇದು ನನಗೆ ಬೇಡವಾದರೆ ಪುನಃ ನಿನಗೆ ತಂದುಕೊಡುವೆನೆಂದುಹೇಳಿದ್ದುದನ್ನು ನೀನು ಮರೆತಿರಲಿಕ್ಕಿಲ್ಲ. ಈಗ ಈ ಉಂಗುರವು ನನ್ನ ಮನಸ್ಸಿಗೆ ಬರಲೊಲ್ಲದು; ಯಾಕಂದರೆ ಇದರಿಂದಲೇ ಇಷ್ಟೊಂದು ವಿಪತ್ತುಗಳು ಘಟಿಸಿದವು. ಈಗ ನಾನಿದನ್ನು ನಿನಗೆ ತಿರುಗಿಕೊಡುವೆನು ನೀನಿದನ್ನು ತೆಗೆದುಕೊಂಡುಹೋಗು, ” ಎಂದುಹೇಳಿ, ಅದನ್ನವನಕೈಯಲ್ಲಿ ಕೊಡಹೋದಳು.

ಶಹಾಜಾದನು ಅದನ್ನು ತನ್ನಕೈಯಲ್ಲಿ ತೆಗೆದುಕೊಂಡು—“ ಪನ್ನಾಬೇಗಮ, ನಾನು ನಿನ್ನಯಾವತ್ತು ಅಪ್ಪಣೆಗಳನ್ನು ಪಾಲಿಸಿದೆನು. ಹೀಗಿರಲು ನೀನು ಹಿಂದುಸ್ತಾನದ ಸಾರ್ವಭೌಮರಾದ ಅಕಬರಶಹರವರ ಮಗನ ಒಂದು ಸಾಮಾನ್ಯಮಾತನ್ನು ನಡೆಸಲಾರೆಯಾ?” ಎಂದು ಕೇಳಿದನು.

ಪನ್ನಾಮತಿಯು ಶಹಾಜಾದನ ಮನಸ್ಸಿನಭಾವವನ್ನು ತಿಳಿಯದೆ “ ರಾಜಕುಮಾರ, ನಡೆಸದೇ ಏನು? ನಿನ್ನ ಅಪ್ಪಣೆಯನ್ನು ನಾನು ತಪ್ಪದೆ ಪಾಲಿಸುವೆನು. ಹೇಳೋಣಾಗಲಿ, ” ಎಂದಳು.

ದಾನಿಯಲನು ನಗೆಮೊಗದಿಂದ—“ ನಬಾಬನಂದಿನಿ, ಆದಿವಸ ರಾತ್ರಿಯಲ್ಲಿ ನಾನು ಈ ಉಂಗುರವನ್ನು ನಿನ್ನ ಬೆರಳಿನಲ್ಲಿರಿಸುವದಕ್ಕೆ ಯತ್ನಿಸಿದೆನು; ಆದರೆ ನೀನು ಅದಕ್ಕೆ ಸಮ್ಮತಿಸಲಿಲ್ಲ. ಈಗ ನಾನು ಇದನ್ನು

ಸ್ವತಃ ನಿನ್ನ ಬೆರಳಿನಲ್ಲಿಡಬೇಕೆಂಬ ಇಚ್ಛೆಯುಳ್ಳವನಾಗಿದ್ದೇನೆ. ನೀನು ಇದನ್ನು ಸಮ್ಮತಿಸಿ, ನನ್ನ ಸ್ಮೃತಿ ಚಿಹ್ನರೂಪವಾಗಿ ಇದನ್ನು ಗ್ರಹಿಸುವೆಯಾದರೆ, ನನಗೆ ಆನಂದವಾಗುವುದು. ಒಂದುವೇಳೆ ಮುಂದೆ ನೀನು ನನ್ನನ್ನು ನೋಡುವ ಪ್ರಸಂಗಬಂದರೆ, ಇದನ್ನು ನನ್ನ ಸೇವಕರಿಗೆ ತೋರಿಸು. ಅವರು ಮರ್ಯಾದೆಪೂರ್ವಕವಾಗಿ ನಿನ್ನನ್ನು ನನ್ನಬಳಿಗೆಕರೆದು ಕೊಂಡುಬರುವರು. ಇತ್ತಬಾ, ನಾನಿದನ್ನು ನನ್ನ ಕೃತಜ್ಞತೆಯಸಾಮಾನ್ಯ ಚಿಹ್ನಸ್ವರೂಪವಾಗಿ, ನಿನ್ನ ಬೆರಳಿನಲ್ಲಿಟ್ಟುಬಿಡುವೆನು." ಎಂದು ಹೇಳಿದನು.

ಪನ್ನಾಮತಿಯು ಶಹಾಜಾದನ ಈ ಮಾತನ್ನು ಮೀರಲು ಸಮರ್ಥಳಾಗಲಿಲ್ಲ. ಅವಳು ಲಜ್ಜೆಯಿಂದ ತನ್ನ ಕೈಯನ್ನು ಮುಂದೆಮಾಡಿದಳು. ದಾನಿಯಲನು ಚಂಪಕ ಪುಷ್ಪವನ್ನು ತಿರಸ್ಕರಿಸುತ್ತಿರುವ ಕೋಮಲವಾದ ಅಂಗುಲಿಯಲ್ಲಿ ಆ ಉಂಗುರವನ್ನಿರಿಸಿದನು.

ಪನ್ನಾಮತಿಯು ಶಹಾಜಾದನಿಗೆ ಕುರ್ನಿಸಮಾಡಿ—"ರಾಜಕುಮಾರ, ಇನ್ನು ಬೆಳಗಾಗುವುದಕ್ಕೆ ಬಹಳ ಅವಕಾಶವಿಲ್ಲ. ಪ್ರಭಾತಕಾಲವು ಸಮೀಪಿಸಿದೆ. ರಾತ್ರಿಯಲ್ಲಿ ಗುಪ್ತರೀತಿಯಿಂದ ನಡೆದ ಈ ಸಂಗತಿಯು ಮುಂಜಾವಿನಲ್ಲಿ ಸಕಲರಿಗೂ ತಿಳಿಯುವುದು," ಎಂದುಹೇಳಿ, ಹಿಮ್ಮತನನ್ನು ಕುರಿತು—"ನೀನು ಇವರನ್ನು ಸಂಗಡಕರೆದುಕೊಂಡು ಹೋಗು; ಮತ್ತು ಇವರು ಸುಖರೂಪವಾಗಿ ತನ್ನ ಶಿಬಿರಕ್ಕೆ ಮುಟ್ಟಿದ್ದನ್ನು ತೀವ್ರವೇ ನನಗೆ ತಿಳಿಸು; ಈ ವರ್ತಮಾನವು ತಿಳಿಯುವವರೆಗೆ ನನಗೆ ಸಮಾಧಾನವಾಗುವಂತಿಲ್ಲ," ಎಂದುಹೇಳಿದಳು.

ಶಹಾಜಾದನು ಪನ್ನಾಮತಿಯ ಮುಖದಕಡೆಗೆ ಮತ್ತೊಮ್ಮೆ ನೋಡಿದನು. ತರುವಾಯ ಅವನು ಹಿಮ್ಮತನೊಡನೆ ಮೆಲ್ಲಮೆಲ್ಲನೆ ಪರ್ವತವನ್ನಿಳಿಯಹತ್ತಿದನು.

ಪನ್ನಾಮತಿಯು ಶಹಾಜಾದನು ಕಣ್ಮರೆಯಾಗುವವರೆಗೆ, ಅಲ್ಲಿಯೇ ನಿಂತುಕೊಂಡು, ತರುವಾಯ ಒಂದು ದೀರ್ಘನಿಶ್ವಾಸವನ್ನು ಬಿಟ್ಟು, ತ್ವರಿತಗತಿಯಿಂದ ತನ್ನ ಕೋಣೆಯಕಡೆಗೆ ನಡೆದಳು.

ಈ ಸಮಯದಲ್ಲಿ ಯಾರಾದರೂ ಪನ್ನಾಮತಿಯ ಮುಖವನ್ನು ನೋಡಿದ್ದರೆ, ನೀರಿನಿಂದ ತುಂಬಿರುವ ಅವಳ ಕಣ್ಣುಗಳನ್ನು ನೋಡಬಹುದಾಗಿತ್ತು. ಈ ಅಶ್ರುಧಾರೆಗಳ ಗೂಢಾರ್ಥವೇನಿರಬಹುದು? ಇದರ ಉತ್ತರವು ಪನ್ನಾಮತಿಯೊಬ್ಬಳಿಗೆ ಮಾತ್ರ ಗೊತ್ತು.

ಪನ್ನಾಮತಿಯು ಉದ್ಯಾನದ ಬಾಗಿಲನ್ನು ಮುಚ್ಚಿಕೊಂಡು, ಪಟ್ಟಣವನ್ನು ಪ್ರವೇಶಿಸಿ, ತನ್ನ ಕೋಣೆಗೆ ಹೋದಳು. ದಾಸಿಯು ಇನ್ನೂ ಮಲಗಿರಲಿಲ್ಲ. ಅವಳು ಪನ್ನಾಮತಿಯನ್ನು ಇದಿರುನೋಡುತ್ತ ಕುಳಿತಿದ್ದಳು.

ದಾಸಿಯನ್ನು ನೋಡಿ, ಪನ್ನಾಮತಿಯ ಕಣ್ಣುಗಳು ಪುನಃ ನೀರಿನಿಂದ ತುಂಬಿದುವು. ದಾಸಿಯು ವಿಸ್ಮಯದಿಂದ—“ ಇದೇನು ಪನ್ನಾಮತಿ! ಅಳುತ್ತಿರುವೆ? ” ಎಂದು ಕೇಳಿದಳು.

ಪನ್ನಾಮತಿ ಕಣ್ಣುಗಳನ್ನೊರಿಸಿಕೊಂಡು,—“ ನೀನು ಏನೇನೋ ಅನ್ನುತ್ತಿರುವೆ. ಅಳಲಿಕ್ಕೆ ನನಗೇನಾಗಿದೆ? ಶತ್ರುವನ್ನು ಕಳುಹಿಸಿಬಂದು, ಯಾರಾದರೂ ಅಳುತ್ತಿರುವದುಂಟೇ? ” ಎಂದು ಕೇಳಿದಳು.

ದಾಸಿಯು ನಿಜರಹಸ್ಯವನ್ನು ತಿಳಿಯದಿರಲಿಲ್ಲ. ಆದರೂ ಅವಳು ಈ ಪ್ರಸಂಗದಲ್ಲಿ ಹೆಚ್ಚಿಗೆ ಮಾತಾಡುವುದು ಸರಿಯಲ್ಲವೆಂದು ಭಾವಿಸಿ, ಸುಮ್ಮನೆ ಇದ್ದಳು.

---

# ಏಳನೆಯ ಪರಿಚ್ಛೇದ.

## ಸೇನಾಪತಿ ಅಫಶಾನ.

ಪ್ರಭಾತ ಸಮಯವು. ಉಷೆಯ ಮಂದಪ್ರಕಾಶವು ಎಲ್ಲಕಡೆಯಲ್ಲಿಯೂ ಹಬ್ಬಿತ್ತು. ಪರ್ವತಪ್ರದೇಶದ ಶೀತಲವಾಯುವು ಗಿಡಗಳ ಎಲೆಗಳನ್ನು ಕಂಪಾಯಮಾನಮಾಡಿ, ಬಳ್ಳಿಗಳನ್ನಲ್ಲಾಡಿಸಿ, ಅವುಗಳ ನಿದ್ದೆಯನ್ನು ಹೋಗಲಾಡಿಸುತಿತ್ತು. ಇನ್ನುವರೆಗೆ ಯಾವತ್ತು ಜನರು ಎದ್ದಿಲ್ಲ. ಒಬ್ಬೊಬ್ಬರೇ ಏಳತೊಡಗಿದ್ದರು. ಶಾಂತತೆಯು ಎಲ್ಲ

ಕಡೆಯಲ್ಲಿಯೂ ಪಸರಿಸಿತ್ತು. ಈ ಸಮಯದಲ್ಲಿ ಅಘಶಾನನು ನಿದ್ರೆಯಿಂದ ಎಚ್ಚತ್ತನು.

ಅಘಶಾನನು ಕಣ್ಣುತೆರೆದು ನೋಡಿದನು. ಸಮೀಪದಲ್ಲಿ ಯಾರೂ ಇಲ್ಲ. ತಾನೊಂದು ಬೈಲುಪ್ರದೇಶದಲ್ಲಿರುವ ಕಟ್ಟೆಯಮೇಲೆ ಮಲಗಿಕೊಂಡಿರುವದನ್ನು ತಿಳಿದನು. ಕೂಡಲೇ ಅವನು ಎದ್ದು ಕುಳಿತು, ವಿಸ್ಮಯಾಕುಲ ದೃಷ್ಟಿಯಿಂದ ಸುತ್ತಲೂ ನೋಡಿದನು. ಅವನ ಮೈ ಜಡವಾಗಿ ಹೋಗಿತ್ತು. ಏಳುವದಕ್ಕೆ ಉತ್ಸಾಹವಿರಲಿಲ್ಲ. ಕೈಕಾಲುಗಳು ಹರಿದಾಡುತ್ತಿದ್ದುವು. ಆದರೂ ಎದ್ದಹೊರತು ನಿರ್ವಾಹವಿಲ್ಲ. ಅವನು ಎದ್ದು, ತುಸು ಮುಂದೆ ಬಂದು, ಅಲ್ಲಿ ಕೆಲವುಹೊತ್ತು ನಿಂತುಕೊಂಡನು. ಉಷಃಕಾಲದ ಚೇತನಾಪ್ರದವಾದ ಮಂದವಾಯುಸೇವನೆಯಿಂದ ಅವನಿಗೆ ತುಸು ಉತ್ಸಾಹ ಬಂದಂತಾಯಿತು. ಗತರಾತ್ರಿ ನಡೆದ ಸಂಗತಿಗಳು ಒಂದೊಂದಾಗಿ ಅವನ ಸ್ಮರಣೆಗೆ ಬರತೊಡಗಿದವು. ಅವನು ವಿಚಾರಿಸತೊಡಗಿದನು-ನಾನು ನಿನ್ನೆರಾತ್ರಿ ಬಹುಕಾಲದವರೆಗೆ ಪನ್ನಾಮುತಿಯ ಕೋಣೆಯಲ್ಲಿದ್ದೆನು. ಆ ಸಮಯದಲ್ಲವಳು ನನ್ನ ವಿಷಯವಾಗಿ ಅತಿಶಯ ಆದರ ತೋರಿದಳು. ಅವಳ ಅಷ್ಟೊಂದು ಆದರವನ್ನು ನಾನೆಂದೂ ನೋಡಿರಲಿಲ್ಲ. ಅವಳು ಸಿರಾಜಿ ತಂದು ಕೊಟ್ಟಳು. ಪ್ರೇಮಪರವಶನಾದ ನಾನು, ಯಾವುದನ್ನೂ ವಿಚಾರಿಸದೆ ಕುಡಿದುಬಿಟ್ಟೆನು. ಅವಳು ನನ್ನ ಪ್ರಣಯವಚನಗಳಿಗೆ ಉತ್ತೇಜನ ಕೊಡುತ್ತಹೋದಳು. ತಾನು ನನ್ನನ್ನು ಪ್ರೀತಿಸುವುದಾಗಿ ಹೇಳಿದಳು. ಎಂಥ ಸುಖದಾಯಕಪ್ರಸಂಗವದು! ಆದರೆ ಸದ್ಯಸ್ಥಿತಿಯನ್ನು ವಿಚಾರಮಾಡಿ ನೋಡಿದರೆ, ನಾನು ನಿನ್ನೆ ಕೇವಲ ಸ್ವಪ್ನವನ್ನು ನೋಡಿದೆನೆಂದು ಹೇಳಬಹುದಾಗಿದೆ—ಪನ್ನಾಮುತಿಯ ಸುಂದರವಾದ ಕೋಣೆಯಲ್ಲಿ ಉತ್ತಮವಾದ ಹಾಸುಗೆಯಮೇಲೆ ಮಲಗಿದ್ದ ನಾನು ಇಲ್ಲಿ ಬಂದದ್ದುಹೇಗೆ? ಪನ್ನಾಮುತಿ ತನ್ನ ಸೇವಕರಿಂದ ಈ ಕೆಲಸವನ್ನು ಮಾಡಿಸಿರಬಹುದೇನು? ಅವಳು ನನ್ನನ್ನು ನನ್ನ ಕೋಣೆಯಲ್ಲಿ ಮಲಗಿಸುವ ವ್ಯವಸ್ಥೆಮಾಡಿಸದೆ ಹೀಗೆ ಅಂಗಳಲ್ಲಿ ಎಸೆದು ಬಿಟ್ಟಳೇಕೆ? ನನ್ನನ್ನು ನನ್ನ ಕೋಣೆಯಲ್ಲಿ ಮಲಗಿಸುವ ವ್ಯವಸ್ಥೆಮಾಡುವುದು ಅವಳಿಗೆ ಕಠಿಣವಾಗಿತ್ತೇನು?

ಎಂದೂ ಇಲ್ಲ. ನನ್ನ ಕೋಣೆಯು ಅವಳ ಕೋಣೆಯ ಸಮೀಪದಲ್ಲಿಯೇ ಇದೆ. ಹೀಗಿರುವಾಗ ನನ್ನನ್ನು ದೂರದಲ್ಲಿರುವ ಈ ಅಂಗಳದಲ್ಲಿ ಮಲಗಿಸುವ ವ್ಯವಸ್ಥೆಮಾಡಿಸಿರುವುದೇಕೆ? ಇದು ಏನೇ ಇರಲಿ, ಪನ್ನಾಮತಿಯನ್ನು ಕೇಳಿದರೆ ತಿಳಿಯುವದು. ಈಗ ನಾನು ನನ್ನ ಮುಂದಿನಕೆಲಸ ಮಾಡಲಿಕ್ಕೆ ಬೇಕು—ಹೀಗೆ ಆಲೋಚಿಸಿ ಅಫಶಾನನು ಮುಂದೆ ನಡೆದನು. ಹೋಗುಹೋಗುತ್ತ ಅವನು ಮತ್ತೆ ವಿಚಾರಿಸತೊಡಗಿದನು—"ನಾನು ನಿನ್ನೆ ಒಂದು ಗುರುತರ ಕಾರ್ಯಭಾರವನ್ನು ಹೊತ್ತುಕೊಂಡಿದ್ದೆ. ದುರ್ಗಾಧಿಪತಿ ನನಗೆ ಈ ಕೆಲಸವನ್ನು ಒಪ್ಪಿಸಿದ್ದನು. ಈ ಕೆಲಸವನ್ನು ನಾನು ಸರಿಯಾಗಿ ಮಾಡಬೇಕಾಗಿದ್ದರೆ, ರಾತ್ರಿಯಲ್ಲಿ ಎಚ್ಚರದಿಂದಿರುವದು ಅವಶ್ಯವಾಗಿತ್ತು. ಮೇಲಿಂದಮೇಲೆ ಎದ್ದುಹೋಗಿ, ಬಂದಿಯು ಕಾರಾಗಾರದಲ್ಲಿರುವನೋ, ಇಲ್ಲವೋ ಎಂಬದನ್ನು ಪರೀಕ್ಷೆಮಾಡಬೇಕಾಗಿತ್ತು. ಅದರೆ ನಾನು ಈ ಕೆಲಸವನ್ನು ಮರೆತು, ಪ್ರೇಮವಿಹ್ವಲನಾಗಿ ಅಳತೆಗೆಟ್ಟು ಮದ್ಯವನ್ನು ಕುಡಿದೆನು. ಇದರಿಂದ ಎಚ್ಚರದಪ್ಪಿ ಬಿದ್ದೆನು. ಕೈದಿಯ ಪರಾಮರ್ಶವನ್ನು ತೆಗೆದುಕೊಳ್ಳುವುದಾಗಲಿಲ್ಲ. ಬಂದಿಯು ಏನಾಗಿರುವನೋ ಏನೋ! ಇನ್ನು ತುಸು ಅವಧಿಯಲ್ಲಿಯೇ ಅವನು ಮರಣ ಹೊಂದಬೇಕಾಗಿರುವದು. ಇದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಅವನು ರಾತ್ರಿಯಲ್ಲಿಯೇ ಓಡಿಹೋಗಿದ್ದರೆ ನಾನು ಮಾಡುವುದೇನು? ಹೀಗಾಗಿದ್ದರೆ ನಾನು ದುರ್ಗಾಧಿಪತಿಯ ಕಠೋರಶಿಕ್ಷೆಯನ್ನು ಹೊಂದಬೇಕಾಗುವದರಲ್ಲಿ ಸಂದೇಹವಿಲ್ಲ. ನನ್ನಿಂದ ಎಂಥ ಅನುಚಿತ ಕೆಲಸವಾಯಿತು!"

ಅಫಶಾನನು ಕೂಡಲೇ ಸೆರೆಮನೆಯ ಕಡೆಗೆ ನಡೆದನು. ಅರ್ಧಹಾದಿ ಹೋದಬಳಿಕ, ತನ್ನಜೇಬಿನಲ್ಲಿ ಕಾರಾಗಾರದ ಬೀಗದಕೈ ಇದೆಯೋ ಇಲ್ಲವೋ ಎಂಬದನ್ನು ನೋಡಲು ಕೈಹಾಕಿದನು; ಅದು ಇರಲಿಲ್ಲ. ಅವನು ಗಾಬರಿಯಾಗಿ—"ಇದೇನು? ನನ್ನ ಜೇಬಿನಲ್ಲಿದ್ದ ಬೀಗದಕೈ ಎಲ್ಲಿ ಹೋಗಿರಬಹುದು?" ಎಂದು ಅಂದುಕೊಂಡನು.

ಅಫಶಾನನು ಹುಚ್ಚನಂತಾಗಿ ಪುನಃ ತಾನು ಮಲಗಿಕೊಂಡಿದ್ದ ಸ್ಥಳಕ್ಕೆ ಹೋದನು. ಅಲ್ಲಿ ಬೀಗದಕೈಯನ್ನು ಹುಡುಕತೊಡಗಿದನು. ಎಷ್ಟುಹುಡು

ಕಿದರೂ ಅದು ಸಿಗಲಿಲ್ಲ. ಈ ಸಮಯದಲ್ಲಿ ಅವನು ಭಾವಿಸತೊಡಗಿದನು—“ ನಿನ್ನೆರಾತ್ರಿಯಲ್ಲಿ ನಾನು ಮಿತಿಗೆಟ್ಟು ಮದ್ಯಪಾನಮಾಡಿ ಎಚ್ಚರದಪ್ಪಿಹೋದೆನು. ಈ ವೇಳೆಯಲ್ಲಿ ನಾನು ಅತ್ತಿತ್ತ ಹೊರಳಾಡಿರಬಹುದು. ಅದರಿಂದ ಚಾವಿಯು ಎಲ್ಲಿಯೋ ಬಿದ್ದಿರಬಹುದು. ”

ಅಫಶಾನನು ಪನ್ನಾಮತಿಯ ಕೋಣೆಯ ಕಡೆಗೆ ಹೊರಟನು. ಕೋಣೆಯ ಬಾಗಿಲ ಬಳಿಯಲ್ಲಿ ಬಂದು, ಕಿಟಕಿಯೊಳಗಿಂದ ಒಳಗೆ ನೋಡಿದನು. ಕೋಣೆಯು ಅಂಧಕಾರಮಯವಾಗಿತ್ತು. ಬಾಗಿಲನ್ನು ತಟ್ಟಿದನು. ಬಾಗಿಲು ತೆರೆಯಲಿಲ್ಲ; ಅದು ಅಗಳಿಯಿಂದ ಬಂದುಮಾಡಲ್ಪಟ್ಟಿತ್ತು.

ಅಫಶಾನನು ಮತ್ತೆ ಬಾಗಿಲನ್ನು ಬಡಿದು–“ ಪನ್ನಾಬೇಗಮ ” ಎಂದು ಕೂಗಿದನು. ಉತ್ತರವು ದೊರೆಯಲಿಲ್ಲ. “ ಮುನ್ನಾ, ಮುನ್ನಾ ” ಎಂದು ಮತ್ತೆ ಕೂಗಿದನು. ಆದರೂ ಬಾಗಿಲು ತೆರೆಯಲಿಲ್ಲ. ಯಾರೂ ಉತ್ತರಕೊಡಲಿಲ್ಲ. ಎಲ್ಲರೂ ಘೋರನಿದ್ರೆಯಲ್ಲಿ ಮುಳುಗಿಹೋಗಿದ್ದರು. ಅಫಶಾನನು ನಿರಾಶನಾಗಿ ಸೆರೆಮನೆಯಕಡೆ ಹೊರಟನು.

ಅಫಶಾನನು ಕಾರಾಗಾರದಬಳಿ ಬಂದು ನೋಡಿದನು. ಅಲ್ಲಿ ಕಂಡುಬಂದ ದೃಶ್ಯದಿಂದ ಅವನು ಸ್ತಬ್ಧನಾಗಿ ನಿಂತುಕೊಂಡನು. ಅವನು ಭಯದಿಂದಲೂ, ವಿಸ್ಮಯದಿಂದಲೂ ಚೀತ್ಕಾರಮಾಡಿ—“ ಮೆಹರಬಾನ ಖೋದಾ! ಇದೇನು? ” ಎಂದು ಅಂದನು.

ತರುವಾಯ ಅಫಶಾನನು ಸ್ವಲ್ಪ ಧೈರ್ಯವನ್ನು ತಂದುಕೊಂಡು ಮುಂದೆನಡೆದನು. ಸುತ್ತಲೂ ನೋಡಿದನು. ಕಾವಲುಗಾರರಲ್ಲಿ ಒಬ್ಬನು ಎಲ್ಲಿಯೋ ಹೋಗಿದ್ದನು. ಮತ್ತೊಬ್ಬನು ಎಚ್ಚರದಪ್ಪಿ ಬಾಗಿಲಹತ್ತಿರಬಿದ್ದುಕೊಂಡಿದ್ದನು.

ಅಫಶಾನನು ವಿಸ್ಮಿತನಾಗಿ ಸುತ್ತಲೂ ಚೆನ್ನಾಗಿನೋಡಿದನು. ಅವನು ಅಸ್ಫುಟಸ್ವರದಿಂದ–“ ಹೀಗೇಕೆ ಆಗಿರಬಹುದು? ಈ ಕೆಲಸವನ್ನು ಯಾರು ಮಾಡಿರಬಹುದು? ಬಂದಿ ಎಲ್ಲಿ ಇರಬಹುದು? ಹೊರಗಿನ ಈ ಸ್ಥಿತಿಯನ್ನು ನೋಡುತ್ತಿರಲು ಕೈದಿ ಓಡಿಹೋದಂತೆ ಕಂಡುಬರುತ್ತಿದೆ. ಇದರಿಂದ

ನಾನು ದುರ್ಗಾಧಿಪತಿಯ ಕ್ರೋಧಕ್ಕೆ ಆಹುತಿಯಾಗುವುದರಲ್ಲಿ ಸಂಶಯವಿಲ್ಲ," ಎಂದಂದುಕೊಂಡು, ಕಾರಾಗೃಹದ ಬಾಗಿಲನ್ನು ಸೂಕ್ಷ್ಮರೀತಿಯಿಂದ ನೋಡಿದನು. ಬೀಗದಕ್ಕೆ ಬಾಗಿಲಲ್ಲಿದ್ದಿತು. ಅಫಶಾನನು ಒಳಗೆಹೋಗಿ ನೋಡಿದನು. ಬಂದಿ ಓಡಿಹೋಗಿದ್ದನು. ಅವನ ಹಾಸುಗೆ ಬರಿದಾಗಿದ್ದಿತು. ಅಫಶಾನನು ತುಸು ಹೊತ್ತು ದಂಗುಬಡೆದು ನಿಂತುಕೊಂಡನು. ತರುವಾಯ ಅವನು ಧೈರ್ಯತಂದುಕೊಂಡು, ಬಂದಿಯು ಯಾವರೀತಿಯಾಗಿ ಓಡಿಹೋಗಿರಬಹುದೆಂಬಬಗ್ಗೆ ವಿಚಾರ ಮಾಡಹತ್ತಿದನು. ವಿಚಾರಾಂತ್ಯದಲ್ಲಿ ಅವನು "ಬಂದಿಯು ತಾನೇ ತನ್ನ ಪ್ರಯತ್ನದಿಂದ ಓಡಿ ಹೋಗಿಲ್ಲ. ಯಾರೋ ಬಾಗಿಲತೆರೆದು ಅವನನ್ನು ಪಾರುಮಾಡಿದ್ದಾರೆ" ಎಂಬದನ್ನು ಸಿರ್ಧರಿಸಿಕೊಂಡನು. ಅಫಶಾನನು ಮತ್ತೆ ವಿಚಾರಿಸತೊಡಗಿದನು—"ಕೈದಿಯನ್ನು ಯಾರು ಪಾರುಮಾಡಿರಬಹುದು? ಪನ್ನಾಮತಿ ಈ ಕೆಲಸ ಮಾಡಿರಬಹುದೇ? ಇದು ಅಸಂಭವ. ಯಾಕಂದರೆ ಆ ಮೊಗಲಸೈನಿಕನನ್ನು ಬಹುಕುಶಲತೆಯಿಂದ ಹಿಡಿದುಕೊಟ್ಟವಳೇ ಅವಳು. ಅದರಿಂದ ಅವಳು ಈ ಕೆಲಸಮಾಡಿರುವ ಸಂಭವವಿಲ್ಲ. ಇದರಿಂದ ಅವಳಿಗೆ ಯಾವಲಾಭವೂ ಇಲ್ಲ.

ಹಾಗಾದರೆ ಆ ಮೊಗಲನನ್ನು ಈ ಸೆರೆಮನೆಯಿಂದ ಬಿಡುಗಡೆ ಮಾಡಿದವರು ಯಾರಾಗಿರಬಹುದು? ಇನ್ನೊಬ್ಬ ಕಾವಲುಗಾರನು ಎಲ್ಲಿಗೆ ಹೋಗಿರಬಹುದು? ಈ ಕಾವಲುಗಾರನು ಎಚ್ಚರದಪ್ಪಿ ಬಿದ್ದದ್ದೇಕೆ? ಇವನಿಗೆ ಈ ಅವಸ್ಥೆಯುಂಟಾಗುವಂತೆ ಮಾಡಿದವರು ಯಾರಾಗಿರಬಹುದು? ಯಾವನಾದರೊಬ್ಬ ನೀಚ ಪಠಾಣನು ಕ್ಷುದ್ರಸ್ವಾರ್ಥಕ್ಕೋಸ್ಕರ ಈ ಕೆಲಸ ಮಾಡಿರಬಹುದೇ? ಆದರೆ ಪಠಾಣರಲ್ಲಿ ಈ ತರದ ಅವಿಶ್ವಾಸಿಗಳು ಯಾರೂ ಇಲ್ಲ. ಪಠಾಣರು ದೇಶದ್ರೋಹಿಗಳೆಂದೂ ಆಗಲಾರರು. ಬಹುಶಃ ಈ ಮೊಗಲಬಂದಿಯೊಡನೆ, ಅನೇಕ ಮೊಗಲ ಸೈನಿಕರು ಗುಪ್ತರೀತಿಯಿಂದ ದುರ್ಗವನ್ನು ಪ್ರವೇಶಿಸಿರಬಹುದು. ಅವರು ಸುಯೋಗವನ್ನು ಕಾಯ್ದುಕೊಂಡಿದ್ದು, ಕೈದಿಯನ್ನು ಪಾರುಮಾಡಿಕೊಂಡು ಹೋಗಿರಬಹುದು. ಆದರೆ ಅವರಿಗೆ ನನ್ನ ಬಳಿಯಲ್ಲಿದ್ದ ಚಾವಿ ದೊರೆತದ್ದು ಹೇಗೆ? ನಾನು ಬಹಳ ರಾತ್ರಿಯವರೆಗೆ ಪನ್ನಾಮತಿಯ ಕೋಣೆಯಲ್ಲಿದ್ದೆನು. ಪನ್ನಾಮತಿ ನನ್ನನ್ನು ಯಾವಾಗ್ಗೆ ಹೊರಗೆಹಾಕಿಸಿ

ವಳೋ ಏನೋ ಅರಿಯೆ. ನಾನು ಅಂಗಳದಲ್ಲಿ ಬಿದ್ದುಕೊಂಡಿರುವಾಗ, ಮೊಗಲರು ನನ್ನ ಬಳಿಯಲ್ಲಿರುವ ಬೀಗದ ಕೈ ಎತ್ತಿಕೊಂಡು ಹೋಗಿ, ಈ ಕೆಲಸಮಾಡಿರಬಹುದು. ಏನೇ ಆಗಲಿ, ನಾನು ಈ ಸುದ್ದಿಯನ್ನು ಈಗಲೇ ದುರ್ಗಾಧಿಪತಿಗೆ ತಿಳಿಸುವದು ಮೇಲು."

ಅಫಶಾನನು ಮಿರಾನಶಹನು ಮಲಗಿಕೊಂಡಿರುವ ಕೋಣೆಯ ಕಡೆಗೆ ಹೊರಟನು. ಕೋಣೆಯಬಳಿ ಬಂದು ನೋಡಿದನು. ದುರ್ಗಾಧಿಪತಿಯು ಇನ್ನೂ ಮಲಗಿಕೊಂಡಿದ್ದನು. ಅಫಶಾನನು ದುರ್ಗಾಧಿಪತಿಯನ್ನು ಎಬ್ಬಿಸುವುದು ಉಚಿತವೆಂದು ಭಾವಿಸಿ, ಬಾಗಿಲನ್ನು ತಟ್ಟಿದನು. ಮಿರಾನಶಹನ ಕಾವಲುಗಾರನು ಎಚ್ಚತ್ತಿದ್ದನು. ಅವನು ಅಫಶಾನನ ದಂಗುಬಡೆದ ಸ್ಥಿತಿಯನ್ನು, ಬಾಗಿಲುಬಡಿಯುವುದನ್ನು ನೋಡಿ, ವಿಸ್ಮಿತನಾದನು. ಅವನು ಎದ್ದುನಿಂತು ಸೇನಾಪತಿಗೆ ಸಲಾಂಮಾಡಿ—"ಹುಜೂರ, ವರ್ತಮಾನವೇನು? ತಾವು ಇಷ್ಟು ಗಾಬರಿಯಾಗಿರುವದೇಕೆ?" ಎಂದು ಕೇಳಿದನು.

ಅಫಶಾನನು ಉನ್ಮಾದನಂತೆ ವಿಕಟದೃಷ್ಟಿಯಿಂದ ಆ ಕಾವಲುಗಾರನನ್ನು ನೋಡಿ, ಸಿಟ್ಟಿನಿಂದ—"ಸುಮ್ಮನಿರು, ಹೆಚ್ಚಿಗೆ ಮಾತಾಡಬೇಡ. ನಿನಗೆ ಈ ಕಾರಭಾರವನ್ನು ಮಾಡುವದಕ್ಕೆ ಯಾರು ಹೇಳಿದರು?" ಎಂದು ಅಂದನು.

ಕಾವಲುಗಾರನು ಭಯದಿಂದ ದೂರಸರಿದು ನಿಂತುಕೊಂಡನು. ಯಾವ ಮಾತನ್ನೂ ಆಡಲಿಕ್ಕೆ ಅವನಿಗೆ ಧೈರ್ಯವಾಗಲಿಲ್ಲ. ಅಫಶಾನನು ಎರಡುಮೂರುಸಾರಿ ಬಾಗಿಲ ಬಡೆದನು. ಮಿರಾನಶಹನು ಏಳಲಿಲ್ಲ. ದುರ್ಗಾಧಿಪತಿಗೆ ಹೆಚ್ಚು ತೊಂದರೆ ಕೊಡುವದು ಯೋಗ್ಯವಲ್ಲವೆಂದು ಭಾವಿಸಿ, ಅವನು ಸುಮ್ಮನೆ ತಿರುಗಿದನು.

ಅಫಶಾನನು ಅಶ್ವಶಾಲೆಗೆ ಹೋಗಿ, ಒಂದು ಉತ್ತಮವಾದ ಕುದುರೆಯನ್ನು ತೆಗೆದುಕೊಂಡು, ಬಂದಿಯನ್ನು ಹುಡುಕುವುದಕ್ಕೆ ಹೊರಟನು. ಹಾಗೆಯೇ ಗುಡ್ಡವನ್ನು ಇಳಿದು, ಬಳಿಯಲ್ಲಿರುವ ಅರಣ್ಯವನ್ನು ಹೊಕ್ಕನು.

# ಎಂಟನೆಯ ಪರಿಚ್ಛೇದ.

## ವಿಚಾರಣೆ.

ಪ್ರಾತಃಕಾಲದ ಸಮಯ. ಸುಮಾರು ಒಂದು ತಾಸು ಹೊತ್ತೇರಿರಬಹುದು. ಈ ಸಮಯದಲ್ಲಿ ದುರ್ಗಾಧಿಪತಿಯಾದ ಮಿರಾನಶಹನು ಹಾಸುಗೆಯಿಂದೆದ್ದು, ಪ್ರಾತಃಕೃತ್ಯಗಳನ್ನು ತೀರಿಸಿಕೊಂಡು, ತನ್ನ ದಿವಾನಖಾನೆಯಲ್ಲಿ ಬಂದು ಕುಳಿತನು. ಕೂಡಲೇ ಒಬ್ಬ ಹವಾಲದಾರನು ಬಂದು, ನೆಲಮುಟ್ಟಿ ಸಲಾಂಮಾಡಿ—"ಜನಾಬ, ಬಂದಿ ಓಡಿಹೋಗಿದ್ದಾನೆ!" ಎಂದು ಹೇಳಿದನು.

"ಏನನ್ನುವೆ?" ಎಂದು ಮಿರಾನಶಹನು ಆಶ್ಚರ್ಯಾನ್ವಿತನಾಗಿ ಕೇಳಿದನು.

"ಜನಾಬ, ನಾನು ಪಾದಸೇವಕ. ಬಾದಶಹರ ಇದಿರಿನಲ್ಲಿ ಸುಳ್ಳುಹೇಳುವುದಾದೀತೇ? ನಿಜವಾಗಿಯೂ ಬಂದಿಯು ರಾತ್ರಿ ಪಾರಾಗಿ ಹೋಗಿದ್ದಾನೆ."

"ನಾನು ನಿಮ್ಮೆಲ್ಲರಿಗೂ ಪ್ರಾಣದಂಡನೆ ವಿಧಿಸುವೆನು! ಅಫಶಾನನು ಎಲ್ಲಿ?"

"ಮಹಾರಾಜ, ನಾನು ಅವರನ್ನು ಬಹಳ ಹುಡುಕಿದೆ; ಅವರೆಲ್ಲಿರುವರೆಂಬದನ್ನು ಕಂಡುಹಿಡಿಯಲು ಸಮರ್ಥನಾಗಲಿಲ್ಲ."

"ಇದೊಂದು ಆಶ್ಚರ್ಯದ ಸಂಗತಿ! ಅಫಶಾನನು ಎಲ್ಲಿಗೆ ಹೋಗಿರಬಹುದು?"

"ಅವರು ಹೋಗುವ ಮುಂದೆ ಯಾರಿಗೂ ಹೇಳಿಹೋಗಿಲ್ಲ. ಅದರಿಂದ ಅವರು ಎಲ್ಲಿಗೆ ಹೋಗಿರಬಹುದೆಂಬದನ್ನು ಹೇಳಲಿಕ್ಕೆ ಬರುವಂತಿಲ್ಲ."

ಮಿರಾನಶಹನು ಈ ಹವಾಲದಾರನಿಗೆ ಬಂದಿಯನ್ನು ಕೊಲ್ಲುವ ಕೆಲಸವನ್ನೊಪ್ಪಿಸಿದ್ದನು. ಹವಾಲದಾರನು ತನ್ನ ಕೆಲಸವನ್ನು ಮಾಡುವ

ದಕ್ಕಾಗಿ ಎದ್ದಕೂಡಲೇ ಕಾರಾಗಾರದ ಕಡೆಗೆ ನಡೆದನು. ಅಲ್ಲಿ ಹೋಗಿ ನೋಡಿದನು. ಬಂದಿಯು ಅಲ್ಲಿ ಇರಲಿಲ್ಲ. ಇದರಿಂದಿವನು ಗಾಬರಿಯಾಗಿ, ದುರ್ಗಾಧಿಪತಿಯ ಬಳಿಗೆ ಬಂದು ಈ ಸುದ್ದಿಯನ್ನು ನಿವೇದಿಸಿದನು. ಮಿರಾನಶಹನು ಇವನಿಂದ ಏನಾದರೂ ವಿಶೇಷ ಸಂಗತಿಗಳು ತಿಳಿಯಬಹುದೆಂದು ಭಾವಿಸಿ, ಒಂದೆರಡು ಪ್ರಶ್ನೆಗಳನ್ನು ಮಾಡಿದನು. ಆದರೆ ಅವುಗಳಿಗೆ ಸಮರ್ಪಕವಾದ ಉತ್ತರ ದೊರೆಯಲಿಲ್ಲ. ಅವನು ತಾನೇ ಕಾರಾಗಾರದ ಬಳಿಗೆ ಹೋಗಿ, ನಿಜವಾದ ಸಂಗತಿಯನ್ನರಿತುಕೊಳ್ಳಬೇಕೆಂದು ಕಾರಾಗಾರದ ಸಮೀಪಕ್ಕೆ ಬಂದು ನೋಡಿದನು. ಕಾವಲುಗಾರರಲ್ಲಿ ಒಬ್ಬನು ಇರಲಿಲ್ಲ. ಅವನೆಲ್ಲಿ ಹೋಗಿರುವನೆಂಬದು ಯಾರಿಗೂ ಗೊತ್ತಿಲ್ಲ. ಬೇರೊಬ್ಬನು ಅಚೇತನನಾಗಿ ಬಿದ್ದುಕೊಂಡಿದ್ದನು. ಕಾರಾಗೃಹದ ಬೀಗದಕ್ಕೈ ಬಾಗಿಲಲ್ಲಿಯೇ ಇದ್ದಿತು. ಇದನ್ನು ನೋಡಿ, ಮಿರಾನಶಹನು ಬಹು ವಿಸ್ಮಿತನಾದನು.

ತರುವಾಯ ಅವನು ವಜ್ರಗಂಭೀರಸ್ವರದಿಂದ—"ಈ ವಿಶ್ವಾಸಘಾತಕತನದ ಕೆಲಸವನ್ನು ಯಾರು ಮಾಡಿರಬಹುದು? ನಾನು ಅವರನ್ನು ಕಂಡುಹಿಡಿದು, ಅವರಿಗೆ ಯೋಗ್ಯಶಿಕ್ಷೆಯನ್ನು ವಿಧಿಸದೆ ಬಿಡೆನು. ಅವರ ದೇಹವನ್ನು ನಾಯಿಯ ಕಡೆಯಿಂದ ತಿನ್ನಿಸುವೆನು. ಅವರ ಅವಯವಗಳನ್ನು ಚೂರುಚೂರಾಗಿ ಮಾಡಿಸುವೆನು." ಎಂದು ಅಂದನು.

ತರುವಾಯ ಮಿರಾನಶಹನು ತನ್ನ ಮುಖ್ಯಕಾವಲುಗಾರನನ್ನು ಕರೆದು,—"ನಿನ್ನೆರಾತ್ರಿಯಲ್ಲಿ ಅಫಶಾನನು ಎಲ್ಲಿಯೋ ಓಡಿಹೋಗಿದ್ದಾನೆ. ನೀನು ಈಗ ಇಪ್ಪತ್ತೈದುಜನ ಸವಾರರನ್ನು ಕರೆದುಕೊಂಡುಹೋಗಿ, ಅವನನ್ನು ಹಿಡಿದುಕೊಂಡುಬಾ. ಎಷ್ಟೇ ಪ್ರಯಾಸವಾದರೂ ಚಿಂತೆಯಿಲ್ಲ. ನೀನು ಈ ಕೆಲಸವನ್ನು ಮಾಡಿಕೊಂಡು ಬರಲಿಕ್ಕೆಬೇಕು." ಎಂದು ಹೇಳಿದನು.

ಕಾವಲುಗಾರನು ಸಲಾಂಮಾಡಿ—"ಜನಾಬರವರ ಅಪ್ಪಣೆಯಂತೆ ವರ್ತಿಸುವೆನು," ಎಂದುಹೇಳಿ, ಇನ್ನು ಹೊರಡತಕ್ಕವನಿದ್ದನು. ಈ ಸಮಯದಲ್ಲಿ ಅಲ್ಲಿಗೆ ಒಬ್ಬನು ಬಂದು,—"ಜನಾಬ, ನಾನು ಬಂದಿದ್ದೇನೆ," ಎಂದು ಹೇಳಿದನು.

ದುರ್ಗಾಧಿಪತಿಯು ವಿಸ್ಮಿತನಾಗಿ—"ಇದೇನು! ಅಫಶಾನ! ನೀನು ಇಷ್ಟುಹೊತ್ತಿನವರೆಗೆ ಎಲ್ಲಿಹೋಗಿದ್ದೆ?" ಎಂದು ಕೇಳಿದನು.

ಅಫಶಾನನು ನೆಲಮುಟ್ಟಿ ಸಲಾಂಮಾಡಿ—"ಮಹಾರಾಜ, ಈ ಸೇವಕನ ಅಪರಾಧವನ್ನು ಕ್ಷಮಿಸಬೇಕು. ನಾನು ಓಡಿಹೋದ ಬಂದಿಯ ಸಂಧಾನಕ್ಕಾಗಿ ಹೋಗಿದ್ದೆ." ಎಂದು ಹೇಳಿದನು.

"ಕೈದಿಯು ಓಡಿಹೋದದ್ದಾದರೂ ಹೇಗೆ?"

"ಅದನ್ನು ನಾನು ಅರಿಯೆ."

"ಸೆರೆಮನೆಯ ಬೀಗದಕೈ ನಿನ್ನ ಬಳಿಯಲ್ಲಿದ್ದಿತು. ಈಗ ಅದು ಕಾರಾಗೃಹದ ಬಾಗಿಲಲ್ಲಿದೆ. ಬೇಕಾದರೆ ಹೋಗಿ ನೋಡಿಬಾ. ನಿನ್ನಲ್ಲಿದ್ದ ಬೀಗದಕೈ ಅದೇ ಅಲ್ಲವೇ?"

"ನಾನು ಈ ಮೊದಲೇ ಅದನ್ನು ನೋಡಿದ್ದೇನೆ. ಅದೇ ನನ್ನ ಕಿಸೆಯಲ್ಲಿದ್ದ ಬೀಗದಕೈ."

"ಆ ಬೀಗದಕೈ ಅಲ್ಲಿಗೆ ಹೋದುದು ಹೇಗೆ?"

"ಅದನ್ನು ನಾನರಿಯೆ. ಹೇಗೆ ಹೋಗಿರಬಹುದೆಂಬದನ್ನು ತರ್ಕಿಸಿಯೂ ಹೇಳಲಾರೆ."

"ನಿನ್ನೆರಾತ್ರಿ ನೀನು ಎಲ್ಲಿದ್ದೆ?"

"ನಾನು ಅಂಗಳದಲ್ಲಿ ಮಲಗಿದ್ದೆ."

"ನೀನು ನಿನ್ನ ಕೋಣೆಯನ್ನುಬಿಟ್ಟು, ಅಲ್ಲಿ ನಿದ್ರಿಸುತ್ತಿದ್ದುದೇಕೆ?"

"ಮಹಾರಾಜ, ಈ ದಾಸನ ತಪ್ಪನ್ನು ಕ್ಷಮಿಸಬೇಕು. ಅನೇಕ ಕಾರಣಗಳ ಮೂಲಕ ನಾನು ತಮ್ಮ ಈ ಪ್ರಶ್ನೆಗೆ ಉತ್ತರಕೊಡಲಾರೆ."

"ಅಫಶಾನ! ನೀನು ವಿಶ್ವಾಸಘಾತಕ! ಪಿಶಾಚ! ಈ ವ್ಯಾಪಾರದ ರಹಸ್ಯವನ್ನು ನೀನು ಬಲ್ಲೆ; ಆದರೂ ಅದನ್ನು ನೀನು ಹೇಳಲೊಲ್ಲೆ."

ಮಿರಾನಶಹನು ಕ್ರೋಧಕಂಪಿತಸ್ವರದಿಂದ ಮತ್ತೆ ಹೇಳಿದನು—"ಅಫಶಾನ, ನಿನ್ನ ಶಸ್ತ್ರವನ್ನು ಕೆಳಗಿರಿಸು. ಇಂದಿನಿಂದ ನಿನ್ನನ್ನು ಸೇನಾಪತಿಯ ಕೆಲಸದಿಂದ ತೆಗೆದುಹಾಕಿದ್ದೇನೆ."

ಅಫಶಾನನು ತನ್ನ ಕಟಿಪ್ರದೇಶದಲ್ಲಿದ್ದ ಖಡ್ಗವನ್ನೂ, ಕೈಯೊಳಗಿನ ಭರ್ಜಿಯನ್ನೂ ದುರ್ಗಾಧಿಪತಿಯ ಮುಂದೆ ನೆಲದಮೇಲಿರಿಸಿ—"ನಾನು ಯಾವಾಗಲೂ ತಮ್ಮ ಅಪ್ಪಣೆ ಪಾಲಿಸುವ ಸೇವಕನು. ನನಗೆ ತಮ್ಮ ಆಜ್ಞೆಯು ಶಿರೋಧಾರ್ಯವು," ಎಂದು ಹೇಳಿದನು.

ಮಿರಾನಶಹನು ತಿರಸ್ಕಾರಸೂಚಕ ಹಾಸ್ಯವನ್ನುತಳೆದು—"ನೀನು ನಿನ್ನೆರಾತ್ರಿ ಮಾಡಿದ ಕೆಲಸದಿಂದ ಇದನ್ನು ಮನಗಂಡಿದ್ದೇನೆ," ಎಂದು ಸಮೀಪದಲ್ಲಿದ್ದ ಇಬ್ಬರು ಪ್ರಹರಿಗಳನ್ನು ಕುರಿತು—"ಈಗ ನೀವು ಇವನನ್ನ ಸೆರೆಮನೆಗೆ ತೆಗೆದುಕೊಂಡುಹೋಗಿರಿ. ಈಗಲೇ ನಾನು ಸರದಾರರನ್ನು ಕರೆ ಕಳುಹಿಸುತ್ತೇನೆ. ಅವರೇ ಇವನ ಅಪರಾಧದ ವಿಚಾರಕರು," ಎಂದು ಹೇಳಿದನು.

ಮಿರಾನಶಹನು ಅಫಶಾನನನ್ನು ಮಗನಿಗಿಂತಲೂ ಹೆಚ್ಚುಪ್ರೀತಿಸುತ್ತಿದ್ದನು. ಅದಕ್ಕಾಗಿಯೇ ಅವನು ಅಫಶಾನನನ್ನು ತನ್ನರಾಜ್ಯದ ಮುಖ್ಯ ಸೇನಾಪತಿಯನ್ನಾಗಿ ಮಾಡಿದ್ದನು. ಅಫಶಾನನು ವಿಶ್ವಾಸಿಯೂ, ಶಕ್ತಿಶಾಲಿಯೂ, ಚತುರನೂ ಆದ ಸೇನಾಪತಿಯಾಗಿರುವನೆಂದು, ಮಿರಾನಶಹನು ನಂಬಿದ್ದನು. ಅಫಶಾನನಿಗೆ ಮಿರಾನಶಹನ ಅಂತಃಪುರದಲ್ಲಿ ಬೇಕಾದಲ್ಲಿ ಸಂಚರಿಸಲಿಕ್ಕೂ ಪ್ರತಿಬಂಧವಿರಲಿಲ್ಲ. ಅಫಶಾನನು ಪನ್ನಾಮತಿಯೊಡನೆ ಸಲುಗೆಯಿಂದ ವರ್ತಿಸುವದಕ್ಕೆ ಮಿರಾನಶಹನು ಪ್ರತಿಬಂಧ ಮಾಡಿದ್ದಿಲ್ಲ. ಅದರಿಂದ ಅನೇಕರು ಈ ಅಫಶಾನನು ಮುಂದೆ ದುರ್ಗಾಧಿಪತಿಯ ಅಳಿಯನಾಗುವನೆಂದು ಎಣಿಕೆಹಾಕಿದ್ದರು.

ತನ್ನ ಪ್ರೀತಿಗೆಪಾತ್ರನಾದ ಅಫಶಾನನನ್ನು ಬಂದಿಯನ್ನಾಗಿಮಾಡಿದ್ದಕ್ಕೆ ಮಿರಾನಶಹನಿಗೆ ಕೆಡಕೆನಿಸಿತು. ಆದರೆ ನಿರ್ವಾಹವಿರಲಿಲ್ಲ. ಪ್ರೇಮಕ್ಕಿಂತಲೂ ಕರ್ತವ್ಯವು ಹೆಚ್ಚಿನದಾಗಿತ್ತು. ಕಾರಣ ಕರ್ತವ್ಯಪಾಲನೆಯ ಸಮಯದಲ್ಲಿ ಅವನು ಈ ಸ್ನೇಹವನ್ನು ಗಣನೆಗೆತರಲಿಲ್ಲ. ಒಂದು ವೇಳೆ ಮಿರಾನಶಹನಿಗೆ ಒಬ್ಬಮಗನಿದ್ದು, ಅವನು ಈ ಕೆಲಸವನ್ನು ಮಾಡಿದ್ದರೂ, ಶಿಕ್ಷೆಹೊಂದದೆ ಇರುತ್ತಿದ್ದಿಲ್ಲ. ಇದು ಕಠೋರರಾದ ಪಠಾಣರ ಚರಿತ್ರೆಯ ವಿಶಿಷ್ಟಸಂಗತಿಯು.

ಮಿರಾನಶಹನ ಕೈಯಲ್ಲಿಯೇ ಯಾವತ್ತೂ ಅಧಿಕಾರವಿದ್ದಿಲ್ಲ. ಅವನು ಯಾವುದೊಂದು ಕೆಲಸಮಾಡಬೇಕಾದರೂ ಮುಖ್ಯಸರದಾರರ ಅನುಮತಿ ಕೇಳಬೇಕಾಗಿದ್ದಿತು. ಮೊಗಲಸೇನಾಪತಿಗೆ ಮರಣದಂಡನೆವಿಧಿಸುವ ಮನಸ್ಸು ಮಿರಾನಶಹನಿಗಿರದಿದ್ದರೂ, ಸರದಾರರ ಆಗ್ರಹಕ್ಕೊಳಗಾಗಿ ಅವನು ಈ ಕೆಲಸವನ್ನು ಮಾಡಬೇಕಾಯಿತೆಂಬದನ್ನು ನಾವು ಹಿಂದೆ ಹೇಳಿದ್ದೇವೆ. ಆದರೂ ಮಿರಾನಶಹನು ಬಂದಿಯವಿಷಯದಲ್ಲಿ ಸ್ವಲ್ಪವಾದರೂ ದಯೆತೋರಿಸುವದಕ್ಕಾಗಿ, ಮೊಗಲಬಂದಿಯನ್ನು ಸಾಮಾನ್ಯವಾದ ಕಾರಾಗೃಹಕ್ಕೆ ಕಳುಹಿಸದೆ, ತನ್ನ ಅರಮನೆಯಲ್ಲಿಯ ಒಂದು ಕೋಣೆಯಲ್ಲಿ ಇರಿಸುವೆನೆಂದು ಸರದಾರರಿಗೆ ವಿನಂತಿಮಾಡಿಕೊಂಡಿದ್ದನು. ಇದಕ್ಕೆ ಸರದಾರರು ಸಮ್ಮತಿಸಿದ್ದರು. ಮಿರಾನಶಹನು ಬಂದಿಯನ್ನು ತನ್ನ ಅರಮನೆಯಲ್ಲಿಟ್ಟುಕೊಂಡು, ಅವನರಕ್ಷಣೆಯ ಭಾರವನ್ನು ವಿಶ್ವಾಸಿಯಾದ ಅಫಶಾನನಿಗೆ ಒಪ್ಪಿಸಿದ್ದನು. ಬಂದಿಯು ಅಫಶಾನನ ದೋಷದಿಂದ ಪಾರಾಗಿಹೋದದ್ದನ್ನು ತಿಳಿದಿದ್ದರೂ ಮಿರಾನಶಹನು ಸುಮ್ಮನೆ ಇರುವದನ್ನು ಸರದಾರರು ನೋಡಿದ್ದರೆ, ಅವರು ಮಿರಾನಶಹನವಿಷಯದಲ್ಲಿ ಸಂದೇಹತೆಗೆದುಕೊಳ್ಳದಿರುತ್ತಿರಲಿಲ್ಲ. ಅದಕ್ಕಾಗಿ ಮಿರಾನಶಹನು ಅಫಶಾನನ ವಿಷಯದಲ್ಲಿ ಕಠೋರವಾದ ಆಚರಣೆಯನ್ನು ಆಚರಿಸಬೇಕಾಯಿತು.

ಬುದ್ಧಿಬಲವೂ, ಧನಬಲವೂ ಉಳ್ಳ ಜನರು ತಾವು ಬೇಕಾದ ಕೆಲಸ ಮಾಡಬಹುದೆಂದು ಅಭಿಮಾನಪಡುತ್ತಿರುವರು; ಆದರೆ ಹೀಗೆ ಅಭಿಮಾನ ಪಡುವದಕ್ಕೆ ಈ ಜಗತ್ತಿನಲ್ಲಿ ಆಸ್ಪದವಿಲ್ಲ. ಹೀಗೆ ಅಭಿಮಾನಪಡುತ್ತಿರುವ ಎಷ್ಟೋಜನರು ಅನಿಷ್ಟಪ್ರಸಂಗಕ್ಕೊಳಗಾಗಿ ದುಃಖಭೋಗಿಗಳಾಗುತ್ತಿರುವದನ್ನು ನಾವು ಪ್ರತ್ಯಕ್ಷವಾಗಿ ನೋಡಬಹುದು. ಅದಕ್ಕಾಗಿಯೇ ಜ್ಞಾನಿಗಳು ಮನುಷ್ಯನ ಕೈಯಲ್ಲಿ ಏನೂ ಇಲ್ಲವೆಂದೂ, ಎಲ್ಲವೂ ದೈವಾಧೀನವೆಂದೂ ಹೇಳುತ್ತಿರುವರು. ಪಠಾಣರಾದರೋ ಮೊಗಲಸೇನಾಪತಿಯು ತಮ್ಮ ಬಂದಿಯಾದುದನ್ನು ತಿಳಿದು, ಬಹಳ ಆನಂದಿತರಾಗಿದ್ದರು. ಅವರು ಈ ಖೈದಿಯನ್ನು ಕೊಂದುಬಿಟ್ಟರೆ, ಮೊಗಲರ ಸೈನ್ಯಕ್ಕೆ ನಾಯಕನಿಲ್ಲ

ಪಂತಾಗುವದೆಂದೂ, ಅದರಿಂದ ತಮ್ಮ ಕೆಲಸವು ಅನಾಯಾಸವಾಗಿ ಆಗಿಹೋಗುವದೆಂದೂ ಭಾವಿಸಿದ್ದರು; ಹೀಗೆ ತಾವು ಮೊಗಲರನ್ನು ಸಹಜವಾಗಿ ಸೋಲಿಸಿದ್ದಾದರೆ, ಎರಡುಸಾರಿ ಅಪಜಯಪಟ್ಟದ್ದರಿಂದ ಲಜ್ಜಿತನಾದ ಅಕಬರಶಹನು ಇನ್ನುಮೇಲೆ ತಮ್ಮ ಹೆಸರನ್ನು ತೆಗೆಯುವ ಸಾಹಸ ಮಾಡುವ ಸಂಭವವಿರದೆಂದೂ ಅವರು ಆಲೋಚನೆ ಹಾಕಿಕೊಂಡಿದ್ದರು. ಆದರೆ ಅವರ ಈ ಆಲೋಚನೆಯು ಕಡೆಹಾಯಲಿಲ್ಲ. ಅವರಿಗುಂಟಾದ ಆನಂದವು ಬಹುಕಾಲವುಳಿಯಲಿಲ್ಲ. ಬಂದಿಯು ಓಡಿಹೋದದ್ದನ್ನು ತಿಳಿದು ಎಲ್ಲರೂ ಹಾರಿಬಿದ್ದರು.

ಮಿರಾನಶಹನು ಮುಖ್ಯ ಸರದಾರರನ್ನು ಕರೆಕಳುಹಿಸಿಕೊಂಡನು. ಅವರೆಲ್ಲರೂ ಬಂದತರುವಾಯ ಒಂದುಸ್ಥಳದಲ್ಲಿ ಗುಪ್ತಸಭೆಯು ನೆರೆಯಿತು. ಮಿರಾನಶಹನು ಸರದಾರರಿಗೆ ರಾತ್ರಿ ನಡೆದಸಂಗತಿಯನ್ನು ಹೇಳಿದನು. ಇದನ್ನು ಕೇಳಿ ಸರದಾರರಿಗೆ ಅಸಮಾಧಾನವಾಯಿತು. ಅವರು ಮಿರಾನಶಹನಮೇಲೂ, ಅಫಶಾನನಮೇಲೂ ಸಿಟ್ಟಾದರು.

ಪಠಾಣರು ಮೊಗಲರ ಸೇನೆಯ ಇರುವಿಕೆಯನ್ನು ತಿಳಿದುಕೊಂಡು ಬರುವದಕ್ಕಾಗಿ ಗುಪ್ತಚಾರರನ್ನು ನಿಯಮಿಸಿದ್ದರು ಅವರು ಈ ಬಾರಿ ಮೊಗಲಸೇನೆಯು ದೊಡ್ಡದೆಂದೂ, ಮೊಗಲರ ಬಳಿಯಲ್ಲಿ ಬಹಳ ತೋಫುಗಳಿರುವುವೆಂದೂ ಹೇಳಿದ್ದರು. ಅದರಿಂದ ಪಠಾಣರು ಮೊಗಲರನ್ನು ಹೇಗೆ ಸೋಲಿಸಬೇಕೆಂಬ ವಿಚಾರದಲ್ಲಿ ಮೊದಲೇ ಬಿದ್ದಿದ್ದರು. ಈ ಸಮಯದಲ್ಲಿ ಮೊಗಲ ಸೇನಾಪತಿಯು ಅನಾಯಾಸವಾಗಿ ಬಂದಿಯಾದ್ದರಿಂದ, ಪಠಾಣರು ತಮ್ಮ ಮುಂದಿನಮಾರ್ಗವು ಕಂಟಕರಹಿತವಾಗಿದೆಯೆಂದು ಭಾವಿಸಿದರು; ಆದರೆ ಬಂದಿ ಓಡಿಹೋದದ್ದನ್ನು ಕೇಳಿ ಅವರಿಗೆ ಪುನಃ ದೊಡ್ಡ ಚಿಂತೆಯುಂಟಾಯಿತು.

ಸರದಾರರೆಲ್ಲರೂ ವಿಚಾರಮಾಡಿ, ಬಂದಿಯು ಓಡಿಹೋಗುವದಕ್ಕೆ ಅಫಶಾನನೇ ಕಾರಣೀಭೂತನೆಂದು ನಿರ್ಧರಿಸಿದರು. ಮಿಯಾಮುಹಮ್ಮದನೆಂಬ ಮುಖ್ಯ ಸರದಾರನು ಮುಷ್ಟಿಬದ್ಧವಾದ ತನ್ನ ಬಲಗೈಯನ್ನು ಮೇಲಕ್ಕೆತ್ತಿ, ಕಟಕಟನೆ ಹಲ್ಲುಕಡಿದು, ಕ್ರೋಧಕಂಪಿತಸ್ವರದಿಂದ—“ ಈ

ಅಫಶಾನನು ಎಂಥ ವಿಶ್ವಾಸಘಾತಕತನ ಮಾಡಿದ!" ಎಂದು ಅಂದನು. ಇವನ ಬಳಿಯಲ್ಲಿಯೇ ರಸೂಲಖಾನನೆಂಬ ಸರದಾರನು ಕುಳಿತಿದ್ದನು. ಇವನು ಪನ್ನಾಮತಿಯನ್ನು ತನ್ನ ಸೊಸೆಯನ್ನಾಗಿ ಮಾಡಿಕೊಳ್ಳುವ ಇಚ್ಛೆಯಿಂದ, ಮಿರಾನಶಹನ ಬಳಿಯಲ್ಲಿ ಅನೇಕಸಾರಿ ಪ್ರಸ್ತಾಪ ತೆಗೆದಿದ್ದನು. ಆದರೆ ಮಿರಾನಶಹನು ಇದಕ್ಕೆ ಒಪ್ಪಿರಲಿಲ್ಲ. ರಸೂಲಖಾನನು ಇದಕ್ಕೆ ಅಫಶಾನನೇ ಕಾರಣಭೂತನಾಗಿರುವನೆಂದು ಭಾವಿಸಿದ್ದನು. ಅದಕ್ಕಾಗಿ ಇವನು ಅಫಶಾನನಮೇಲೆ ಸಿಟ್ಟಾಗಿದ್ದನು. ಇವನು ಈ ಸಮಯದಲ್ಲಿ ಚೀತ್ಕಾರಮಾಡಿ—"ಸರದಾರ ಮಿಯಾಮುಹಮ್ಮದರವರು ಹೇಳಿದ್ದು ಸತ್ಯವಾದದ್ದು. ಅಫಶಾನನು ಪಠಾಣನಾಗಿದ್ದು, ವಿಶ್ವಾಸಘಾತಕತನದಿಂದ ಬಂದಿಯನ್ನು ಸೆರೆಮನೆಯಿಂದ ಪಾರುಮಾಡಿದ್ದಾನೆ. ಆದ್ದರಿಂದ ಇವನು ಕಠಿಣಶಿಕ್ಷೆಗೆ ಪಾತ್ರನಾಗಬೇಕಾದದ್ದು ಯುಕ್ತವು. ಮೊಗಲ-ಬಂದಿಯ ಬದಲು ಇವನಿಗೆ ಮರಣದಂಡನೆ ವಿಧಿಸುವದು ಸಯುಕ್ತಿಕವೆಂದು ನನಗೆ ತೋರುತ್ತಿದೆ." ಎಂದು ಹೇಳಿದನು.

ಉಳಿದ ಮೂರುನಾಲ್ಕುಮಂದಿ ಸರದಾರರು ಈ ಮಾತಿಗೆ ತಲೆದೂಗಿದರು. ಆದರಿಂದ ಅಫಶಾನನಿಗೆ ಮರಣದಂಡನೆ ವಿಧಿಸುವದು ಸರ್ವಾನುಮತದಿಂದ ನಿರ್ಧರವಾಯಿತು. ಮಿರಾನಶಹನು ವಿಷಮ ವಿಪತ್ತಿಗೊಳಗಾದನು; ಯಾಕಂದರೆ ಅಫಶಾನನನ್ನು ಕೊಲ್ಲಿಸುವದು ಅವನಿಗೆ ಇಷ್ಟವಾಗಿರಲಿಲ್ಲ. ಅವನು ಸರದಾರರ ಮುಖವನ್ನು ನೋಡಿದನು. ಎಲ್ಲರ ಮುಖದಮೇಲೆ ದೃಢಪ್ರತಿಜ್ಞೆಯ ಚಿಹ್ನವು ತೋರುತಲಿತ್ತು. ಎಲ್ಲರೂ ಪ್ರತಿಹಿಂಸೆಗಾಗಿ ಉತ್ಸುಕರಾಗಿದ್ದರು. ಈ ಸಮಯದಲ್ಲಿ ತಾನೇನಾದರೂ ವಿನಂತಿಮಾಡಿಕೊಂಡರೆ, ಅದು ನಿಷ್ಫಲವಾಗುವದೆಂಬದನ್ನು ಮಿರಾನಶಹನು ತಿಳಿದುಕೊಂಡು ಸುಮ್ಮನೆ ಕುಳಿತುಕೊಳ್ಳಬೇಕಾಯಿತು.

ಸರದಾರ ಮಿಯಾಮುಹಮ್ಮದನು ಸಿಟ್ಟಿನಿಂದ—"ಮಹಾರಾಜ, ಅಫಶಾನನನ್ನು ಇಲ್ಲಿಗೆ ಕರೆಯಿಸಬೇಕು. ನಾನು ಅವನಿಗೆ ಮೂರು-ನಾಲ್ಕು ಪ್ರಶ್ನೆಗಳನ್ನು ಕೇಳತಕ್ಕವನಿದ್ದೇನೆ. ಅವನು ಮಾಡಿದತಪ್ಪು ಅಂಥಿಂಥದಲ್ಲ! ನಾನು ಕೇಳಿದ ಸಂಗತಿಗಳಿಗೆ ಸರಿಯಾಗಿ ಉತ್ತರವನ್ನು ಕೊಡದಿದ್ದರೆ,

ಅವನು ನಿಶ್ಚಯವಾಗಿಯೂ ದಂಡಾರ್ಹನೆಂದು ಗೊತ್ತುಪಡಿಸಬಹುದು." ಎಂದುಹೇಳಿದನು.

ಮಿರಾನಶಹನ ಇಂಗಿತದಿಂದ, ಇಬ್ಬರು ಪ್ರಹರಿಗಳು ಕೂಡಲೇ ಅಫಶಾನನನ್ನು ಅಲ್ಲಿ ತಂದುನಿಲ್ಲಿಸಿದರು. ಚಿಂತೆಯಿಂದಲೂ, ಲಜ್ಜೆಯಿಂದಲೂ, ಕಲಂಕದಭಯದಿಂದಲೂ ಅಫಶಾನನ ಮುಖವು ಶವದ ಮೋರೆಯಂತೆ ಬಾಡಿಹೋಗಿದ್ದಿತು. ಅಫಶಾನನು ಸರದಾರರ ಆಲೋಚನಾ ಸಭೆಯನ್ನು ಪ್ರವೇಶಿಸಬೇಕಾದರೆ ಇದುವರೆಗೆ ಸೇನಾಪತಿಯು ದರ್ಪದಿಂದ ಪ್ರವೇಶಿಸುತ್ತಿದ್ದನು: ಇಂದು ಅವನಲ್ಲಿ ಆ ದರ್ಪವಿಲ್ಲ. ಬಂದಿಯಾಗಿ ದೀನನಂತೆ ಬಂದುನಿಂತುಕೊಳ್ಳಬೇಕಾಯಿತು. ಪ್ರಿಯವಾಚಕರೇ, ಇದನ್ನುನೋಡಿ "ಭವಿತವ್ಯವನ್ನು ತಿಳಿದವರಾರು?" ಎಂಬ ಉದ್ಗಾರವು ನಿಮ್ಮ ಮುಖದಿಂದ ಸಹಜವಾಗಿ ಹೊರಡಬಹುದಲ್ಲವೇ?

ಸರದಾರ ಮಿಯಾಮುಹಮ್ಮದನು "ಅಫಶಾನಖಾ! ಆ ಮೊಗಲ-ಕೈದಿ ಎಲ್ಲಿ?" ಎಂದು ಕೇಳಿದನು. ಅಫಶಾನನು ತಿರಸ್ಕಾರಪೂರ್ಣಸ್ವರದಿಂದ— "ಬಂದಿ ಓಡಿಹೋಗಿದ್ದಾನೆ."

"ಅಫಶಾನಖಾ, ಬಂದಿಯು ನಿನ್ನೆರಾತ್ರಿಯಲ್ಲಿ ನಿಮ್ಮ ಸ್ವಾಧೀನದಲ್ಲಿಯೇ ಇದ್ದನಲ್ಲವೇ?"

"ಅಹುದು."

"ಕೈದಿಯು ಓಡಿಹೋದಬಗ್ಗೆ ನೀವೇ ಅಪರಾಧಿಗಳಲ್ಲವೆ?"

"ಅಹುದು."

"ಈ ಅಪರಾಧಕ್ಕೆ ಯಾವಶಿಕ್ಷೆ ವಿಧಿಸಲ್ಪಡುವದೆಂಬುದನ್ನು ನೀವು ಬಲ್ಲಿರಾ?"

"ಇಲ್ಲ."

"ಬಂದಿಯು ಬದಲಾಗಿ ನಿಮ್ಮ ಕೊಲೆಮಾಡಬೇಕಾಗುವುದು."

"ಆಗಬಹುದು. ತಾವೆಲ್ಲರೂ ಕೂಡಿ ನನಗೆ ಈ ಶಿಕ್ಷೆಯನ್ನು ವಿಧಿಸುವಿರಾದರೆ, ನಾನು ಮರಣಕ್ಕಾಗಿ ಹೆದರುವದಿಲ್ಲ. ಆದರೆ ಒಬ್ಬ

ನಿರಪರಾಧಿಯಾದ ಮನುಷ್ಯನನ್ನು ಕೊಲ್ಲಿಸುವದು ಅನ್ಯಾಯದ ಕೆಲಸ ವೆಂಬದನ್ನು ಮಾತ್ರ ನಾನು ನಿಮಗೆ ಈ ಸಂದರ್ಭದಲ್ಲಿ ಸೂಚಿಸದಿರ ಲಾರೆನು. ಈ ಅನ್ಯಾಯಕ್ಕಾಗಿ ನೀವು ಈ ಜಗತ್ತಿನಲ್ಲಿ ಶಿಕ್ಷೆಯನ್ನನುಭ ವಿಸುವ ಪ್ರಸಂಗವು ಬರದಿದ್ದರೂ, ದೇವರಬಳಿ ನೀವು ದೋಷಿಗಳಾಗು ವದರಲ್ಲಿ ಸಂದೇಹವಿಲ್ಲ."

"ನಿನ್ನೆರಾತ್ರಿಯಲ್ಲಿ ನೀವು ಎಲ್ಲಿ ಇದ್ದಿರಿ?"

"ರಾತ್ರಿ ದ್ವಿತೀಯಪ್ರಹರದ ಅರ್ಧಭಾಗದವರೆಗೆ ನಾನು ಪನ್ನಾಳ ಕೊಟಡಿಯಲ್ಲಿ ಅವಳೊಡನೆ ಕೈದಿಯ ಸಂಬಂಧದ ಮಾತು-ಕಥೆಗ ಳನ್ನಾಡುತ್ತ ಕುಳಿತುಕೊಂಡಿದ್ದೆನು."

"ತರುವಾಯ?"

"ತರುವಾಯ ವರ್ತಿಸಿದ ಸಂಗತಿಗಳನ್ನು ನಾನರಿಯೆನು."

"ನೀವು ರಾತ್ರಿಯಲ್ಲಿ ಬಂದಿಯು ಕಾರಾಗಾರದಲ್ಲಿ ಇರುವನೋ ಇಲ್ಲವೋ ಎಂಬದನ್ನು ನೋಡಿದಿರಾ?"

"ರಾತ್ರಿಯ ಮೊದಲನೆಯ ಪ್ರಹರದಲ್ಲೊಮ್ಮೆ ನೆರೆಮನೆಗೆ ಹೋಗಿದ್ದೆನು."

"ಆಗ ಬಂದಿ ಕಾರಾಗೃಹದಲ್ಲಿದ್ದನೇ?"

"ಇದ್ದನು."

"ತರುವಾಯ?"

"ಮುಂದೆ ನಡೆದ ಸಂಗತಿಯು ನನಗೆ ಗೊತ್ತಿಲ್ಲವೆಂಬದನ್ನು ನಾನು ಆಗಲೇ ಬಿನ್ನವಿಸಿದ್ದೇನೆ. ಈ ಬಗ್ಗೆ ಇನ್ನು ಯಾವ ಪ್ರಶ್ನೆಗಳನ್ನೂ ಕೇಳ ಬೇಡಿರಿ."

ಸರದಾರರು ತಮ್ಮತಮ್ಮೊಳಗೆ ಏನೇನೋ ಮಾತಾಡಿಕೊಂಡರು. ತರುವಾಯ ಒಬ್ಬ ಸರದಾರನು ಎದ್ದುಬಂದು, ಮಿರಾನಶಹನ ಕಿವಿಯಲ್ಲಿ ಏನೋ ಹೇಳಿಹೋದನು. ಮಿರಾನಶಹನು ತುಸುಹೊತ್ತಿನವರೆಗೆ ಗಂಭೀರ

ಭಾವದಿಂದ ಕುಳಿತು ಆಮೇಲೆ ದೀರ್ಘನಿಶ್ವಾಸವನ್ನು ಬಿಟ್ಟು—"ಅಫಶಾನ." ಎಂದು ಕರೆದನು.

"ಮಹಾರಾಜ, ಅಪ್ಪಣೆಯಾಗಬೇಕು." ಎಂದು ಅಫಶಾನನೆಂದನು.

"ಸರದಾರರು ನಿನ್ನಮೇಲೆ ವಿಶ್ವಾಸಘಾತಕತನದ ಆರೋಪ ಹೊರಿಸುತ್ತಿರುವರು."

"ಇವರು ಯಾವ ಅಪರಾಧವನ್ನಾದರೂ ನನ್ನಮೇಲೆ ಹೊರಿಸಬಹುದು; ಆದರೆ ನಾನು ನಿರಪರಾಧಿಯಾಗಿರುವೆನೆಂಬುದನ್ನು ದೇವರು ಬಲ್ಲನು. ಆದರೆ ನನ್ನಲ್ಲಿ ಎಳ್ಳಷ್ಟಾದರೂ ತಪ್ಪಿಲ್ಲವೆಂದು ಹೇಳಲಾರೆನು. ನಿನ್ನೆ ನಾನು ನನ್ನ ಕರ್ತವ್ಯವನ್ನು ಸರಿಯಾಗಿಮಾಡಲಿಲ್ಲವೆಂಬುದೇನೋ ನಿಜ."

"ನೀನು ಕರ್ತವ್ಯಹೀನನಾದದ್ದು ಸಾಮಾನ್ಯ ತಪ್ಪೇನು? ಇದಕ್ಕಾಗಿ ನೀನು ಭಯಂಕರವಾದ ಶಿಕ್ಷೆಯನ್ನು ಅನುಭವಿಸಬೇಕಾಗುವದು. ನಿನ್ನ ಈ ದೋಷದಿಂದ ಅಫಜಾಯಿರಾಜ್ಯಕ್ಕೆ ಮಹಾ ಅನಿಷ್ಟತಂದಿರುವೆ. ನಾನು ಪ್ರತಿಯೊಂದು ಕೆಲಸವನ್ನೂ ಈ ಸರದಾರರ ಅನುಮತಿಯಿಂದ ಮಾಡುತ್ತಿರುವೆನೆಂಬದನ್ನು ನೀನುಬಲ್ಲೆ. ನಿನ್ನ ಈ ಅಪರಾಧಕ್ಕಾಗಿ, ಇವರೆಲ್ಲರೂ ಏಕಮತರಾಗಿ ನಿನಗೆ ಮರಣದಂಡನೆ ವಿಧಿಸಿದ್ದಾರೆ. ಮೊಗಲಬಂದಿಯ ಸಲುವಾಗಿ ತೆಗ್ಗನ್ನು ತೆಗೆಸಿದೆ. ಆ ತೆಗ್ಗಿನಲ್ಲಿ ನಿನ್ನನ್ನು ಹೂಳಿಬಿಡುವರು. ಇನ್ನು ನೀನು ಮೃತ್ಯುವಿಗಾಗಿ ಸಿದ್ಧನಾಗು."

ಈ ಕಠೋರವಾದ ಶಿಕ್ಷೆಯನ್ನು ವಿಧಿಸುವಕಾಲಕ್ಕೆ ಮಿರಾನಶ್ಹಾನ ಕಣ್ಣುಗಳಲ್ಲಿ ನೀರುಬಂತು. ಅವನ ಪಾಷಾಣಹೃದಯವು ಪುಡಿಪುಡಿಯಾಗಿ ಹೋಯಿತು.

ಈ ಕಠೋರವಾದ ಶಿಕ್ಷೆಯನ್ನು ಕೇಳಿ, ಅಫಶಾನನು ಕೈಜೋಡಿಸಿ, ಮೋರೆಯನ್ನು ಮೇಲಕ್ಕೆತ್ತಿ—"ದಯಾಸಾಗರನಾದ ದೇವರೆ! ವಿಶ್ವಾಸಘಾತಕತನದ ಕಲಂಕವನ್ನು ಹೊತ್ತು ಸಾಯಬೇಕಾಯಿತಲ್ಲ! ಇದು ನನಗೆ ದಾರುಣವಾದ ವೇದನೆಯನ್ನುಂಟುಮಾಡುತ್ತಿದೆ. ಈ ಪ್ರಸಂಗದಲ್ಲಿ ನೀನೇ

ನನಗೆ ಸಹಾಯಕನು. ದಯವಿಟ್ಟು ಈ ಕಲಂಕವನ್ನು ಹೋಗಲಾಡಿಸು." ಎಂದು ದೇವರನ್ನು ಬೇಡಿಕೊಂಡನು.

ಮಿರಾನಶಹನು ಈ ಶೋಚನೀಯದೃಶ್ಯವನ್ನು ನೋಡಲಾರದೆ ಅಸ್ಫುಟಸ್ವರದಿಂದ—"ಅಯ್ಯೋ! ಚಿರವಿಶ್ವಾಸಿಕನಾದ ಅಫಶಾನನೆ! ನಾನಿಂದು ಇಚ್ಛಾಪೂರ್ವಕವಾಗಿ ನನ್ನ ಬಲಗೈಯನ್ನು ಕಡಿದುಕೊಂಡೆನು!" ಎಂದು ಅಂದನು. ತರುವಾಯ ಮಿರಾನಶಹನು ತನ್ನ ಹೃದಯವನ್ನು ಗಟ್ಟಿಮಾಡಿಕೊಂಡು, ಪ್ರಹರಿಗಳಿಗೆ ಸಂಕೇತಮಾಡಿದನು. ಪ್ರಹರಿಗಳು ಅಫಶಾನನನ್ನು ವಧ್ಯಸ್ಥಳಕ್ಕೆ ತೆಗೆದುಕೊಂಡುಹೋಗುವುದಕ್ಕೆ ಸಿದ್ಧರಾದರು. ಈ ವೇಳೆಯಲ್ಲಿ ಉನ್ಮಾದಿನಿಯಂತಿರುವ ಒಬ್ಬ ತರುಣಿಯು ಈ ಸ್ಥಳಕ್ಕೆ ಬಂದು, ಅಶ್ರುಪೂರ್ಣನೇತ್ರಳಾಗಿ—"ಪಠಾಣಬಾದಶಹರೆ, ಸರದಾರರೆ, ನೀವಿಂದು ಒಬ್ಬ ನಿರಪರಾಧಿಗೆ ಮರಣಶಿಕ್ಷೆವಿಧಿಸಿರುವಿರಿ. ತುಸುಹೊತ್ತಿನಲ್ಲಿ ಅವನನ್ನು ಕೊಲ್ಲಿಸುತ್ತಿರುವಿರಿ! ಇದು ನಿಮಗೆ ತರವಲ್ಲ! ಅಫಶಾನನು ಸಂಪೂರ್ಣವಾಗಿ ನಿರ್ದೋಷಿಯಾಗಿದ್ದಾನೆ. ನಾನೇ ಪ್ರಯತ್ನಪೂರ್ವಕವಾಗಿ ಆ ಮೊಗಲಬಂದಿಯನ್ನು ಸೆರೆಮನೆಯಿಂದ ಪಾರುಮಾಡಿದ್ದೇನೆ. ಅಫಶಾನನಿಗೆ ವಿಧಿಸಿದ ಶಿಕ್ಷೆಯನ್ನು ನನಗೆ ಕೊಡಬಹುದು. ನನ್ನ ರಕ್ತದಿಂದ ಈ ಪಠಾಣರಾಜ್ಯಕ್ಕೆ ಒಳಿತಾಗುವಂತಿದ್ದರೆ, ನಾನು ಆನಂದದಿಂದ ಮರಣಕ್ಕೆ ಸಿದ್ಧಳಾಗಿದ್ದೇನೆ. ನೀವು ನನ್ನನ್ನು ಕೊಲ್ಲಿಸಿರಿ; ಈ ನಿರ್ದೋಷಿಯೂ, ಸಚ್ಚರಿತ್ರನೂ, ಕಲಂಕರಹಿತನೂ ಆದ ಅಫಶಾನನನ್ನು ಬಿಡುಗಡೆ ಮಾಡಿರಿ," ಎಂದು ಅಂದಳು.

ಆ ಸಭೆಯಲ್ಲಿ ಕೂಡಿದ ಯಾವತ್ತೂ ಜನರು ವಿಸ್ಮಯದಿಂದ ಸ್ತಂಭಿತರಾದರು. ಇವರಲ್ಲಿ ಕೆಲವರು-ಪನ್ನಾಮತಿಯು ಅಫಶಾನನನ್ನು ಬಹಳವಾಗಿ ಪ್ರೀತಿಸುತ್ತಿರುವುದರಿಂದ ಅವನ ಜೀವರಕ್ಷಣೆಗಾಗಿ ಯಾವತ್ತೂ ಅಪರಾಧವನ್ನು ತನ್ನ ತಲೆಯಮೇಲೆ ಹೊತ್ತುಕೊಳ್ಳುತ್ತಿರುವಳೆಂದು ಭಾವಿಸಿದರು.

ವಯೋವೃದ್ಧನಾದ ಒಬ್ಬ ಸರದಾರನು—"ಪನ್ನಾಮತಿ, ನೀನು ಇಂಥ ಭಯಂಕರಕೆಲಸವನ್ನೇಕೆ ಮಾಡಿದೆ?" ಎಂದು ಕೇಳಿದನು.

ಪನ್ನಾಮತಿಯು ಧೀರತೆಯಿಂದ—"ಸದಸದ್ವಿವೇಕಬುದ್ಧಿಯು ಇದು ನನ್ನ ಕರ್ತವ್ಯವಾಗಿದೆ ಎಂದು ಹೇಳಿತು. ನಾನು ಈ ಕೆಲಸಮಾಡಿದೆನು. ಆ ಮೊಗಲಸೇನಾಪತಿಯನ್ನು ಹಿಡಿದುಕೊಟ್ಟವಳು ನಾನು. ಅವನನ್ನು ಬಿಡುಗಡೆಮಾಡುವ ಅಧಿಕಾರವು ನನಗಿಲ್ಲವೇ?" ಎಂದುಕೇಳಿದಳು.

ಆ ವೃದ್ಧಸರದಾರನು—"ಅವ್ವಾ, ನೀನು ಬಹಳಬುದ್ಧಿವಂತೆಯಾಗಿರುವಂತೆ ತೋರುತ್ತದೆ! ಆ ಸೈನಿಕನು ನಮ್ಮ ಶತ್ರು: ಮೇಲಾಗಿ ನಮ್ಮ ರಹಸ್ಯವನ್ನರಿತುಕೊಳ್ಳುವದಕ್ಕೆ ಗುಪ್ತರೀತಿಯಿಂದ ಬಂದವನು! ಇಂಥವನನ್ನು ಬಿಡುಗಡೆಮಾಡಿದ್ದೇ ಉತ್ತಮವಾಯಿತೆಂದೂ, ಇದು ನಿನ್ನ ಕರ್ತವ್ಯವಾಗಿತ್ತೆಂದೂ ಹೇಳುತ್ತಿರುವೆ! ನಿನ್ನ ಬುದ್ಧಿಗೆ ಬೆಲೆಯೇ ಇಲ್ಲ!" ಎಂದುಹೇಳಿದನು.

ಈ ಮಾತನ್ನು ಕೇಳಿ ಪನ್ನಾಮತಿಗೆ ಬಹಳ ಸಿಟ್ಟುಬಂತು. ಅವಳು ಅಭಿಮಾನದಿಂದ—"ಸರದಾರರೆ, ಬಂದಿಯು ಯಾರೆಂಬವನ್ನು ನೀವು ಅರಿತವರಾಗಿದ್ದರೆ, ಹೀಗೆ ನನ್ನನ್ನು ನಿಂದಿಸುತ್ತಿರಲಿಲ್ಲ. ನಾನಾದರೋ ಆ ಕೈದಿಯನ್ನು ಪಾರುಮಾಡಿ. ಸ್ವದೇಶದ ಹಿತಾರ್ಥವಾಗಿ ಒಂದು ಮಹತ್ಕಾರ್ಯ ಮಾಡಿದೆನೆಂದು ಭಾವಿಸುವೆನು," ಎಂದಳು.

"ಇಷ್ಟುಸಾಹಸದಿಂದ ಬಿಡುಗಡೆಮಾಡಿದ ಆ ಮೊಗಲ ಬಂದಿ
ಯಾದರೂ ಯಾರು?"

"ಆ ಕೈದಿಯು ಪ್ರಬಲ ಪರಾಕ್ರಮಿಯಾದ ಅಕಬರ ಸಾಮ್ರಾಟನ ಮಗನಾದ ಶಹಾಜಾದಾ ದಾನಿಯಲನು. ನೀವು ಅವನನ್ನು ಕ್ರೂರರೀತಿಯಿಂದ ಕೊಲ್ಲಿಸಿದ್ದರೆ ಅಕಬರಬಾದಶಹನು ಪುತ್ರಹತ್ಯೆಯ ಸೇಡಿಗೆ ಉದ್ಯುಕ್ತನಾಗದೆ ಇರುತ್ತಿದ್ದಿಲ್ಲ. ಆಗ ನಿಮ್ಮ ಪಠಾಣರಾಜ್ಯವು ಅಕಬರಶಹನ ಕ್ರೋಧಾಗ್ನಿಗೆ ಆಹುತಿಯಾಗಿ ಸ್ಮಶಾನವಾಗಿ ಪರಿಣಮಿಸುತಿತ್ತು. ನಿಮ್ಮ ಧನಬಲವೆಷ್ಟು? ಸೈನ್ಯಬಲವಾದರೂ ಎಷ್ಟು? ಈ ನಿಮ್ಮ ಬಲವು ದಿಲ್ಲಿಯ ಬಾದಶಹನಿಗೆ ಈಡಾಗುತ್ತಿತ್ತೇ? ನೀವು ನಿಮ್ಮ ಶಕ್ತಿಯನ್ನೂ ಅಕಬರ ಬಾದಶಹನ ಶಕ್ತಿಯನ್ನೂ ವಿಚಾರಮಾಡಿ ನೋಡಿರುವಿರಾ?"

ಈ ಮಾತನ್ನು ಕೇಳಿ ಪಠಾಣರು ಚಮಕಿತರಾದರು. ಮಿರಾನಶಹನು ಬಂದಿಯ ವೇಷಭೂಷಣಗಳನ್ನು ನೋಡಿ, ಇವನೊಬ್ಬ ಶ್ರೇಷ್ಠವಂಶೀಯನೂ, ಉಚ್ಚಪದವಿಯುಳ್ಳವನೂ ಆಗಿರುವನೆಂದು ತರ್ಕಿಸಿದ್ದನು. ಇವನೇ ಕುಮಾರ ದಾನಿಯಲನಾಗಿರಬಹುದೇನು? ಎಂಬ ಸಂದೇಹವೂ ಅವನಿಗೆ ಉಂಟಾಗಿತ್ತು. ಪನ್ನಾಮತಿಯ ಮಾತಿನಿಂದ ತನ್ನ ಅನುಮಾನವು ಸತ್ಯವೆಂದು ತಿಳಿದುಕೊಂಡನು. ಪಠಾಣಸರದಾರರಲ್ಲಿ ಕೆಲವರು ತಮ್ಮ ಮನಸ್ಸಿನಲ್ಲಿಯೇ—"ಪನ್ನಾಮತಿಯು ಹೇಳುತ್ತಿರುವದು ಸತ್ಯವಾದದ್ದು. ಇವಳು ಮಾಡಿದ ಕೆಲಸವೂ ಉತ್ತಮವಾದದ್ದು. ಒಂದುವೇಳೆ ನಾವು ಶಹಾಜಾದಾ ದಾನಿಯಲನನ್ನು ಕೊಂದಿದ್ದರೆ ಘೋರವಿಪತ್ತಿಗೊಳಗಾಗುತ್ತಿದ್ದೆವು," ಎಂದು ಭಾವಿಸತೊಡಗಿದರು.

ಅಫಶಾನನು ಇದೆಲ್ಲವನ್ನು ನೋಡುತ್ತ, ಚಿತ್ರದಲ್ಲಿ ಬರೆದ ಪ್ರತಿಮೆಯಂತೆ ನಿಂತುಕೊಂಡನು. ಅವನಿಗೆ ನಿಜರಹಸ್ಯವು ತಿಳಿಯಬಂದಿತು. ಅವನು, ಪನ್ನಾಮತಿಯು ರೂಪದಿಂದ ಹೇಗೆ ಅಪ್ರತಿಮಳೋ ಹಾಗೆಯೇ ಗುಣದಿಂದಲೂ ಅಲೌಕಿಕಳಾಗಿರುವಳೆಂದು ಭಾವಿಸಿದನು.

ಗತರಾತ್ರಿಯಲ್ಲಿ ತಾನು ಆಚರಿಸಿದ ಸಂಗತಿಗಳನ್ನು ಒಂದೊಂದಾಗಿ ಪನ್ನಾಮತಿ ಹೇಳಿದಳು. ಸರದಾರರೆಲ್ಲರೂ ವಿಸ್ಮಯದಿಂದ ಸ್ತಂಭಿತರಾದರು. ಮಿರಾನಶಹನಿಗೆ ಮಗಳ ಈ ಮಾತುಗಳನ್ನು ಕೇಳಿ, ಬಹಳ ಕೆಡಕೆನಿಸಿತು; ಏಕಂದರೆ ಅವಳು ಇದರಲ್ಲಿ ವಿಶ್ವಾಸಘಾತಕತನವನ್ನೂ, ರಾಜದ್ರೋಹತ್ವವನ್ನೂ ಆಚರಿಸಿದಂತಾಗಿತ್ತು. ಪಠಾಣರಲ್ಲಿ ರಾಜದ್ರೋಹಿಗಳೂ, ವಿಶ್ವಾಸಘಾತಕರೂ ಆದ ಜನರಿದ್ದಿಲ್ಲ. ಒಂದುವೇಳೆ ಯಾವನಾದರೊಬ್ಬ ಪಠಾಣನು ಈ ನೀಚ ಆಚರಣೆಯನ್ನು ಆಚರಿಸಿದ್ದನಾದರೆ, ಇದನ್ನು ಮಿರಾನಶಹನು ಎಂದೂ ಸಹಿಸುತ್ತಿದ್ದಿಲ್ಲ. ಮುಂದಿಯ ಮಾತೊತ್ತಟ್ಟಿಗಿರಲಿ, ತನ್ನ ಮಗಳು ಈ ಅಪರಾಧ ಮಾಡಿದವಳಾಗಿರುವದನ್ನು ತಿಳಿದು, ಅವನಿಗೆ ಬಹಳಸಿಟ್ಟು ಬಂದಿತು. "ಒಂದುವೇಳೆ ಕೈದಿಯನ್ನು ಪಾರುಮಾಡಬೇಕೆಂಬ ಪ್ರಬಲ ಇಚ್ಛೆಯು ಇವಳಿಗಾಗಿದ್ದರೆ ನನಗೆ ಹಾಗೆ ತಿಳಿಸಬೇಕಾಗಿತ್ತು. ಅಂದರೆ ನಾನು ಯುಕ್ತರೀತಿಯಿಂದ ಈ ಕೆಲಸ ಮಾಡಬಹುದಾಗಿತ್ತು. ಇದರಿಂದ

ಇವಳೂ ಅಪರಾಧಿನಿಯಾಗುತ್ತಿಷ್ಟಲ್ಲ. ಅಯ್ಯೋ! ದುಷ್ಟಳೇ! ನೀನು ಈ ಕೆಲಸವನ್ನೇಕೆ ಮಾಡಿದೆ? ಇದರಿಂದ ನಾನು ಎಷ್ಟು ಅಪಮಾನ ಹೊಂದಬೇಕಾಯಿತು? ನಾನಿನ್ನು ಈ ಸರದಾರರಲ್ಲಿ ತಲೆಯೆತ್ತು ವಂತಿಲ್ಲ!" ಎಂದು ಮಿರಾನಶಹನು ಮನಸ್ಸಿನಲ್ಲಿಯೇ ಅಂದುಕೊಂಡನು.

ಈ ಪ್ರಸಂಗದಲ್ಲಿ ಮಿರಾನಶಹನು ತನ್ನ ಮನಸ್ಸಿಗೆ ಬಂದಂತೆ ನಡೆ ಯುವಂತಿರಲಿಲ್ಲ. ಅವನು ಪ್ರತಿಯೊಂದು ವಿಚಾರದಲ್ಲಿಯೂ ಅಲ್ಲಿ ಕೂಡಿದ ಸರದಾರರ ಅನುಮತಿಯನ್ನು ತೆಗೆದುಕೊಳ್ಳಬೇಕಾಗುತ್ತಿತ್ತು. ಈ ಸರದಾರರು ಮಿರಾನಶಹನ ಸಾಮಂತರಾಜರಾಗಿದ್ದರು. ಕೇವಲ ಇವರ ಅನುಮತಿಯಂತೆಯೇ ಪ್ರತಿಯೊಂದು ಕೆಲಸವನ್ನೂ ಸಾಗಿಸ ಬೇಕೆಂಬ ನಿರ್ಬಂಧವೇನೂ ಇದ್ದಿಲ್ಲ. ಆದರೂ ಮಿರಾನಶಹನು ಸರದಾರರ ಅನುಮತಿಯಂತೆ ನಡೆದುಕೊಳ್ಳುತ್ತಿದ್ದನು. ಇದಕ್ಕೆ ಕಾರಣವೂ ಇದ್ದಿತು. ಮಿರಾನಶಹನ ರಾಜ್ಯವು ಸಣ್ಣದಾಗಿದ್ದು, ಸೈನ್ಯಬಲವು ಸಾಕಷ್ಟು ಇದ್ದಿಲ್ಲ. ಅದಕ್ಕಾಗಿ ಮಿರಾನಶಹನಿಗೆ ಯುದ್ಧದ ಪ್ರಸಂಗದಲ್ಲಿ ಈ ಸರದಾರರ ಅವಶ್ಯ ಕತೆ ಬೀಳುತ್ತಿತ್ತು. ಸದ್ಯದಲ್ಲಿ ಮಿರಾನಶಹನು ದಿಲ್ಲಿಯ ಬಾದಶಹನಿಗೆ ಎದುರಾಗಿ ನಿಂತಿದ್ದನು. ಅದರಿಂದಿವನಿಗೆ ಈ ಸರದಾರರ ಸಹಾಯವು ಅತ್ಯಾ ವಶ್ಯಕವಾಗಿ ಬೇಕಾಗಿತ್ತು. ಈ ಸರದಾರರ ಮತವೂ ಮಿರಾನಶಹನ ಮತ ವೂ ಕೂಡುತ್ತಿತ್ತೆಂಬ ಹಾಗೇನೂ ಇದ್ದಿಲ್ಲ. ಕೆಲವು ಸರದಾರರನ್ನು ಕಂಡರೆ ಮಿರಾನಶಹನಿಗೆ ಸಿಟ್ಟುಬರುತ್ತಿತ್ತು. ಆದರೂ ಅವನು ಈ ಬಿಕ್ಕಟ್ಟಿನ ಪ್ರಸಂಗ ದಲ್ಲಿ ಅವರನ್ನನುಸರಿಸಲೇಬೇಕಾಗಿತ್ತು. ಈಗ ಮಗಳ ಅಪರಾಧದ ವಿಚಾ ರಣೆಯನ್ನು ಸರದಾರರಿಗೆ ಒಪ್ಪಿಸಬೇಕೋ ಹೇಗೆಂಬ ಬಗ್ಗೆ ಮಿರಾನಶಹನು ಆಲೋಚಿಸಹತ್ತಿದನು. ಈ ಸರದಾರರು ಕಠೋರಹೃದಯರಾಗಿದ್ದು, ಎಷ್ಟು ಮಾತ್ರವೂ ದಯೆತೋರಿಸತಕ್ಕವರಾಗಿಲ್ಲ. ಮಗಳ ವಿಚಾರಣೆಯ ಭಾರ ವನ್ನು ಇವರಿಗೆ ಒಪ್ಪಿಸಿದ್ದಾದರೆ, ಇವರು ಪ್ರಾಣದಂಡನೆಯನ್ನು ವಿಧಿಸುವದ ರಲ್ಲಿ ಸಂದೇಹವಿದ್ದಿಲ್ಲ. ಹೀಗಾದಲ್ಲಿ ಅಂಧಕಾರಮಯವಾದ ಮಿರಾನಶಹನ ಮನೆಗೆ ಧ್ರುವತಾರೆಯಂತಿರುವ ಪನ್ನಾಮತಿಯು ಇಲ್ಲದಂತಾಗಿ, ಅದು ಶೂನ್ಯವಾಗುತ್ತಿತ್ತು. ಇದು ಮಿರಾನಶಹನಿಗೆ ಇಷ್ಟವಿಲ್ಲ; ಆದರೆ ಸರದಾ ರರ ಮತವನ್ನು ಉಪೇಕ್ಷಿಸುವದೂ ಇಷ್ಟವಾಗಿರಲಿಲ್ಲ. ಆದರೂ ಅವನು

ಕೇವಲ ಸ್ವದೇಶಹಿತವನ್ನೂ, ತನ್ನ ಕರ್ತವ್ಯವನ್ನೂ ಆಲೋಚಿಸಿ, ಮಾಯೆಯನ್ನು ಕಿತ್ತು ಚೆಲ್ಲಲು ಮನಸ್ಸು ಮಾಡಿದನು.

ಒಬ್ಬ ಸರದಾರನು ಮಿರಾನಶಹನ ಮನಸ್ಸನ್ನು ಪರೀಕ್ಷಿಸುವದಕ್ಕಾಗಿ--"ಜನಾಬ, ಈಗ ನಾವು ಮಾಡಬೇಕಾದದ್ದೇನು?"ಎಂದು ಕೇಳಿದನು.

ಮಿರಾನಶಹನು ಗಂಭೀರಭಾವದಿಂದ—"ಸರದಾರರೆ, ಈವರೆಗೆ ನಾನು ಪ್ರತಿಯೊಂದು ಕೆಲಸವನ್ನೂ ನಿಮ್ಮ ಅನುಮತಿಯಂತೆ ಮಾಡುತ್ತ ಬಂದಿದ್ದೇನೆ. ಈಗಲೂ ಹಾಗೆಯೇ ಮಾಡುತ್ತೇನೆ---ನನ್ನಮಗಳಾದರೇನಾಯಿತು? ಅವಳು ಅಪರಾಧಿನಿಯಾಗಿರುವುದು ಸುಳ್ಳಲ್ಲ. ಅವಳ ವಿಚಾರಣೆ ಮಾಡಿರಿ. ನಿಮಗೆ ಸರಿಕಂಡಶಿಕ್ಷೆಯನ್ನು ವಿಧಿಸಿರಿ. ನಾನು ಅರಸನಾದ ಬಳಿಕ, ದೇಶದ ಹಿತವನ್ನು ನೋಡುವದು ನನ್ನ ಮುಖ್ಯಕೆಲಸ. ಈ ಪ್ರಸಂಗದಲ್ಲಿ ಮಗಳಮೇಲಣ ಮಮತೆಯಕಡೆಗೆ ಲಕ್ಷ್ಯಕೊಡಲಿಕ್ಕೆ ಬರುವಂತಿಲ್ಲ. ರಾಜಮುಕುಟವೂ, ರಾಜದಂಡವೂ ಬಹಳ ವಿಚಿತ್ರವಸ್ತುಗಳು. ಅವನ್ನು ಧರಿಸಿದ ಬಳಿಕ ಮನುಷ್ಯನು ಸ್ವಾರ್ಥಕ್ಕೆ ಜಲಾಂಜಲಿಯನ್ನಿತ್ತು, ದೇಶಹಿತಕ್ಕಾಗಿ ಎಂಥ ಕಠೋರಕಾರ್ಯಗಳನ್ನಾದರೂ ಮಾಡಲೇಬೇಕು. ನೀವು ಸಂಕೋಚವಿಲ್ಲದೆ ನಿಮ್ಮ ಮತವನ್ನು ಪ್ರಕಟಮಾಡಬಹುದು. ಆ ರೀತಿಯಿಂದ ನಡೆಯಲಿಕ್ಕೆ ನಾನು ಸಿದ್ಧನಾಗಿದ್ದೇನೆ," ಎಂದು ಹೇಳಿದನು.

ಮಿರಾನಶಹನ ಈ ಮಾತುಗಳನ್ನು ಕೇಳಿ, ಸರದಾರರು ವಿಷಮ ಸಮಸ್ಯೆಯಲ್ಲಿ ಬಿದ್ದರು. ಅವರು ಮುಂದೇನು ಮಾಡಬೇಕೆಂಬದನ್ನು ಅರಿಯದವರಾದರು. ಕಾರಣ ಅವರು ಕೆಲಹೊತ್ತಿನವರೆಗೆ ಸುಮ್ಮನೆ ಕುಳಿತುಕೊಂಡುಬಿಟ್ಟರು; ಮಿರಾನಶಹನ ಮಗಳ ಅಪರಾಧವು ಸಾಧಾರಣವಾದುದಲ್ಲ; ಈ ಅಪರಾಧಕ್ಕೆ ಕಾಯಿದೆಯಂತೆ ಮರಣದಂಡನೆಯನ್ನು ವಿಧಿಸಬೇಕಾಗಿತ್ತು. ಆದರೆ ಇದನ್ನು ಮಿರಾನಶಹನ ಮುಂದೆ ಸ್ಪಷ್ಟವಾಗಿ ಹೇಳಿಬಿಡುವದಕ್ಕೆ ಯಾರಿಗೂ ಧೈರ್ಯಸಾಲಲಿಲ್ಲ.

ಸರದಾರರು ಹೀಗೆ ಮೌನವಾಗಿ ಕುಳಿತದ್ದನ್ನು ನೋಡಿ, ಮಿರಾನಶಹನೇ ಹೇಳತೊಡಗಿದನು—"ಸರದಾರರೆ, ಕರ್ತವ್ಯವು ಎಷ್ಟೇ ಕಠೋರ

ವಾಗಿದ್ದರೂ, ಅದನ್ನು ನಾವು ಪಾಲಿಸಲೇಬೇಕು. ನಮ್ಮ ಈ ಕರ್ತವ್ಯ ಪಾಲನೆಯ ಮಾರ್ಗದಲ್ಲಿ ಸ್ವಾರ್ಥವು ಕಂಟಕರೂಪವಾಗಿ ಬಂದರೆ, ಅದನ್ನು ನಾವು ಎಷ್ಟುಮಾತ್ರವೂ ಗಣಿಸಬಾರದು. ಮಾಯಾ, ಮಮತೆಗಳೆಲ್ಲ ವನ್ನು ಹರಿದೊಗೆದು ಕರ್ತವ್ಯಪಾಲನಕ್ಕೆ ಟೊಂಕಕಟ್ಟಿನಿಲ್ಲಬೇಕು. ಅಂದರೆ ಮಾತ್ರ ಅವನು ಯಾವದೊಂದು ಮಹತ್ಕಾರ್ಯ ಮಾಡುವದಕ್ಕೂ ಸಮರ್ಥ ನಾಗುವನು. ಇದರಿಂದವನು ಜಗತ್ತಿನಲ್ಲಿ ಕೀರ್ತಿಶಾಲಿಯಾಗುವನು. ಇಲ್ಲನಾದರೆ ಅವನು ಯಾವ ಉತ್ತಮಕಾರ್ಯಗಳನ್ನೂ ಮಾಡಲಾರದೆ, ಪಶುಗಳಂತೆ ಉಪಜೀವನವನ್ನು ಸಾಗಿಸಿಕೊಂಡು, ಒಂದಿಲ್ಲೊಂದುದಿನ ಸತ್ತುಹೋಗುವನು. ಹೀಗಾದಲ್ಲಿ ಮನುಷ್ಯನಾಗಿಹುಟ್ಟಿ ಸಾರ್ಥಕವೇನು?"

"ಮಹಾರಾಜ, ತಮ್ಮ ವಿಷಯದಲ್ಲಿ ನಮಗೆ ಸಂದೇಹವಿಲ್ಲ. ಕರ್ತ ವ್ಯಪಾಲನೆಗಾಗಿ ತಾವು ಎಂಥ ಕಠೋರಕಾರ್ಯವನ್ನಾದರೂ ಮಾಡಬಲ್ಲಿ ರೆಂಬದನ್ನು ನಾವು ಅರಿತಿರುವೆವು," ಎಂದು ಸರದಾರರು ಒಕ್ಕಟ್ಟಾಗಿ ಹೇಳಿದರು.

"ಹಾಗಾದರೆ, ಮಗಳಿಗೆ ನಾನು ಯಾವಶಿಕ್ಷೆಕೊಡಲಿ? ಎಂಬವನ್ನು ಹೇಳಿರಿ. ಅವಳ ಅಪರಾಧಕ್ಕೆ ಮರಣದಂಡನೆಯೇ ಯೋಗ್ಯಶಿಕ್ಷೆಯಾಗಿ ರುವುದಾದರೆ, ಅದನ್ನೇ ವಿಧಿಸಬಹುದು; ಆದರೆ ಪಠಾಣರ ಶಾಸ್ತ್ರದಲ್ಲಿ ನಾರೀ—ಹತ್ಯೆಯು ಮಹಾಪಾತಕವೆಂದೆಣಿಸಿಕೊಳ್ಳಲ್ಪಡುತ್ತಿದೆ. ಆದರೂ ಇಂತಹ ಪ್ರಸಂಗದಲ್ಲಿ ಸ್ತ್ರೀಹತ್ಯೆಯೂ ಕೂಡ ಪಾಪಕರವಾಗಲಿಕ್ಕಿಲ್ಲ. ನಾನಾದರೋ ಸದ್ಯಕ್ಕೆ ಪನ್ನಾಮತಿಯನ್ನು ಸೆರೆಮನೆಯಲ್ಲಿರಿಸಿ, ಅವಳ ಮೇಲೆ ಪಹರೆಯವರನ್ನು ನಿಯಮಿಸಬೇಕೆಂದು ಆಲೋಚಿಸಿದ್ದೇನೆ—ಇದ ರಿಂದ ಅವಳಿಗೆ ಸ್ವಾತಂತ್ರ್ಯವು ಇಲ್ಲದಂತಾಗಿ, ಅವಳು ತನ್ನ ಅಪರಾಧಕ್ಕೆ ತಕ್ಕ ದಂಡನೆಯನ್ನು ಅನುಭವಿಸಿದಂತಾಗುವದು; ಮೇಲಾಗಿ ಅವಳಿಂದ ಇನ್ನುಮೇಲೆ ಈ ತರದ ದೇಶದ್ರೋಹದ ಕಾರ್ಯಗಳಾಗುವ ಸಂಭವವಿಲ್ಲ. ಅವಳ ಈ ಬುದ್ಧಿದೋಷದಿಂದ ತಾವು ಈ ಯುದ್ಧದಲ್ಲಿ ಪರಾಜಿತರಾದರೆ, ಆಗ ಇವಳನ್ನು ಕೊಲ್ಲಿಸಬಹುದಾಗಿದೆ. ಅಫಶಾನನು ಈ ಕೆಲಸವನ್ನು ಆ ಸಮಯದಲ್ಲಿ ತಪ್ಪದೆ ಮಾಡುವನು. ಇದು ನಿಮ್ಮ ಮನಸ್ಸಿಗೆ ಬರು ವುದೇ?" ಎಂದು ಮಿರಾನಶಹನು ಕೇಳಿದನು.

ಮಿರಾನಶಹನ ಈ ಆದೇಶವನ್ನು ಕೇಳಿ, ಎಲ್ಲರೂ ಸುಮ್ಮನೆ ಕುಳಿತರು. ಕೆಲಹೊತ್ತಿನವರೆಗೆ ಸಭೆಯು ನಿಸ್ತಬ್ಧವಾಗಿತ್ತು. ತರುವಾಯ ಒಬ್ಬ ಸರದಾರನು—"ಮಹಾರಾಜ, ನೀವು ಯೋಗ್ಯವಾದದ್ದನ್ನೇ ಆಲೋಚಿಸಿರುವಿರಿ. ತಮ್ಮ ವಿಚಾರಕ್ಕೆ ನಾವು ಪ್ರತಿಯಾಗಿ ಮಾತಾಡಲಾರೆವು." ಎಂದು ಹೇಳಿದನು.

ಸಭೆಯ ಕೆಲಸವು ಮುಗಿಯಿತು. ಮಿರಾನಶಹನು ತನ್ನ ಮಗಳನ್ನು ಕರೆದುಕೊಂಡು ಅಂತಃಪುರವನ್ನು ಪ್ರವೇಶಿಸಿದನು. ತರುವಾಯ ಅವನು ಅವಳನ್ನು ಅವಳ ಕೋಣೆಯಲ್ಲಿಯೇ ಸೆರೆಯಾಗಿರಿಸಿದನು. ಆ ಕೋಣೆಯನ್ನು ಕಾಯುವದಕ್ಕಾಗಿ ಯಮದೂತರಂತಿರುವ ಕಾಫ್ರಿ—ಖೋಜಾಗಳನ್ನು ನಿಯಮಿಸಿದನು. ಮಗಳ ಪರಿಚರ್ಯೆಗಾಗಿ ಅವಳ ಮೊದಲಿನ ದಾಸಿಯಾದ ಮುನ್ನಿಯನ್ನು ಇಲ್ಲಿರಿಸಿದನು. ತಾನು ಕಠೋರ ಹೃದಯನಾಗಿ ಮಗಳ ದರ್ಶನವನ್ನು ತೆಗೆದುಕೊಳ್ಳುವದನ್ನೂ ಬಿಟ್ಟನು. ಇದನ್ನೇ ಕೆಲವರು ಭಾಗ್ಯಚಕ್ರವೆನ್ನುವರು! ಬೇರೆ ಕೆಲವರು ಕರ್ಮಫಲವೆಂದೂ ಹೇಳುವರು!

ಪನ್ನಾಮತಿಯ ಅವಸ್ಥೆಯು ಅತಿಶೋಚನೀಯವಾಗಿತ್ತು. ಅವಳು ಚಿಂತೆಗೊಂಡು ಬಿಸಲಿನಲ್ಲಿ ಕಿತ್ತಿಸೆದ ಕಮಲಪುಷ್ಪದಂತೆ ಕ್ರಮವಾಗಿ ಕೊರಗುತ್ತ ನಡೆದಳು.

---

## ಒಂಬತ್ತನೆಯ ಪರಿಚ್ಛೇದ.

---

### ಕಾರಾಗೃಹದಲ್ಲಿ!

ಪನ್ನಾಮತಿಯ ಅಪ್ಪಣೆಯಂತೆ ಹಿಮ್ಮತಖಾನನು ದಾನಿಯಾಲನನ್ನು ಅವನ ಶಿಬಿರಕ್ಕೆ ಬಿಟ್ಟುಬಂದನು. ಮತ್ತು ಈ ಸುದ್ದಿಯನ್ನು ಮರುದಿವಸ ಮುಂಜಾವಿನಲ್ಲಿ ಪನ್ನಾಮತಿಗೆ ಹೇಳಿದನು. ಪನ್ನಾಮತಿ ಇದನ್ನು ಕೇಳಿ, ತನ್ನ ಈ ದುಃಖದ ಸಮಯದಲ್ಲಿಯೂ ಕೊಂಚ ಸಮಾಧಾನಗೊಂಡಳು.

ಹಿಮ್ಮತಖಾನನ ವಿಷಯವಾಗಿ ಯಾರೂ ಸಂದೇಹಪಡಲಿಲ್ಲ. ಯಾಕಂದರೆ ಕಾವಲುಗಾರರಲ್ಲಿ ಒಬ್ಬನು ಎಲ್ಲಿಯೋ ಓಡಿಹೋಗಿದ್ದನು. ಅವನ ಪತ್ತೆಯೇ ಇಲ್ಲ; ಬೇರೊಬ್ಬನು ಎಚ್ಚತ್ತಬಳಿಕ, ದುರ್ಗಾಧಿಪತಿಯಿಂದ ಒದಗಬಹುದಾಗಿದ್ದ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಎಲ್ಲಿಯೋ ಪಲಾಯನಮಾಡಿದನು. ಈ ಕಾರಣದಿಂದ ಹಿಮ್ಮತನ ವಿರುದ್ಧವಾಗಿ ಸಾಕ್ಷಿಹೇಳುವವರು ಯಾರೂ ಉಳಿಯಲಿಲ್ಲ. ಅದರಿಂದ ಹಿಮ್ಮತಖಾನನು ನಿರಾಪದನಾದನು.

ಹಿಮ್ಮತಖಾನನ ಮೇಲೆ ಮಿರಾನಶಹನಿಗೆ ಬಹಳ ವಿಶ್ವಾಸ. ಇವನು ಮಿರಾನಶಹನ ಬಹುದಿವಸದ ಸೇವಕನಾಗಿದ್ದು, ಪನ್ನಾಮತಿಯನ್ನು ಜೋಪಾನಮಾಡಿದವನು. ಇವನು ಪನ್ನಾಮತಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಈಗ ಇವನು ಯಾವ ರೀತಿಯಿಂದಾಗಲಿ, ಪನ್ನಾಮತಿಯ ದುಃಖವನ್ನು ಹೋಗಲಾಡಿಸಬೇಕೆಂಬ ವಿಚಾರದಲ್ಲಿದ್ದನು. ಇದಕ್ಕಾಗಿ ಇವನು ಯಾವತ್ತು ಅಪರಾಧವನ್ನು ತನ್ನ ಮೇಲೆ ಹೊತ್ತುಕೊಂಡು, ಪನ್ನಾಮತಿಯು ನಿರಪರಾಧಿನಿಯಾಗಿರುವಳೆಂದು ಮಿರಾನಶಹನಿಗೆ ಹೇಳಬೇಕೆಂದು ಮಾಡಿದನು; ಆದರೆ ಅವನು ವಿಚಾರಾಂತ್ಯದಲ್ಲಿ ಇದರಿಂದ ಲಾಭವಾಗುವದಿಲ್ಲವೆಂದು ಕಂಡುಕೊಂಡನು; ಯಾಕಂದರೆ ಪನ್ನಾಮತಿಯು ತನ್ನ ಯಾವತ್ತು ಕೃತ್ಯಗಳನ್ನು ಬಹಿರಂಗಪಡಿಸಿದ್ದಳು. ತಾನು ಅಪರಾಧಿನಿಯಾಗಿರುವೆನೆಂದು ಒಡಂಬಟ್ಟಿದ್ದಳು; ಹೀಗಿರುವಾಗ, ಪನ್ನಾಮತಿ ಈ ಕೆಲಸ ಮಾಡಲಿಲ್ಲ, ನಾನು ಮಾಡಿದೆ ಎಂದು ಹಿಮ್ಮತಖಾನನು ಹೇಳುವನಾದರೆ, ಅದನ್ನು ಮಿರಾನಶಹನಾಗಲಿ, ಇತರ ಸರದಾರರಾಗಲಿ ನಂಬುತ್ತಿರಲಿಲ್ಲ. ಹಿಮ್ಮತಖಾನನು ಪನ್ನಾಮತಿಯ ಮೇಲಿರುವ ಮಮತಗಾಗಿ ಹೀಗೆ ಹೇಳುತ್ತಿರುವನಾದೀತೆಂದು ಅವರ ಗ್ರಹಿಕೆಯಾಗುತ್ತಿತ್ತು. ಹೀಗಾದಲ್ಲಿ ಪನ್ನಾಮತಿಗೂ ಲಾಭವಾಗುವಂತಿದ್ದಿಲ್ಲ. ತನಗೂ ಲಾಭವಾಗುವಂತಿದ್ದಿಲ್ಲ. ಆದ್ದರಿಂದ ಹಿಮ್ಮತಖಾನನು ಈ ಮಾರ್ಗವನ್ನು ಬಿಟ್ಟುಬಿಡಬೇಕಾಯಿತು.

ಹಿಮ್ಮತಖಾನನು ಪನ್ನಾಮತಿಯನ್ನು ಸೆರೆಮನೆಯಿಂದ ಪಾರುಮಾಡುವದಕ್ಕೆ ಆಲೋಚನೆ ಮಾಡತೊಡಗಿದನು. ಮೊಗಲ ಬಂದಿಯನ್ನು

ಪಾರುಮಾಡಿದಂತೆ, ಇವಳನ್ನು ಸೆರೆಮನೆಯಿಂದ ಮುಕ್ತಳನ್ನಾಗಿಮಾಡಿ, ಯಾವುದಾದರೊಂದು ಗುಪ್ತಸ್ಥಳದಲ್ಲಿ ವಾಸಮಾಡುವ ಮನಸ್ಸುಮಾಡಿದನು; ಆದರೆ ಇದು ಸುಲಭಸಾಧ್ಯವಾದ ಕೆಲಸವಲ್ಲ. ಸೆರೆಮನೆಯ ಕೀಲಿಯ ಕೈ ಅವನ ಬಳಿ ಇರಲಿಲ್ಲ. ಕಾವಲುಗಾರರು ಬಹಳಮಂದಿ ಇದ್ದರು. ಹೀಗಿರುವಾಗ ಯಾವ ಯುಕ್ತಿಯನ್ನವಲಂಬಿಸಬೇಕೆಂದು ಅವನು ವಿಚಾರಮಾಡತೊಡಗಿದನು.

ಒಂದುದಿವಸ ಮಿರಾನಶಹನು ಹಿಮ್ಮತಖಾನನನ್ನು ಕುರಿತು— "ಪನ್ನಾಮತಿಯು ಚಿಕ್ಕಂದಿನಿಂದ ನಿನ್ನಿಂದ ಪಾಲಿತೆಯು. ನೀನು ಅವಳನ್ನು ಬಹಳವಾಗಿ ಪ್ರೀತಿಸುವೆ. ಅವಳು ಕೈಯಲ್ಲಿ ಸಿಕ್ಕ ಮೊಗಲ ಸೇನಾಪತಿಯನ್ನು ಬಂಧಮುಕ್ತಮಾಡಿ, ದೇಶಕ್ಕೆ ಅರಿಷ್ಟವನ್ನುಂಟುಮಾಡಿದ್ದಾಳೆ. ಅದರಿಂದ ಸರದಾರರೆಲ್ಲರು ಅವಳ ಮೇಲೆ ಸಿಟ್ಟಾಗಿದ್ದಾರೆ. ಸದ್ಯಃಕಾಲಕ್ಕೆ ನನಗೆ ಸರದಾರರ ಸಹಾಯದ ಆವಶ್ಯಕತೆ ಬಹಳವಾಗಿದೆ. ನಾನು ಅವರ ಮತದಂತೆ ವರ್ತಿಸಲೇಬೇಕಾಗಿದೆ. ಅದಕ್ಕಾಗಿ ನಾನು ಈಗ ಪ್ರಿಯಪುತ್ರಿಯ ವಿಷಯವಾಗಿ ನಿಷ್ಠುರವಾದ ಆಚರಣೆಯನ್ನು ಆಚರಿಸುತ್ತಿರುವೆನು. ಅವಳು ಬಾಲ್ಯದಿಂದ ಮಾತೃಹೀನಳಾಗಿದ್ದಾಳೆ. ಒಂದೆರಡು ದಿವಸ ನನ್ನ ದರ್ಶನವಿಲ್ಲದಿದ್ದರೆ ಅವಳಿಗೆ ಸಮಾಧಾನವಾಗುವುದಿಲ್ಲ. ನಾನು ಅವಳನ್ನು ನೋಡದಿದ್ದರೆ, ನನಗೂ ಸಮಾಧಾನವಾಗುವುದಿಲ್ಲ. ಆದರೆ ನಿರ್ವಾಹವಿಲ್ಲದಾಗಿದೆ. ನಾನು ಈ ದುಃಖವನ್ನು ಹೇಗಾದರೂ ಸಹಿಸಿಕೊಳ್ಳುವೆನು. ಪನ್ನಾಮತಿಯು ಇದಕ್ಕಾಗಿ ದುಃಖಪಡದಂತೆ ನೀನು ಪ್ರಯತ್ನಿಸು. ಅವಳ ಸೆರೆಮನೆಯ ಕೀಲಿಯ ಕೈ ನಿನ್ನ ಕೈಯಲ್ಲಿ ಕೊಡುವೆನು. ನೀನು ಬೇಕಾದಾಗ ಅವಳನ್ನು ಕಂಡುಬರಲು ಅಡ್ಡಿಯಿಲ್ಲ." ಎಂದು ಹೇಳಿದನು.

ಹಿಮ್ಮತಖಾನನಿಗೂ ಇದೇ ಬೇಕಾಗಿದ್ದಿತು. ಅವನು ಆನಂದಿತನಾಗಿ—" ದೇವರೆ, ಪನ್ನಾಮತಿಯ ಬಿಡುಗಡೆಮಾಡುವ ನನ್ನ ಇಚ್ಛೆಗೆ ನೀನು ಸಹಾಯಕನಾಗಿರುವದರಲ್ಲಿ ಸಂದೇಹವಿಲ್ಲ. ಇನ್ನು ಮುಂದೆಯೂ

ನನಗೆ ಸಹಾಯಮಾಡಿ, ನಾನು ಕೃತಕಾರ್ಯನಾಗುವಂತೆ ಮಾಡು," ಎಂದು ಮನಸ್ಸಿನಲ್ಲಿಯೆ ದೇವರನ್ನು ಬೇಡಿಕೊಂಡನು.

ಪನ್ನಾಮತಿಗೆ ಕಾರಾವಾಸವು ಪ್ರಾಪ್ತವಾಗಿ ನಾಲ್ಕಾರು ದಿವಸಗಳಾದವು. ಹಿಮ್ಮತಖಾನನ ಮಮತೆಯ ಮಾತುಗಳಿಂದಲೂ, ಮುನ್ನಿಯ ಪರಿಚರ್ಯೆಯಿಂದಲೂ ಅವಳಿಗೆ ಸಮಾಧಾನವೆನಿಸುತ್ತಿತ್ತು; ಆದರೆ ಅವಳಿಗೆ ಸ್ವಾತಂತ್ರ್ಯವಿರಲಿಲ್ಲ. ಪನ್ನಾಮತಿ ಬಹುಕಾಲದಿಂದ ಸ್ವತಂತ್ರತೆಯಿಂದಿದ್ದವಳು. ಅವಳಿಗೆ ಒಂದೇ ಕಡೆಯಲ್ಲಿ ಕುಳಿತುಕೊಳ್ಳುವದು ಸೇರುತ್ತಿದ್ದಿಲ್ಲ. ಅವಳು ಅರಣ್ಯದ ಪಕ್ಷಿಗಳಂತೆ ಸ್ವಾತಂತ್ರ್ಯ ಪ್ರಿಯಳಾಗಿದ್ದು, ನದಿಯತೀರದಲ್ಲಿಯೂ, ದ್ರಾಕ್ಷೆಯತೋಟಗಳಲ್ಲಿಯೂ, ಉದ್ಯಾನದಲ್ಲಿಯೂ ಸಂಚರಿಸುತ್ತ ಆನಂದದಿಂದ ಕಾಲಕಳೆಯುತ್ತಿದ್ದವಳು. ಈಗ ಸ್ವಾತಂತ್ರ್ಯವಿಲ್ಲದ ಕಾರಣ, ಸೆರೆಮನೆಯನ್ನು ಬಿಟ್ಟುಬರುವಂತಿಲ್ಲ. ಇದಕ್ಕಾಗಿ ಅವಳಿಗೆ ಬಹಳ ದುಃಖವೆನಿಸುತ್ತಿತ್ತು; ಆಹಾರವು ರುಚಿಹತ್ತುತ್ತಿರಲಿಲ್ಲ. ಸುಖನಿದ್ರೆಯು ಎತ್ತೋ ಹೋಗಿಬಿಟ್ಟಿತ್ತು. ದಾಸಿಯೊಡನೆಯೂ, ಹಿಮ್ಮತಖಾನನೊಡನೆಯೂ ಆನಂದದಿಂದ ಮನಬಿಚ್ಚಿ ಮಾತಾಡುತ್ತಿದ್ದಿಲ್ಲ. ಯಾವಾಗಲೂ ಚಿಂತೆಯಿಂದ ಕುಳಿತುಕೊಳ್ಳುತ್ತಿದ್ದಳು. ದಾಸಿಯೂ, ಹಿಮ್ಮತಖಾನನೂ ಇವಳನ್ನು ಸಮಾಧಾನಪಡಿಸುವದಕ್ಕೆ ಬಹಳವಾಗಿ ಪ್ರಯತ್ನಿಸುತ್ತಿದ್ದರು. ಇವರಿಂದೇನೂ ಲಾಭವಾಗುತ್ತಿದ್ದಿಲ್ಲ.

ಹೊತ್ತಾದಕೂಡಲೇ ದಾಸಿ ಮಲಗಿಕೊಂಡುಬಿಡುತ್ತಿದ್ದಳು. ಆದರೆ ಪನ್ನಾಮತಿಗೆ ನಿದ್ರೆಯು ಬರುತ್ತಿದ್ದಿಲ್ಲ. ಅದರಿಂದವಳು ಮತ್ತೆ ಒಂದೆರಡು ತಾಸುಗಳವರೆಗೆ ಚಿಂತಾಕುಲಳಾಗಿ ಒಬ್ಬಳೇ ಕುಳಿತುಕೊಳ್ಳುತ್ತಿದ್ದಳು. ಇದರಿಂದವಳಿಗೆ ಬಹಳ ಬೇಸರಬರುತ್ತಿತ್ತು. ಮಲಗಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದಳು; ಆದರೆ ನಿದ್ರೆಯು ಹತ್ತುತ್ತಿದ್ದಿಲ್ಲ. ತನ್ನ ಕೋಮಲವಾದ ಹಾಸುಗೆಯಲ್ಲಿ ಯಾರೋ ಸೂಕ್ಷ್ಮವಾದ ಬೆಂಕಿಯ ಕಣಗಳನ್ನು ಹರವಿರುವಂತೆ ಅವಳಿಗೆ ಬೋಧೆಯಾಗುತ್ತಿತ್ತು. ಅದರಿಂದವಳು ಹಾಸುಗೆಯನ್ನು ಬಿಟ್ಟೆದ್ದು, ಕಿಟಕಿಯಬಳಿ ಕುಳಿತುಕೊಂಡು ಬಾಹ್ಯಸೃಷ್ಟಿಯನ್ನು ನೋಡತೊಡಗುತಲಿದ್ದಳು. ಈ ಸಮಯದಲ್ಲವಳಿಗೆ ಆಕಾಶದ ತುಂಬ ಹರವಿದ

ಹೀರಕ ಖಂಡದಂತಿರುವ ತಾರಿಗೆಗಳು ಕಾಣುತ್ತಿದ್ದವು. ಅವಳು ಇವುಗಳನ್ನು ನೋಡಿ, ಮರ್ಮಭೇದಕವಾದ ದೀರ್ಘನಿಶ್ವಾಸಬಿಟ್ಟು, ಪುನಃ ಹಾಸುಗೆಗೆ ಬಂದು ಮಲಗಿಕೊಳ್ಳುತ್ತಿದ್ದಳು. ಆದರೂ ನಿದ್ರಾದೇವಿಯು ಪ್ರಸನ್ನಳಾಗುತ್ತಿದ್ದಿಲ್ಲ. ಆಗ ಅವಳು ಸತ್ತ ತಾಯನ್ನು ನೆನಿಸಿ ಅಳತೊಡಗುತ್ತಿದ್ದಳು. ಕೆಲವುವೇಳೆ ದುಃಖಸೂಚಕ ನಿಟ್ಟುಸಿರುಗಳನ್ನು ಬಿಡುತ್ತಿದ್ದಳು. ಅವಳ ನೇತ್ರದಿಂದ ಹೊರಟ ಅಶ್ರುಕಣಗಳಿಂದ ಹಾಸುಗೆ ತೊಯ್ದುಹೋಗುತ್ತಿತ್ತು. ಹೀಗೆ ಅತ್ತು-ಅತ್ತು ದಣಿದವಳಾಗಿ ನಿದ್ರಾವಶಳಾಗುತ್ತಿದ್ದಳು. ಆದರೂ ನಿದ್ರಾದೇವಿಯು ಸಂಪೂರ್ಣ ಪ್ರಸನ್ನತೆಯನ್ನು ತೋರಿಸುತ್ತಿದ್ದಿಲ್ಲ. ಅದರಿಂದವಳು ನಿದ್ರೆಯಲ್ಲಿ ಅನೇಕ ಸ್ವಪ್ನಗಳನ್ನು ನೋಡಬೇಕಾಗುತ್ತಿತ್ತು.

ಸ್ವಪ್ನದಲ್ಲಿ ಪನ್ನಾಮತಿಯ ತಾಯಿಯು ಹಾಸುಗೆಯ ಬಳಿಯಲ್ಲಿ ಕುಳಿತು ಅವಳ ಅಸ್ತವ್ಯಸ್ತವಾದ ಮುಂಗುರುಳುಗಳನ್ನು ಸರಿಪಡಿಸುತ್ತಿದ್ದಳು; ಅವಳ ಶರೀರದ ಮೇಲೆ ಮಮತೆಯಿಂದ ಕೈಯಾಡಿಸುತ್ತಿದ್ದಳು; ಮತ್ತು ಅವಳ ಕಿವಿಯಲ್ಲಿ ಅಸ್ಫುಟಸ್ವರದಿಂದ—“ಮಗು, ನನ್ನಬಳಿಗೆ ಬಾ. ನಾನು ಈಗ ಚಿರಶಾಂತಿಮಯವಾದ ಸ್ವರ್ಗರಾಜ್ಯದಲ್ಲಿದ್ದೇನೆ. ಇಲ್ಲಿ ದುಃಖವಿಲ್ಲ. ಅತ್ಯಾಚಾರವಿಲ್ಲ. ಬೇನೆಬೇಸರಿಕೆಗಳಿಲ್ಲ. ನಾನು ನಿನ್ನನ್ನು ಬಿಟ್ಟುಬಂದ ನಂತರ, ನೀನು ಅನೇಕ ಕಷ್ಟಗಳನ್ನು ಸಹಿಸಿದೆ. ಇನ್ನು ಸಾಕು. ಈ ಕಡೆಗೆ ಬಂದುಬಿಡು. ತಂದೆ ಮಗಳನ್ನು ಉಪೇಕ್ಷಿಸಬಹುದು; ಸಹೋದರರು ತಿರಸ್ಕರಿಸಬಹುದು; ಅತ್ತೆಯು ಸೊಸೆಯನ್ನು ಹೀಯಾಳಿಸಬಹುದು; ಆದರೆ ತಾಯಿಮಾತ್ರ ತನ್ನ ಮಗಳನ್ನು ಎಂದೂ ಮರೆಯಳು; ತಿರಸ್ಕರಿಸಲಾರಳು. ನೀನು ದುಃಖಮುಕ್ತಳಾಗಬೇಕಾಗಿದ್ದರೆ, ನನ್ನ ಹತ್ತಿರ ಬಾ.” ಎಂದು ಹೇಳುತ್ತಿದ್ದಳು.

ಈತರದ ಸ್ವಪ್ನನೋಡಿ, ಪನ್ನಾಮತಿಗೆ ಎಚ್ಚರಿಕೆಯಾಗುತ್ತಿತ್ತು. ಅವಳು ಭಯಚಕಿತಹೃದಯಳಾಗಿ ಸುತ್ತಲೂ ನೋಡುತ್ತಿದ್ದಳು; ಆದರೆ ಅವಳ ಕಣ್ಣಿಗೆ ಯಾರೂ ಕಾಣಿಸುತ್ತಿದ್ದಿಲ್ಲ.

ಈ ಮೇರೆಗೆ ಪನ್ನಾಮತಿಯು ಒಂದೊಂದು ದಿವಸವನ್ನೂ ಬಹು ದುಃಖದಿಂದ ಕಳೆಯುತ್ತಿದ್ದಳು. ಈಗ ನಾಲ್ಕಾರುದಿವಸಗಳಿಂದ ತಂದೆಯ ದರ್ಶನವಂತೂ ಇದ್ದೇ ಇಲ್ಲ. ಅಫಶಾನನೂ ಇವಳ ದರ್ಶನಕ್ಕೆ ಬಂದಿದ್ದಿಲ್ಲ.

ಒಂದು ದಿವಸ ಮಧ್ಯಾಹ್ನದಲ್ಲಿ ಅಫಶಾನನು ವಿಷಣ್ಣಮುಖನಾಗಿ, ಪನ್ನಾಮತಿಯ ಕೋಣೆಯಬಾಗಿಲ ಬಳಿಗೆ ಬಂದನು. ಬಾಗಿಲಲ್ಲಿ ಹಿಮ್ಮತ ಖಾನನು ಇದ್ದನು. ಇವನಿಗೆ ಅಫಶಾನನನ್ನು ಕಂಡರೆ ಸೇರುತ್ತಿದ್ದಿಲ್ಲ. ಆದರೂ ಇವನು ತನ್ನಹೊಟ್ಟೆಯೊಳಗಿನ ಸಿಟ್ಟನ್ನು ಅಫಶಾನನ ಮುಂದೆ ತೋರಿಸುತ್ತಿದ್ದಿಲ್ಲ. ಅಫಶಾನನು ಹಿಮ್ಮತಖಾನನನ್ನು ಕುರಿತು—"ಸೇಖಜಿ, ನಾನು ಪನ್ನಾಮತಿಯ ದರ್ಶನ ತೆಗೆದುಕೊಳ್ಳುವದಕ್ಕಾಗಿ ಬಂದಿದ್ದೇನೆ- ನಾನು ಬಂದಸಂಗತಿ ಅವಳಿಗೆ ತಿಳುಹಿಸಿ ಬಾ," ಎಂದು ಹೇಳಿದನು.

"ನಮ್ಮ ಬಾದಶಹರ ಅಪ್ಪಣೆಯು ಬಹಳ ಕಠೋರವಿರುವದನ್ನು ತಾವು ಬಲ್ಲಿರಿ. ಕಾರಣ ಅವರ ಪರವಾನಿಗೆಯ ಕಾಗದ ತೋರಿಸಿದ ಹೊರತು, ನಾನು ನಿಮ್ಮನ್ನು ಒಳಗೆ ಬಿಡಲಾರೆ. ನಾನು ಬಾದಶಹರ ಸೇವಕ. ಅವರ ಅಪ್ಪಣೆಯನ್ನು ಪಾಲಿಸಲೇಬೇಕು. ಇಲ್ಲವಾದರೆ ಅವರು ನನ್ನನ್ನು ಕೊಲ್ಲಿಸಿ ಬಿಡುವರು. ಅದಕ್ಕಾಗಿ ನಾನು ತಮಗೆ ಹೀಗೆ ಹೇಳಿಕೊಳ್ಳುತ್ತಿರುವೆನು," ಎಂದು ಹಿಮ್ಮತಖಾನನು ಅಂದನು.

ಪನ್ನಾಮತಿಯೊಡನೆ ಅಫಶಾನನ ದರ್ಶನವಾಗುವದು ಹಿಮ್ಮತ ಖಾನನಿಗೆ ಇಷ್ಟವಾಗಿರಲಿಲ್ಲ. ಅದಕ್ಕಾಗಿಯೆ ಅವನು ಇಷ್ಟೊಂದು ಮಾತಾಡಿದುದು; ಆದರೆ ಅಫಶಾನನು ಬಾದಶಹರ ಪರವಾನಗಿಯನ್ನು ತೆಗೆದು ಕೊಂಡೇ ಬಂದಿದ್ದನು. ಕಾರಣ ಅವನು ದುರ್ಗಾಧಿಪತಿಯ ಸಹಿ ಇರುವ ಕಾಗದವನ್ನು ಹಿಮ್ಮತಖಾನನಿಗೆ ತೋರಿಸಿ—"ನನಗೆ ಬಾದಶಹರ ಅಪ್ಪಣೆ ಗೊತ್ತಿದೆ. ನಾನು ಪರವಾನಗಿ ತೆಗೆದುಕೊಂಡು ಬಂದಿದ್ದೇನೆ. ನೀನು ನನ್ನನ್ನು ತಡೆಯುವ ಕಾರಣವಿಲ್ಲ," ಎಂದು ಹೇಳಿದನು.

ಹಿಮ್ಮತಖಾನನಿಗೆ ನಿರ್ವಾಹವಿಲ್ಲದಾಯಿತು. ಅವನು ಪನ್ನಾಮತಿಯ ಬಳಿಗೆ ಹೋಗಿ, ಅಫಶಾನನು ಬಂದಸುದ್ದಿ ತಿಳುಹಿಸಿದನು. ಪನ್ನಾಮತಿಯು—"ಈ ಸಮಯದಲ್ಲಿ ಅಫಶಾನನಿಗೆ ನನ್ನಬಳಿಯಲ್ಲಿ ಕೆಲಸವೇನಿದೆ?" ಎಂದು ಕೇಳಿದಳು.

"ನನಗೆ ಗೊತ್ತಿಲ್ಲ. ನಾನು ಅವರನ್ನು ಕೇಳಿದೆ; ಆದರೆ ಅವರು ಈ ವಿಷಯವಾಗಿ ಏನೂ ಹೇಳಲಿಲ್ಲ," ಎಂದು ಹಿಮ್ಮತಖಾನನು ಹೇಳಿದನು.

"ಇಂದು ನನ್ನ ಪ್ರಕೃತಿ ನೆಟ್ಟಗಿಲ್ಲ. ಅಫಶಾನನಿಗೆ ಬೇರೊಂದು ದಿವಸ ಬಂದುನೋಡುವಂತೆ ತಿಳುಹಿಸು," ಎಂದು ಪನ್ನಾಮತಿ ಅಪ್ಪಣೆ ಮಾಡಿದಳು.

ಹಿಮ್ಮತ್ರಖಾನನು—"ನೀವು ಹೇಳಿದಂತೆ ಹೇಳುವೆನು," ಎಂದು ಹೇಳಿ ಹೊರಟನು. ಇಷ್ಟರಲ್ಲಿ ಪನ್ನಾಮತಿಯು ಏನೋ ಆಲೋಚಿಸಿ, ಹಿಮ್ಮತಖಾನನನ್ನು ಕರೆದು—"ಅಫಶಾನನನ್ನು ಇಲ್ಲಿಗೆ ಕಳುಹಿಸಿಕೊಡು," ಎಂದು ಹೇಳಿದಳು.

ಹಿಮ್ಮತಖಾನನು ಹೊರಟುಹೋದನು. ತುಸುಹೊತ್ತಿನಲ್ಲಿ ಅಫಶಾನನು ಪನ್ನಾಮತಿಯಬಳಿಗೆ ಬಂದು—"ಪನ್ನಾಬೇಗಮ, ನಿನ್ನ ಪ್ರಕೃತಿ ಸ್ವಸ್ಥವಾಗಿದೆಯೋ?" ಎಂದು ಕೇಳಿದನು.

ಪನ್ನಾಮತಿಯು ಅಫಶಾನನ ಮುಖದಕಡೆಗೆ ಉದಾಸದೃಷ್ಟಿಯಿಂದ ನೋಡಿ—"ಅಫಶಾನ, ನೀನು ನನ್ನ ಅಪರಾಧವನ್ನು ಕ್ಷಮಿಸು," ಎಂದು ಹೇಳಿದಳು. ಮುಂದೆ ಮಾತಾಡುವದು ಅವಳಿಂದಾಗಲಿಲ್ಲ. ಅವಳ ಕುತ್ತಿಗೆ ಬಿಗಿದು ಬಂದಿತು. ಕಣ್ಣುಗಳಲ್ಲಿ ನೀರು ತುಂಬಿತು. ಅಫಶಾನನು ಪನ್ನಾಮತಿಯ ಈ ಸ್ಥಿತಿಯನ್ನು ನೋಡಿ, ಬಹಳ ವ್ಯಾಕುಲಗೊಂಡನು. ಅವನು ಬಂದಿಯಾಗಿ ಸರದಾರರ ಸಭೆಯಲ್ಲಿ ನಿಲ್ಲಬೇಕಾಗಿಬಂದ ಸಮಯದಲ್ಲಿಯೂ ಇಷ್ಟೊಂದು ವ್ಯಥೆಗೊಂಡಿದ್ದಿಲ್ಲ. ಸರದಾರರು ಮರಣದಂಡನೆ ವಿಧಿಸಿದ್ದನ್ನು ಕೇಳಿಯೂ ಅವನು ಇಷ್ಟೊಂದು ದುಃಖಿತನಾಗಲಿಲ್ಲ. ಆದರೆ ಈಗ ಪನ್ನಾಮತಿಯ ಅಶ್ರುಗಳನ್ನು ನೋಡಿ, ಅವನು ತನ್ನ ಮನಸ್ಸಿನ ವ್ಯಥೆಯನ್ನು ತಡೆಯದಾದನು. ಅವನು ರುದ್ಧಕಂಠದಿಂದ—"ಪನ್ನಾಬೇಗಮ, ನೀನು ಯಾವ ಅಪರಾಧವನ್ನೂ ಮಾಡಿಲ್ಲ. ಹೀಗಿದ್ದರೂ ನನ್ನ ಬಳಿಯಲ್ಲಿ ಕ್ಷಮೆ ಬೇಡುವಿಯಲ್ಲ!" ಅಂದನು.

ಪನ್ನಾಮತಿಯು ತನ್ನ ಕಣ್ಣೀರುಗಳನ್ನೊರಿಸಿಕೊಂಡು—"ಅಫಶಾನ, ನೀನು ನನ್ನ ಮೇಲಿರುವ ಪ್ರೇಮದ ಮೂಲಕ ಹೀಗೆಹೇಳುತ್ತಿರುವೆ. ನಾನು ನಿನ್ನ ವಿಷಯದಲ್ಲಿ ಬಹಳ ಅನ್ಯಾಯವನ್ನಾಚರಿಸಿದ್ದೇನೆ. ನನ್ನಿಂದ ನೀನು ಜನರಲ್ಲಿ ತಿರಸ್ಕಾರ ಹೊಂದಬೇಕಾಯಿತು. ಇದಕ್ಕಾಗಿ ನನಗೆ ಈಗ ಬಹಳ ವ್ಯಥೆಯಾಗುತ್ತಿದೆ" ಎಂದಳು.

“ಪನ್ನಾಮತಿ, ನೀನಿದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ನಿನಗೋಸ್ಕರ ನಾನು ಬೇಕಾದದ್ದನ್ನು ಮಾಡಬಲ್ಲೆ. ಎಂಥ ತಿರಸ್ಕಾರವನ್ನಾದರೂ ಸಹಿಸಿಕೊಳ್ಳಬಲ್ಲೆ. ಹಿಂದೆ ಆದದ್ದನ್ನು ಮರೆ. ಅದನ್ನು ನೆನಿಸಿಕೊಂಡರೆ ಬರುವದೇನು? ಆದದ್ದನ್ನು ತಿರುಗಿಸಿಕೊಳ್ಳಲಿಕ್ಕೆ ಬರುವಂತಿಲ್ಲ.” ಎಂದು ಅಫಶಾನನಂದನು.

ಪನ್ನಾಮತಿಯು ಅಫಶಾನನ ಈ ಸಹಾನುಭೂತಿಯನ್ನು ನೋಡಿ, ಮನಸ್ಸಿನ ದಾರುಣವ್ಯಥೆಯನ್ನು ಮರೆತು ಪ್ರಸನ್ನಮುಖಿಯಾಗಿ—“ಅಫಶಾನ, ಈಗ ನೀನು ಇಲ್ಲಿಗೆ ಯಾಕೆ ಬಂದಿರುವೆ?” ಎಂದು ಕೇಳಿದಳು.

“ಒಂದು ಮಾತನ್ನು ಕೇಳಬೇಕಾಗಿತ್ತು.”

“ಅದೇನು?”

“ಆ ಮೊಗಲಬಂದಿಯಾರು?”

“ಶಹಾಜಾದಾ ದಾನಿಯಲ.”

”ಅಕಬರಬಾದಶಹನ ಮಗನಾದ ಶಹಾಜಾದಾ ದಾನಿಯಲನೇ?”

“ಅಹುದು.”

“ನೀನು ಇದನ್ನು ಹೇಗೆ ತಿಳಿದೆ?”

ಪನ್ನಾಮತಿಯು ತಾನು ವೇಷಾಂತರದಿಂದ, ದಾನಿಯಲನ ಶಿಬಿರಕ್ಕೆ ಹೋದಸಂಗತಿಯನ್ನು ಹೇಳಿದಳು. ಅಫಶಾನನು ವಿಸ್ಮಿತನಾಗಿ—“ನೀನು ಈ ಸಂಗತಿಯನ್ನು ನನಗೆ ಮೊದಲೇ ಹೇಳಲಿಲ್ಲವೇಕೆ?”

“ಹೇಳುವ ಪ್ರಸಂಗವೇ ಬರಲಿಲ್ಲ. ಆದರೂ ತಂದೆಗಳವರ ಮುಂದೆ ನಾನು ಛದ್ಮವೇಷದಿಂದ ಮೊಗಲರ ಶಿಬಿರವನ್ನು ಹೊಕ್ಕ ಸಂಗತಿ ಹೇಳಿದ್ದೆನು.”

ಅಫಶಾನನು ತುಸುಹೊತ್ತಿನವರೆಗೆ ಏನೋ ಆಲೋಚಿಸಿ ವಿಷಣ್ಣಮುಖನಾಗಿ—“ಪನ್ನಾಬೇಗಮ, ನೀನು ಶಹಾಜಾದನನ್ನು ಹೀಗೆಪಾರು ಮಾಡಿದ್ದು ಸರಿಯಾದ ಕೆಲಸವಾಗಲಿಲ್ಲ. ಇದರಿಂದ ಪಠಾಣರ ರಾಜ್ಯಕ್ಕೆ ಬಹಳ ಅಹಿತವಾಗುವ ಸಂಭವವಿದೆ. ಅಕಬರಬಾದಶಹನು ತನ್ನ ಮಗ

ನನ್ನು ಸೇನಾಪತಿಯನ್ನಾಗಿ ಮಾಡಿಕಳಿಸಬೇಕಾದರೆ, ಶಹಾಜಾದನ ಅಧೀನ ವಲ್ಲಿ ದೊಡ್ಡ ಸೈನ್ಯವನ್ನು ಕೊಟ್ಟು ಕಳಿಸಿರುವನೆಂಬದರಲ್ಲಿ ಸಂದೇಹವಿಲ್ಲ. ಇಷ್ಟು ದೊಡ್ಡ ದಂಡಿನೊಡನೆ ಯುದ್ಧಮಾಡುವ ಶಕ್ತಿಯು ನಮ್ಮಲ್ಲಿಲ್ಲ; ಆದರೆ ದೈವವಶದಿಂದ ಸೇನಾಪತಿ ತಾನೇತಾನಾಗಿ ಬಂದಿಯಾಗಿದ್ದನು. ಅವನು ನಮ್ಮ ಬಂದಿಯಾಗಿಯೇ ಉಳಿದಿದ್ದನಾದರೆ, ನಮಗನುಕೂಲವಾದ ಕರಾರುಗಳಿಂದ ಒಪ್ಪಂದ ಮಾಡಿಕೊಳ್ಳಲನುಕೂಲವಾಗುತ್ತಿತ್ತು; ಆದರೆ ನಿನ್ನ ಕೆಲಸದಿಂದ ನಾವು ಈ ಸುಸಂಧಿಯನ್ನು ಕಳೆದುಕೊಳ್ಳಬೇಕಾಯಿತು. ಉಪಾಯವಿಲ್ಲ. ಆದ ಮಾತನ್ನು ಚಿಂತಿಸಿ ಫಲವಿಲ್ಲ. ನೀನೇ ಅವನನ್ನು ಹಿಡಿದುಕೊಟ್ಟೆ. ಹೀಗಿರಲು ನೀನೇ ಅವನನ್ನು ಪ್ರಯತ್ನಪೂರ್ವಕವಾಗಿ ಪಾರುಮಾಡಿದ್ದೇಕೆ! ನಾನಾದರೋ ನಿನ್ನ ಯಾವ ಅಪ್ಪಣೆಯನ್ನೂ ಮಿಾರು ತ್ತಿದ್ದಿಲ್ಲ. ನೀನು ನನಗೆ ಹೇಳಿದ್ದೆಯಾದರೆ, ಯಾವದೇರೀತಿಯಿಂದ ನಾನು ಈ ಕೆಲಸವನ್ನು ಮಾಡುತ್ತಿದ್ದೆನು. ಹೀಗಾಗಿದ್ದರೆ ನೀನು ಈ ದುಃಖವನ್ನನುಭವಿಸುವ ಪ್ರಸಂಗಬರುತ್ತಿದ್ದಿಲ್ಲ." ಎಂದು ಹೇಳಿದನು.

"ಅಫಶಾನ, ನೀನು ಹೇಳುವದು ಸತ್ಯವಾದದ್ದು. ಆದರೆ ಮಾಡುವದೇನು? ಎಲ್ಲವೂ ದೈವಾಧೀನವು. ಮನುಷ್ಯರ ಕೈಯಲ್ಲೇನಿದೆ?"

ಪನ್ನಾಮತಿಯು ದಾನಿಯಲನನ್ನು ಪ್ರಣಯದೃಷ್ಟಿಯಿಂದ ನೋಡು ತ್ತಿರಬಹುದೇನು? ಎಂಬ ಸಂದೇಹವು ಅಫಶಾನನಿಗುಂಟಾಗಿದ್ದಿತು. ಕಾರಣ ಅವನು ಅವಳನ್ನು ಕುರಿತು—"ಪನ್ನಾಬೇಗಮ, ನಾನು ಇನ್ನೊಂದು ಪ್ರಶ್ನೆ ಕೇಳುವೆನು. ಅದಕ್ಕೆ ಸರಿಯಾದ ಉತ್ತರವನ್ನು ಕೊಡುವಿಯಾ?" ಎಂದು ಕೇಳಿದನು.

"ಅಫಶಾನ, ಹೀಗೇಕೆ ಕೇಳುತ್ತಿರುವೆ? ಈವರೆಗೆ ನೀನು ಕೇಳಿದ ಸಂಗತಿಗಳಿಗೆ ಸರಿಯಾದ ಉತ್ತರವನ್ನು ಕೊಡಲಿಲ್ಲವೇ?"

"ಶಹಾಜಾದನನ್ನು ಪ್ರಯತ್ನಪೂರ್ವಕವಾಗಿ ನೀನೇ ಹಿಡಿದು ಕೊಟ್ಟಿದ್ದೆ. ಹೀಗಿರಲು ಅವನ ವಿಷಯದಲ್ಲಿ ನಿನಗೆ ಇಷ್ಟೊಂದು ಸಹಾನುಭೂತಿಯು ಏಕೆ?"

ಇಂಥ ದುಃಖದ ಸಮಯದಲ್ಲಿಯೂ ಪನ್ನಾಮತಿಗೆ ನಗೆ ಬಂದಿತು. ಅವಳು—"ಅಫಶಾನ, ನಿನ್ನ ಸಂಶಯವು ಇನ್ನೂ ಹೋಗಿಲ್ಲವೆ? ಶತ್ರುವಿನ ವಿಷಯದಲ್ಲಿ ಯಾಕೆ ದಯಾಪರವಶಳಾದೆನೆಂಬದನ್ನು ನಾನೂ ಸಹ ಅರಿಯೆ. ಮುಖ್ಯವಾಗಿ ಎಲ್ಲವೂ ದೈವಾಧೀನ." ಎಂದು ಹೇಳಿದಳು.

ಅಫಶಾನನು ಮಾತಿನ ಒಲವನ್ನು ಬೇರೆ ಕಡೆಗೆ ತಿರುಗಿಸುವದಕ್ಕಾಗಿ—"ಪನ್ನಾಮತಿ, ನೀನು ಹೀಗೆ ಬಂದೀವಾಸದಲ್ಲಿ ಇನ್ನೆಷ್ಟುದಿವಸ ಇರಬೇಕು?"

"ಅಫಶಾನ! ಇದನ್ನು ನಾನು ಹೇಗೆ ಹೇಳಲಿ. ಎಲ್ಲವೂ ದೈವಾಧೀನ. ಹಣೇಬರಹದಲ್ಲಿ ಏನಿದೆಯೆಂಬವನ್ನು ಯಾರು ಕಂಡಿದ್ದಾರೆ?"

"ನಾನು ನಿನ್ನನ್ನು ಈ ಸ್ಥಿತಿಯಿಂದ ಪಾರುಮಾಡಬೇಕೆಂದು ಮಾಡಿದ್ದೇನೆ."

"ಯಾವ ಉಪಾಯದಿಂದ?"

"ನನಗೆ ಇನ್ನು ಈ ಸೇನಾಪತಿಪದವು ಬೇಕಾಗಿಲ್ಲ. ನೀನು ಒಡಂಬಡುವೆಯಾದರೆ, ನಾನು ನಿನ್ನನ್ನು ಇಲ್ಲಿಂದ ಬಿಡುಗಡೆಮಾಡುವೆನು. ಮುಂದೆ ನಾನು ಎಲ್ಲಿಗಾದರೂ ಹೋಗಿಬಿಡುವೆನು."

"ಅಫಶಾನ, ನಿನಗಿದು ತರವಲ್ಲ! ನಾನು ಪಠಾಣ-ಕನ್ಯೆಯು. ಬಾಲ್ಯಕಾಲದಲ್ಲಿಯೇ ತಾಯಿಯನ್ನು ಕಳೆದುಕೊಂಡೆನು. ಕಠೋರರೂ, ಮಮತಾಹೀನರೂ ಆದವರ ಸಹವಾಸದಲ್ಲಿ, ಈ ಗುಡ್ಡುಗಾಡುಪ್ರದೇಶದಲ್ಲಿ ಬೆಳೆದಿದ್ದೇನೆ. ಆದುದರಿಂದ ನಾನು ಕಠೋರಹೃದಯಳಾಗಿದ್ದೇನೆ. ಕಾರಣ ನಾನು ಏನನ್ನಾದರೂ ಸಹಿಸಿಕೊಳ್ಳಬಲ್ಲೆನು. ಆದುದರಿಂದ ನೀನು ನನ್ನ ಈ ಕಷ್ಟತರ ಸ್ಥಿತಿಯನ್ನು ಹೋಗಲಾಡಿಸುವ ಭಾರಕ್ಕೆ ಬೀಳಬೇಡ. ಇನ್ನು ಈ ತರದ ಮಾತುಗಳನ್ನು ಸಹ ನನ್ನೆದುರಿಗೆ ಆಡಬೇಡ. ನಾನು ಅದೃಷ್ಟ ಪರೀಕ್ಷೆ ಮಾಡಬೇಕಾಗಿದೆ. ನಾನು ನನ್ನ ಹಣೇಬರಹದೊಡನೆ ಹೋರಾಟ ನಡೆಸಿ

ದ್ದೇನೆ. ಅದು ಸೋಲುವದೋ? ನಾನು ಪರಾಜಿತಳಾಗುವೆನೋ? ಎಂಬ ದನ್ನು ನೋಡಬೇಕಾಗಿದೆ. ನೀನಿನ್ನು ಈ ಸ್ಥಳದಿಂದ ಹೊರಡು," ಎಂದು ಪನ್ನಾಮತಿ ಹೇಳಿದಳು.

ಅಫಶಾನನು ಪನ್ನಾಮತಿಯ ಮುಖವನ್ನು ನೋಡಿದನು. ಅವಳ ಮುಖದಲ್ಲಿ ದೃಢಪ್ರತಿಜ್ಞೆಯ ಚಿಹ್ನವು ತೋರುತಲಿತ್ತು. ಕಾರಣ ಅವನು ಹೆಚ್ಚುಮಾತಾಡುವ ಹವ್ಯಾಸಕ್ಕೆ ಹೋಗಲಿಲ್ಲ; ಪನ್ನಾಮತಿಯ ಅಪ್ಪಣೆ ಪಡೆದು, ಹೊರಟುಹೋದನು.

---

# ಹತ್ತನೆಯ ಪರಿಚ್ಛೇದ.

## ಅಫಶಾನನು ಮೊಗಲರ ಬಂದಿಯಾದನು.

ಸುಮಾರು ಎರಡುತಾಸು ಹೊತ್ತೇರಿರಬಹುದು. ದುರ್ಗಾಧಿಪತಿಯಾದ ಮಿರಾನಶಹನು ತನ್ನ ದಿವಾನ್‌ಖಾನೆಯಲ್ಲಿ ಕುಳಿತುಕೊಂಡಿದ್ದಾನೆ. ನಾಲ್ಕಾರುದಿವಸಗಳಿಂದ ಅವನ ಮನಸ್ಸಿಗೆ ಸಮಾಧಾನವಿರಲಿಲ್ಲ. ಅವನು ಸದ್ಯಕ್ಕೆ ಮಗಳನ್ನು ಸೆರೆಯಲ್ಲಿರಿಸಿದ್ದನಲ್ಲದೆ ಮುಂದೆ ಯುದ್ಧದಲ್ಲಿ ಪರಾಜಯವಾದರೆ ಅವಳನ್ನು ಕೊಲ್ಲಿಸುವ ಅಭಿವಚನವನ್ನಿತ್ತಿದ್ದನು. ಈ ಪ್ರಸಂಗವೆಲ್ಲಿ ಬರುವುದೋ ಎಂದು ಅವನು ಸದಾ ಚಿಂತಿಸುತ್ತಿದ್ದನು.

ಈ ಸಮಯದಲ್ಲಿ ಒಬ್ಬ ಪ್ರಹರಿಯು ಬಂದು, ಮಿರಾನಶಹನಿಗೆ ನೆಲಮುಟ್ಟಿ ಸಲಾಂ ಮಾಡಿ—"ಜನಾಬ, ಮೊಗಲ ಶಿಬಿರದಿಂದ ಒಬ್ಬ ದೂತನು ಬಂದಿದ್ದಾನೆ. ಅಪ್ಪಣೆಯಾದರೆ ಅವನನ್ನು ಒಳಗೆ ಕರೆದುಕೊಂಡು ಬರುವೆನು," ಎಂದು ಬಿನ್ನಹಮಾಡಿಕೊಂಡನು.

ಈ ಸಮಯದಲ್ಲಿ ಹೀಗೆ ಅಕಸ್ಮಾತ್ತಾಗಿ ದೂತನೇಕೆ ಬಂದಿರಬಹುದೆಂಬ ವಿಚಾರವು ಮಿರಾನಶಹನಿಗುಂಟಾಯಿತು. ಅವನು ಅನೇಕರೀತಿಯಾಗಿ ವಿಚಾರಿಸಿದನು; ಆದರೆ ಯಾವುದನ್ನೂ ನಿರ್ಧರಿಸಲಾರದೆ ಕಡೆಗೆ ಅವನು ಪ್ರಹರಿಯನ್ನು ಕುರಿತು—"ಆ ದೂತನನ್ನು ಮರ್ಯಾದೆಯಿಂದ ಇಲ್ಲಿಗೆ ಕರೆದುಕೊಂಡು ಬಾ," ಎಂದು ಹೇಳಿದನು.

ತುಸುಹೊತ್ತಿನಲ್ಲಿ ಪ್ರಹರಿಯು ಒಬ್ಬ ಮೊಗಲ-ದೂತನನ್ನು ಮಿರಾನಶಹನ ಬಳಿಗೆ ಕರೆದುಕೊಂಡುಬಂದನು. ಮಿರಾನಶಹನು ಈ ಮೊದಲು ಈ ದೂತನನ್ನು ನೋಡಿರಲಿಲ್ಲ. ಅವನು ಆ ದೂತನನ್ನು ಆದರದಿಂದ ಆಸನದಮೇಲೆ ಕುಳ್ಳಿರಿಸಿ—"ನೀವು ಲಾಹೋರದಿಂದ ಬಂದಿರುವಿರಾ?" ಎಂದು ಕೇಳಿದನು.

"ಇಲ್ಲ, ನಾನು ಸಮೀಪದಲ್ಲಿರುವ ಮೊಗಲರ ಶಿಬಿರದಿಂದ ಬಂದಿದ್ದೇನೆ."

"ಸುಲತಾನ ದಾನಿಯಲನು ತಮ್ಮನ್ನು ಕಳುಹಿಸಿರುವರೇ?"

"ಅಹುದು."

"ತಾವು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿರುವಿರಿ?"

"ಒಪ್ಪಂದಮಾಡಿಕೊಳ್ಳುವುದಕ್ಕಾಗಿ."

"ಯಾವ ಕರಾರುಗಳಿಂದ?"

"ಕೇವಲ ಎರಡು ಕರಾರುಗಳಿಗೆ ತಾವು ಒಪ್ಪಿಕೊಂಡರೆ ಸಾಕು. ಒಪ್ಪಂದವಾಗಿ ಹೋಗುವದು. ನೀವು ದಿಲ್ಲಿಯ ಬಾದಶಹರಿಗೆ ವರ್ಷ ವರ್ಷಕ್ಕೆ ತಪ್ಪು ಕೊಡಬೇಕು; ಮತ್ತು ಈಗ ಹತ್ತು ಆನೆಗಳನ್ನೂ, ನೂರು ಕುದುರೆಗಳನ್ನೂ ಕಾಣಿಕೆ ಕೊಡಬೇಕು. ಅಂದರೆ ಈ ರಾಜ್ಯವು ನಿಮ್ಮ ಆಧೀನದಲ್ಲಿಯೇ ಉಳಿಯುವದು. ನಾವು ಇಲ್ಲಿಂದ ಛಾವಣಿಯನ್ನು ಕಿತ್ತಿಕೊಂಡು ಹೋಗುವೆವು."

"ಎರಡನೆಯ ಕರಾರು ಯಾವದು?"

"ತಮಗೆ ಒಬ್ಬಳೇ ಒಬ್ಬ ಮಗಳಿರುವಳಂತೆ. ನೀವು ಅವಳನ್ನು ಶಹಾಜಾದಾ ದಾನಿಯಲರವರಿಗೆ ಸಮರ್ಪಿಸಬೇಕು."

ಮಿರಾನಶಹನು ತುಸುಹೊತ್ತು ಸುಮ್ಮನೆ ಕುಳಿತುಕೊಂಡನು. ತರುವಾಯ ಅವನು—"ಈ ಯುದ್ಧದ ಪೂರ್ವದಲ್ಲಿ ನನ್ನಬಳಿಗೆ ಒಬ್ಬ ಮೊಗಲ ದೂತನು ಬಂದಿದ್ದನು. ಅವನು ನೀವು ಹೇಳಿದ ಮೊದಲನೆಯ ಕರಾರನ್ನು ಮಾತ್ರ ಹೇಳಿದ್ದನು. ಎರಡನೆಯ ಕರಾರು ಹೊಸದಾಗಿದೆ. ನಿಮ್ಮ ಮೊದಲನೆಯ ಮಾತನ್ನು ಸಮ್ಮತಿಸಬಹುದಾಗಿದೆ. ಎರಡನೆಯ ಕರಾರಿಗೆ ನಾನು ಎಷ್ಟುಮಾತ್ರವೂ ಒಪ್ಪಲಾರೆ." ಎಂದು ಹೇಳಿದನು.

"ಮೊದಲನೆಯದಕ್ಕಿಂತ ಎರಡನೆಯ ಕರಾರು ಬಹಳ ಸೌಮ್ಯವೂ, ಅನುಕೂಲವೂ ಆಗಿದೆ. ಮೊಗಲರಿಗೆ ಹಿಂದುಗಳಲ್ಲಿ ಶ್ರೇಷ್ಠರಾದ ರಾಜಪುತ್ರರು ಸಹ ಕನ್ಯಾದಾನಮಾಡಿದ್ದಾರೆ. ಹೀಗಿರಲು ನೀವು ಇದಕ್ಕೆ ಸಮ್ಮತಿಸದಿರಲಿಕ್ಕೆ ಕಾರಣವೇನು? ನಾವೂ, ನೀವೂ ಒಂದೇ ಧರ್ಮದವರಾಗಿದ್ದೇವೆ."

"ಇದು ಸ್ವತಃ ಬಾದಶಹರ ಕರಾರೇನು?"

"ಅಲ್ಲ, ಬಾದಶಹರ ಪ್ರತಿನಿಧಿಗಳಾದ ಸುಲತಾನ ದಾನಿಯಲರವರದು."

"ಶಹಾಜಾದನು ಕೃತಜ್ಞತೆಯಿಂದ ಈ ಪ್ರಸ್ತಾಪ ತೆಗೆದಿರಬಹುದು; ಯಾಕಂದರೆ ನನ್ನಮಗಳು ಅವರನ್ನು ಸೆರೆಮನೆಯಿಂದ ಪಾರುಮಾಡಿದ್ದಾಳೆ."

"ಇರಬಹುದು. ಆದರೂ ನಾನಿದನ್ನು ಸಂಪೂರ್ಣವಾಗಿ ಅರಿಯೆನು; ಯಾಕಂದರೆ ನಾನು ಸುದ್ದಿಯನ್ನು ತಿಳಿಸುವ ದೂತನು. ಒಳಗಿನ ರಹಸ್ಯವು ನನಗೆ ತಿಳಿಯುವ ಸಂಭವವಿಲ್ಲ. ಅವರು ಹೇಳಿದ್ದನ್ನು ನಿಮಗೂ, ನೀವು ಹೇಳಿದ್ದನ್ನು ಅವರಿಗೂ ತಿಳಿಸುವದು ಮಾತ್ರ ನನ್ನ ಕರ್ತವ್ಯ."

ಮಿರಾನಶಹನು ತುಸುಹೊತ್ತು ಆಲೋಚನೆಮಾಡಿ, ತನ್ನ ಹೀನಾರಂಜಿತವಾದ ಗಡ್ಡದಲ್ಲಿ ಬೆರಳನ್ನಾಡಿಸಿ—"ಈಗ ನನಗೆ ನಿಜರಹಸ್ಯವು ತಿಳಿಯಬಂದಿತು. ಇದರಿಂದ ಪಠಾಣರಿಗಿಂತಲೂ ಮೊಗಲರು ಬುದ್ಧಿವಂತರಿರುವರೆಂಬದರಲ್ಲಿ ಸಂದೇಹವಿಲ್ಲ. ನನಗೆ ಒಬ್ಬಳೇ ಮಗಳಿರುವಳು. ನನ್ನ ತರುವಾಯ ಈ ಸಿಂಹಾಸನಕ್ಕೆ ಅವಳೇ ಅಧಿಕಾರಿಣಿಯು. ಶಹಾ

ಜಾದರು ನನ್ನ ಮಗಳನ್ನು ಮದುವೆಯಾದರೆ, ಅವರಿಗೆ ಈ ರಾಜ್ಯವು ಅನಾಯಾಸವಾಗಿ ದೊರೆತಂತಾಗುವದು. ಅವರು ನಮ್ಮ ಈ ರಾಜ್ಯವನ್ನು ಸ್ವಾಧೀನ ತೆಗೆದುಕೊಳ್ಳಲು ಪ್ರಯತ್ನಮಾಡುತ್ತಿದ್ದಾರೆ; ಆದರೆ ಅವರಿಗೆ ಈ ಕಾರ್ಯವು ಸಹಜವಾಗಿ ಸಾಧ್ಯವಾಗಲೊಲ್ಲದು. ಅದಕ್ಕಾಗಿ ಅವರು ಈ ಹಂಚಿಕೆ ತೆಗೆದಿದ್ದಾರೆ. ಇದರಿಂದ ಅವರಿಗೆ ರಕ್ತಪಾತವಿಲ್ಲದೆಯೂ, ಯಾವ ಪರಿಶ್ರಮವಾಗದೆಯೂ ನಮ್ಮ ರಾಜ್ಯ ದೊರೆಯುವದು. ಇದೇ ಅವರ ಅಭಿಪ್ರಾಯವಿರಬಹುದೆ?"

"ತಾವು ಹೇಗೆ ತಿಳಕೊಳ್ಳಲೊಲ್ಲಿರೇಕೆ; ಈಗ ನನ್ನಮಾತಿಗೆ ತಾವೇನು ಹೇಳುತ್ತಿರುವಿರಿ?"

"ನಾನು ನಿಮ್ಮಮಾತಿಗೆ ಒಪ್ಪಿಕೊಳ್ಳಲಾರೆನು. ನಿಮ್ಮ ಯಾವ ಕರಾರಿನಂತೆ ನಡೆಯುವದಕ್ಕೂ ನನಗೆ ಸಾಧ್ಯವಿಲ್ಲ. ನೀವು ಶಹಾಜಾದರಿಗೆ ಈ ಸಂಗತಿಯನ್ನು ತಿಳಿಸಬೇಕು. ಒಂದುವೇಳೆ ನನಗೆ ಅವರ ದರ್ಶನವಾಗುವದಾದರೆ, ಅವರ ಈ ಮಾತಿನ ಉತ್ತರವನ್ನು ನಾನು ಚನ್ನಾಗಿ ಕೊಡಬಲ್ಲೆನು."

ಆ ದೂತನು ಹೊರಡುವದಕ್ಕಾಗಿ ಎದ್ದು ನಿಂತು, ಹಾಸ್ಯಮುಖನಾಗಿ— "ಜನಾಬ, ನಿಮ್ಮ ಇದಿರಿಗೆ ಈಗ ಸ್ವತಃ ಶಹಾಜಾದರೇ ಬಂದುನಿಂತುಕೊಂಡದ್ದಾದರೆ, ಅವರಿಗೂ ಇದೇರೀತಿಯ ಕಠೋರವಾದ ಉತ್ತರ ಕೊಡಬಲ್ಲಿರಾ?" ಎಂದು ಹೇಳಿ, ತನ್ನ ಕೃತ್ರಿಮಗಡ್ಡವನ್ನು ತೆಗೆದೊಗೆದನು.

ಮಿರಾನಶಹನು ವಿಸ್ಮಿತನಾದನು. ತನ್ನೆದುರಿನಲ್ಲಿ ಒಬ್ಬ ಸುಂದರತರುಣನು ನಿಂತುಕೊಂಡಿರುವದು ಅವನಿಗೆ ಕಾಣಿಸಿತು. ಮೊದಲಿನ ಪ್ರೌಢವಯಸ್ಕನಾದ ಆ ರಾಜದೂತನು ಮಾಯವಾಗಿ ಹೋಗಿಬಿಟ್ಟಿದ್ದನು. ಮಿರಾನಶಹನು ತನ್ನೆದುರಿಗೆ ನಿಂತಿರುವ ತರುಣನನ್ನು ತುಸುಹೊತ್ತಿನವರೆಗೆ ದಿಟ್ಟಿಸಿನೋಡಿ, ಇವನೇ ಶಹಾಜಾದಾ ದಾನಿಯಲನೆಂಬದನ್ನು ತಿಳಿದನು. ಮೃಗವು ತಾನೇತಾನಾಗಿ ತನ್ನಬಲೆಯಲ್ಲಿ ಬಂದು ಬಿದ್ದುದನ್ನು ನೋಡಿದ ವ್ಯಾಧನು, ಹರ್ಷಿತನಾಗುವಂತೆ, ಮಿರಾನಶಹನು ಆನಂದಿತನಾದನು. ಈ ಸಮಯದಲ್ಲಿ ಇವನನ್ನು ಹಿಡಿದು, ಮತ್ತೆ ಸೆರೆಯಲ್ಲಿ ಹಾಕಬೇಕೆಂದು

ಆಲೋಚಿಸಿದನು. ಅದಕ್ಕಾಗಿ ಅವನು ತನ್ನ ಸೇವಕರನ್ನು ಕರೆಯುವದಕ್ಕಾಗಿ, ತನ್ನಲ್ಲಿರುವ ಕೊಳಲನ್ನು ಊದುವದಕ್ಕೆ ಸಿದ್ಧನಾದನು. ದಾನಿಯಲನು ಇದನ್ನು ತಡೆದು—"ಈ ಗುಡ್ಡುಗಾಡು ಪ್ರದೇಶದ ನಬಾಬರೇ, ನೀವು ಇಂಥ ಹೀನಕೆಲಸಕ್ಕೆ ಉದ್ಯುಕ್ತರಾಗಬೇಡಿರಿ. ನಾನು ರಾಜದೂತನು. ಸಾಮ್ರಾಟ ಅಕಬರಶಹರ ಪ್ರತಿನಿಧಿಯು. ದೂತರನ್ನು ಸೆರೆಹಿಡಿಯುವ ಪದ್ಧತಿಯು ಎಲ್ಲಿಯೂ ಇಲ್ಲ. ಸುಧಾರಿಸಿದ ಯಾವ ಜನಾಂಗದವರೂ ಇನ್ನುವರೆಗೆ ಈ ಕೆಲಸಮಾಡಿಲ್ಲ. ಇದು ನಿಮಗೆ ಎಷ್ಟುಮಾತ್ರವೂ ತರವಲ್ಲ. ನೀವೇನೂ ರಾಜ ನೀತಿಯನ್ನು ಅರಿತಿಲ್ಲವೆಂದಲ್ಲ; ಹೀಗಿದ್ದರೂ ನೀವು ಇಂಥ ಕೆಲಸಮಾಡುತ್ತಿರುವದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ." ಎಂದು ಹೇಳಿದನು.

ಶಹಾಜಾದನ ಈ ತಿರಸ್ಕಾರದ ಮಾತನ್ನು ಕೇಳಿ, ಮಿರಾನಶಹನಿಗೆ ನಾಚಿಕೆಯುಂಟಾಯಿತು. ಅವನು ಊದುವದಕ್ಕಾಗಿ ತೆಗೆದ ಕೊಳಲನ್ನು ಪುನಃ ಒಳಗಿರಿಸಿದನು. ಅವನು ಶಾಂತತೆಯಿಂದ—"ಸುಲತಾನ ದಾನಿಯಲ, ನಿಮ್ಮ ಸಾಹಸವು ಅತಿಭಯಾನಕವಾದುದು! ದೇವರದಯೆಯಿಂದ ಒಮ್ಮೆ ನಮ್ಮ ಕೈಯಿಂದ ಪಾರಾಗಿ ಹೋಗಿದ್ದಿರಿ! ಪುನಃ ಈ ತರದ ಸಾಹಸಮಾಡಿದ್ದೇಕೆ?" ಎಂದು ಕೇಳಿದನು.

ಶಹಾಜಾದನು ಮುಗುಳುನಗೆನಕ್ಕು—"ಓಡಿಹೋದ ಮೊಗಲ ಬಂದಿಯು ಪುನಃ ಸಾಹಸಭರದಿಂದ ತಮ್ಮೆದುರಿಗೆ ಬಂದು ನಿಂತುಕೊಳ್ಳಲು ಸಮರ್ಥನಾಗಿರುವನೆಂಬುವನ್ನು ತಮಗೆ ತೋರಿಸುವದಕ್ಕಾಗಿ! ಇದು ಹೇಗೇ ಇರಲಿ, ಈಗ ನೀವು ನನ್ನ ನಿಜಪರಿಚಯವನ್ನು ಅರಿತವರಾಗಿರುವಿರಿ. ನಾನಿನ್ನು ಇಲ್ಲಿ ಬಹಳಕಾಲದವರೆಗೆ ನಿಲ್ಲುವಂತಿಲ್ಲ. ಶಹಾಜಾದನು ನನ್ನೆದುರಿಗೆ ಬಂದು ನಿಂತದ್ದಾದರೆ, ನಾನು ಅವನಿಗೆ ಯಾವತ್ತನ್ನೂ ಹೇಳುವೆನೆಂದು ನೀವು ಆಗಲೇ ಹೇಳಿದಿರಲ್ಲ! ಈಗ ಹೇಳೋಣವಾಗಲಿ. ನಾನಾದರೂ ನಿಮ್ಮ ಮನೋಬಯಿಕೆಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕೆಂದೇ ಬಂದಿದ್ದೇನೆ," ಎಂದು ಹೇಳಿದನು.

ಮಿರಾನಶಹನು ತುಸುಹೊತ್ತು ವಿಚಾರಿಸಿ—"ನಾನು ದಿಲ್ಲಿಯಬಾದಶಹರಿಗೆ ಕಾಣಿಕೆರೂಪವಾಗಿ ಆನೆಗಳನ್ನೂ ಕುದುರೆಗಳನ್ನೂ ಕೊಡುತ್ತೇನೆ;

ಆದರೆ ಅವರ ಅಧೀನತೆಯನ್ನು ಸ್ವೀಕರಿಸಿ ವಾರ್ಷಿಕ ತಪ್ಪನ್ನು ಕೊಡಲಾರೆ” ಎಂದು ಹೇಳಿದನು.

“ ಇದು ನಿಮ್ಮ ನಿರ್ಧಾರದ ಮಾತೇನು ? ”

“ ಅಹುದು. ”

“ ನಿಮ್ಮ ಕನ್ಯೆಯ ಸಂಬಂಧದ ಮಾತಿಗೆ ಏನೆಂದು ಹೇಳುವಿರಿ? ”

“ ನಾನು ನನ್ನ ಕನ್ಯೆಯನ್ನು ಒಬ್ಬರಿಗೆ ಕೊಡುತ್ತೇನೆಂದು ವಚನ ಕೊಟ್ಟಿದ್ದೇನೆ; ಕಾರಣ ಅವಳನ್ನು ತಮಗೆ ಕೊಡಲಾರೆನು. ”

“ ತಾವು ಅಳಿಯನನ್ನಾಗಿ ಆರಿಸಿದ ಆ ಭಾಗ್ಯವಾನನು ಯಾರು ? ”

“ ಈ ಯುದ್ಧದ ಮುಖ್ಯಸೇನಾಪತಿಯಾದ ಅಫಶಾನ ಖಾನನು. ”

“ ಬಹಳ ಒಳ್ಳೆಯದಾಯಿತು! ತಾವು ಹೇಳಿದ ಮಾತನ್ನು ಅಕಬರ ಬಾದಶಹರವರಿಗೆ ತಿಳುಹಿಸುವೆನು. ನನಗಿನ್ನು ಅಪ್ಪಣೆಕೊಡಿರಿ, ” ಎಂದು ಹೇಳಿ ಶಹಾಜಾದನು ಹೊರಡುವದಕ್ಕೆ ಸಿದ್ಧನಾದನು.

“ ನಿಂತುಕೊಳ್ಳಿರಿ, ನಾನು ನಿಮ್ಮೊಡನೆ ಹತ್ತುಜನ ಸೈನಿಕರನ್ನು ಕಳುಹಿಸಿಕೊಡುವೆನು. ಅವರು ನಿಮ್ಮನ್ನು ನಿಮ್ಮ ಶಿಬಿರಕ್ಕೆ ಸುರಕ್ಷಿತವಾಗಿ ಮುಟ್ಟಿಸಿಬರುವರು.” ಎಂದು ಮಿರಾನಶಹನು ಹೇಳಿದನು.

ಶಹಾಜಾದನು ಹಾಸ್ಯಮುಖನಾಗಿ—“ ಜನಾಬ, ತಾವು ನನ್ನ ಮೇಲೆ ತೋರಿಸುತ್ತಿರುವ ಈ ದಯೆಗಾಗಿ, ನಾನು ತುಂಬಾಕೃತಜ್ಞನಾಗಿದ್ದೇನೆ. ಆದರೆ ನನಗೀಗ ಸೈನಿಕರ ಆವಶ್ಯಕತೆಯಿಲ್ಲ. ಹೊರಗೆ ನನ್ನ ಕುದುರೆ ಸಿದ್ಧವಾಗಿ ನಿಂತುಕೊಂಡಿದೆ. ನನ್ನ ಟೊಂಕದಲ್ಲಿ ಹದವಾದ ಖಡ್ಗವಿದೆ. ಕುದುರೆಯೂ, ಆಯುಧವೂ ಬಳಿಯಲ್ಲಿರುವಾಗ ಮೊಗಲರು ಯಾರಿಗೂ ಹೆದರುವಂತಿಲ್ಲ. ” ಎಂದು ಹೇಳಿದನು.

ಶಹಾಜಾದನು ಹೊರಬಿದ್ದು, ತನ್ನ ಕುದುರೆಯ ಬಳಿಗೆಬಂದು, ಅದರಮೇಲೆ ಹತ್ತಿ ನಿರ್ಭಯದಿಂದ ತನ್ನ ಶಿಬಿರದಕಡೆಗೆ ಹೊರಟನು.

ಮಿರಾನಶಹನು ದಾನಿಯಲನು ಹೋದನಂತರ ಮನಸ್ಸಿನಲ್ಲಿ ವಿಚಾರಮಾಡಹತ್ತಿದನು—"ಒಮ್ಮೆ ಶಹಾಜಾದನು ನನ್ನ ಬಂದಿಯಾಗಿದ್ದನು; ಆದರೆ ಆಸಾರಿ ಅವನು ನನ್ನ ಕಣ್ಣಿಗೆ ಇಂಗುಹಚ್ಚಿ ಪಾರಾಗಿ ಹೋಗಿದ್ದನು. ಪುನಃ ಅವನು ನನ್ನೆದುರಿಗೆ ಬಂದದ್ದಾದರೆ, ಈ ಸೇಡು ತೀರಿಸಿಕೊಳ್ಳಬೇಕೆಂದು ಮಾಡಿದ್ದೆನು. ಆದರೆ ನನ್ನ ಈ ಸಂಕಲ್ಪವು ಈಡೇರಲಿಲ್ಲ. ಅವನು ಏಕಾಂಗಿಯಾಗಿ ನನ್ನ ಬಳಿಗೆ ಬಂದಿದ್ದರೂ, ನಾನವನನ್ನು ಹಿಡಿದುಹಾಕಲು ಸಮರ್ಥನಾಗಲಿಲ್ಲ. ಅವನು ನನ್ನೆದುರಿಗೆ ನಿಂತು, ಧೀರತೆಯಿಂದ ಮಾತಾಡಿದನು; ನನ್ನನ್ನು ತಿರಸ್ಕರಿಸಿದನು. ಆದರೆ ನಾನು ಸುಮ್ಮನೇ ಇರಬೇಕಾಯಿತು. ಹೀಗೇಕೆ ಆಗಿರಬಹುದು? ಅವನಲ್ಲೇನಾದರೂ ಮೋಹಿನೀ ಮಂತ್ರವಿರಬಹುದೇನು? ಅವನು ರಾಜನೀತಿಯನ್ನು ಮುಂದೆಮಾಡಿ, ಈ ಸಾರಿಯೂ ನನ್ನನ್ನು ಮೋಸಗೊಳಿಸಿ ಹೋಗಿಬಿಟ್ಟನು. ಇದಕ್ಕಿನ್ನು ಉಪಾಯವೇನು?"

ದಿವಾಣಖಾನೆಯಲ್ಲಿ ಮಿರಾನಶಹನಿಗೂ, ದಾನಿಯಲನಿಗೂ ಮಾತುಕಥೆಗಳು ನಡೆದಿದ್ದವು. ಈ ಸಮಯದಲ್ಲಿ ದಿವಾಣಖಾನೆಯಲ್ಲಿ ಮತ್ತಿಯಾರು ಇದ್ದಿಲ್ಲ. ಆದರೆ ಒಬ್ಬನುಮಾತ್ರ ಯಾರಿಗೂ ತಿಳಿಯದಂತೆ ಮರೆಯಲ್ಲಿ ನಿಂತುಕೊಂಡು ಈ ಯಾವತ್ತು ಮಾತುಗಳನ್ನು ಕೇಳುತಲಿದ್ದನು. ಇವನು ಅಫಶಾನನಾಗಿದ್ದನು. ಅಫಶಾನನು ಎಲ್ಲವನ್ನು ಚಿತ್ತಗೊಟ್ಟು ಕೇಳಿದನು. ಅದರಿಂದ ದೂತನಾಗಿ ಬಂದಿರುವವನು ಸ್ವತಃ ಕುಮಾರದಾನಿಯಲನೆಂಬದು ಅವನಿಗೆ ತಿಳಿದುಬಂದಿತು. ಆಗಂತುಗ ರಾಜದೂತನು ಹೊರಟುಹೋದದ್ದನ್ನು ಅಫಶಾನನು ನೋಡಿದನು. ಮಿರಾನಶಹನು ಅವನನ್ನು ಹೀಗೆ ಹೋಗಬಿಟ್ಟದ್ದು ಸರಿಯಾಗಲಿಲ್ಲವೆಂದು ಭಾವಿಸಿದನು. ಮಿರಾನಶಹನು ಏನು ಮಾಡಲೊಲ್ಲನೇಕೆ; ತಾನು ಈ ಸಮಯದಲ್ಲಿ ಸೇಡು ತೀರಿಸಿಕೊಳ್ಳಬೇಕೆಂದು ನಿರ್ಧರಿಸಿದನು.

ದಾನಿಯಲನು ಪನ್ನಾಮತಿಯ ಪ್ರೇಮಾಭಿಲಾಷಿಯಾಗಿರುವದು ಅಫಶಾನನಿಗೆ ಬಹಳ ಅನಿಷ್ಟಕರಸಂಗತಿ. ದಾನಿಯಲನು ಮಿರಾನಶಹನ ಬಳಿಯಲ್ಲಿ ತಾನು ಪನ್ನಾಮತಿಯನ್ನು ವಿವಾಹಮಾಡಿಕೊಳ್ಳುವೆನೆಂಬ

ಸಂಗತಿಯನ್ನು ತಿಳಿಸಿದ್ದನು. ಇದನ್ನು ಕೇಳಿ, ಅಫಶಾನನಿಗೆ ಬಹಳದುಃಖ ವಾಯಿತು; ಆದರೆ ಅಫಶಾನನ ಸುದೈವದಿಂದ ಮಿರಾನಶಹನು ಶಹಾಜಾದನ ಮಾತಿಗೆ ಒಪ್ಪಲಿಲ್ಲ. ಇಷ್ಟರಿಂದ ಅಫಶಾನನಿಗೆ ಸಮಾಧಾನವಾಗಲಿಲ್ಲ; ಯಾಕಂದರೆ ಈಗ ಮಿರಾನಶಹನು ಈ ಪ್ರಸ್ತಾಪಕ್ಕೆ ಅಸಮ್ಮತಿಯನ್ನು ತೋರಿಸುತ್ತಿದ್ದರೂ, ಮುಂದೆ ಅವನು ವಿಪತ್ತಿನಲ್ಲಿ ಸಿಕ್ಕನೆಂದರೆ, ಶಹಾಜಾದನ ಮಾತಿಗೆ ಒಪ್ಪಲೇಬೇಕಾಗುತ್ತಿತ್ತು. ಪನ್ನಾಮತಿಯಾದರೂ ದಾನಿಯಲನನ್ನು ಪ್ರೀತಿಸುವಳೆಂಬ ಸಂದೇಹವು ಅಫಶಾನನಿಗೆ ಉಂಟಾಗಿತ್ತು. ಅವಳು ತಾನು ಶಹಾಜಾದನನ್ನೇ ವರಿಸುವೆನೆಂದು ಹಟಹಿಡಿದರೆ, ಮಿರಾನಶಹನೇನುಮಾಡುವನು? ಈ ಕಾರಣಗಳ ಮೂಲಕ ಅಫಶಾನನು ದಾನಿಯಲನನ್ನು ಗೊತ್ತಿಗೆಹಚ್ಚದಹೊರತು, ತನಗೆ ಸುಖವಿಲ್ಲೆಂದು ಭಾವಿಸಿಕೊಂಡನು. ಅದಕ್ಕಾಗಿ ಅವನು ಈ ಸುಯೋಗದಲ್ಲಿ ಹೇಗಾದರೂಮಾಡಿ, ದಾನಿಯಲನನ್ನು ಹಿಡಿಯಲೇಬೇಕೆಂದು ಗೊತ್ತುಮಾಡಿಕೊಂಡನು.

ರಾಜದೂತರ ಮೇಲೆ ಯಾವದೇ ತರದ ಅತ್ಯಾಚಾರಮಾಡುವ ಅಧಿಕಾರವು ಯಾರಿಗೂ ಇಲ್ಲ. ಈ ನಿಯಮವನ್ನು ಸಕಲಜನಾಂಗದವರೂ ಒಪ್ಪಿಕೊಳ್ಳುತ್ತಿರುವರು. ಇದಕ್ಕಾಗಿಯೇ ಶತ್ರುವು ಅನಾಯಾಸವಾಗಿ ಕೈಯಲ್ಲಿ ಸಿಕ್ಕಿದ್ದರೂ, ಮಿರಾನಶಹನು ಅವನನ್ನು ಹಿಡಿದುಹಾಕಲು ಸಮರ್ಥನಾಗಲಿಲ್ಲ. ಈ ಕೆಲಸವನ್ನು ಅಫಶಾನನೂ ಮಾಡುವಂತಿದ್ದಿಲ್ಲ; ಯಾಕಂದರೆ ಅವನು ಹೀಗೆಮಾಡಿದನಾದರೆ ಮಿರಾನಶಹನಿಂದ ಶಿಕ್ಷೆಯನ್ನು ಹೊಂದಬೇಕಾಗುತ್ತಿತ್ತು. ಕಾರಣ ಅಫಶಾನನು ಶಹಜಾದನು ಅಫಜಾಯಿ-ದುರ್ಗದ ಸೀಮಾಂತವನ್ನು ದಾಟಿದ ತರುವಾಯ ಅವನನ್ನು ಹಿಡಿಯಬೇಕೆಂದು ಆಲೋಚನೆಹಾಕಿದನು; ಹೀಗೆ ಮಾಡಿದನಾದರೆ ಅಫಶಾನನು ರಾಜನೀತಿಯನ್ನು ಮೀರಿದಂತಾಗುತ್ತಿದ್ದಿಲ್ಲ; ಕಾರಣ ಮಿರಾನಶಹನ ಕಠೋರದಂಡನೆಯನ್ನು ತಪ್ಪಿಸಿಕೊಳ್ಳಬಹುದಾಗಿತ್ತು.

ಅಫಶಾನನು ಉತ್ತಮವಾದುದೊಂದು ಕುದುರೆಯನ್ನುಹತ್ತಿಕೊಂಡು, ಹತ್ತುಜನಸವಾರರನ್ನು ಕರಕೊಂಡು, ಅಫಜಾಯಿದುರ್ಗದ ಸೀಮಾಂತದಲ್ಲಿರುವ ಆರಣ್ಯವನ್ನು ಪ್ರವೇಶಿಸಿದನು; ಮತ್ತು ಅಲ್ಲಿರುವದೊಂದು

ಇಕ್ಕಟ್ಟಾದ ಸ್ಥಳದಲ್ಲಿ ದಾನಿಯಲನ ಮಾರ್ಗಪ್ರತೀಕ್ಷೆಮಾಡುತ್ತ ಕುಳಿತು ಕೊಂಡನು. ದಾನಿಯಲನು ತನ್ನ ಶಿಬಿರಕ್ಕೆ ಹೋಗಬೇಕಾದರೆ, ಈ ಅರಣ್ಯದಲ್ಲಿ ಹಾಯ್ದುಹೋಗಬೇಕಾಗುತ್ತಿತ್ತು. ಇವನು ಸರಳಮಾರ್ಗದಿಂದ ಹೊರಟು, ಈ ಅರಣ್ಯದಮೇಲೆಹಾಯ್ದು, ತನ್ನ ಶಿಬಿರಕ್ಕೆ ಹೋಗತಕ್ಕವನಿದ್ದನು. ಅಫಶಾನನು ಸಮೀಪದ ಗುಪ್ತಮಾರ್ಗದಲ್ಲಿ ಹಾಯ್ದು, ಶಹಾಜಾದನಿಗಿಂತಲೂ ಮೊದಲೇ ಈ ಅರಣ್ಯಕ್ಕೆ ಬಂದಿದ್ದನು. ಇದು ಶಹಾಜಾದನಿಗೆ ತಿಳಿದಿರಲಿಲ್ಲ.

ಅಫಶಾನನು ಎಣಿಕೆಹಾಕಿದಂತೆ, ದಾನಿಯಲನು ಈ ಅರಣ್ಯದಲ್ಲಿ ಹೊಕ್ಕನು. ಅಫಶಾನನು ಅಡಗಿಕೊಂಡಿರುವ ಸ್ಥಳದಬಳಿಗೆ ಬಂದನು. ಕೂಡಲೇ ಅಫಶಾನನು ತನ್ನಸೈನಿಕರೊಡನೆ ಶಹಾಜಾದನನ್ನು ಮುತ್ತಿದನು. ದಾನಿಯಲನು ಅಫಶಾನನನ್ನು ಗುರ್ತಿಸಿದನು. ಅವನ ಈ ನೀಚವರ್ತನವನ್ನು ನೋಡಿ, ಶಹಾಜಾದನಿಗೆ ಸಿಟ್ಟುಬಂದಿತು. ಅವನು ಕುದುರೆಯನ್ನು ತಡೆದುನಿಲ್ಲಿಸಿ—"ಅಫಶಾನ, ನೀನು ಪಠಾಣರಸೇನಾಪತಿಯೇನು? ಮಿರಾನಶಹನು ನಿನ್ನಂಥ ಹೇಡಿಯನ್ನು ಸೇನಾಪತಿಯನ್ನಾಗಿ ಮಾಡಿಕೊಂಡಿರುವದು ಆಶ್ಚರ್ಯದ ಸಂಗತಿಯಾಗಿದೆ! ವೀರತ್ವದಗರ್ವವು ನಿನಗಿರುವದಾದರೆ, ಸಮರಭೂಮಿಯಲ್ಲಿ ನಿನ್ನ ಶಕ್ತಿಯನ್ನು ತೋರಿಸು. ಅಂದಿಗೆ ನೀನು ಸೇನಾಪತಿಪದಕ್ಕೆ ಯೋಗ್ಯನಾಗುವೆ. ಅಲ್ಲದೆ ಹೀಗೆ ಮೋಸದಿಂದ ಶತ್ರುವನ್ನು ಕೈವಶಮಾಡಿಕೊಳ್ಳಲು ಯತ್ನಿಸುವದು ಹೆಂಗಸರ ಕೆಲಸವಾಗಿದೆ. ನಾನು ಒಬ್ಬನು. ನೀವು ಹನ್ನೊಂದುಮಂದಿ ಇರುವಿರಿ. ಇವರಲ್ಲಿ ನಿನ್ನ ಶಕ್ತಿಯ ಪರೀಕ್ಷೆಯಾಗುವಂತಿಲ್ಲ. ಈ ನೀಚವ್ಯವಹಾರವನ್ನು ಬಿಟ್ಟುಬಿಡು. ಒಂದುವೇಳೆ ನೀನು ಅನಾಯಾಸವಾಗಿ ಶತ್ರುವು ಸಿಕ್ಕಿರುವಾಗ ಬಿಡುವುದೇಕೆಂದು ನನ್ನನ್ನು ಹಿಡಿಯುವ ಹವ್ಯಾಸಕ್ಕೆ ಬೀಳುವೆಯಾದರೆ, ನೀನು ಕೃತಕಾರ್ಯನಾಗಲಾರೆ. ಇಷ್ಟೇ ಅಲ್ಲ; ಮರಣಕ್ಕೊಳಗಾಗುವೆ. ನನ್ನ ಮಾರ್ಗವನ್ನು ಸುಮ್ಮನೆ ಬಿಟ್ಟುಬಿಡು." ಎಂದುಹೇಳಿದನು.

"ನೀನು ಏನೇಹೇಳಿದರೂ, ನಾನು ನಿನಗೆ ಮಾರ್ಗವನ್ನು ಬಿಡಲಾರೆನು; ಆದರೆ ನಿನ್ನ ಮೃತ್ಯುವಿನ ಮಾರ್ಗಕ್ಕೆ ತಡೆಯನ್ನುಂಟುಮಾಡ

ಲಾರೆನು. ಬೇಕಾದರೆ ನೀನತ್ತಹೋಗಬಹುದು." ಎಂದು ಅಫಶಾನನು ಹೇಳಿದನು.

"ಮೂರ್ಖಪಠಾಣ! ಇನ್ನೂ ನೀನು ಮೊಗಲರನ್ನು ಚೆನ್ನಾಗಿ ಅರಿಯೆ! ಅದಕ್ಕಾಗಿ ಹೀಗೆ ಮಾತಾಡುತ್ತಿರುವೆ," ಎಂದುಹೇಳಿ, ಶಹಾಜಾದನು ತನ್ನ ಬಳಿಯಲ್ಲಿರುವ ಕೊಳಲನ್ನು ಊದಿದನು. ಕೂಡಲೇ ಆ ಅರಣ್ಯದಲ್ಲಿ ಅಡಗಿಕೊಂಡಿದ್ದ ಇಪ್ಪತ್ತೈದುಜನ ಮೊಗಲಸೈನಿಕರು ಬಂದು, ಅಫಶಾನನ ಸೈನಿಕರನ್ನು ನಾಲ್ಕುಕಡೆಯಿಂದ ಮುತ್ತಿದರು.

ಸಮಸೇರನೆಂಬ ಮೊಗಲಸೈನಿಕನು ಅಫಶಾನನಮೇಲೆ ಬರ್ಜಿಯನ್ನೆಸೆದನು. ಇದರಿಂದ ಅಫಶಾನನು ಗಾಯಪಟ್ಟು ಭೂಮಿಯಮೇಲೆ ಬಿದ್ದನು. ಇಷ್ಟುಜನ ಮೊಗಲಸೈನಿಕರು ಇಲ್ಲಿ ಅಡಗಿ ಕುಳಿತಿರಬಹುದೆಂಬದನ್ನು ಅವನು ಸ್ವಪ್ನದಲ್ಲಿಯೂ ಭಾವಿಸಿರಲಿಲ್ಲ. ಈಗ ಅವನು ತಾನು ಮಾಡಿದ್ದು ಒಳಿತಾಗಲಿಲ್ಲವೆಂದೂ, ಘೋರವಿಪತ್ತಿನಲ್ಲಿ ಬಿದ್ದನೆಂದೂ ತಿಳಿದನು. ಇದರಿಂದವನ ಕೈಕಾಲೇಹೋದವು. ಆದರೂ ಅವನು ಸಮೀಪದಲ್ಲಿ ಬಿದ್ದ ಖಡ್ಗವನ್ನು ತೆಗೆದುಕೊಳ್ಳುವದಕ್ಕಾಗಿ ಮುಂದುವರಿದನು. ಇಷ್ಟರಲ್ಲಿ ಒಬ್ಬ ಮೊಗಲಸೈನಿಕನು ಇವನತಲೆಯನ್ನು ಕತ್ತರಿಸುವದಕ್ಕಾಗಿ ಖಡ್ಗವನ್ನೆತ್ತಿದ್ದನು. ಇದನ್ನುನೋಡಿ ಶಹಾಜಾದನು—"ಮುನಾಯಿನು, ಆ ಗಾಯಾಳುವಾದ ಪಿಶಾಚನನ್ನು ಕೊಲ್ಲಬೇಡ. ಸೆರೆಹಿಡಿ," ಎಂದು ಹೇಳಿದನು.

ಅಫಶಾನನು ಮೊಗಲರ ಬಂದಿಯಾದನು. ಇವನ ಸೈನಿಕರ ಹಿಂಡಾದರೂ ಇವನಂತೆಯೇ ಆಯಿತು. ಶಹಾಜಾದನು ಇವರೆಲ್ಲರನ್ನೂ ಸೆರೆಹಿಡಿದುಕೊಂಡು, ತನ್ನ ಶಿಬಿರಕ್ಕೆ ಹೋದನು.

# ಹನ್ನೊಂದನೆಯ ಪರಿಚ್ಛೇದ.

## ಪಂಜರದೊಳಗಿನ ಪಕ್ಷಿ.

ಶರತ್ಕಾಲದೊಂದು ಮಧ್ಯಾಹ್ನ ಸಮಯದಲ್ಲಿ ಪರ್ವತದ ಮೇಲೆ ಕೊಪ್ಪರಿಗೆಯಂತೆ ಬೋರಲಿಸಿದ ಅನಂತ ಆಕಾಶವು ಮೇಘಶೂನ್ಯವಾಗಿದೆ; ಎಲ್ಲಿಡೆಯಲ್ಲಿ ನೀಲವರ್ಣದ ಸಾಮ್ರಾಜ್ಯವು ಪಸರಿಸಿದೆ. ಮಧ್ಯಾಹ್ನದ ಸೂರ್ಯನು ಥಳಥಳನೆ ಹೊಳೆಯುತ್ತಿದ್ದಾನೆ.

ಬಾಹ್ಯಸೃಷ್ಟಿಯು ಬಹು ಶೋಭಾಯಮಾನವಾಗಿತ್ತು. ಪರ್ವತದ ಮೇಲ್ಭಾಗದಲ್ಲಿಯೂ ವೃಕ್ಷಗಳಮೇಲೂ ಬಿದ್ದ ಉಜ್ವಲವಾದ ಸೂರ್ಯಕಿರಣಗಳು ಥಳಥಳಿಸುತ್ತಲಿವೆ. ಈ ಸೂರ್ಯಕಿರಣಗಳಿಂದ ತ್ರಸ್ತವಾದ ಪಕ್ಷಿಗಳು ನೀಲಾಕಾಶತಳದಲ್ಲಿ ಚಂಚಲಗತಿಯಿಂದ ಇತ್ತಲಿಂದತ್ತ ಓಡಾಡುತ್ತಲಿವೆ. ಇವುಗಳ ಕಂಠದಿಂದ ಹೊರಟ ವಿವಿಧಧ್ವನಿಯಿಂದ ನಿರ್ಜನವಾದ ಆ ಪ್ರದೇಶವಲ್ಲಿ ಪ್ರತಿಧ್ವನಿಯಾಗುತಲಿದೆ.

ಪನ್ನಾಮತಿ ತನ್ನ ಸುದಿನಗಳಲ್ಲಿ—ಸೆರೆಮನೆಯ ವಾಸದ ಪೂರ್ವದಲ್ಲಿ, ಶರತ್ಕಾಲದ ಮಧ್ಯಾಹ್ನದ ಈ ಶೋಭೆಯನ್ನು ನೋಡಿದ್ದರೆ ಮೋಹಿತಳಾಗಿ ಹೋಗುತ್ತಿದ್ದಳು. ಅವಳು ಒಮ್ಮೊಮ್ಮೆ ದಟ್ಟವಾಗಿ ಎಲೆಗಳುಳ್ಳ ಗಿಡದ ನೆರಳಿನಲ್ಲಿ, ಒಮ್ಮೊಮ್ಮೆ ದೊಡ್ಡ ಕಲ್ಲುಗಳ ಸಾಲಿನ ನೆರಳಲ್ಲಿ, ಒಮ್ಮೊಮ್ಮೆ ಒತ್ತರದಿಂದಹರಿಯುತ್ತಲಿರುವ ಝರಿಗಳ ದಡಗಳಲ್ಲಿ ಕುಳಿತು, ಬಹು ಆನಂದವನ್ನನುಭವಿಸುತ್ತಿದ್ದಳು. ಆ ಸಮಯದಲ್ಲಿ ದಟ್ಟವಾದ ಅರಣ್ಯದಲ್ಲಿ ಹಸುರೆಲೆಗಳಿಂದ ಮುಚ್ಚಿಹೋದ ವೃಕ್ಷದಲ್ಲಿ ಅಡಗಿಕೊಂಡಿದ್ದ ಕೋಗಿಲೆಯು 'ಪಿವ್—ಪಿವ್—ಪಿವ್' ಎಂದು ಒದರುತಲಿದ್ದಿತು. ಪನ್ನಾಮತಿಯು ಈ ಸ್ವರದ ಅನುಕರಣಮಾಡಿ, ಪಿವ್—ಪಿವ್—ಪಿವ್ ಎಂದು ಕೂಗುತಲಿದ್ದಳು. ಕೂಡಲೇ ಕೋಗಿಲೆಯು ಮನುಷ್ಯರ ಈ ಸರಿಯಾದ ಅನುಕರಣವನ್ನು ಕೇಳಿ, ನಾಚಿಕೊಂಡು ಆಕಾಶದಲ್ಲೆಲ್ಲೋ ಹಾರಿಹೋಗಿಬಿಡುತ್ತಿತ್ತು.

ಧೂಸರವರ್ಣದ ಮೇಘವು ಆಕಾಶವನ್ನು ವ್ಯಾಪಿಸಿಕೊಂಡದ್ದನ್ನು ನೋಡಿ, ನವಿಲುಗಳು 'ಕೇ--ಕಾ' ಎಂದು ಕೂಗುತಲಿದ್ದವು. ಈ ಸ್ವರವು ಅರಣ್ಯದಲ್ಲಿ ಪ್ರತಿಧ್ವನಿತವಾಗುತಿತ್ತು. ಈ ಸ್ವರದಿಂದ ಮೋಹಗೊಂಡ ಗಂಡುನವಿಲು, ಗರಿಗಳನ್ನು ಕೆದರಿ ಹೆಣ್ಣುನವಿಲಿನೊಡನೆ ನರ್ತನಮಾಡು ವದಕ್ಕಾರಂಭಿಸುತಿತ್ತು. ಪನ್ನಾಮತಿ ಈ ನವಿಲುಗಳ ಪ್ರಣಯ ವ್ಯವಹಾರ ವನ್ನು ನೋಡಿ, ಸಂತೋಷ ಹೊಂದುತ್ತಿದ್ದಳು. ಆದರೆ, ಈಗ, ಅವಳು ಈ ತರದ ದೃಶ್ಯವನ್ನು ನೋಡುವಂತಿರಲಿಲ್ಲ. ಅದರಿಂದ ಅವಳ ಮನಸ್ಸಿಗೆ ಬಹಳ ಅಸಮಾಧಾನವಾಗುತಿತ್ತು.

ದಾಸಿಯು ಯಾವದೋ ಕೆಲಸಕ್ಕಾಗಿ ಬೇರೆ ಕಡೆಗೆ ಹೋಗಿದ್ದಾಳೆ. ಪನ್ನಾಮತಿ ತನ್ನ ಕೋಣೆಯಲ್ಲಿ ಒಬ್ಬಳೇ ಕುಳಿತಿದ್ದಾಳೆ. ಕಿಟಕಿಯೊಳ ಗಿಂದ ನೋಡಿದರೆ ಬಾಹ್ಯಸೃಷ್ಟಿಯು ಕಾಣುತಲಿತ್ತು; ಆದರೆ ಪನ್ನಾಮತಿಗೆ ಆ ಕಡೆಗೆ ನೋಡುವಂತಾಗುತ್ತಿರಲಿಲ್ಲ; ಯಾಕಂದರೆ ಬಾಹ್ಯಸೃಷ್ಟಿಯು ಅವ ಳಿಗೆ ಶೂನ್ಯಮಯವಾಗಿ ಭಾಸವಾಗುತಲಿತ್ತು. ಅದರಿಂದವಳು ಮೋರೆ ಕೆಳಗೆ ಹಾಕಿಕೊಂಡು ಕುಳಿತಿದ್ದಳು. ಈ ಸಮಯದಲ್ಲಿ ನಾನಾ ವಿಚಾರ ಗಳು ಅವಳನ್ನಾವರಿಸಿದವು. ವಿಚಾರತರಂಗಗಳಿಗೆ ಆದಿ ಇರಲಿಲ್ಲ; ಅಂತ್ಯ ವಿರಲಿಲ್ಲ. ಅವು ಇವಳನ್ನು ಕ್ಷಣಕ್ಷಣಕ್ಕೆ ಬೇರೆಬೇರೆ ಕಡೆಗೆ ಒಯ್ಯುತಲಿ ದ್ದುವು. ಇವುಗಳ ಆಘಾತದಿಂದ ನೊಂದ ಪನ್ನಾಮತಿಯು ಇವುಗಳನ್ನು ತಡೆದುನಿಲ್ಲಿಸಲು ಸಮರ್ಥಳಾಗಿರಲಿಲ್ಲ. ಅದರಿಂದವಳು ವಿಚಾರಗಳಿಗ ಧೀನಳಾಗಿ, ಅವು ಒಯ್ದತ್ತ ಹೋಗಬೇಕಾಗಿತ್ತು.

ಪನ್ನಾಮತಿಯು ಅಫಶಾನನನ್ನು ಪ್ರೀತಿಸುತ್ತಿರಲಿಲ್ಲ; ಅವನು ಸ್ವೇಚ್ಛಾ ಚಾರಿಯೂ, ಮದಿರಾಸಕ್ತನೂ ಆಗಿದ್ದುದನ್ನು ಅವಳು ತಿಳಿದಿದ್ದಳು. ಹೀಗಿ ದ್ದರೂ ತಂದೆಯ ಹಿತವನ್ನು ಲಕ್ಷ್ಯಕ್ಕೆ ತಂದು, ಅಫಶಾನನೊಡನೆ ಬಾಹ್ಯದಲ್ಲಿ ಪ್ರೀತಿಯಿಂದ ವರ್ತಿಸುತಲಿದ್ದಳು. ಅಫಶಾನನು ರಾಜ್ಯದ ಮುಖ್ಯಸೇನಾಪತಿ. ಈ ಸಮಯದಲ್ಲಿ ಮಿರಾನಶಹನಿಗೆ ಇವನ ಅವಶ್ಯಕತೆ ಬಹಳವಾಗಿತ್ತು. ಅದಕ್ಕಾಗಿ ಮಿರಾನಶಹನು ಅಫಶಾನನನ್ನು ಪ್ರೀತಿಸುತ್ತಿದ್ದನು; ಅವನ ಇಚ್ಛೆಯ ವಿರುದ್ಧವಾಗಿ ಯಾವಕಾರ್ಯವನ್ನೂ ಮಾಡುತ್ತಿದ್ದಿಲ್ಲ. ಅಫಶಾ

ನನೂ ಕೂಡ ಶೂರನೂ, ಚತುರನೂ ಆಗಿದ್ದನು. ಹಿಂದೆ ಆದ ಯುದ್ಧ ದಲ್ಲಿ ಇವನಿಂದಲೇ ಪಠಾಣರಿಗೆ ಜಯದೊರಕಿತು. ಸದ್ಯದ ಯುದ್ಧದಲ್ಲಿ ಯೂ ಅಫಶಾನನು ತನ್ನ ಚಾತುರ್ಯದಿಂದ ಜಯಪಡೆಯುವನೆಂಬ ವಿಶ್ವಾ ಸವು ಮಿರಾನಶಹನಿಗಿದ್ದಿತು.

ಈ ಕಾರಣದಿಂದ ಮಿರಾನಶಹನು ಅಫಶಾನನಿಗೇ ತನ್ನ ಮಗಳನ್ನು ಕೊಡಬೇಕೆಂದು ನಿಶ್ಚಯಿಸಿದ್ದನು. ಇದಕ್ಕೆ ಪನ್ನಾಮತಿಯು ತನ್ನ ಅಸಮ್ಮತಿ ಯನ್ನು ತೋರಿಸಿರಲಿಲ್ಲ. ತಂದೆಯು ಹಟಹಿಡಿಯುವನಾದರೆ, ತಾನು ಅಫಶಾನನನ್ನು ಲಗ್ನಮಾಡಿಕೊಳ್ಳಬೇಕೆಂದು ಅವಳು ಗೊತ್ತು ಮಾಡಿ ಕೊಂಡಿದ್ದಳು; ಯಾಕಂದರೆ ತಂದೆಯ ವಿರುದ್ಧವಾಗಿ ಆಚರಿಸುವ ಸಾಹಸವು ಅವಳಿಗಿರಲಿಲ್ಲ; ಮೇಲಾಗಿ ಹೀಗೆ ಮಾಡುವುದರಿಂದ ತನಗೆ ಯಾವ ಲಾಭವೂ ದೊರೆಯದೆಂದು ಅವಳು ತಿಳಿದಿದ್ದಳು. ಅಫಶಾನನು ಸದ್ಯಕ್ಕೆ ಕೆಲ ವುದುರ್ಗುಣಗಳಿಂದ ಕೂಡಿದ್ದರೂ, ತಾನು ಕಾಲಾಂತರದಲ್ಲಿ ಈ ಕೆಟ್ಟಗುಣ ಗಳನ್ನು ಹೋಗಲಾಡಿಸುವೆನೆಂಬ ಆತ್ಮವಿಶ್ವಾಸವು ಅವಳಿಗಿತ್ತು; ಯಾಕಂದ ರೆ ಅಫಶಾನನು ಪನ್ನಾಮತಿಯನ್ನು ಅತಿಶಯವಾಗಿ ಪ್ರೀತಿಸುತ್ತಿದ್ದು, ಅವಳ ಇಚ್ಛೆಯ ವಿರುದ್ಧವಾಗಿ ಅವನು ಯಾವ ಕೆಲಸವನ್ನೂ ಮಾಡುತ್ತಿದ್ದಿಲ್ಲ: ಇದನ್ನು ಪನ್ನಾಮತಿಯು ಅರಿತವಳಾಗಿದ್ದಳು. ಆದರೆ ಈಗ ಕೆಲವು ದಿವಸ ಗಳಿಂದ ಅವಳ ಈ ಭಾವನೆಯು ನಾಶವಾಗುತ್ತ ನಡೆದಿತ್ತು. ಈಗ ಅವಳು ಅಫಶಾನನ ವಿಷಯವಾಗಿ ವಿಚಾರವನ್ನೇ ಮಾಡುತ್ತಿದ್ದಿಲ್ಲ; ಯಾಕೆಂದರೆ ಅವಳ ಹೃದಯದಲ್ಲಿ ಬೇರೊಂದು ಮೂರ್ತಿಯು ಪ್ರತಿಫಲಿತವಾಗಿತ್ತು. ಈ ಪ್ರತಿಬಿಂಬವನ್ನು ನೋಡಿ, ಅವಳು ಅಫಶಾನನನ್ನು ಸಂಪೂರ್ಣವಾಗಿ ಮರೆತುಬಿಟ್ಟಿದ್ದಳು.

ಪನ್ನಾಮತಿ ಆಲೋಚಿಸತೊಡಗಿದಳು—"ಈ ಯುದ್ಧದಲ್ಲಿ ನಾವು ಪರಾಜಿತರಾದರೆ, ನಮ್ಮ ಅವಸ್ಥೆ ಏನಾಗಬಹುದು? ಆಗ ಶಹಾಜಾದನು ನನ್ನ ಮುಖದಕಡೆಗೆ ನೋಡಬಹುದೇನು? ನಮ್ಮ ತಂದೆಯೊಡನೆ ಸೌಮ್ಯ ಕರಾರುಗಳಿಂದ ಒಪ್ಪಂದ ಮಾಡಿಕೊಳ್ಳಲಿಕ್ಕೆ ಒಪ್ಪಬಹುದೇ? ಇಲ್ಲದಿದ್ದರೆ ತಂದೆಯ ಅವಸ್ಥೆಯೂ, ಪಠಾಣ-ರಾಜ್ಯದ ಸ್ಥಿತಿಯೂ ಹೇಗಾಗಬಹುದು?"

ಅವಳು ಯಾವದನ್ನು ಗೊತ್ತುಮಾಡುವದಕ್ಕೂ ಸಮರ್ಥಳಾಗಲಿಲ್ಲ. ಈ ವಿಚಾರಗಳು ಅವಳ ಮನಸ್ಸಿನಲ್ಲಿ ಪ್ರಳಯಕಾಲದ ಬಿರುಗಾಳಿಯಂತೆ ಉದ್ಭವಿಸಿ, ಅವಳನ್ನು ಅತ್ಯಂತವ್ಯಾಕುಲಳನ್ನಾಗಿ ಮಾಡಿಬಿಟ್ಟವು. ಇವುಗಳಿಂದ ಪಾರಾಗಿ ಸಮಾಧಾನಹೊಂದಲಸಮರ್ಥಳಾದ ಅವಳು, ಬಿರುಗಾಳಿಯ ಹೊಡೆತಕ್ಕೆ ಸಿಕ್ಕ ಕೋಮಲವಾದ ಲತೆಯಂತೆ, ನೆಲಕ್ಕೊರಗಿಬಿಟ್ಟಳು. ಅವಳಿಗೆ ಕೃತಕಾರ್ಯದ ಸಲುವಾಗಿ ಪಶ್ಚಾತ್ತಾಪವಾಯಿತು. ಅವಳು ತುಸು ಹೊತ್ತಿನವರೆಗೆ ನೀರವವಾಗಿ ಅಳತೊಡಗಿದಳು. ಇದರಿಂದವಳಿಗೆ ಸ್ವಲ್ಪ ಸಮಾಧಾನವಾಯಿತು.

ಪನ್ನಾಮತಿಯು ಚಿಂತೆಮಾಡಿ ಬೇಸತ್ತು ಬಾಹ್ಯಸೃಷ್ಟಿಯನ್ನಾದರೂ ನೋಡಬೇಕೆಂದು, ಕಿಟಕಿಯ ಬಳಿಗೆ ಬಂದಳು. ಅವಳ ದೃಷ್ಟಿಯು ಶಹಾಜಾದನ ಶಿಬರದ ದಿಕ್ಕಿನ ಕಡೆಗೆ ಹರಿಯಿತು. ಶಿಬಿರವು ಕಣ್ಣಿಗೆ ಕಾಣಿಸುವಂತಿರಲಿಲ್ಲ. ಆದರೂ ಅವಳು ಈ ಕಡೆಗೇ ಇರುವದೆಂದು ತಿಳಿದವಳಾದುದರಿಂದ ಶಿಬಿರದ ಸ್ಮರಣೆಯು ಅವಳಿಗಾಯಿತು. ಕೂಡಲೇ ಅವಳ ಮನಸ್ಸಿನಲ್ಲಿ ದಾಸಿಯುಲನ ವಿಷಯಕವಾದ ವಿಚಾರಗಳುದ್ಭವಿಸಿದವು. ಶಹಾಜಾದನ ಮನೋಹರವಾದ ರೂಪಧ್ಯಾನದಿಂದ ಅವಳ ಅಂಧಕಾರಮಯವಾದ ಹೃದಯವು ಉಜ್ವಲವಾಯಿತು. ಪಥಭ್ರಾಂತನಾದ ಪಥಿಕನು ಧ್ರುವನಕ್ಷತ್ರವನ್ನು ನೋಡಿ ಆನಂದಪಡುವಂತೆ, ನೀರಡಿಸಿದ ಪ್ರವಾಸಿಯು ಮರುಭೂಮಿಯಲ್ಲಿ ಸರೋವರವನ್ನು ನೋಡಿದರೆ ಸಂತೋಷಿಸುವಂತೆ, ಪನ್ನಾಮತಿಯು ಶಹಾಜಾದನ ಸೌಂದರ್ಯಧ್ಯಾನದಿಂದ ಆನಂದ ಹೊಂದಿದಳು. ಅವಳ ವಿಷಣ್ಣಮುಖವು ಪ್ರಫುಲ್ಲವಾಯಿತು.

ಲೋಹಚುಂಬಕವು ಸೂಜಿಯನ್ನು ಬಲವಾಗಿ ತನ್ನಕಡೆಗೆ ಎಳೆದುಕೊಳ್ಳುತ್ತಿರುವಂತೆ, ಪ್ರಬಲ ಪ್ರವಾಹವು ಹುಲ್ಲುಕಡ್ಡಿಯನ್ನು ಎಳೆದುಕೊಂಡು ಹೋಗುವಂತೆ ಶಾಹಾಜಾದನು ಪನ್ನಾಮತಿಯ ಹೃದಯವನ್ನು ಆಕರ್ಷಿಸಿ ಬಿಟ್ಟಿದ್ದನು.

ಈ ಸಮಯದಲ್ಲಿ ಪನ್ನಾಮತಿಯು ವಿಚಾರಮಾಡತೊಡಗಿದಳು— "ನನ್ನ ಮನಸ್ಸಿನಸ್ಥಿತಿಯು ಹೀಗೇಕೆ ಆಗುತ್ತಿರಬಹುದು? ಶಹಾಜಾದನು

ನಮ್ಮ ಶತ್ರು. ಹೀಗಿರಲು ವೈರಿಯ ಕಡೆಗೆ ನಾನು ಹೀಗೇಕೆ ಧಾವಿಸುತ್ತಿರಬಹುದು? ಅವನು ನಮ್ಮ ಈ ಸುಖಪೂರ್ಣವಾದ ರಾಜ್ಯಕ್ಕೆ ಕೊಳ್ಳಿಯನ್ನು ಹಚ್ಚಿ, ಇದನ್ನು ಭಸ್ಮೀಭೂತ ಮಾಡಲು ಬಂದಿದ್ದಾನೆ. ಇಂಥವನ ವಿಷಯದಲ್ಲಿ ನನಗೆ ಇಷ್ಟೊಂದು ಆದರವೆ? ಅವನನ್ನು ನೋಡಬೇಕೆಂಬ ಇಚ್ಛೆಯು ಕ್ರಮವಾಗಿ ಬಳೆಯುತ್ತಲಿದೆ. ಮತ್ತೂಮ್ಮೆ ಅವನನ್ನು ನೋಡಿದರೆ ಸುಖಹೊಂದುವೆನೆಂಬ ಆಕಾಂಕ್ಷೆಯು ನನಗೆ ಯಾಕೆ ಉಂಟಾಗಿದ್ದೀತು? ಮತ್ತೆ ಅವನ ಬಳಿಯಲ್ಲಿ ನಿಲ್ಲುವ, ಅವನ ಮಾತನ್ನು ಕೇಳುವ, ಅವನ ಸಾಹಚರ್ಯದಿಂದುಂಟಾಗುವ ಸುಖವನ್ನನುಭವಿಸುವ ಪ್ರಬಲವಾದ ವಾಸನೆ ನನ್ನಲ್ಲಿ ಯಾಕೆ ಉಂಟಾಗುತ್ತಿರಬಹುದು? ಮೇಘವು ಆಕಾಶವನ್ನು ಮುಸುಗುವಂತೆ, ಈ ಪ್ರಬಲವಾಸನೆಯು ನನ್ನ ಹೃದಯವನ್ನು ಮುತ್ತಿಬಿಟ್ಟದೆ. ಇದಕ್ಕೇನುಮಾಡಲಿ?

ಶಹಾಜಾದನು ಅಪ್ರತಿಮ ರೂಪಶಾಲಿಯಾಗಿರುವನೆಂದು ನನ್ನ ಮನಸ್ಸಿನ ಸ್ಥಿತಿಯು ಹೀಗೆ ಆಗಿರಬಹುದೇನು? ಅಂಥ ರೂಪವಂತರು ನಮ್ಮ ಪಠಾಣರಾಜ್ಯದಲ್ಲಿ ಎಷ್ಟುಮಂದಿಇಲ್ಲ! ಇವರನ್ನು ಬಿಟ್ಟು ನನ್ನ ಮನಸ್ಸು ಶಹಾಜಾದನ ಕಡೆಗೇ ಓಡುವುದೇಕೆ? ಅವನ ಉತ್ತಮಗುಣಗಳು, ಸವಿಮಾತುಗಳೂ ನನ್ನನ್ನು ಮೋಹಗೊಳಿಸಿರಬಹುದೇ? ನಮ್ಮ ರಾಜ್ಯದಲ್ಲಿ ಗುಣಶಾಲಿಗಳು ಅನೇಕರಿದ್ದಾರೆ; ಮಧುರವಚನಗಳನ್ನಾಡುವವರಿದ್ದಾರೆ. ಇವರಕಡೆಗೆ ನನ್ನ ಮಾನಸ್ಸು ಧಾವಿಸುವದಿಲ್ಲವಲ್ಲ! ಆದುದರಿಂದ ನನ್ನ ಮನಸ್ಸಿನ ಸ್ಥಿತಿ ಹೀಗಾಗುವುದಕ್ಕೆ ಶಹಾಜಾದನ ಈ ಗುಣಗಳು ಕಾರಣವಾಗಿರಲಿಕ್ಕಿಲ್ಲ. ಹಾಗಾದರೆ ಅವನು ನನ್ನನ್ನು ಹೀಗೇಕೆ ಆಕರ್ಷಿಸುತ್ತಿರಬಹುದು? ನನಗೆ ಇಂಥ ದುರಾಶೆ ಯಾಕೆ ಹುಟ್ಟಿದ್ದೀತು? ಮನಸ್ಸನ್ನು ಹಾಳುಮಾಡುವ ಈ ಚಿಂತೆಯು ನನ್ನಲ್ಲಿ ಯಾಕೆ ಉಂಟಾಗಿರಬಹುದು? ನನಗಾದರೋ ಏನೂ ತಿಳಿಯದಾಗಿದೆ. ದೇವರೆ, ನೀನು ಸರ್ವಜ್ಞನೆಂದು ಜನರು ಹೇಳುತ್ತಾರೆ. ಇದು ನಿಜವಿರುವುದಾದರೆ, ನನ್ನ ಮನಸ್ಸು ಹೀಗೇಕೆ ಕಳವಳ ಹೊಂದಿದೆಯೆಂಬುದನ್ನು ಹೇಳಿಕೊಡು."

ಪನ್ನಾಮತಿಗೆ ಯಾರು ಉತ್ತರ ಹೇಳಬೇಕು? ಹೇಳುವವರಾರೂ ಇದ್ದಿಲ್ಲ. ಅವಳಿಗಾದರೋ ಏನೂ ತಿಳಿಯದಾಗಿತ್ತು. ಅದರಿಂದವಳು ಎಷ್ಟೇ

ವಿಚಾರಮಾಡಿದರೂ, ತನ್ನ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲಿಲ್ಲ. ಇದರಿಂದ ವ್ಯಾಕುಲತೆಯೂ, ನಿರಾಶೆಯೂ ಮರ್ಮವೇದನೆಯೂ ಇವುಗಳಿಂದುಂಟಾದ ಅವರ್ಣನೀಯ ಕಷ್ಟವೂ ಅವಳನ್ನಾವರಿಸಿದವು. ಆಗವಳು—“ ಮನುಷ್ಯರ ಕೈಯಲ್ಲಿ ಏನೂ ಇಲ್ಲವೆಂದೂ, ಅವರು ತಮ್ಮ ಹಣೆ ಬರಹದಂತೆ ಶುಭಾಶುಭಫಲಗಳನ್ನು ಅನುಭವಿಸುತ್ತ ಹೋಗುವರೆಂದೂ ಪಂಡಿತರು ಹೇಳುತ್ತಾರೆ. ಸದ್ಯಕ್ಕೆ ನನಗುಂಟಾದ ದುಃಖವು ನನ್ನ ಹಣೆಯ ಬರಹದ ಫಲವೆಂದೇ ತೋರುತ್ತಿದೆ. ದೈವವೇ, ನೀನು ನನ್ನ ವಿಷಯವಾಗಿ ಇಷ್ಟೊಂದು ಕಠೋರತೆಯನ್ನು ತಾಳಿದ್ದೇಕೆ? ಹೀಗೆ ನನ್ನ ಇಚ್ಛೆಯ ವಿರುದ್ಧವಾಗಿ ನನ್ನ ಕೈಯಿಂದ ಕೆಲಸಮಾಡಿಸಿ, ನನಗೆ ದುಃಖವನ್ನೇಕೆ ಕೊಡುತ್ತಿರುವೆ? ನನ್ನ ವಿಷಯದಲ್ಲಿ ನೀನು ಪ್ರಸನ್ನವಾಗುವುದಿಲ್ಲವೇ? ಬಿಡು, ನಾನಿನ್ನು ನಿನಗೆ ಹೇಳಿಕೊಳ್ಳುವುದಿಲ್ಲ. ಬಂದದ್ದನ್ನೆಲ್ಲ ಸಹಿಸಿಕೊಳ್ಳಲು ಸಿದ್ಧಳಾಗುವೆನು.” ಎಂದು ತನ್ನಲ್ಲಿಯೇ ಎಂದುಕೊಂಡಳು.

---

## ಹನ್ನೆರಡನೆಯ ಪರಿಚ್ಛೇದ.

---

ಪಠಾಣರು ದೇಶದ್ರೋಹಿಗಳೆಂದೂ ಆಗರು.

ಸಾಯಂಕಾಲದ ಸಮಯ. ಅಸ್ತಾಚಲಗಾಮಿಯಾದ ಸೂರ್ಯನ ಹೊಂಬಣ್ಣದ ಶಾಂತಕಿರಣಗಳು ಪರ್ವತದ ಮೇಲ್ಭಾಗದಲ್ಲಿಬಿದ್ದು, ವಿಲಕ್ಷಣಶೋಭೆಯನ್ನುಂಟುಮಾಡಿವೆ. ನಾನಾತರದ ಪಕ್ಷಿಗಳು ‘ಕಿಲಕಿಲ’ ರವದಿಂದ ಅತ್ತಿತ್ತ ಹಾರಾಡುತ್ತಿವೆ. ಬಿಸಲಿನ ತಾಪವಿನ್ನೂ ಸಂಪೂರ್ಣವಾಗಿ ಕಡಿಮೆಯಾಗಿಲ್ಲ. ಸೂರ್ಯನ ಕಿರಣಗಳಿಂದ ಕಾಯ್ದು ಗುಡ್ಡದಿಂದ ಬೆಚ್ಚನೆಯಗಾಳಿ ಬೀಸುತ್ತಲಿವೆ.

ಇಂದು ಮೊಗಲ ಶಿಬಿರದಲ್ಲಿ ಆನಂದವೇ ಆನಂದ! ಕುಮಾರದಾಸಿಯಲನು ಅನಾಯಾಸವಾಗಿ ಶತ್ರುಗಳ ಮುಖ್ಯಸೇನಾಪತಿಯನ್ನು ಹಿಡಿದು

ತಂದಿದ್ದನು. ಇದರಿಂದವನಿಗೆ ಬಹಳ ಆನಂದ. ಈ ಆನಂದದ ಸಲುವಾಗಿ ಅವನು ತನ್ನ ಸೈನಿಕರಿಗೆ ಆಟನೋಟಗಳಲ್ಲಿ ಆನಂದದಿಂದ ಕಾಲಕಳೆಯು ವುದಕ್ಕೆ ಅಪ್ಪಣೆ ಮಾಡಿದ್ದನು. ಸೈನಿಕರು ತಮಗೆ ಇಷ್ಟವಾದ ವಿನೋದದಲ್ಲಿ ಕಾಲಕಳೆಯುತ್ತಿದ್ದರು.

ಶಹಾಜಾದಾ ದಾಸಿಯುಲನು ತನ್ನ ಶಿಬಿರದಲ್ಲಿ ಕುಳಿತಿದ್ದಾನೆ. ಸೈನಿಕರ ಆನಂದಕೋಲಾಹಲವು ಅವನಿಗೆ ಕೇಳಿಸುತ್ತಲಿದೆ. ಶಹಾಜಾದನು ಪ್ರಸನ್ನ ಮುಖನಾಗಿ ವಿಚಾರಿಸತೊಡಗಿದನು—"ಇಂದು ನಾನು ಬಹು ಚಾತುರ್ಯದ ಕೆಲಸ ಮಾಡಿದೆನು. ಇಲ್ಲವಾದರೆ ಪಠಾಣ ಸೇನಾಪತಿ ನನ್ನ ಬಂದಿಯಾಗುತ್ತಿದ್ದಿಲ್ಲ. ನಾನು ವೇಷಾಂತರದಿಂದ ದುರ್ಗಾಧಿಪತಿಯ ದರ್ಶನ ತಕ್ಕೊಂಡದ್ದು ಸಾಹಸದ ಕೆಲಸವೆಂಬುದರಲ್ಲಿ ಸಂದೇಹವಿಲ್ಲ. ಈ ಸಮಯದಲ್ಲಿ ನಾನು ಘೋರಸಂಕಟಕ್ಕೊಳಗಾಗುವ ಪ್ರಸಂಗ ಬಂದಿತ್ತು. ಆದರೆ ರಾಜನೀತಿಯನ್ನು ಮುಂದೆಮಾಡಿ, ಈ ಸಂಕಟದಿಂದ ಪಾರಾದೆನು. ನಾನು ಪುನಃ ಬಂದಿಯಾಗಿದ್ದರೆ, ಪಠಾಣರನ್ನು ಹಿಡಿವವರೇ ಇದ್ದಿಲ್ಲ! ಅವರೂ ನನ್ನನ್ನು ಬಹಳ ಗೋಳಾಡಿಸಿ ಬಿಡುತ್ತಿದ್ದರು. ಆದರೆ ದೈವವು ನನಗನುಕೂಲವಾದುದರಿಂದ ಈ ಪ್ರಸಂಗದಿಂದ ಪಾರಾದೆನು. ಇಷ್ಟೇ ಅಲ್ಲ; ಗರ್ವಿತನಾದ ಸೇನಾಪತಿ ತಾನೇ ತಾನಾಗಿ ನನ್ನ ಬಲೆಯಲ್ಲಿ ಬಂದು ಬಿದ್ದನು. ನಾನು ಮೊದಲೇ ಅರಣ್ಯದಲ್ಲಿ ಸೈನಿಕರನ್ನಿರಿಸದೆ ಹೋಗಿದ್ದರೆ, ಈ ಸೇನಾಪತಿ ನನ್ನನ್ನು ಕೊಲ್ಲಿಸುತ್ತಿದ್ದನು; ಇಲ್ಲವೆ ಸೆರೆಹಿಡಿದು ಕೊಂಡು ಹೋಗುತ್ತಿದ್ದನು. ಅಫಶಾನನು ರಾಜನೀತಿಯನ್ನು ಮಿಾರಿ, ಹೇಗೆ ನೀಚತನಕ್ಕೆ ಯಾಕೆ ಪ್ರವೃತ್ತನಾಗಿರಬಹುದು? ದುರ್ಗಾಧಿಪತಿಯ ಮು[illegible] ನನ್ನ ಮಾತುಗಳನ್ನು ಇವನು ಸಂಪೂರ್ಣವಾಗಿ ಕೇಳಿದಂತೆ ತೋರುತ್ತಿ[illegible] ಆದರೂ ಮಿರಾನಶಹನಿಗೆ ಸಮ್ಮತವಲ್ಲದ ಕೆಲಸಕ್ಕೆ ಇವನು ಉದ್ಯುಕ್ತನೇಕಾಗಿರಬಹುದು? ಅಫಶಾನನು ನನ್ನ ಶತ್ರುವು; ಕಾರಣ ಅವನು ಯಾವಾಗಲೂ ನನ್ನ ನಾಶಕ್ಕಾಗಿ ಸಿದ್ಧನಾಗಿರುವುದು ಸಹಜ. ಆದರೂ ರಾಜನೀತಿಯನ್ನು ಮಿಾರುವುದು, ವೀರರಾದ ಸೇನಾಪತಿಗಳಿಗೆ ಇಷ್ಟವಾದುದಲ್ಲ; ಇದನ್ನು ಅಫಶಾನನು ತಿಳಿದಿರಬೇಕು; ಇಲ್ಲವಾದರೆ ಇವನು ನೀಚನೂ,

ಹೇಡಿಯೂ ಆಗಿರಬೇಕು. ಏನೇ ಇರಲಿ, ಅವನನ್ನು ಕರೆಯಿಸಿ ಕೇಳಿದರೆ, ಎಲ್ಲ ಸಂಗತಿಗಳು ತಿಳಿಯುವುವು. ಅದರಿಂದ ನನ್ನ ಮುಂದಿನ ಕೆಲಸಕ್ಕೂ ಅನುಕೂಲವಾಗುವುದು."

ಹೀಗೆ ಆಲೋಚಿಸಿ ದಾನಿಯಲನು ಒಬ್ಬ ಕಾವಲುಗಾರನನ್ನು ಕರೆದು—"ಈ ಹೊತ್ತು ಸೆರೆಹಿಡಿದು ತಂದಿರುವ ಪಠಾಣ ಸೇನಾಪತಿಯನ್ನು ಕರೆದುಕೊಂಡು ಬರುವಂತೆ ಸಮಶೇರಖಾನನಿಗೆ ಹೇಳು" ಎಂದು ಅಪ್ಪಣೆ ಮಾಡಿದನು.

ತುಸುಹೊತ್ತಿನಲ್ಲಿ ಸಮಶೇರಖಾನನು ಅಫಶಾನನನ್ನು ದಾನಿಯಲನ ಮುಂದೆ ತಂದು ನಿಲ್ಲಿಸಿದನು. ದಾನಿಯಲನು ಅಫಶಾನನ ಮುಖ ನೋಡಿ—"ಪಠಾಣಸೇನಾಪತಿ, ನೀನು ಯಾವ ಉದ್ದೇಶದಿಂದ ನನ್ನನ್ನು ಬೆನ್ನಟ್ಟಬಂದೆ" ಎಂದು ಕೇಳಿದನು.

"ಇದನ್ನು ನಾನು ಹೇಳದಿದ್ದರೆ?"

ನಿರ್ಬಂಧದಿಂದ ಹೇಳುವೆ. ಪಠಾಣರಾಜ್ಯವನ್ನೇ ಗೆಲ್ಲುವುದಕ್ಕೆ ಬಂದಿರುವ ನಾವು ನಿನ್ನಂಥ ಒಬ್ಬ ಪಠಾಣನನ್ನು ಹಣ್ಣಿಗೆ ತರಲಾರೆವೇನು? ನೀನು ಹಟಹಿಡಿಯುವುದರಿಂದ ಏನೂ ಉಪಯೋಗವಾಗುವಂತಿಲ್ಲ. ಸೂಜ್ಞನಾಗಿ ನಾನು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಕೊಡು."

"ಅದಾಗದು."

ಶಹಾಜಾದನು ಕೂಡಲೆ ಸಮಶೇರಖಾನನಿಗೆ—"ಜಲ್ಲಾದನನ್ನು ಕರೆ," ಎಂದು ಅಪ್ಪಣೆ ಮಾಡಿದನು. ಸಮಶೇರಖಾನನು ಹೊರಟುಹೋಗಿ ಅವನು ತುಸು ವೇಳೆಯಲ್ಲಿ ಬಲಿಷ್ಠದೇಹಿಯೂ, ಕುರೂಪಿಯೂ ಆದ ಕಾಫ್ರಿಜಾತಿಯ ಸೇವಕನನ್ನು ಕರೆದುಕೊಂಡು ಬಂದನು.

ಶಹಾಜಾದನು ಕೃತ್ರಿಮಕೋಪದಿಂದ ಕಾಫ್ರಿಸೇವಕನನ್ನು ಕುರಿತು—"ರಸೂಲ್, ಈ ಪಠಾಣನನ್ನು ಕರೆದುಕೊಂಡು ಹೋಗಿ, ಇವನ ಅರಿವೆಗಳನ್ನು ಕಳೆದು, ಬೆನ್ನಮೇಲೆ ವೇತ್ರಾಯುಧದಿಂದ ಇಪ್ಪತ್ತೈದು ಹೊಡತಗಳನ್ನು ಹೊಡಿ. ಗಾಯವಾದ ಸ್ಥಳದಿಂದ ರಕ್ತವು ಹೊರಬೀಳುವು

ದಾದರೆ, ಅದಕ್ಕೆ ಉಪ್ಪು ಹಚ್ಚು. ಅಲ್ಲಿಗೆ ಇವನು ಹಾದಿಗೆ ಬರುವನು." ಎಂದು ಹೇಳಿದನು.

ಅಫಶಾನನು ಸಾಹಸಿಯಾದ ವೀರಪುರುಷನೇ ಆದರೂ ಈ ಪ್ರಸಂಗ ದಲ್ಲಿ ಹೆದರಿದನು; ಈ ಮೊಗಲ ಸೇನಾಪತಿಯು ಪಠಾಣರಿಗಿಂತಲೂ ಕಲ್ಲು ಹೃದಯನೂ, ನೀಚನೂ, ಆಗಿರುವನೆಂದು ಭಾವಿಸಿದನು; ಕಾರಣ ತಾನು ಈ ವೇಳೆಯಲ್ಲಿ ಹಟಹಿಡಿದದ್ದಾದರೆ, ಬಹಳ ದುಃಖಕ್ಕೊಳಗಾಗಬೇಕಾಗು ವುದೆಂಬುದನ್ನು ತಿಳಿದನು. ಆದುದರಿಂದ ಅವನು—"ನೀವು ನನಗೆ ಕೇಳತ ಕ್ಕದ್ದನ್ನು ಕೇಳಬಹುದು. ನಾನದಕ್ಕೆ ಉತ್ತರಕೊಡುವೆನು." ಎಂದು ಹೇಳಿದನು.

"ನೀನು ನನ್ನನ್ನನುಸರಿಸಿ ಬಂದದ್ದೇಕೆ?"

"ಸೇಡು ತೀರಿಸಿಕೊಳ್ಳುವುದಕ್ಕೆ."

"ನಾನು ನಿನ್ನ ವಿಷಯವಾಗಿ ಆಚರಿಸಿದ ಅನ್ಯಾಯವೇನು? ನಾನು ಪಠಾಣರ ಶತ್ರು. ಆದರಿಂದ ನೀನು ನನ್ನನ್ನು ಸೋಲಿಸಲು ಪ್ರಯತ್ನಿಸು ವುದು ಸಹಜ. ಈ ರೀತಿ ನೀಚ ಪ್ರಯತ್ನಮಾಡಿದುದೇಕೆ? ನೀನು ವೀರ ನಾದರೆ ಇದಿರಿಗೆ ನಿಂತು ಯುದ್ಧಮಾಡಿ ಗೆಲ್ಲಲು ಯತ್ನಿಸು."

"ನೀವು ಮೊಗಲರೂ, ನಾನು ಪಠಾಣನೂ ಆಗಿರುವುದು ನಮ್ಮಿಬ್ಬರ ದ್ವೇಷಕ್ಕೆ ಒಂದು ಕಾರಣ. ಇದೊಂದೇ ಕಾರಣಕ್ಕಾಗಿ ನಾನು ನಿಮ್ಮೊಡನೆ ಹೋರಾಡಬೇಕಾಗಿದ್ದರೆ, ಸಮರ ಭೂಮಿಯಲ್ಲಿ ಪ್ರಕಾಶವಾಗಿ ನಿಂತು, ಯುದ್ಧಮಾಡಬಹುದಾಗಿತ್ತು. ಆದರೆ ನಮ್ಮಿಬ್ಬರದ್ವೇಷಕ್ಕೆ ಬೇರೊಂದು ಆಂತರಿಕಕಾರಣವಿದೆ."

"ಅದಾವುದು?"

"ಅದನ್ನು ಈಗ ಹೇಳಲಾರೆ."

ಶಹಾಜಾದನು ಮುಗುಳುನಗೆಯಿಂದ—"ಸೇನಾಪತಿ, ಜಲ್ಲಾದನ ಅಲ್ಪಪ್ರಯತ್ನದಿಂದ, ನನ್ನ ಅನೇಕ ಪ್ರಶ್ನೆಗಳಿಗೆ ನೀನು ಉತ್ತರಕೊಡು ವಂತಾಗುವೆ ಎಂಬ ವಿಶ್ವಾಸವು ನನಗಿದೆ. ಆದರೆ ಆ ರೀತಿಯ ಪ್ರಸಂಗ

ವನ್ನು ತಂದುಕೊಳ್ಳುವುದರಲ್ಲಿ ಅರ್ಥವಿಲ್ಲ. ನೀನು ಜಾಣನಾದರೆ ನಾನು ಕೇಳಿದುದಕ್ಕೆ ಸರಿಯಾಗಿ ಉತ್ತರಕೊಡು."

ಅಫಶಾನನು ಸಿಟ್ಟಿಗೆದ್ದು, ಹುಬ್ಬುಗಂಟುಹಾಕಿ,—"ಆಗಲಿ, ತಮಗೆ ಮತ್ತೇನು ಹೇಳಬೇಕು ಕೇಳಿರಿ." ಎಂದನು.

"ಮುಗಲಾಧಿಪತಿಯಾದ ಮಿರಾನಶಹನಿಗೂ ನಿನಗೂ ಇರುವ ಸಂಬಂಧವೇನು? ನೀನು ಆವನ ಸಂಬಂಧಿಯೋ?"

"ನಾನು ಅವರ ಮುಖ್ಯಸೇನಾಪತಿ."

"ಓಹೋ! ಪಠಾಣರಾಜ್ಯದ ಮುಖ್ಯಸೇನಾಪತಿಗಳಾದ ಅಫಶಾನಖಾನರು ನೀವೇ ಏನು? ನಿಮ್ಮ ದರ್ಶನದಿಂದ ನನಗೆ ಆನಂದವಾಯಿತು. ಅದರಲ್ಲಿಯೂ ನೀವು ನಮ್ಮ ಬಂದಿಗಳಾಗಿರುವುದನ್ನು ನೋಡಿ. ಬಹಳ ಸಂತೋಷವಾಯಿತು. ನೀವು ಮೊಗಲರೊಡನೆ ಯುದ್ಧಮಾಡಲು ಸಿದ್ಧರಾಗಿರುವಿರಷ್ಟೇ? ನಿಮ್ಮಬಳಿಯಲ್ಲಿ ಈಗ ಸೈನ್ಯವೆಷ್ಟಿದೆ? ಹೇಳೋಣಾಗಲಿ." ಎಂದು ಶಹಾಜಾದನು ಪರಿಹಾಸಮಾಡಿದನು.

ಅಫಶಾನನಿಗೆ ಬಹಳ ಸಿಟ್ಟುಬಂದಿತು. ಆದರೆ ಮಾಡುತ್ತಾನೇನು? ಶಾಂತತೆಯುಹೊರತು ನಿರ್ವಾಹವಿಲ್ಲ. ಅದರಿಂದವನು ಕೃತ್ರಿಮನಗೆಯನ್ನು ತಂದುಕೊಂಡು, "ಈಗ ನನ್ನಬಳಿಯಲ್ಲಿ ಸೈನ್ಯವೇ ಇಲ್ಲ. ಸೈನ್ಯವಿದ್ದಿದ್ದರೆ ತಾವು ಹೀಗೆಮಾತಾಡಲಿಕ್ಕೆ ಸಾಧ್ಯವಾಗುತ್ತಿದ್ದಿತೆ?" ಎಂದನು.

"ಆಗಲಿ, ನಿಮ್ಮರಾಜ್ಯದ ಸೈನಿಕರ ಸಂಖ್ಯೆ ಎಷ್ಟಿರುವುದೆಂಬದನ್ನಾದರೂ ಹೇಳಿರಿ."

"ಪಠಾಣರಸೇನೆ ಮೊಗಲರ ಸೇನೆಯಷ್ಟು ಇಲ್ಲದಿರುವುದು ನಿಜ. ಸೇನೆಯಜತೆಗೆ ಪಠಾಣರಿಗೆ ದುರ್ಭೇದ್ಯವಾದ ಕೋಟೆಯಿದೆ. ಬಲವೂ ಇದೆ. ಅದರಿಂದವರು ಶತ್ರುಗಳಿಗೆ ಹೆದರುವಂತಿಲ್ಲ."

"ನಿಮ್ಮ ಕೋಟೆಯನ್ನು ನಾವು ಕೈವಶಮಾಡಿಕೊಂಡರೆ!"

"ಈ ಕೆಲಸವು ಅಸಂಭವವಾದುದು; ಯಾಕೆಂದರೆ ಕೋಟೆಯನ್ನು ಏರಿಹೋಗುವದಕ್ಕೆ ಎರಡುಗುಪ್ತಮಾರ್ಗಗಳಿವೆ; ಇವು ಶತ್ರುಗಳಿಗೆ ಗೊತ್ತಾ

ಗುವಂತಿಲ್ಲ; ಈ ಮಾರ್ಗಗಳನ್ನರಿಯದೆ ಕೋಟೆಯನ್ನೇರುವುದಕ್ಕೆ ಯತ್ನಿಸಿದ್ದಾದರೆ, ಅವರ ಪ್ರಯತ್ನವು ಎಂದೂ ಸಫಲವಾಗುವಂತಿಲ್ಲ; ಇಷ್ಟೇ ಅಲ್ಲ! ಭಯಂಕರವಾದ ಸಂಕಟಕೊಳ್ಳಗಾಗಿ ಪಟಪಟನೆಬಿದ್ದು ಸತ್ತುಹೋಗಬೇಕಾಗುವುದು. ಹಿಂದಿನಯುದ್ಧದಲ್ಲಿ ಮೊಗಲಸೇನಾಪತಿಯಾದ ತರ್ದಿಬೇಗನು ಇದನ್ನರಿಯದೆ ಕೋಟೆಯನ್ನ ವಶಮಾಡಿಕೊಳ್ಳಲು ಯತ್ನಿಸಿದ್ದರಿಂದ ಅವನ ಅವಸ್ಥೆಯು ಏನಾಯಿತೆಂಬುದನ್ನು ನೀವು ಅರಿತಿರುವಿರಾದೀತು. "

"ನಾವು ಮೊದಲು ಆ ಗುಪ್ತಪಥಗಳನ್ನು ಗೊತ್ತುಹಚ್ಚುವೆವು. ತರುವಾಯ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳುವೆವು. "

"ಯಾವ ರೀತಿಯಿಂದ? "

"ನಿಮ್ಮ ಸಹಾಯದಿಂದ. "

"ಪಠಾಣರು ದೇಶದ್ರೋಹಿಗಳೆಂದೂ ಆಗಲಾರರು—ಅವರು ವಿಶ್ವಾಸಘಾತಕತನದಿಂದ ಜಾಡಿಹೇಳುವದನ್ನೆಂದೂ ಅರಿಯರು. "

"ಪಠಾಣರು ದೇಶದ್ರೋಹಿಗಳಾಗಿರದಿದ್ದರೂಸಹ, ಅವರುಶತ್ರುಗಳಿಗೆ ಸಹಾಯಮಾಡಿ, ತಮ್ಮಲಾಭವನ್ನು ಹೇಗೆಮಾಡಿಕೊಳ್ಳಬೇಕೆಂಬುದನ್ನು ನಾವು ಅವರಿಗೆ ಕಲಿಸುವೆವು. ನೀವು ನಮಗೆ ಸಹಾಯಕರಾಗಬೇಕೆಂಬ ಇಚ್ಛೆ ನಮಗಿದೆ. ನೀವು ಒಳ್ಳೆಯಮಾತಿನಿಂದ ಸಹಾಯಮಾಡಿದರೆ, ಲಾಭ ಹೊಂದುವಿರಿ; ಇಲ್ಲವಾದರೆ ಕಠೋರವಾದ ಉಪಾಯಗಳಿಂದ ನಾವು ನಿಮ್ಮಿಂದ ಈ ಕೆಲಸವನ್ನು ಮಾಡಿಸಿಯೇ ಮಾಡಿಸುವೆವು. "

"ನನ್ನ ದೇಹದಲ್ಲಿ ಜೀವವಿರುವವರೆಗೂ ನಾನು ಈ ಕೆಲಸ ಮಾಡಲಾರೆ. "

ಏನುಮಾಡುವದರಿಂದ ನೀವು ಈ ಕೆಲಸ ಮಾಡುವಿರೆಂಬುದನ್ನು ನಾವು ಬಲ್ಲೆವು. ನೀವು ನಮಗೆ ಸಹಾಯಮಾಡಿದರೆ, ನಾವು ನಿಮ್ಮನ್ನು ಈ ಪ್ರದೇಶದ ಅರಸರನ್ನಾಗಿ ಮಾಡುವೆವು; ಇಪ್ಪತ್ತೈದುಸಾವಿರ ಅಸರಫಿ (ಆಕಾಲದ ಸುವರ್ಣದನಾಣ್ಯಗಳನ್ನು) ಇನಾಮಾಗಿ ಕೊಡುವೆವು. ನೀವು

.ಇದಕ್ಕೆ ಒಪ್ಪಿ ನಮಗೆ ಅನುಕೂಲರಾಗಿರಿ. ಇಲ್ಲವಾದರೆ ನಾವು ನಿಮ್ಮನ್ನು ಪೀಡಿಸಿ ಕೊಂದುಬಿಡುವೆವು."

ಅಫಶಾನನು ಗಟ್ಟಿಯಾಗಿನಕ್ಕು ತಿರಸ್ಕಾರಸೂಚಕಸ್ವರದಿಂದ—"ಶಹಾಜಾದಾ, ತಾವು ಪಠಾಣರ ಸ್ವಭಾವವನ್ನು ಚೆನ್ನಾಗಿ ಅರಿಯಿರಿ. ಅದಕ್ಕಾಗಿಯೇ ತಾವು ನನಗೆ ಹೀಗೆಹೇಳುತ್ತಿರುವಿರಿ. ನೀವುಮೊಗಲಸಾಮ್ರಾಜ್ಯವನ್ನು, ಬೊಕ್ಕಸದೊಳಗಿನ ಯಾವತ್ತೂ ಧನವನ್ನೂ ಕೊಟ್ಟರೂಸಹ, ನಾನು ನಿಮ್ಮ ಮಾತಿಗೆ ಒಪ್ಪಲಾರೆ. ಕೇವಲ ನಾನೊಬ್ಬನೇ ಹೀಗೆಹೇಳುತ್ತಿರುವೆನೆಂದಲ್ಲ: ಅತಿದರಿದ್ರಪಠಾಣನೂಕೂಡ ನಿಮ್ಮ ಈ ಮಾತಿಗೆ ಸಮ್ಮತಿಸಲಾರ" ಎಂದನು.

"ಒಳ್ಳೇದು, ಮುಂದೆ ನಾನಿದರ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವೆನು," ಎಂದುಹೇಳಿ ಶಹಾಜಾದನು ಸಮಶೇರಖಾನನನ್ನು ಕುರಿತು— "ಈ ಬಂದಿಯನ್ನು ಕರೆದುಕೊಂಡುಹೋಗಿ, ಶಿಬಿರದಲ್ಲಿರುವ ಕಾರಾಗೃಹದಲ್ಲಿರಿಸು; ಮತ್ತು ಬಹಳ ಎಚ್ಚರಿಕೆಯಿಂದ ಇವನನ್ನು ನೋಡಿಕೊಳ್ಳಿ. ನಾಳೆ ಮುಂಜಾನೆ ಇವನನ್ನು ಲಾಹೋರಕ್ಕೆ ಕಳುಹಿಸುತ್ತೇವೆ. ಅಲ್ಲಿ ಬಾದಶಹರವರೇ ಇವನ ವಿಚಾರಣೆಮಾಡಿ, ಇವನಿಗೆ ಯೋಗ್ಯಶಿಕ್ಷೆಯನ್ನು ವಿಧಿಸುವರು." ಎಂದು ಹೇಳಿದನು.

ಸಮಶೇರಖಾನನು "ಅಪ್ಪಣೆಯಂತೆ" ಎಂದು ಹೇಳಿ, ಅಫಶಾನನನ್ನು ಕರೆದುಕೊಂಡು ಹೊರಡುವುದಕ್ಕೆ ಸಿದ್ಧನಾದನು. ಶಹಾಜಾದನು— "ಸಮಸೇರ, ನಿಲ್ಲು, ಇನ್ನೊಂದು ಮಾತು ಹೇಳತಕ್ಕದಿದೆ," ಎಂದು ಹೇಳಿದನು.

ಸಮಶೇರಖಾನನು ಕುರ್ನಿಸಮಾಡಿ-"ಅಪ್ಪಣೆಯಾಗಬೇಕು," ಎಂದು ಬಿನ್ನಹಮಾಡಿಕೊಂಡನು.

"ಇವನೊಡನೆ ಇನ್ನು ಹತ್ತುಮಂದಿ ಪಠಾಣ ಬಂದಿಗಳಿರುವರಷ್ಟೇ? ಅವರಲ್ಲಿ ಒಬ್ಬನನ್ನು ಬಿಟ್ಟುಬಿಡು. ಪಠಾಣರಾಜ್ಯದ ಮುಖ್ಯಸೇನಾಪತಿಯಾದ ಅಫಶಾನಖಾನನು ಮೊಗಲ ಶಿಬಿರದಲ್ಲಿ ಬಂದಿಯಾಗಿರುವನೆಂದೂ, ನಾಳೆ ಮುಂಜಾವಿನಲ್ಲಿ ಅವನನ್ನು ಲಾಹೋರಕ್ಕೆ ಕಳುಹಿಸುವೆವೆಂದೂ, ಅಲ್ಲಿಗೆ ಹೋದನಂತರ ಅವನಿಗೆ ಶಿರಚ್ಛೇದದ ದಂಡನೆವಿಧಿಸುವೆವೆಂದೂ,

ದುರ್ಗಾಧಿಪತಿಗಳಾದ ಮಿರಾನಶಹರವರಿಗೆ ತಿಳಿಸುವಂತೆ ಅವನಿಗೆ ಆಜ್ಞಾಪಿಸು," ಎಂದು ದಾನಿಯಲನು ಮುಗುಳುನಗೆಯನ್ನು ತಳೆದು ಹೇಳಿದನು.

ಸಮಶೇರಖಾನನು ಶಹಾಜಾದನಿಗೆ ಮತ್ತೊಮ್ಮೆ ಕುರ್ನಿಸಮಾಡಿ, ಅಫಶಾನನನ್ನು ಕರೆದುಕೊಂಡು ಹೋದನು.

---

## ಹದಿಮೂರನೆಯ ಪರಿಚ್ಛೇದ.

---

### ಶಹಾಜಾದನ ಪತ್ರ.

ಮೊಗಲರ ಸೆರೆಯಿಂದ ಬಿಡುಗಡೆ ಹೊಂದಿದ ಪಠಾಣಸೈನಿಕನು ಮಿರಾನಶಹನ ಬಳಿಗೆ ಬಂದು, ಅಫಶಾನನು ತನ್ನ ಸೈನಿಕರೊಡನೆ ಮೊಗಲರ ಬಂದಿಯಾಗಿರುವದನ್ನು ಅರಿಕೆಮಾಡಿದನು. ಅಫಶಾನನು ಹತ್ತುಜನ ಸೈನಿಕರೊಡನೆ ಶಹಾಜಾದನನ್ನು ಬೆನ್ನಟ್ಟಿ ಏಕೆ ಹೋಗಿರಬಹುದೆಂಬುದನ್ನು ಮಿರಾನಶಹನು ತಿಳಿಯದವನಾದನು; ಯಾಕಂದರೆ, ಮಿರಾನಶಹನು ಅಫಶಾನನಿಗೆ ಈ ವಿಷಯವಾಗಿ ಯಾವ ತರದ ಅಪ್ಪಣೆಯನ್ನು ಮಾಡಿರಲಿಲ್ಲ.

ಮೊಗಲರು ಸಮೀಪದಲ್ಲಿ ಶಿಬಿರಬಿಟ್ಟುಕೊಂಡು, ದುರ್ಗವನ್ನು ಮುತ್ತುವ ಪ್ರಯೋಗವನ್ನು ನಿರೀಕ್ಷಿಸಿಕೊಂಡಿರುವಾಗ, ತನ್ನ ರಾಜ್ಯದ ಮುಖ್ಯ ಸೇನಾಪತಿಯು ಶತ್ರುಗಳ ಹಸ್ತಗತನಾಗಿರುವುದನ್ನು ತಿಳಿದು, ಮಿರಾನಶಹನು ಬಹಳ ಚಿಂತಿತನಾದನು. ಈ ಸಮಯದಲ್ಲಿ ಮೊಗಲರನ್ನು ಮುತ್ತಿ, ಅಫಶಾನನನ್ನು ಬಿಡಿಸಿಕೊಂಡು ಬರುವುದು ಸುಲಭಕೆಲಸವಾಗಿರಲಿಲ್ಲ; ಯಾಕೆಂದರೆ ಈ ಸಾರೆ ಮೊಗಲರಬಳಿಯಲ್ಲಿ ಸೈನ್ಯಬಲವೂ, ತೋಫುಗಳಬಲವೂ ಹೆಚ್ಚಾಗಿದೆಯೆಂದು ಮಿರಾನಶಹನಿಗೆ ತಿಳಿದು ಬಂದಿತ್ತು; ಮೇಲಾಗಿ ಪಠಾಣರು ಜಯಶಾಲಿಗಳಾಗುವುದಕ್ಕೆ ಅವರ ದುರ್ಭೇ

ದ್ಯವಾದ ದುರ್ಗವು ಮುಖ್ಯಸಾಧನವಾಗಿತ್ತು; ಅದರಿಂದವರು ಶತ್ರುಗಳ ಕೋಟೆಯನ್ನು ಮುತ್ತಲಿಕ್ಕೆ ಬಂದಾಗ್ಗೆ ಮಾತ್ರ, ಮೊಗಲರನ್ನು ಹಣ್ಣಿಗೆ ತರ ಬಲ್ಲವರಾಗಿದ್ದರು. ಕಾರಣ ಶತ್ರುಗಳಮೇಲೆ ಏರಿ ಹೋಗಿ, ಜಯಪಡೆಯುವ ಶಕ್ತಿ ಇವರಲ್ಲಿದ್ದಿಲ್ಲ. ಒಂದು ವೇಳೆ ಪಠಾಣರು ಸಾಹಸಭರದಿಂದ ಕೋಟೆ ಯಿಂದ ಹೊರಬಿದ್ದು, ಮೊಗಲರಮೇಲೆ ಸಾಗಿ ಹೋಗುವುದಕ್ಕೆ ಯತ್ನಿಸಿ ದರೆ, ಇವರು ದುರ್ಗವನ್ನಿಳಿಯುವಾಗ, ಮೊಗಲರ ತೋಫುಗಳ ಹೊಡತಕ್ಕೆ ಆಹುತಿಯಾಗಬೇಕಾಗುತಿತ್ತೆಂಬುದರಲ್ಲಿ ಸಂದೇಹವಿದ್ದಿಲ್ಲ. ಇದರಿಂದ ಶತ್ರು ಗಳನ್ನು ಸೋಲಿಸುವದೊತ್ತಟ್ಟಿಗಿರಲಿ; ತಮ್ಮ ಬಲವನ್ನು ಕಡಿಮೆಮಾಡಿ ಕೊಂಡು, ಭದ್ರವಾದ ದುರ್ಗದ ಸಹಾಯದಿಂದ ಮೊಗಲರನ್ನು ಹಣ್ಣಿಗೆ ತರುವ ಆಶೆಯನ್ನು ಸಹ ಬಿಡಬೇಕಾಗುತ್ತಿತ್ತು. ಮೇಲಾಗಿ ಈ ಅವಧಿಯ ಲ್ಲಿಯೇ ಅಫಶಾನನು ಸತ್ತುಹೋಗಿರುತ್ತಿದ್ದನು. ಈ ಕಾರಣಗಳ ಮೂಲಕ ಮಿರಾನಶಹನಿಗೆ ಅಫಶಾನನ ಬಿಡುಗಡೆಗಾಗಿ ಯತ್ನಿಸುವುದು ಸಯುಕ್ತಿಕ ವಾಗಿ ತೋರಲಿಲ್ಲ.

ಈ ಸುದ್ದಿಯನ್ನು ತಂದ ಸೈನಿಕನನ್ನು ಕುರಿತು ಮಿರಾನಶಹನು— "ಆ ಮೂರ್ಖನಾದ ಅಫಶಾನನು ನಿನ್ನ ಮುಂದೆ ಏನನ್ನಾದರೂ ಹೇಳಿರುವ ನೇನು?" ಎಂದು ಕೇಳಿದನು.

"ಜನಾಬ, ಅವರು ನನ್ನ ಮುಂದೆ ಏನೂ ಹೇಳಿಲ್ಲ. ಮೊಗಲರ ಶಿಬಿರದಲ್ಲಿ ಸೆರೆಯಾಳಾದ ಬಳಿಕ ನನಗೂ ಅವರಿಗೂ ದರ್ಶನವೇ ಇಲ್ಲ. ಬರುವ ಮುಂದೆ ನಾನು ಅವರನ್ನು ಕಾಣಬೇಕೆಂದು ಬಹು ಪ್ರಯ ತ್ನಮಾಡಿದೆ; ಆದರೂ ಅವರ ದರ್ಶನವಾಗಲಿಲ್ಲ; ಅವರೆಲ್ಲಿರುವರೆಂಬುದು ಸಹ ನನಗೆ ತಿಳಿಯಲಿಲ್ಲ."

ಮಿರಾನಶಹನು ತನ್ನ ತುಟಿಯನ್ನು ಕಡಿದುಕೊಂಡು, "ಶಹಾಜಾ ದನು ನಿನ್ನ ಕೈಯಲ್ಲಿ ಪತ್ರವನ್ನು ಕೊಟ್ಟಿರುವನೇನು? ಇಲ್ಲವೆ, ನನಗೆ ತಿಳುಹಿಸೆಂದು ನಿನ್ನ ಮುಂದೆ ಏನನ್ನಾದರೂ ಹೇಳಿಕಳುಹಿಸಿರುವನೇನು?" ಎಂದು ಸಿಟ್ಟಿನಿಂದ ಕೇಳಿದನು.

ಸೈನಿಕನು ತನ್ನ ಕಿಸೆಯಲ್ಲಿರುವ ಪತ್ರವನ್ನು ಹೊರಗೆತೆಗೆದು, ಕಂಪಿತ ಹಸ್ತನಾಗಿ ಅದನ್ನು ಮಿರಾನಶಹನಿಗೆ ಒಪ್ಪಿಸಿ—"ಮಹಾರಾಜ, ಸೇವಕನ ಅಪರಾಧವನ್ನು ಕ್ಷಮಿಸಬೇಕು. ಗಡಿಬಿಡಿಯ ಮೂಲಕವಾಗಿ ನಾನು ಈ ಪತ್ರವನ್ನು ತಮಗೆ ಈ ಮೊದಲೇ ಕೊಡುವುದಕ್ಕೆ ಮರೆತೆನು." ಎಂದು ಬಿನ್ನಹ ಮಾಡಿಕೊಂಡನು.

"ನೀನು ಹೊರಗೆ ಇರು. ನನ್ನ ಅಪ್ಪಣೆಯಾಗುವವರೆಗೆ ಬೇರೆ ಕಡೆಗೆ ಹೋಗಬೇಡ" ಎಂದು ಹೇಳಿ, ಮಿರಾನಶಹನು ಉತ್ಕಂಠಿತನಾಗಿ ಆ ಪತ್ರವನ್ನು ತೆಗೆದುಕೊಂಡು, ಅದನ್ನೊಡೆದು ಓದತೊಡಗಿದನು. ಅದರಲ್ಲಿ ಬರೆದಿದ್ದುದೇನಂದರೆ:—

"ದುರ್ಗಾಧಿಪತಿ,

ಇಂದು ಮುಂಜಾವಿನಲ್ಲಿ ನಮ್ಮ ನಿಮ್ಮ ನಡುವೆ ಆದ ಮಾತುಗಳನ್ನು ನಿಮ್ಮ ಚತುರನೂ, ಯೋಗ್ಯನೂ ಆದ ಸೇನಾಪತಿ ಗುಪ್ತವಾಗಿ ನಿಂತು ಕೇಳಿದ್ದಾನೆ. ನಮ್ಮ ಮಾತುಗಳಲ್ಲಿ ನಿಮ್ಮ ಮಗಳ ಸಂಗತಿಯು ಹೊರಟದ್ದನ್ನು ಕೇಳಿ ಅವನಿಗೆ ನನ್ನ ವಿಷಯದಲ್ಲಿ ಮತ್ಸರವುಂಟಾದಂತೆ ತೋರುತ್ತದೆ. ಆದಕಾರಣ ಅವನು ನಮ್ಮ ಸಂಪೂರ್ಣಮಾತುಕತೆಗಳನ್ನು ಕೇಳಿದ್ದರೂ, ರಾಜನೀತಿಯನ್ನು ಮೀರಿ, ಹತ್ತು ಜನ ಸೈನಿಕರನ್ನು ಕರೆದುಕೊಂಡು ಬಂದು, ಹಾದಿಯಲ್ಲಿ ನನ್ನ ಮೇಲೆ ಬಿದ್ದನು. ನನ್ನನ್ನು ಬಂದಿಯನ್ನಾಗಿ ಮಾಡುವ ನೀಚ ಕೆಲಸಕ್ಕೆ ಪ್ರಯತ್ನ ಮಾಡಿದನು; ಆದರೆ ಅವನ ಇಚ್ಛೆ ಸಫಲವಾಗಲಿಲ್ಲ. ಅಷ್ಟೇ ಅಲ್ಲ; ಅವನು ತನ್ನ ಅನುಚರರೊಡನೆ ನನ್ನ ಸೆರೆಯಾಳಾದನು. ತಾವು ರಾಜನೀತಿಯನ್ನು ಮೀರಲಿಲ್ಲ. ಕಿಂಚತ್ ಕಾಲದವರೆಗೆ ತಾವು ನನ್ನನ್ನು ಹಿಡಿಯುವ ಯೋಚನೆಯಲ್ಲಿದ್ದಿರಿ. ಆದರೆ ನಾನು ಶಿಷ್ಟಸಮ್ಮತವಾದ ನಿಯಮವನ್ನು ಹೇಳಿದಕೂಡಲೆ, ಅದನ್ನು ಮೀರಲಾರದೆ ನನ್ನೊಡನೆ ಸರಿಯಾಗಿ ವರ್ತಿಸಿದಿರಿ. ನಿಮಗೆ ಹೀನವೆಂದು ಕಂಡುಬಂದ ಕೆಲಸವನ್ನು, ನಿಮ್ಮ ಸೇನಾಪತಿಯು ಯಾರ ಹೆದರಿಕೆಯೂ ಇಲ್ಲದೆ ಮಾಡಿದ್ದಾನೆ. ಇದರಿಂದ ಅವನು ಹೀನವೃತ್ತಿಯವನಿರುವನೆಂಬು

ವರಲ್ಲಿ ಸಂದೇಹವಿಲ್ಲ. ನಾನು ಅವನ ಪ್ರಣಯಮಾರ್ಗಕ್ಕೆ ವಿಘ್ನಸ್ವರೂಪ ನಾಗಿ ನಿಂತಿರುವೆನೆಂಬುದು ಅವನ ಕಲ್ಪನೆ: ಅದಕ್ಕಾಗಿ ಅವನು ನನ್ನನ್ನು ಯಾವರೀತಿಯಿಂದಲಾದರೂ ಕೊಂದು, ತಮ್ಮ ಮಗಳನ್ನು ಹೊಂದುವ ಮಾರ್ಗವನ್ನು ಕಂಟಕರಹಿತವಾಗಿ ಮಾಡಬೇಕೆಂಬುದು ಅವನ ಗುಪ್ತ ಉದ್ದೇಶವಾಗಿದ್ದಿತೆಂದು ನನಗೆ ತೋರುತ್ತಿದೆ. ನಾನು ಅಫಶಾನನಿಗೆ ಮರಣ ದಂಡನೆ ವಿಧಿಸಿದ್ದೇನೆ. ನಾಳೆ ಅವನನ್ನು ಲಾಹೋರಕ್ಕೆ ಕಳುಹಿಸುವುದ ರಲ್ಲಿ ಬರುವುದು. ನಾನು ಒಪ್ಪಂದದ ಸಲುವಾಗಿ ಇಂದು ಮುಂಜಾವಿನಲ್ಲಿ ಹೇಳಿದ ಕರಾರುಗಳಿಗೆ ಒಡಂಬಡುವಿರಾದರೆ, ನಾಳೆ ಬೆಳಗ್ಗೆ ನನಗೆ ಸುದ್ದಿ ಯನ್ನು ತಿಳುಹಿರಿ. ಇಲ್ಲವಾದರೆ ಅಫಶಾನನ ಮರಣವು ಅನಿವಾರ್ಯವು! ನಾವು ಕೇವಲ ಅಫಶಾನನ ಮರಣದಿಂದ ಸಮಾಧಾನ ಹೊಂದುವ ವರಲ್ಲ. ಯೋಗ್ಯಸಮಯವನ್ನರಿತು, ನಿಮ್ಮ ದುರ್ಗವನ್ನು ಮುತ್ತಿ, ಅದನ್ನು ತೀವ್ರವೇ ಕೈವಶಮಾಡಿಕೊಳ್ಳತಕ್ಕವರು.

ಶಹಾಜಾದಾ ದಾನಿಯಲ".

ಪತ್ರವನ್ನೋದಿದ ಬಳಿಕ ಮಿರಾನಶಹನಿಗೆ ಸಿಟ್ಟುಬಂದಿತು. ಅಫಶಾ ನನು ಮೂರ್ಖತನದಿಂದ ತನ್ನ ನಾಶವನ್ನು ಮಾಡಿಕೊಂಡನೆಂಬುವಷ್ಟೇ ಅಲ್ಲ; ಪಠಾಣರ ರಾಜ್ಯಕ್ಕೆ ಘೋರವಾದ ವಿಪತ್ತನ್ನು ತಂದಿರಿಸಿದನೆಂಬು ವನ್ನೂ ತಿಳಿದನು.

ಮಿರಾನಶಹನು ಯೋಚಿಸತೊಡಗಿದನು "ಶಹಾಜಾದನು ಬರೆದುದು ಸತ್ಯ. ಅಫಶಾನನು ನನ್ನ ಮಗಳ ಆಸೆಯಮೂಲಕವಾಗಿ ಹೀಗೆ ಮಾಡಿರು ವುದರಲ್ಲಿ ಸಂದೇಹವಿಲ್ಲ. ಅವನು ಎಷ್ಟು ಅನರ್ಥವನ್ನುಂಟುಮಾಡಿದ! ನಾನೇನು ಅವನಿಗೆ ನನ್ನ ಮಗಳನ್ನು ಕೊಡುವುದಿಲ್ಲವೆಂದು ಹೇಳಿದ್ದೆನೇ? ನಾನು ಅಫಶಾನನಿಗೆ ನನ್ನ ಮಗಳನ್ನು ಕೊಡುವುದನ್ನು ನಿಶ್ಚಯಿಸಿರುವ ಮೂಲಕ, ನಿನಗೆ ಪಸ್ನಾಮತಿಯನ್ನು ಕೊಡಲಾರೆನೆಂದು ಶಹಾಜಾದ ನಿಗೆ ಸ್ಪಷ್ಟವಾಗಿ ಹೇಳಿದ್ದೆನಲ್ಲ! ಇದನ್ನು ಅಫಶಾನನೂ ಕೇಳಿದ್ದಾನೆ. ಹೀಗಿ ರಲು ಅವನು ಈ ತರದ ಹುಚ್ಚಿಗೇಕೆ ಹೋಗಿರಬಹುದು? ನನ್ನ ಮಾತಿ ನಲ್ಲಿ ಅವನಿಗೆ ವಿಶ್ವಾಸವಿರಲಿಲ್ಲವೇನು? ಒಂದುವೇಳೆ ಪಠಾಣರು ಯುದ್ಧ

ದಲ್ಲಿ ಸೋತದ್ದಾದರೆ, ಶಹಜಾದನು ಪನ್ನಾಮತಿಯನ್ನು ಬಲಾತ್ಕಾರದಿಂದ ವರಿಸಬಹುದೆಂದು ಅವನು ಹೀಗೆಮಾಡಿದ್ದಾನಾದೀತೇನು? ಎಷ್ಟುವಿಚಾರ ಮಾಡಿದರೂ ಅವನು ಹೆಡ್ಡನಾಗಿರುವುದರಲ್ಲಿ ಸಂದೇಹವಿಲ್ಲ. ಹಿಂದೊಮ್ಮೆ ಮೂರ್ಖತನಕ್ಕೊಳಗಾಗಿ ಮದಿರೆಯಿಂದ ಮೈಮ್ಮರೆತನು; ಇದರಿಂದ ದಾನಿಯಲನು ಓಡಿಹೋಗುವುದಕ್ಕೆ ಅನುಕೂಲವಾಯಿತು. ಆಗ ಅವನು ಜಾಣನಾಗಿದ್ದರೆ ಈ ಪ್ರಸಂಗವೇ ಬರುತ್ತಿದ್ದಿಲ್ಲ. ಆಗಲಿ, ಅವನು ತನ್ನ ಕರ್ಮಕ್ಕೆ ತಕ್ಕ ಫಲವನ್ನನುಭವಿಸುವನು! ಅವನೊಬ್ಬನು ಹಾಳಾಗಿ ಹೋಗಿದ್ದರೆ, ನನಗೆ ಚಿಂತೆಯಿದ್ದಿಲ್ಲ; ಆದರೆ ಈಗ ನನ್ನ ಈ ರಾಜ್ಯವೇ ಹಾಳಾಗುವ ಪ್ರಸಂಗಬಂದಿದೆ. ಈ ಪ್ರಸಂಗದಲ್ಲಿ ನಾನುಮಾಡಬೇಕಾದು ವೇನು? ನನಗಾದರೋ ಏನೂ ತೋರದು. ಮೊದಲು ಈ ವಿಷಯವಾಗಿ ಸರದಾರರ ಮತವನ್ನು ತೆಗೆದುಕೊಳ್ಳುವುದು ಯುಕ್ತವಾದದ್ದು."

ಮಿರಾನಶಹನು ಯಾವತ್ತು ಸರದಾರರನ್ನು ಕರೆಯುವದಕ್ಕೆ ಸೇವ ಕರನ್ನು ಕಳುಹಿಸಿದನು. ಅವೇಳೆಯಲ್ಲಿ ಬಾದಶಹನು ತಮ್ಮನ್ನು ಕರೆಸಿರು ವುದನ್ನು ತಿಳಿದು, ಏನಾದರೊಂದು ಮಹತ್ಕಾರ್ಯವಿರಬಹುದೆಂದು ಭಾವಿಸಿ, ಸರದಾರರು ತೀವ್ರವೇ ಬಂದರು. ಮಿರಾನಶಹನು ಅವರಿಗೆ ಸಕಲ ಸಂಗತಿಗಳನ್ನೂ ತಿಳುಹಿಸಿದನು. ಇದನ್ನು ಕೇಳಿ ಸರದಾರರು ವಿಸ್ಮಿತರೂ, ಸ್ತಂಭಿತರೂ ಆಗಿಹೋದರು.

ಕೆಲವರು ಮುಂದೇನು ಮಾಡಬೇಕೆಂಬುದನ್ನು ಮನಸ್ಸಿನಲ್ಲಿಯೇ ಆಲೋಚಿಸತೊಡಗಿದರು. ಬೇರೆ ಕೆಲವರು ಅಫಶಾನನ ಹೆಡ್ಡತನಕ್ಕಾಗಿ, ಅವನನ್ನು ಬಯ್ಯತೊಡಗಿದರು. ಅಷ್ಟೇವಿನಾ ಮುಂದೇನು ಮಾಡಬೇ ಕೆಂಬುದನ್ನು ಸೂಚಿಸುವುದಕ್ಕೆ ಯಾರೂ ಮುಂದುವರಿಯಲಿಲ್ಲ. ಸರದಾ ರರು ಸುಮ್ಮನೆ ಕುಳಿತಿರುವುದನ್ನನೋಡಿ, ಮಿರಾನಶಹನು—"ಸರದಾರರೆ, ಈ ವಿಪತ್ತಿನಸಮಯದಲ್ಲಿ ನಮ್ಮ ಕರ್ತವ್ಯವಾವುದೆಂಬುದು ನನಗೆ ತಿಳಿ ಯಲೊಲ್ಲದು! ಸೃಷ್ಟಿಕರ್ತನಾದ ದೇವರು ಈ ಸಮಯದಲ್ಲಿ ನಮ್ಮ ಮೇಲೆ ಸಿಟ್ಟಾಗಿರುವನೆಂಬಂತೆ ತೋರುತ್ತಿದೆ. ಇಲ್ಲವಾದರೆ ಈ ಯುದ್ಧದ ಮುಖ್ಯ ಸೇನಾಪತಿಯಾದ ಅಫಶಾನನ ಮನಸ್ಸಿನಲ್ಲಿ ಬಾಲಕೋಚಿತವಾದ ಮೂರ್ಖ

ತನದ ಆಲೋಚನೆಗಳುಂಟಾಗುತ್ತಿದ್ದುವೇ? ಅವನು ಕ್ಷುದ್ರಸ್ವಾರ್ಥಕ್ಕೊಳಗಾಗಿ ತಾನೂ ಈ ದೇಶವೂ ಸಂಪೂರ್ಣನಾಶವಾಗುವ ಕೆಲಸವನ್ನು ಮಾಡುತ್ತಿದ್ದನೇ? ಆದರೂ ನಾವು ಧೈರ್ಯಗುಂದಿ ಕುಳಿತುಕೊಳ್ಳುವುದು ತರವಲ್ಲ. ಸ್ವದೇಶದ ಉದ್ಧಾರಕ್ಕಾಗಿ ಏನಾದರೂ ಮಾಡಲೇಬೇಕು. ಏನು ಮಾಡಬೇಕೆಂಬುದನ್ನು ವಿಚಾರಿಸಿರಿ. ಅದನ್ನು ನನಗೆ ತಿಳುಹಿಸಿರಿ. ನಾನು ಅದರಂತೆ ನಡೆದುಕೊಳ್ಳುತ್ತೇನೆ," ಎಂದು ಹೇಳಿದನು.

ಸರದಾರರೆಲ್ಲರೂ ವಯೋವೃದ್ಧರು, ಅನುಭವಿಗಳು, ಆದರೂ ಈ ವಿಪತ್ತಿನ ಸಮಯದಲ್ಲಿ ಏನು ಮಾಡಬೇಕೆಂಬುದನ್ನು ನಿರ್ಧರಿಸುವದಕ್ಕೆ ಅವರು ಸಮರ್ಥರಾಗಲಿಲ್ಲ.

ಎಲ್ಲರಿಗಿಂತಲೂ ವೃದ್ಧನಾದ ರಸೂಲಖಾನನೆಂಬ ಸರದಾರನು— "ಈ ಪ್ರಸಂಗದಲ್ಲಿ ನಾವು ಮೊಗಲರೊಡನೆ ಒಪ್ಪಂದ ಮಾಡಿಕೊಳ್ಳುವುದೇ ಯೋಗ್ಯವೆಂದು ನನಗೆ ತೋರುತ್ತದೆ; ಯಾಕಂದರೆ ಮೊಗಲರ ಬಲವು ಹೆಚ್ಚು; ನಮ್ಮ ಬಳಿಯಲ್ಲಿ ಅಷ್ಟೊಂದು ಬಲವಿಲ್ಲ: ಮೇಲಾಗಿ ನಾವು ದೇವರ ಕೋಪಕ್ಕೊಳಗಾಗಿ ಮೇಲಿಂದ ಮೇಲೆ ವಿಪತ್ತಿಗೊಳಗಾಗತೊಡಗಿದ್ದೇವೆ," ಎಂದು ಹೇಳಿದನು.

ಮಿರಾನಶಹನಿಗೆ ಬಹಳ ಸಿಟ್ಟು ಬಂದಿತು. ಅದರಿಂದವನ ಕಣ್ಣುಗಳು ಕೆಂಡದಂತೆ ಉರಿಯತೊಡಗಿದವು. ವೃದ್ಧನಾದ ಅವನ ಮುಖದಲ್ಲಿ ತಾರುಣ್ಯದ ತೇಜವು ಕಾಣಬರಹತ್ತಿತು. ಅವನು ಆವೇಶದಿಂದ, "ಸರದಾರರೆ, ಮಾನವೀಜೀವಿತವೂ, ಸುಖ-ದುಃಖಭೋಗವೂ ದೇವರಿಂದ ನಿರ್ಮಿತವಾದ ಕ್ಷಣಿಕವಾದ ಆಟವು. ಇವುಗಳಲ್ಲಿ ಯಾವದೂ ಸ್ಥಿರವಲ್ಲ. ಇಂದು ಇದ್ದವನು ನಾಳೆ ಇರುವದಿಲ್ಲ. ನಾಳೆ ಇರುವವನು ನಾಳಿದ್ದು ಇರುವನೆಂಬ ನಿಯಮವಿಲ್ಲ. ಇಂದು ಅರಸನಾಗಿರುವವನು ನಾಳೆ ಫಕೀರನಾಗಬಹುದಾಗಿದೆ. ಇಂದು ಫಕೀರನಾದವನು ನಾಳೆ ಅರಸಾಗಬಹುದಾಗಿದೆ. ನಾನೂ ಸ್ಥಿರನಾಗಿ ಇರುವಂತಿಲ್ಲ. ನೀವೂ ಸ್ಥಿರವಾಗಿ ಇರುವಂತಿಲ್ಲ. ನಮ್ಮ ಈ ಸುಖಮಯವಾದ ರಾಜ್ಯವನ್ನು ನಾಶಮಾಡುವುದಕ್ಕೆ ಸೈನ್ಯವನ್ನು ಕಳುಹಿಸಿದ ಅಕಬರನೂ ಕಡೆಯವರೆಗೆ ಇರಲಾರನು. ಆದರೆ ಮಾನವನು ದೊರಕಿಸಿದ ಕೀರ್ತಿಯು ಮಾತ್ರ ಬಹುಕಾಲ ಉಳಿಯುವುದಾಗಿದೆ. ಮೊಗ

ಲರಿಗೆ ಕನ್ಯಾದಾನಮಾಡಿ ಸ್ವಾತಂತ್ರ್ಯವನ್ನು ಮಾರಿಕೊಂಡು ಬದುಕಲು ಯತ್ನಿಸುವುದು ಮಹಾಪಾತಕವೆಂದು ನಾನು ನಂಬುತ್ತೇನೆ. ಚಿರಕಾಲದಿಂದ ಮೆರೆಯುತಲಿರುವ ಈ ದುರ್ಗದಲ್ಲಿ ನಮ್ಮ ಈ ಹೀನವ್ಯವಸ್ಥೆ, ದುರ್ಬಲತೆ, ಮೂರ್ಖತನ ಈ ಮೊದಲಾದ ದೋಷಗಳಿಂದ ಮೊಗಲರ ರಕ್ತಪತಾಕೆಯು ಹಾರಾಡುವುದಾದರೆ, ಇದರಿಂದ ನಮಗುಂಟಾಗುವ ಕಲಂಕವು ಯುಗ ಯುಗಾಂತರಕ್ಕೂ ಸಹ ಅಳಿಸಿಹೋಗಲಾರದು. ವಿಚಾರಮಾಡಿರಿ. ಈ ಕಲಂಕವು ನಮಗುಂಟಾಗದಂತೆ, ನಾವೆಲ್ಲರೂ ಯತ್ನಿಸಬೇಕು. ಈಗ ನೀವು ಮನೆಗೆ ಹೋಗಿರಿ. ಶಾಂತತೆಯಿಂದ ವಿಚಾರಮಾಡಿ ಯಾವದೊಂದನ್ನು ನಿರ್ಧರಿಸಿರಿ. ಅದನ್ನು ನಾಳೆಮುಂಜಾವಿನಲ್ಲಿ ನನಗೆ ತಿಳಿಸಿರಿ. ಆ ಸಮಯದಲ್ಲಿ ನಾನೂ ನನ್ನ ಅಭಿಪ್ರಾಯವನ್ನು ಹೇಳುವೆನು. ”

ಮಿರಾನಶಹನು ಉನ್ಮಾದಗ್ರಸ್ತನಂತೆ ಮುಖಭಾವವನ್ನು ತಳೆದು, ಸರದಾರರನ್ನು ದಿಟ್ಟಿಸಿನೋಡಿದನು. ಮತ್ತೇನನ್ನು ಹೇಳದೆ ಬೇರೆಕಡೆಗೆ ಹೊರಟುಹೋದನು. ಇದರಿಂದ ಎಲ್ಲರೂ ಭಯಹೊಂದಿದರು—ಇದು ಪ್ರಳಯಕಾಲದ ಬಿರುಗಾಳಿಯ ಪೂರ್ವಲಕ್ಷಣವೆಂದು ಭಾವಿಸಿದರು.

---

## ಹದಿನಾಲ್ಕನೆಯ ಪರಿಚ್ಛೇದ.

---

### ದುರ್ಗಾಧಿಪತಿ.

ರಾತ್ರಿಯ ಮೊದಲನೆಯ ಪ್ರಹರದ ಕಡೆಯಭಾಗ. ಕೃಷ್ಣಪಕ್ಷವಾದುದರಿಂದ ಚಂದ್ರೋದಯವಿನ್ನೂ ಇಲ್ಲ. ಅಂಧಕಾರವು ಎಲ್ಲಕಡೆಯಲ್ಲಿ ವ್ಯಾಪಿಸಿದೆ. ಅನಂತವಾದ ನೀಲಾಕಾಶದಲ್ಲಿ ಅಸಂಖ್ಯತಾರಿಗೆಗಳು ಮಿನುಗುತ್ತಲಿವೆ.

ಪನ್ನಾಮತಿ ತನ್ನಕೋಣೆಯಲ್ಲಿ ಕುಳಿತಿದ್ದಾಳೆ. ಸಮೀಪದಲ್ಲಿಯೇ ದಾಸಿಯೂ ಕುಳಿತುಕೊಂಡಿದ್ದಾಳೆ. ಸುಗಂಧಪೂರ್ಣವಾದ ಎಣ್ಣೆಯ

ಒಂದೆರಡು ದೀಪಗಳು ಉರಿಯುತ್ತಲಿವೆ. ಪನ್ನಾಮತಿಯು ಚಿಂತಾಕ್ರಾಂತಳಾಗಿದ್ದಾಳೆ. ದಾಸಿಯು ಇವಳನ್ನು ಸಮಾಧಾನಪಡಿಸುವುದಕ್ಕೆ ಏನೇನೋ ಹೇಳುತ್ತಿದ್ದಾಳೆ. ಆದರೆ ಪನ್ನಾಮತಿಯ ಲಕ್ಷ್ಯವು ಈ ಮಾತಿನಕಡೆಗೆ ಇಲ್ಲ: ಯಾವದೋ ಒಂದು ಘೋರವಿಚಾರದಲ್ಲಿ ಮುಳುಗಿಹೋಗುತ್ತಿದೆ.

ಈ ಸಮಯದಲ್ಲಿ ಹಿಮ್ಮತಖಾನನು ಆ ಕೋಣೆಯನ್ನು ಪ್ರವೇಶಿಸಿ "ಪನ್ನಾಬೇಗಮ, ನಾನು ಒಂದು ಮಹತ್ವದ ಸುದ್ದಿ ಹೇಳುವುದಕ್ಕಾಗಿ ಇಲ್ಲಿಗೆ ಬಂದಿದ್ದೇನೆ," ಎಂದು ಹೇಳಿದನು.

ಪನ್ನಾಮತಿ ಮುಖವನ್ನೆತ್ತಿ ಹಿಮ್ಮತನನ್ನುನೋಡಿ—"ಅಂಥ ವರ್ತಮಾನವಾವದೂ ಯಾವುದು? ಹೇಳು, ನೋಡೋಣ," ಎಂದಳು.

"ಸೇನಾಪತಿಗಳಾದ ಅಫಜಲಖಾನರು ಮೊಗಲರ ಬಂದಿಗಳಾಗಿದ್ದಾರೆ."

ಕೇಳಿ ಪನ್ನಾಮತಿಗೆ ಆಶ್ಚರ್ಯವಾಗಿ "ಅದು ಹೇಗೆ?" ಎಂದು ಕೇಳಿದಳು.

"ನಾವು ಈವರೆಗೆ ಅಫಜಲಖಾನರು ಬಹುಬುದ್ಧಿವಂತರೆಂದು ತಿಳಿದಿದ್ದೆವು. ಸ್ವತಃ ಬಾದಶಹರೂ ಸಹ ಸೇನಾಪತಿ ಚತುರನೂ, ಬಲಶಾಲಿಯೂ ಆಗಿರುವನೆಂದು ಹೇಳುತ್ತಿದ್ದರು. ಆದರೆ ಅವರ ಸದ್ಯದ ಕೆಲಸನೋಡಿದರೆ, ಅವರಂಥ ಹೆಡ್ಡರು ನಮ್ಮ ಈ ರಾಜ್ಯದಲ್ಲಿ ಯಾರೂ ಇರಲಿಕ್ಕಿಲ್ಲವೆಂದು ತೋರುವುದು."

"ಅಫಜಲನುಮಾಡಿದ ಅಂಥ ಮೂರ್ಖತನದ ಕೆಲಸವೇನು?"

ಹಿಮ್ಮತಖಾನನಿಗೆ ಯಾವತ್ತೂ ಸಂಗತಿಗಳು ಗೊತ್ತಿದ್ದವು. ಮೊಗಲ ಶಿಬಿರದಿಂದ ಬಿಡುಗಡೆಹೊಂದಿ ಬಂದಿದ್ದ ಸೈನಿಕನು ಹಿಮ್ಮತನ ಸ್ನೇಹಿತನಾಗಿದ್ದನು. ಇವನ ಮುಖದಿಂದ ಹಿಮ್ಮತನು ಎಲ್ಲವನ್ನು ಕೇಳಿದ್ದನ್ನು ತರುವಾಯ ಅವನು ಸರದಾರರ ದರಬಾರದಲ್ಲಿ ಏನು ನಡೆಯಿತೆಂಬುದನು ಗುಪ್ತರೀತಿಯಿಂದ ನಿಂತುಕೊಂಡು ನೋಡಿದ್ದನು. ಅದಕ್ಕಾಗಿಯೇ ಅವನು ಈ ಸುದ್ದಿಯನ್ನು ತಿಳಿಸುವದಕ್ಕೆಂದೇ ಪನ್ನಾಮತಿಯ ಬಳಿಗೆ ಧಾವಿಸಿ ಬಂದಿದ್ದನು.

ಹಿಮ್ಮತಖಾನನು ಪನ್ನಾಮತಿಗೆ ಶಹಾಜಾದನು ವೇಷಾಂತರದಿಂದ ಮಿರಾನಶಹನ ದರ್ಶನ ತಕ್ಕೊಂಡದ್ದನ್ನು, ಅನಂತರ ಅವನು ನಿಜವೃತ್ತಾಂತವನ್ನು ಪ್ರಕಾಶಪಡಿಸಿದ್ದನ್ನು, ಅಫಶಾನನು ಇದನ್ನು ಮರೆಯಲ್ಲಿ ನಿಂತು ನೋಡಿ, ಶಹಾಜಾದನನ್ನು ಹಿಡಿಯುವದಕ್ಕೆ ಯತ್ನಿಸಿ, ಮೊಗಲರ ಬಂದಿಯಾದುದನ್ನೂ, ತರುವಾಯ ಸರದಾರರ ಗುಪ್ತದರಬಾರದಲ್ಲಿ ನಡೆದ ಆಲೋಚನೆಗಳನ್ನು ಹೇಳಿದನು. ಈ ಸಂಗತಿಗಳನ್ನು ಕೇಳಿ ಪನ್ನಾಮತಿಗೆ ದುಃಖವಾಯಿತು. ಮೊದಲೇ ಚಿಂತೆಯಿಂದ ಬಾಡಿದ ಅವಳ ಮುಖವು ವಿಷಣ್ಣತೆಯಿಂದ ಮತ್ತಿಷ್ಟು ಕಂದಿತು.

ಹಿಮ್ಮತಖಾನನಿಗೆ ಅಫಶಾನನು ಬಂದಿಯಾಗಿರುವುದು ತಿಳಿದದ್ದರಿಂದ ಆನಂದವಾಗಿತ್ತು: ಯಾಕಂದರೆ ಇವನಿಗೆ ಅಫಶಾನನನ್ನು ಕಂಡರೆ ಆಗುತ್ತಿದ್ದಿಲ್ಲ. ಆನಂದದ ಭರದಲ್ಲಿ ಹಿಮ್ಮತಖಾನನು ಪನ್ನಾಮತಿಗೆ ಈ ಸಂಗತಿಯನ್ನು ವರ್ಣನೆಮಾಡಿ ಹೇಳಿದನು. ಈ ಸುದ್ದಿಯನ್ನು ಕೇಳಿ, ತನ್ನಂತೆ ಪನ್ನಾಮತಿಗಾದರೂ ಆನಂದವಾಗಬಹುದೆಂಬುದು ಅವನ ಕಲ್ಪನೆ. ಆದರೆ ಪನ್ನಾಮತಿ ಆನಂದಿತಳಾಗದೆ, ವ್ಯಸನಾಕ್ರಾಂತಳಾದುದನ್ನು ನೋಡಿ, ಹಿಮ್ಮತನಿಗೆ ಕೆಡಕೆನಿಸಿತು.

ಪನ್ನಾಮತಿಯು ದಾಸಿಯ ಕೊರಳಿಗೆ ತೆಕ್ಕೆಬಿದ್ದು, ಕಣ್ಣೀರು ಸುರಿಸುತ್ತ—"ಮುನ್ನು, ಮುಂದೆ ನನ್ನ ಅವಸ್ಥೆಯೇನು? ಈ ಯುದ್ಧದಲ್ಲಿ ಪಠಾಣರು ಸೋಲುವರಾದರೆ, ನನಗೆ ಮೃತ್ಯುವೇ ನಿಶ್ಚಯ!" ಎಂದಳು.

"ಮುಂದಾಗುವುದನ್ನು ಯಾರು ಬಲ್ಲರು? ಆದರೂ ಹೀಗೆ ದುಃಖಿಸುತ್ತ ಕುಳಿತುಕೊಳ್ಳುವುದು ತರವಲ್ಲ. ಬಂದದ್ದನ್ನು ಅನುಭವಿಸಲೇಬೇಕು. ದೈವವು ನಮ್ಮಮೇಲೆ ಅಪ್ರಸನ್ನವಾಗಿದೆ. ಆದುದರಿಂದ ನಾವು ದಿನಾಗ್ಗೆಲೂ ಹೆಚ್ಚು ಹೆಚ್ಚು ವಿಪತ್ತಿಗೊಳಗಾಗತೊಡಗಿದ್ದೇವೆ. ಅಫಶಾನಖಾನರಿಲ್ಲದ್ದ ಹೊರತು ಮೊಗಲರೊಡನೆ ಯುದ್ಧಮಾಡುವದೆಂತು? ಒಂದು ವೇಳೆ ಯುದ್ಧಮಾಡುವದಾದರೂ ಜಯಶಾಲಿಗಳಾಗುವ ಸಂಭವವಿಲ್ಲ. ನಿಮ್ಮ ತಂದೆಗಳಾದರೋ ಒಪ್ಪಂದಕ್ಕೆ ಒಪ್ಪಿಕೊಳ್ಳುವದಿಲ್ಲ. ಇದರಿಂದ ಮುಂದೆ

ನಮ್ಮ ಅವಸ್ಥೆ ಶೋಚನೀಯವಾಗುವದರಲ್ಲಿ ಸಂದೇಹವಿಲ್ಲ," ಎಂದು ದಾಸಿ ವ್ಯಾಕುಲತೆಯಿಂದ ನುಡಿದಳು.

ಪನ್ನಾಮತಿಯು ಅಘಶಾನನ ಬುದ್ಧಿಹೀನತೆಗಾಗಿ, ಅವನ ಮೇಲೆ ಸಿಟ್ಟಾದಳು. ಅವನನ್ನು ನಾನಾರೀತಿಯಿಂದ ತಿರಸ್ಕರಿಸಿದಳು. ಆದರೆ ಅದನ್ನು ಕೇಳುವರಾರು? ಅಘಶಾನನು ಅಲ್ಲಿರದಮೂಲಕ ಪನ್ನಾಮತಿಯು ಈ ತಿರಸ್ಕಾರದ ವಾಕ್ಯಗಳಿಂದ ಏನೂ ಲಾಭವಾಗುವಂತಿರಲಿಲ್ಲ.

ಪನ್ನಾಮತಿಯ ಮನಸ್ಸಿನ ಅವಸ್ಥೆ ಬಹಳ ಶೋಚನೀಯವಾಯಿತು. ಸಮೀಪದಲ್ಲಿ ಜನರಿರುವುದು ಅವಳಿಗೆ ಇಷ್ಟವಿರಲಿಲ್ಲ. ದಾಸಿಯು ಅವಳ ಬಾಲ್ಯಸಹಚರಿಯೂ, ಪ್ರೇಮಪಾತ್ರಳೂ ಆದವಳು ಆದರೂ ಈ ಸಮಯದಲ್ಲಿ ತನ್ನ ಬಳಿಯಲ್ಲಿ ಈ ದಾಸಿಯೂ ಇರಬಾರದೆಂದು ಭಾವಿಸಿದಳು. ಕಾರಣ ಅವಳು ದಾಸಿಯನ್ನು ಕುರಿತು—"ಮುನ್ನಾ, ರಾತ್ರಿ ಬಹಳವಾಗಿದೆ. ನೀನಿಂದು ಬೇರೆಕಡೆಹೋಗಿ ಮಲಗು: ನನಗೆ ಏಕಾಂತವಾಸದ ಇಚ್ಛೆಯಾಗಿದೆ. ಬೆಳಗಾಗುವವರೆಗೆ ನೀನು ಇಲ್ಲಿಗೆ ಬರುವಕಾರಣವಿಲ್ಲ. ನಾನು ಒಬ್ಬಳೇ ಮುಂದಿನ ಸಂಗತಿಗಳನ್ನು ಆಲೋಚಿಸುವೆನು." ಎಂದು ಹೇಳಿದಳು.

"ಹಾಗೆಯೇ ಆಗಲಿ, ಮುಖ್ಯವಾಗಿ ನೀನು ಸಮಾಧಾನಹೊಂದಿದರೆ ಸಾಕು. ಆದರೂ ಬಹಳವಿಚಾರಮಾಡುತ್ತ ಚಿಂತೆಗೊಳಗಾಗುವುದು ತರವಲ್ಲ. ಆದುದರಿಂದ ತೀವ್ರವೇ ಮಲಗಿಕೊ" ಎಂದುಹೇಳಿ, ದಾಸಿಯು ಬೇರೆಕಡೆಗೆ ಹೊರಟುಹೋದಳು. ಓಮ್ಕೃತಖಾನನಂತೂ ಮೊದಲೇಹೋಗಿಬಿಟ್ಟಿದ್ದನು. ಅದರಿಂದ ಕೋಣೆಯಲ್ಲಿ ಉಳಿದವಳು ಪನ್ನಾಮತಿಯೊಬ್ಬಳೇ.

ಪನ್ನಾಮತಿಯು ವಿಚಾರಕ್ಕೊಳಗಾದಳು. ಪರಸ್ಪರವಿರೋಧವಾದ ಅವಳ ವಿಚಾರತರಂಗಗಳು, ಅವಳನ್ನು ಬಹಳವಾಗಿ ಗಾಸಿಪಡಿಸತೊಡಗಿದವು. ಅವಳಿಗೆ ಸಮಾಧಾನವೆಷ್ಟು ಮಾತ್ರವೂ ದೊರೆಯಲಿಲ್ಲ. ಕೋಣೆಯಲ್ಲಿಯ ಹಬೆಯು ಸಂತಾಪಪೂರ್ಣವಾಗಿದೆಯೆಂದು ಅವಳಿಗೆ ಅನಿಸಹತ್ತಿತು. ಕಾರಣ ಅವಳು ಹೊರಗಿನಗಾಳಿಯ ಸ್ಪರ್ಶದಿಂದ ತನ್ನಹೃದಯದ ಸಂತಾಪವು ಕಡಿಮೆಯಾಗಬಹುದೆಂದು ಭಾವಿಸಿ, ಕಿಟಿಕಿಯಲ್ಲಿ

ಬಂದುಕುಳಿತಳು. ಅನಂತವಾದ ಆಕಾಶದಲ್ಲಿ ಆಗಲೂ ಅಸಂಖ್ಯ ನಕ್ಷತ್ರಗಳು ಮಿನುಗುತ್ತಲಿದ್ದವು. ಪ್ರಬಲವಾದುದೊಂದು ಮೇಘವು ಇವುಗಳ ಕಾಂತಿಯನ್ನು ಅಪಹರಿಸುವುದಕ್ಕಾಗಿ ಮುಂದುವರಿಯುತ್ತಲಿತ್ತು. ಇದು ಕೃಷ್ಣಪಕ್ಷದ ಪಂಚಮಿಯ ಚಂದ್ರನನ್ನು ಒಮ್ಮೊಮ್ಮೆ ಮರೆಮಾಡುತಲಿದ್ದಿತು. ಒಮ್ಮೊಮ್ಮೆ ದೂರಸರಿಯುತಲಿದ್ದಿತು. ಇದರಿಂದ ಚಂದ್ರನು ಪುನಃ ಸ್ವತೇಜದಿಂದ ಬೆಳಗುತಲಿದ್ದನು. ಪನ್ನಾಮತಿಯು ಆಕಾಶದಲ್ಲಿ ಕ್ಷಣಕ್ಷಣಕ್ಕೆ ಬದಲಾಗುತ್ತಿರುವ ಈ ದೃಶ್ಯವನ್ನು ನೋಡುತ್ತ ಸ್ವಲ್ಪಹೊತ್ತು ಕುಳಿತುಕೊಂಡಳು; ಆದರೂ ಅವಳು ವಿಚಾರಮುಕ್ತಳಾಗಲಿಲ್ಲ. ಅವಳು ಮನಸ್ಸಿನಲ್ಲಿಯೇ ಭಾವಿಸಿದಳು—"ಹಾಯ್! ಅಭಾಗಿನಿಯಾದ ನಾನೇ ಇಷ್ಟೆಲ್ಲ ಅನರ್ಥಕ್ಕೆ ಕಾರಣಭೂತಳು. ಪಠಾಣರಾಜ್ಯದಲ್ಲಿ ಶಾಂತತೆಯಿತ್ತು. ಪಠಾಣರಲ್ಲಿ ಉತ್ಸಾಹವಿತ್ತು. ಅದರಿಂದವರು ಮೊಗಲರನ್ನು ಸುಲಭವಾಗಿ ಜಯಿಸುವೆವೆಂದು ಭಾವಿಸಿದ್ದರು. ಆದರೆ ನಾನು ಈ ರಾಜ್ಯದ ಶಾಂತತೆಯನ್ನು ಕಳೆದುಬಿಟ್ಟೆ; ಪಠಾಣರಲ್ಲಿ ನಿರುತ್ಸಾಹವನ್ನುಂಟುಮಾಡಿದೆ. ಶಹಾಜಾದನ ಬಿಡುಗಡೆಗಾಗಿ ನಾನು ಯತ್ನಿಸದಿದ್ದರೆ, ಈ ಸ್ಥಿತಿಯೇ ಒದಗುತ್ತಿದ್ದಿಲ್ಲ. ಮೊಗಲರು ಪಠಾಣರ ಕೈಯಲ್ಲಿ ಸಿಕ್ಕಿ, ಹೇಳಿದಂತೆ ಒಪ್ಪಂದಮಾಡಿಕೊಂಡು ಹೋಗುತ್ತಿದ್ದರು; ಆದರೆ ಈಗ ಈ ಕಲ್ಪನೆಗೆ ಎಷ್ಟುಮಾತ್ರವೂ ಆಸ್ಪದವಿಲ್ಲ. ಇದಕ್ಕೆ ಶಹಾಜಾದನು ಪಾರಾಗಿಹೋದುದೊಂದೇಕಾರಣವಾಗಿರದೆ ಅಫಶಾನನು ಬಂದಿಯಾಗಿರುವುದೂ ಕಾರಣವಾಗಿದೆ. ಇದಕ್ಕಾದರೂ ನಾನೇ ಕಾರಣಳು. ಒಂದುವೇಳೆ ನಾನು ಅಫಶಾನನ ಪ್ರಣಯವನ್ನು ಮೊದಲಿನಿಂದಲೂ ತಿರಸ್ಕರಿಸುತ್ತ ಬಂದಿದ್ದರೆ, ಅವನು ನನ್ನ ಆಸೆಯನ್ನೇ ಬಿಟ್ಟುಬಿಡುತ್ತಿದ್ದನು. ಇದರಿಂದವನು ಮಾತ್ಸರ್ಯವಶನಾಗಿ ಶಹಾಜಾದನ ಬೆನ್ನುಹತ್ತಿ ಮೊಗಲರ ಬಂದಿಯಾಗುವ ಪ್ರಸಂಗವೇ ಬರುತ್ತಿದ್ದಿಲ್ಲ. ಹೀಗಾಗಿದ್ದರೆ ಎಷ್ಟುನೆಟ್ಟಗಾಗುತ್ತಿತ್ತಲ್ಲ!"

ಶಹಾಜಾದನು ನನಗೆ ಸಂಪೂರ್ಣ ಅಪರಿಚಿತನು. ಈ ವರೆಗೆ ನಾನವನ ಮುಖವನ್ನು ಸಹ ನೋಡಿರಲಿಲ್ಲ. ಅವನಿಗೂ ನನಗೂ ಯಾವ ಸಂಬಂಧವೂ ಇಲ್ಲ; ಮೇಲಾಗಿ ಅವನು ಪಠಾಣರ ಚಿರಶತ್ರುವು. ಹೀಗಿ

ರಲು ಅವನ ಉದ್ಧಾರಕ್ಕಾಗಿ ನಾನು ಇಷ್ಟೊಂದು ಪ್ರಯತ್ನಮಾಡಿದ್ದೇಕೆ?
ಅವನ ವಿಷಯವಾಗಿ ನನ್ನಲ್ಲಿ ಸಹಾನುಭೂತಿಯುಂಟಾದದ್ದೇಕೆ? ಅವನು
ನನ್ನ ಹೃದಯವನ್ನು ಆಕರ್ಷಿಸಿದನೇಕೆ? ಅವನ ವಿಷಯದಲ್ಲಿ ನಾನು
ಇಷ್ಟೊಂದು ಮಮತೆ ತಾಳಿದೆನೇಕೆ? ನನಗಾದರೋ ಈ ಬಗ್ಗೆ ಏನೂ
ತಿಳಿಯದಾಗಿದೆ. ಅಂದ ಬಳಿಕ ನನಗೆ ಇದನ್ನು ತಿಳಿಸಿಕೊಡುವವರಾರು?"

"ಶಹಜಾದ, ನೀನು ಸರ್ವರೀತಿಯಿಂದಲೂ ನನ್ನವನಾಗಿ ಹೋಗಿ
ರುವೆ. ನೀನು ನನ್ನ ಹೃದಯದಲ್ಲಿಯೂ ಕಣ್ಣುಗಳಲ್ಲಿಯೂ ಸರ್ವದಾ
ವಿರಾಜಮಾನನಾಗಿರುವೆ. ಕಣ್ಣು ತೆರೆದೊಡನೆ ನೀನು ನನ್ನೆದುರಿಗೆ ನಿಂತು
ಮೃದುಹಾಸ್ಯ ಮಾಡುತ್ತಿರುವಂತೆ ಕಂಡುಬರುತ್ತದೆ. ಕಣ್ಣು ಮುಚ್ಚಿದೆ
ನೆಂದರೆ ನನ್ನ ಹೃದಯ ಸಿಂಹಾಸನದಲ್ಲಿ ನೀನು ವಿರಾಜಮಾನನಾಗಿರು
ವಂತೆ ನನಗೆ ಬೋಧೆಯಾಗುತ್ತದೆ. ಇದು ಏತರ ಪರಿಣಾಮವಾಗಿರ
ಬಹುದು? ನಾನು ಮೋಹವಶಳಾಗಿ ಮೈಮರೆದಿರಬಹುದೆ? ಏನಿರು
ವದೋ ದೇವರೇ ಬಲ್ಲನು!"

"ರಾಜಪುತ್ರ, ಈಗ ನೀನೆಲ್ಲಿರುವೆ? ನೀನು ಇನ್ನೊಮ್ಮೆ ನನಗೆ ದರ್ಶನ
ಕೊಡು. ನಿನ್ನ ಸುಂದರಮುಖವನ್ನು ನೋಡುವದಕ್ಕೂ, ಮನೋ
ಹರವಾದ ಮಾತುಗಳನ್ನು ಕೇಳುವದಕ್ಕೂ ಉತ್ಸುಕಳಾಗಿದ್ದೇನೆ. ಸದ್ಯಕ್ಕೆ
ನಾನು ಬಹು ವಿಪನ್ನಸ್ಥಿತಿಯಲ್ಲಿದ್ದೇನೆ. ಈ ಸ್ಥಿತಿಯಿಂದ ನನ್ನನ್ನು ಪಾರು
ಮಾಡುವವರಾರೂ ಇಲ್ಲ. ಅದಕ್ಕಾಗಿ ನಿನ್ನ ಬಳಿಗೆ ನನ್ನ ಮನಸ್ಸು ಧಾವಿ
ಸುತ್ತಲಿದೆ. ನೀನು ಶಕ್ತಿಶಾಲಿ. ಪಠಾಣರನ್ನು ಶಿಕ್ಷಿಸುವದಕ್ಕೂ, ಅವರ ರಾಜ್ಯ
ವನ್ನಪಹರಿಸುವದಕ್ಕೂ ಸಮರ್ಥನಾಗಿರುವೆ. ದುರ್ದೈವದಿಂದ ನಾನೂ, ಇತರ
ಪಠಾಣರೂ ದುರ್ಬಲರಾಗಿದ್ದೇವೆ. ನಿನ್ನ ಬಳಿಗೆ ಆಶ್ರಯಕ್ಕಾಗಿ ಓಡಿಬರುವ
ಪ್ರಸಂಗಬಂದಿದೆ. ಹೀಗಾಗುವದಕ್ಕೆ ನಾನೇ ಮೂಲಕಾರಣಳಾಗಿದ್ದೇನೆ.
ಕಾರಣ ಈ ಸಮಯದಲ್ಲಿ ನಾನು ಪಠಾಣರನ್ನು ರಕ್ಷಿಸದಿದ್ದರೆ, ಯಾವತ್ತು
ಅಪಕೀರ್ತಿ ನನಗೆ ಬರುವದು. ಅದಕ್ಕಾಗಿ ನಾನಿಂದು ನಿನ್ನನ್ನು ಬೇಡಿ
ಕೊಳ್ಳುತ್ತಿರುವೆನು. ನನ್ನ ತಂದೆಯ ಮಾನ—ಸಂಭ್ರಮ—ಶೌರ್ಯ—
ಗೌರವಗಳಿಗೆ ಕಲಂಕ ಹತ್ತದಂತೆ ಮಾಡಬೇಕಾದರೆ, ನಾನೇನು ಮಾಡ

ಬೇಕೆಂಬದನ್ನು ಹೇಳಿಕೊಡು. ಚಿರಸ್ವತಂತ್ರತೆಯನ್ನು ಅನುಭವಿಸಿದ ಪಠಾಣರ ಮಾನರಕ್ಷಣೆಗೆ ನಾನು ಮಾಡತಕ್ಕದ್ದೇನೆಂಬದನ್ನು ತಿಳಿಯ ಹೇಳು. ಈ ಪ್ರಸಂಗದಲ್ಲಿ ನಮ್ಮನ್ನುದ್ಧರಿಸು!"

ಪನ್ನಾಮತಿಯ ಕಣ್ಣುಗಳಿಂದ ನೀರು ಸುರಿಯಹತ್ತಿತು. ಅವಳ ಎದೆಯಮೇಲಿನ ವಸ್ತ್ರವು ಅಶ್ರುಗಳಿಂದ ತೊಯ್ದು ಹೋಯಿತು. ಅವಳು ಕಣ್ಣುಗಳನ್ನೊರಸಿಕೊಂಡು, ಆಕಾಶದ ಕಡೆ ದೃಷ್ಟಿಯನ್ನಿರಿಸಿ, ಕೈಜೋಡಿಸಿ—"ದೇವ, ಸಕಲ ಚರಾಚರವಸ್ತುಗಳನ್ನು ನಿರ್ಮಿಸಿದವನು ನೀನು! ಅವುಗಳ ಸಂರಕ್ಷಣೆಯ ಭಾರವೂ ನಿನ್ನದು! ನನ್ನ ತಂದೆಯನ್ನು ಈ ಪ್ರಸಂಗದಲ್ಲಿ ರಕ್ಷಿಸು. ಅವನ ಗೌರವಕ್ಕೆ ಕಲಂಕ ಹತ್ತದಂತೆ ಮಾಡು. ನಾನಾದರೋ ಈ ಪ್ರಚಂಡಕಲ್ಲೋಲಮಯವಾದ ಅನಂತ ಸಂಸಾರ ಸಾಗರದಲ್ಲಿ ಕ್ಷುದ್ರವಾದ ತೆರೆಯಂತಿರುವೆನು. ನನ್ನ ಈ ಕ್ಷುದ್ರವಾದ ಅಸ್ತಿತ್ವವು ಇಲ್ಲದಂತಾಗುವುದರಿಂದ ತಂದೆಯ ರಕ್ಷಣೆಯಾಗುವಂತಿದ್ದರೆ ಹಾಗೆಯೇ ಮಾಡು. ನಾನು ಮರಣಕ್ಕೂ ಸಿದ್ಧಳಾಗಿರುವೆನು," ಎಂದು ಬೇಡಿಕೊಂಡಳು.

ಪನ್ನಾಮತಿಯು ಕಿಟಕಿಯಿಂದೆದ್ದು ಬಂದು, ಹಾಸುಗೆಯ ಮೇಲೆ ಮಲಗಿಕೊಂಡಳು. ಹಾಸುಗೆಯಲ್ಲೆಲ್ಲಕಡೆಯಲ್ಲಿ ಮುಳ್ಳು ಹರವಿರುವಂತೆ ಬೋಧೆಯಾಯಿತು; ನಿದ್ರೆ ಹತ್ತಲಿಲ್ಲ; ಅಸಮಾಧಾನದಿಂದ ಹೊರಳಾಡಿದಳು. ಈ ಸಮಯದಲ್ಲವಳಿಗೆ ಯಾರೋ ತನ್ನ ಮೈಯಲ್ಲಿ ಸೂಜಿಯನ್ನು ಚುಚ್ಚುತ್ತಿದ್ದರೆಂದು ಅನಿಸಹತ್ತಿದ ಕಾರಣ ಅವಳು ಅತೀವ ಚಂಚಲಳಾಗಿ, ಹಾಸುಗೆ ಬಿಟ್ಟೆದ್ದು, ಕಿಟಕಿಯ ಬಳಿಗೆ ಬಂದು ನಿಂತುಕೊಂಡಳು. ಈ ವೇಳೆಯಲ್ಲಿ ಚಂದ್ರನು ಕೃಷ್ಣಪಕ್ಷದ ರಾತ್ರಿಯಲ್ಲಿ ಚಂದ್ರಾಸ್ತವಾಗುವುದಿಲ್ಲ. ಕಾರಣ ಮೇಘರಾಶಿಯಲ್ಲಿ ಮರೆಯಾಗಿದ್ದನೆಂದು ಹೇಳಬಹುದಲ್ಲವೆ? ಅಸ್ತನಾಗಿದ್ದನು. ಇತ್ತಿಂದತ್ತ ಅಡ್ಡಾಡುತ್ತಲಿರುವ ಮೇಘದಿಂದಾವೃತವಾದ ತಾರಿಗೆಗಳು ಅಡಿಗಡಿಗೆ ಪನ್ನಾಮತಿಯನ್ನು ಅಣಕಿಸುವಂತೆ ತೋರುತ್ತಿದ್ದುವು.

ಪ್ರಕೃತಿಯು ಘಂಭೀರಭಾವ ತಳೆದಿತ್ತು. ರಾತ್ರಿಯ ತಂಗಾಳಿ ಪನ್ನಾಮತಿಯನ್ನು ಸ್ಪರ್ಶಮಾಡುತಲಿತ್ತು. ಆದರೂ ಪನ್ನಾಮತಿಗೆ ಸಮಾಧಾನ ದೊರೆಯಲಿಲ್ಲ. ಕಿಟಿಕಿಯ ಕೆಳಗೆ ಪುಷ್ಪೋದ್ಯಾನ. ಸುಳಿಗಾಳಿಯು ಈ ತೋಟದಲ್ಲಿಯ ಹೂಗಳ ಸುಗಂಧವನ್ನೆತ್ತಿಕೊಂಡು ಬಂದು, ಪನ್ನಾಮತಿಯನ್ನು ಸಂತೋಷಪಡಿಸಲು ಯತ್ನಿಸಿತು. ಇದರಿಂದಲೂ ಪನ್ನಾಮತಿಗೆ ಶಾಂತಿದೊರೆಯಲಿಲ್ಲ. ಮಧ್ಯರಾತ್ರಿಯ ಸಮಯವಾಗಿತ್ತು. ಚಂದ್ರನು ದಟ್ಟವಾದ ಮೇಘ ಮಧ್ಯೆ ಮರೆಯಾಗಿದ್ದುದರಿಂದ ಅಂಧಕಾರವು ಎಲ್ಲಕಡೆಯಲ್ಲಿಯೂ ಹಬ್ಬಿತ್ತು. ಸಮೀಪದಲ್ಲಿಯ ಗುಡ್ಡಗಾಡು ಪ್ರದೇಶವು ಭೀಷಣವಾಗಿ ಕಾಣುತಲಿತ್ತು.

ಪನ್ನಾಮತಿಯು ಹೃದಯವ್ಯಥೆಯನ್ನು ತಡೆಯಲಾರದೆ ತುಸುಗಟ್ಟಿಯಾಗಿ ಅನ್ನತೊಡಗಿದಳು—“ನನಗುಂಟಾದ ಈ ದುಃಖವನ್ನು ಕಡಿಮೆ ಮಾಡುವರಾರು! ನಾನು ಶಾಂತಿ ಹೊಂದುವುದು ಹೇಗೆ? ನನಗಾದರೋ ಜೀವವಿರುವವರೆಗೆ ನಾನು ಈ ಯಾತನೆಯಿಂದ ಮುಕ್ತಳಾಗಲಾರೆನೆಂದು ತೋರುತ್ತಿದೆ. ನಾನು ಸಾಯುವದರಿಂದ ತಂದೆಗೂ, ಈ ರಾಜ್ಯಕ್ಕೂ ಲಾಭವಾಗುವದರಲ್ಲಿ ಸಂದೇಹವಿಲ್ಲ. ಶಹಾಜಾದನು ಒಪ್ಪಂದದ ಕಾಣಿಕೆ ರೂಪವಾಗಿ ನನ್ನನ್ನು ಬೇಡುತ್ತಿರುವನಂತೆ. ಹೀಗೆ ಮಾಡಿದರೆ ವಂಶಗೌರವಕ್ಕೆ ಕಲಂಕ ಹತ್ತುವದೆಂದು ತಂದೆಯು ತಿಳಿಯುತ್ತಾನೆ. ನಾನು ಸತ್ತೆನಾದರೆ, ತಂದೆಯು ಈ ಚಿಂತೆಯಿಂದ ಕೊರಗಬೇಕಾದ ಪ್ರಸಂಗವು ತಪ್ಪಿ ಹೋಗುವುದು; ಉಳಿದ ಒಪ್ಪಂದದ ಕರಾರಿಗೆ ತಂದೆಯು ಸಮ್ಮತಿಸುತ್ತಿರುವನಾದುದರಿಂದ ಯುದ್ಧವು ನಿಂತು ಹೋಗಬಹುದು. ಇದರಿಂದ ಪಠಾಣರಿಗೆ ಸಂತೋಷವಾಗುವುದರಲ್ಲಿ ಸಂದೇಹವಿಲ್ಲ; ಅಫಶಾನನು ಬಿಡುಗಡೆ ಹೊಂದುವನು. ಈ ಎಲ್ಲ ಕಾರಣಗಳಿಂದ ನಾನು ಮರಣ ಹೊಂದುವುದವಶ್ಯಕವಾಗಿದೆ. ಆದರೆ ಸಕಲದುಃಖ ನಾಶಕವೂ, ಯಾವತ್ತೂ ವಿಪತ್ತುಗಳಿಂದ ಪಾರುಮಾಡುವುದೂ ಆದ ಮೃತ್ಯುಮಾರ್ಗವನ್ನು ನನಗೆ ತೋರಿಸಿಕೊಡುವರಾರು? ನಾನು ಯಾವರೀತಿಯಿಂದ ಸಾಯಲಿ? ಈ ಸಮಯದಲ್ಲಿ ನನ್ನ ಐಚ್ಛಿಕವಾದ ಆಮೃತ್ಯುವನ್ನು ನನಗೆ ತಂದು ಕೊಡುವವರಾರು?”

ಸಹಸಾ ಹಿಂದಿನಿಂದ ಯಾರೋ ಕಠೋರಸ್ವರದಿಂದ ಪನ್ನಾಮತಿಯ ಪ್ರಶ್ನೆಗೆ ಉತ್ತರಸ್ವರೂಪವಾಗಿ—"ಪನ್ನಾಮತಿ! ನೀನು ಮೃತ್ಯುವನ್ನು ಬಯಸುತ್ತಿರುವಿಯಷ್ಟೇ? ಯಾರು ನನಗೆ ಈ ಮರಣವನ್ನು ತಂದು ಕೊಟ್ಟಾರೆಂದು ಚಿಂತೆಗೊಳಗಾಗಿರುವೆಯಲ್ಲವೇ? ಯಾವ ಚಿಂತೆಯನ್ನೂ ಮಾಡಬೇಡ. ನಾನು ನಿನಗೆ ಮೃತ್ಯುವನ್ನು ತಂದು ಕೊಡುವೆನು. ಕೊಡುವೆನು ಏಕೆ?—ಕೊಡುವದಕ್ಕಾಗಿಯೇ ಬಂದಿದ್ದೇನೆ," ಎಂದು ಹೇಳಿದರು.

ಅತಿ ಪುರುಷಸ್ವರದಿಂದುಚ್ಚಾರಿತವಾದ ಈ ಉತ್ತರವನ್ನು ಕೇಳಿ, ಪನ್ನಾಮತಿಯು ಭಯಚಕಿತಹರಿಣಿಯಂತೆ ಒತ್ತಟ್ಟಿಗೆ ಸರಿದು ನಿಂತಳು. ಆ ಆಗಂತುಕ ವ್ಯಕ್ತಿಯಕಡೆಗೆ ಮುಖ ತಿರುಗಿಸಿ ನಡುಗುವ ದನಿಯಿಂದ—"ನೀವಾರು? ನೀವಾರು? ನೀವು ನನಗೆ ಮೃತ್ಯುವನ್ನು ತಂದುಕೊಡಲಿಕ್ಕೆ ಬಂದಿರುವಿರಾ? ಅದೇಕೆ?" ಎಂದು ಕೇಳಿದಳು.

ಆ ಆಗಂತುಕ ವ್ಯಕ್ತಿಯ ಯಾವತ್ತೂ ಅವಯವಗಳು ಕಪ್ಪುವಸ್ತ್ರದಿಂದ ಮುಚ್ಚಲ್ಪಟ್ಟಿದ್ದವು. ಅದರಿಂದ ಅವನ ಮುಖವು ಕಾಣುವಂತಿರಲಿಲ್ಲ. ಕಾರಣ ಪನ್ನಾಮತಿಗೆ ಅವನು ಯಾರೆಂಬುದನ್ನು ಕಂಡು ಹಿಡಿಯುವದಾಗಲಿಲ್ಲ. ಆಗಂತುಕ ವ್ಯಕ್ತಿಯು ಪನ್ನಾಮತಿಯ ಪ್ರಶ್ನೆಗೆ ಯಾವ ಉತ್ತರವನ್ನು ಕೊಡದೆ ನಿಂತಿತು. ಪನ್ನಾಮತಿಯು ಮತ್ತಷ್ಟು ಹೆದರಿದಳು. ಅವಳು ಭಯಚಕಿತನೇತ್ರಳಾಗಿ ಆ ವ್ಯಕ್ತಿಯ ಕಡೆಗೆ ನೋಡುತ್ತ—"ನೀವು ಯಾರು?" ಎಂದು ಮತ್ತೆ ಕೇಳಿದಳು.

ಆ ವ್ಯಕ್ತಿಯು ತನ್ನ ಮುಖಾವರಣವನ್ನು ಒತ್ತಟ್ಟಿಗೆ ಸರಿಸಿ, ಕಠೋರಸ್ವರದಿಂದ—"ಪನ್ನಾಮತಿ, ನೀನು ನನ್ನನ್ನು ಗುರುತಿಸಲಿಲ್ಲವೇ? ನಾನು ಮಿರಾನಶಹನು—ಈ ಅಫಜಾಯಿ ಜನಾಂಗದ ಏಕಛತ್ರಬಾದಶಹನು—ನಿನ್ನ ತಂದೆ!" ಎಂದು ಹೇಳಿತು.

ಪನ್ನಾಮತಿಯು ಭಯದಿಂದಲೂ, ಆಶ್ಚರ್ಯದಿಂದಲೂ ತಂದೆಯ ಮುಖವನ್ನು ನೋಡಿ,—"ಅಪ್ಪಾ! ನೀವು! ನನ್ನನ್ನು ಕೊಲ್ಲುವಿರಾ? ಈ ಕ್ಷುದ್ರಲತೆಯನ್ನು ಇಷ್ಟು ದಿವಸಗಳ ವರೆಗೆ ಬಹುಶ್ರಮಪಟ್ಟು ದೊಡ್ಡ

ದನ್ನಾಗಿ ಮಾಡಿದಿರಿ. ಅದನ್ನೇ ಈಗ ನೀವು ನಿಮ್ಮ ಕೈಯಿಂದಲೇ ಚಿವುಟಿ ಒಗೆಯುವಿರಾ? ಅದೇಕೆ? ಅಪ್ಪಾಜಿ, ನೀವೇ ಕುಳಿತು ಹೀಗೆ ಮಾಡುವದಕ್ಕೆ ಕಾರಣವೇನು? ನಾನು ಮಾಡಿದ ಅಪರಾಧವಾದರೂ ಯಾವುದು?" ಎಂದು ಕೇಳಿದಳು.

ಮಗಳ ಈ ಸ್ನೇಹರಸಪೂರ್ಣವಾದ ಮಾತುಗಳನ್ನು ಕೇಳಿ, ಮಿರಾನಶಹನು ತುಸುಮಟ್ಟಿಗೆ ಶಾಂತನಾದನು. ಅವನ ನಿರ್ಧಾರವು ಕುಂದಿತು. ಅವನು ತನ್ನ ಕೈಯಲ್ಲಿರುವ ತೀಕ್ಷ್ಣವಾದ ಖಡ್ಗವನ್ನು ಒರೆಯಲ್ಲಿರಿಸಿ ಶಾಂತಸ್ವರದಿಂದ—"ಮಗು, ನೀನು ಮರಣಕ್ಕಾಗಿ ಇಷ್ಟೊಂದು ಉತ್ಸುಕಳಾಗಿರುವದೇಕೆ?" ಎಂದು ಕೇಳಿದನು.

ತಂದೆಯ ಈ ಮಮತಾಪೂರ್ಣವಾದ ಮಾತಿನಿಂದ ಪನ್ನಾಮತಿಗೆ ಧೈರ್ಯ ಬಂದಿತು. ಅವಳು ತಂದೆಯಬಳಿಗೆ ಬಂದು ಅವನನ್ನಪ್ಪಿಕೊಂಡು—"ಅಪ್ಪಾ, ಏನುಹೇಳಲಿ! ಬಹಳದುಃಖವಾಗುತ್ತಿದೆ! ಹೃದಯ ವ್ಯಥೆಯಿಂದ ಬಹುಸಂಕಟಪಡುತ್ತಿರುವೆನು. ಮಾಡಿದಕಾರ್ಯದ ಸಲುವಾಗಿ ಬಹಳ ಪಶ್ಚಾತ್ತಾಪವಾಗುತ್ತಿದೆ. ಆದರೆ ಅದರಿಂದ ಈಗ ಉಪಯೋಗವೇನು? ದುಃಖದಿಂದ ಬೆಯ್ಯುತ್ತ ಕೂಡುವದರಹೊರತು ಮಾರ್ಗವಿಲ್ಲ. ಆದರೆ ಬಾಲಿಕೆಯಾದ ನಾನು ಈ ದುಃಖವನ್ನು ಸಹಿಸಲಾರದವಳಾಗಿದ್ದೇನೆ. ಅವ್ವನಬಳಿಗೆ ಹೋಗಬೇಕೆಂದು ಇಚ್ಛೆಯಾಗಿದೆ. ನಾನು ಮರಣವನ್ನು ಬಯಿಸುತ್ತೇನೆ." ಎಂದು ಹೇಳಿದಳು.

ಮಿರಾನಶಹನು ಹುಚ್ಚನಂತೆ ಪನ್ನಾಮತಿಯ ಮುಖನೋಡುತ್ತ—"ಮಗು, ನಿಜವಾಗಿ ಹೇಳು, ನಾನು ನಿನಗೆ ಈ ದುಃಖವನ್ನುಂಟು ಮಾಡಿರುವೆನೇ? ನೀನು ಹೀಗೆ ವ್ಯರ್ಥವಾಗಿ ದುಃಖವನ್ನು ಹಚ್ಚಿಕೊಂಡು ಹಡೆದವಳನ್ನು ಸ್ಮರಿಸುತ್ತಿರುವೆ. ನಿನ್ನ ಮುಖದಿಂದ ಹೊರಟ ಅವಳ ಹೆಸರನ್ನು ಕೇಳಿ, ನನಗೊಂದು ಪ್ರಸಂಗದ ಸ್ಮರಣೆಯಾಗುತ್ತಿದೆ. ನೀನು ನಿಮ್ಮ ತಾಯಿ ಆ ಭಯಂಕರ ಮರಣದಿವಸವನ್ನು ಬಲ್ಲೆಯಾ? ಅದು ನಿನ್ನ ನೆನಪಿನಲ್ಲಿದೆಯೆ? ಆ ದಿವಸ ಎಂಥ ದೊಡ್ಡಮಳೆಯಾಯಿತು! ಎಂಥ ಬಿರುಗಾಳಿ ಬೀಸಿತು! ಬಾಹ್ಯಪ್ರಕೃತಿಯು ಅತ್ಯಂತಭೀಕರವಾಗಿತ್ತು! ಬಾಹ್ಯ

ಪ್ರಕೃತಿಯಲ್ಲಿ ತೋರುತ್ತಿದ್ದ ಪ್ರಳಯಕಾಲದ ಗಾಳಿ ನನ್ನ ಹೃದಯ ದಲ್ಲಿಯೂ ಬೀಸಲಾರಂಭಿಸಿತ್ತು. ಪ್ರಾಣಪ್ರಿಯಳಾದ ಪತ್ನಿಯು--ನಿನ್ನ ಮಮತೆಯ ತಾಯಿ-ನನ್ನೆದುರಿನಲ್ಲಿ ಬಿದ್ದುಕೊಂಡಿದ್ದು, ಕಷ್ಟದಿಂದ ಶ್ವಾಸವನ್ನೆಳೆದುಕೊಳ್ಳುತ್ತಿದ್ದಳು. ನೀನು ಅಪ್ಪಾ-ಅಪ್ಪಾ, ಎಂದು ಅಳು ತ್ತಲಿದ್ದೆ. ಹೊರಗೆ ಗಾಳಿಯ ಪ್ರಚಂಡವಾದ ಹಾಹಾ ಧ್ವನಿಯು ಕೇಳ ಬರುತ್ತಿದ್ದಿತು. ನನ್ನ ಮುಖದಿಂದ ಆ ಸಮಯದಲ್ಲಿ ಹಾಯ ಹಾಯ ಎಂಬ ದುಃಖೋದ್ಗಾರವು ಹೊರಡುತ್ತಲಿತ್ತು! " ಎಂದು ಹೇಳಿದನು.

ಪನ್ನಾಮತಿಯು ಭಯದಿಂದ' ದೂರಸರಿದು ನಿಂತಳು. ಅವಳ ಕಣ್ಣಿಗೆ ಸುತ್ತಲೂ ಕತ್ತಲೆ ಕಾಣಿಸತೊಡಗಿತು. ಕೂಡಲೆ ನಿಂತುಕೊಳ್ಳಲು ಸಮರ್ಥಳಾಗದೆ, ನೆಲದಮೇಲೆ ಬಿದ್ದುಬಿಟ್ಟಳು. ಕೊಂಚ ಹೊತ್ತಿನಮೇಲೆ ಅವಳು—" ಅಪ್ಪಾ! ಅಪ್ಪಾ! ಆ ದಿವಸವನ್ನು ಸ್ಮರಿಸಿಕೊಂಡು ಈಗ ನಾವು ಮಾಡುವುದೇನು? ಇದರಿಂದ ನಾವು ಮತ್ತಿಷ್ಟು ದುಃಖಕ್ಕೊಳಗಾಗ ಬೇಕಾಗುತ್ತದೆ. ಅದರಿಂದ ಅದನ್ನು ಸಂಪೂರ್ಣವಾಗಿ ಮರೆದುಬಿಡುವ ದೊಳ್ಳೆಯದು. ಈ ಸಂಗತಿಯನ್ನು ಇನ್ನೆಂದೂ ಸ್ಮರಿಸಬೇಡಿ. ಸ್ಥಿರರಾ ಗಿರಿ. ಬಂದಕೆಲಸವನ್ನು ನೆರವೇರಿಸಿಹೋಗಿರಿ. ನನ್ನ ಮರಣದಿಂದ ನಿಮ್ಮ ಸಂಕಟಗಳು ದೂರವಾಗುವವು. ಸಂಕೋಚಪಡದೆ ಈ ಕೆಲಸ ಕಡೆಹಾಯಿ ಸಿರಿ. " ಎಂದು ಹೇಳಿದಳು.

ಮಿರಾನಶಹನು ಸೌಮ್ಯಸ್ವರದಿಂದ ಹೇಳತೊಡಗಿದನು—" ಪನ್ನಾ ಮತಿ, ಇನ್ನು ಮುಂದೆ ನಾನು ನಿನ್ನ ಹಡೆದವಳ ಸಂಗತಿಯನ್ನೆಂದೂ ಸ್ಮರಿಸುವದಿಲ್ಲ. ಈಗಲೂ ಆ ಸಂಗತಿಯನ್ನು ನೆನಸುವ ಕಾರಣವಿರಲಿಲ್ಲ. ಆದರೂ ನಿನಗೊಮ್ಮೆ ಅವಳ ಕಡೆಯ ದಿವಸದ ಮಾತುಗಳನ್ನು ಸ್ಮರಣೆಗೆ ತಂದುಕೊಡಬೇಕೆಂದು ಕೋರಿ ಹೀಗೆ ಹೇಳಬೇಕಾಯಿತು. ನಿನಗೆ ಆದಿವ ಸದ ಸ್ಮರಣೆ ಇರುವುದೇನು? ಬಾಲಕಿಯಾದ ನೀನು ಅದನ್ನು ತೀವ್ರವೇ ಮರೆದಿರಬಹುದು; ಆದರೆ ನಾನದನ್ನು ಎಂದೂ ಮರೆಯುವಂತಿಲ್ಲ. ಅವಳು ಸಾಯುವಕಾಲಕ್ಕೆ ತನ್ನ ಬಾಡಿದಬಲಗೈಯಿಂದ ನಿನ್ನ ಕೈ ಹಿಡಿದು, ಅದನ್ನು ನನ್ನ ಕೈಯಲ್ಲಿರಿಸಿ—' ಇನ್ನು ನೀವು ಎರಡನೆಯ ಲಗ್ನವನ್ನು

ಮಾಡಿಕೊಳ್ಳಬೇಡಿರಿ. ನಮ್ಮಿರ್ವರ ಪವಿತ್ರಪ್ರೇಮದ ಚಿಹ್ನಸ್ವರೂಪವಾಗಿ ರುವ ಈ ಮುದ್ದುಮಗಳನ್ನು ನಿಮ್ಮ ಕೈಯಲ್ಲಿ ಕೊಟ್ಟುಹೋಗುತ್ತೇನೆ. ಇವಳೇ ನಿಮ್ಮ ಸರ್ವಸ್ವಳು. ಇವಳ ವಿಷಯದಲ್ಲಿ ನೀವು ಅನಾದರವನ್ನೇನೂ ತೋರಿಸಬೇಡಿ. ನೀವು ಪ್ರಯತ್ನಪೂರ್ವಕವಾಗಿ ಇವಳನ್ನು ಜೋಪಾನಮಾಡಿ. ಇವಳೊಡನೆ ಯಾವಾಗಲೂ ಸ್ನೇಹದಿಂದ ನಡೆದುಕೊಳ್ಳಿರಿ- ಮುಂದೆ ದೊಡ್ಡವಳಾದ ಬಳಿಕ ಇವಳನ್ನು ಯೋಗ್ಯವರನಿಗೆ ಕೊಟ್ಟು ವಿವಾಹವನ್ನು ಮಾಡಿ. ಒಂದುವೇಳೆ ಇವಳಿಂದ ನಿಮಗಾಗಲಿ, ಈ ರಾಜ್ಯಕ್ಕಾಗಲಿ ಅನರ್ಥಪರಂಪರೆಗಳುಂಟಾಗುವಂತಾದರೆ, ಆಗ ನೀವು ಇವಳನ್ನು ನಿಮ್ಮ ಕೈಯಿಂದಲೇ ಸಂಹರಿಸಿಬಿಡಿರಿ', ಎಂದು ಹೇಳಿದಳು. ಅವಳ ಹೇಳಿಕೆಯಂತೆ ನಾನಿದುವರೆಗೆ ನಿನ್ನನ್ನು ಮಮತೆಯಿಂದ ಜೋಪಾನಮಾಡಿದೆ. ಈಗ ನೀನು ನನಗೂ, ನನ್ನ ರಾಜ್ಯಕ್ಕೂ ಭಯಂಕರವಾದ ವಿಪತ್ತನ್ನುಂಟುಮಾಡಿರುವೆ. ನೀನು ಸಾಯದೆ ನಾವು ಈ ಸಂಕಟದಿಂದ ಪಾರಾಗುವಂತಿಲ್ಲ. ನಾನು ಇಂದು ನಿನ್ನನ್ನು ಕೊಲ್ಲುವುದಕ್ಕಾಗಿ ಇಲ್ಲಿಗೆ ಬಂದಿದ್ದೇನೆ. ”

ಪನ್ನಾಮತಿ ತನ್ನ ತಂದೆಯ ಮಾತಿನವಿಷಯವಾಗಿ ತುಸುಹೊತ್ತು ವಿಚಾರಮಾಡಿದಳು. ಅವಳಿಗೆ ತಂದೆಯು ಹೇಳುತ್ತಿರುವದೆಲ್ಲ ಸತ್ಯವಾದುದೆಂದು ಬೋಧೆಯಾಯಿತು. ಅವಳು ಮರಣಕ್ಕೆ ಸಿದ್ಧಳಾಗಿ ತಂದೆಯನ್ನು ಕುರಿತು—“ಅಪ್ಪಾ, ನಾನು ಸಂತೋಷದಿಂದ ಸಾಯಲಿಕ್ಕೆ ಸಿದ್ಧಳಾಗಿದ್ದೇನೆ. ನನ್ನ ಅವಿಚಾರದೋಷದಿಂದ ನೀವೂ, ಈ ರಾಜ್ಯದ ಪ್ರಜೆಗಳೂ ಘೋರವಿಪತ್ತಿಗೊಳಗಾಗಬೇಕಾಯಿತು. ಈಗ ನಾನು ಸಾಯುವುದರಿಂದ ನೀವು ವಿಪನ್ಮುಕ್ತರಾಗುವಿರಿ. ತಮ್ಮಸಲುವಾಗಿಯೂ, ಸ್ವಜನಾಂಗದ ಸಲುವಾಗಿಯೂ ಆತ್ಮಯಜ್ಞಮಾಡುವ ಪ್ರಸಂಗ ಬಂದುದನ್ನು ನೋಡಿ, ನನಗೆ ಅತೀವ ಆನಂದವಾಗುತ್ತದೆ. ನಿಮ್ಮಿಂದಲೇ ನನ್ನ ಈ ದೇಹವು ಹುಟ್ಟಿತು. ಈಗ ಅದು ನಿಮ್ಮಿಂದಲೇ ನಾಶವಾಗುತ್ತದೆ. ಇದಕ್ಕಿಂತಲೂ ಆನಂದದ ಸಂಗತಿ ಬೇರೊಂದಿಲ್ಲ. ನಿಮ್ಮ ಖಡ್ಗವನ್ನು ಒರೆಯಿಂದ ಹಿರಿಯಿರಿ. ಅದು ನನ್ನ ಈ ವಕ್ಷದಲ್ಲಿ ನಟ್ಟು ನನ್ನ ಹೃದಯದರಕ್ತದಿಂದ

ತನ್ನ ಪಾದಗಳು ತೊಯ್ಯಲಿ. ಇದರಿಂದ ನಾನು ಧನ್ಯಳಾಗಿಹೋಗುವೆನು; ಸಕಲಯಾತನೆಗಳಿಂದ ಬಿಡುಗಡೆಹೊಂದುವೆನು," ಎಂದು ಹೇಳಿದಳು.

ಪನ್ನಾಮತಿಯ ಕಣ್ಣುಗಳಿಂದ ಅಶ್ರುಧಾರೆ ಸುರಿಯಹತ್ತಿತು. ಅದು ಆವಳ ಕಪೋಲಗಳನ್ನು ತೋಯಿಸಿ ನೆಲದಮೇಲೆ ಬೀಳಹತ್ತಿತು. ಇದನ್ನು ನೋಡಿ, ಮಿರಾನಶಹನು ಸಹಿಸದಾದನು. ಅವನ ನಿರ್ಧಾರವೆತ್ತೋ ಹೋಗಿ ಬಿಟ್ಟಿತು. ಕಣ್ಣೀರುಗಳ ಬಳಿಯಲ್ಲಿ ಅವನಿಂದು ಪರಾಜಿತನಾಗಿಹೋದನು.

ಮಿರಾನಶಹನು ತನ್ನ ಖಡ್ಗವನ್ನು ಆ ಕೋಣೆಯಲ್ಲಿ ಬಿಸಾಡಿ—"ಮಗು, ನಾನು ನಿನ್ನನ್ನು ಕೊಲ್ಲಬೇಕೆಂದು ನಿರ್ಧಾರಮಾಡಿಕೊಂಡು ಬಂದಿದ್ದೆ, ಆದರೆ ಈ ಕೆಲಸ ಮಾಡಲಿಕ್ಕೆ ಸಮರ್ಥನಾಗಲಿಲ್ಲ. ನಾನು ನಟ್ಟ ಗಿಡವನ್ನು ನಾನೇ ನಾಶಮಾಡುವದು ಅಸಾಧ್ಯವಾಯಿತು! ಸ್ನೇಹದ ಪ್ರಬಲ ಪ್ರವಾಹದಲ್ಲಿ ಕರ್ತವ್ಯವೆತ್ತೋ ತೇಲಿಹೋಯಿತು. ನಿನ್ನ ಈ ಅಶ್ರುಜಲದ ಶಕ್ತಿಎಷ್ಟು ಪ್ರಬಲ! ನಾನಿಂದು ಇದರ ಬಳಿ ಸೋತುಹೋದೆ; ನನ್ನ ಕರ್ತವ್ಯಕ್ಕೆ ಜಲಾಂಜಲಿ ಕೊಟ್ಟ ಈ ಅಶ್ರುಜಲದ ಸ್ವಾಧೀನತೆಯನ್ನೊಪ್ಪಿ ಕೊಂಡೆ. ನಾನಿನ್ನು ಇಲ್ಲಿ ನಿಲ್ಲಲಾರೆ. ಮಗು, ಇನ್ನು ನಿನಗೆ ನನ್ನ ದರ್ಶನ ವಾಗುವದೋ ಇಲ್ಲವೋ ಎಂಬುದನ್ನು ಹೇಳಲಾರೆ. ನನಗಾದರೋ ಇದು ನಿನ್ನ ಕಡೆಯ ದರ್ಶನವೆಂದು ಬೋಧೆಯಾಗುತ್ತಿದೆ- ಅದಕ್ಕಾಗಿ ನಾನು ನಿನಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇವನ್ನು ಲಕ್ಷ್ಯದ ಲ್ಲಿರಿಸಿ, ಉತ್ತಮರೀತಿಯಿಂದ ಜಗತ್ತಿನ ವ್ಯವಹಾರವನ್ನು ಸಾಗಿಸು. ಒಂದುವೇಳೆ ನನ್ನ ಈ ರಾಜ್ಯವು ಮೊಗಲರ ಹಸ್ತಗತವಾಗಿ, ನೀನು ಅನಾಥಳಾಗುವಿಯಾದರೆ, ನೀನು ಅಫಜಾಯಿಬಾದಶಹನಾದ ಮಿರಾನ ಶಹನ ಮಗಳೆಂಬುವದನ್ನೆಂದೂ ಮರೆಯಬೇಡ. ನಿನ್ನ ಹಡೆದವಳ ಹೆಸರು ಇಜ್ಜತ-ಉನ್ನೀಸಾ. ನಿನ್ನ ಮರ್ಯಾದೆಗೆ ಯಾವುದಾದರೊಂದು ರೀತಿ ಯಿಂದ ಕಲಂಕಹತ್ತುವ ಪ್ರಸಂಗಬಂದರೆ, ಆ ವೇಳೆಯಲ್ಲಿ ಆತ್ಮಹತ್ಯೆಮಾ ಡಿಕೊಳ್ಳಲು ಹಿಂದೆ ಮುಂದೆ ನೋಡಬೇಡ. ಮುಖ್ಯವಾಗಿ ಮರ್ಯಾದೆ ಕಳ ಕೊಂಡು ಜೀವಿಸಿರುವುದಕ್ಕಿಂತಲೂ, ಮರ್ಯಾದೆಯಿಂದ ಸಾಯುವುದು

ಮೇಲೆಂದು ಯಾವಾಗಲೂ ಭಾವಿಸು. ಹೀಗೆ ಮಾಡಿದರೆ ಮಾತ್ರ ನೀನು ನಮ್ಮಗೌರವವನ್ನು ಕಾಯ್ದುಂತಾಗುವದು” ಎಂದು ಹೇಳಿದನು.

ಇಷ್ಟುಹೇಳಿ ಮಿರಾನಶಹನು ತುಸುಹೊತ್ತಿನವರೆಗೆ ಪನ್ನಾಮತಿಯನ್ನು ದಿಟ್ಟಿಸಿನೋಡಿ, ಉನ್ಮಾದಗ್ರಸ್ತನಂತೆ ಒಮ್ಮಿಂದೊಮ್ಮೆ ಹೊರಟು ಹೋದನು. ಪನ್ನಾಮತಿ ತಂದೆಯನ್ನು ಕರೆಯುವುದಕ್ಕಾಗಿ ಮುಂದರಿದಳು. ಇವಳು ಬಾಗಿಲಬಳಿಯಲ್ಲಿ ಬರುವುದರೊಳಗಾಗಿ, ಮಿರಾನಶಹನು ಬಾಗಿಲನ್ನು ಮುಚ್ಚಿಕೊಂಡು, ಹೊರಟುಹೋಗಿದ್ದನು. ಪನ್ನಾಮತಿಗೆ ಬೇರೆ ಮಾತನ್ನಾಡುವದಕ್ಕೆ ಅವಕಾಶ ದೊರೆಯಲಿಲ್ಲ.

ಪನ್ನಾಮತಿ ಚಂಚಲಹೃದಯಳಾಗಿ, ತನ್ನ ಹಾಸಿಗೆಯ ಮೇಲೆ ಬಿದ್ದು ಅಳತೊಡಗಿದಳು. ತುಸುಹೊತ್ತಿನ ಮೇಲೆ ಅವಳು—“ಅಯ್ಯೋ! ಅಪ್ಪಾ! ನಾನು ಎಂಥ ಘೋರಕೆಲಸವನ್ನು ಮಾಡಿದೆ! ಅಪ್ಪಾ! ನನ್ನನ್ನು ಕ್ಷಮಿಸಿ. ನನ್ನದೆಸೆಯಿಂದ ನೀವು ಎಲ್ಲವನ್ನು ಕಳೆದುಕೊಳ್ಳುವ ಪ್ರಸಂಗ ಬಂದಿದೆ. ಆದರೂ ಬಾಲಕಿಯಾದ ನನ್ನನ್ನು ತಿರಸ್ಕರಿಸದೆ, ಮೊದಲಿನಂತೆ ಸ್ನೇಹದಿಂದ ನೋಡಿರಿ. ನಿಮ್ಮಹೊರತು ಈ ಜಗತ್ತಿನಲ್ಲಿ ನನಗೆ ಬೇರೆ ಯಾರು ಇದ್ದಾರೆ?”

## ಹದಿನೈದನೆಯ ಪರಿಚ್ಛೇದ.

### ದುರ್ಗಾಧಿಪತಿಯ ಆತ್ಮಹತ್ಯೆ.

ಮರುದಿವಸ ಮುಂಜಾವಿನಲ್ಲಿ ಸುಮಾರು ಎರಡುತಾಸು ಹೊತ್ತೇರಿದ್ದರೂ, ಮಿರಾನಶಹನು ತನ್ನ ಮಲಗುವ ಮನೆಯಿಂದ ಹೊರಗೆ ಬರಲಿಲ್ಲ. ಮಿರಾನಶಹನು ಇಷ್ಟು ಹೊತ್ತಿನವರೆಗೆ ಎಂದೂ ಮಲಗಿದವನಲ್ಲ. ದ್ವಾರಪಾಲಕನಾದ ಹಿಮ್ಮತಖಾನನಿಗೆ ಸಂದೇಹ ಉಂಟಾಯಿತು. ಅವನು ಮಿರಾನಶಹನನ್ನು ಎಬ್ಬಿಸುವದಕ್ಕಾಗಿ ಒಳಹೊಕ್ಕು ನೋಡಿದನು. ಮಿರಾನಶಹನ ಅಸ್ತವ್ಯಸ್ತವಾದ ದೇಹವು ಹಾಸುಗೆಯ

ಮೇಲೆ ನಿಶ್ಚಲವಾಗಿ ಬಿದ್ದಿತ್ತು. ಹಿಮ್ಮತಖಾನನು ಭೀತನೂ ವಿಸ್ಮಿತನೂ ಆಗಿ, ಸಮಿಾಪಕ್ಕೆ ಹೋಗಿ ನೋಡಿದನು. ಮಿರಾನಶಹನ ದೇಹವು ನಿಸ್ತೇಜವೂ, ಆನೆಕಲ್ಲಿನಂತೆ ತಣ್ಣಗೂ ಇರುವುದಾಗಿ ಕಂಡು ಬಂದಿತು. ಯಾಕಂವರೆ ಮಿರಾನಶಹನ ಪ್ರಾಣವು ದೇಹದಿಂದ ಹೊರಬಿದ್ದು ಬಹಳ ಹೊತ್ತಾಗಿದ್ದಿತು.

ಮಿರಾನಶಹನ ಕೈಯ ಬಳಿಯಲ್ಲಿ, ಹಾಸುಗೆಯ ಬಲಪಾರ್ಶ್ವದಲ್ಲಿ ಒಂದು ವಜ್ರದುಂಗುರ ಬಿದ್ದಿತ್ತು. ಇದನ್ನು ನೋಡಿ, ಹಿಮ್ಮತನು ತನ್ನೊಡೆಯನು ವಿಷತಿಂದು ಆತ್ಮಹತ್ಯೆ ಮಾಡಿಕೊಂಡಿರುವನೆಂಬುದನ್ನು ಗೊತ್ತುಹಿಡಿದನು.

ಹಿಮ್ಮತಖಾನನು ಊರ್ಧ್ವಶ್ವಾಸನಾಗಿ ಓಡುತ್ತ ಬಂದು, ಅಳುತ್ತಳುತ್ತ—"ಅಮ್ಮಾ! ಸರ್ವಸ್ವವೂ ಘಾತವಾಯಿತು! ನಮ್ಮ ಬಾದಶಹರೂ, ನಿಮ್ಮ ಸ್ನೇಹಮಯರಾದ ತಂದೆಗಳೂ ಆದ ಮಿರಾನಶಹರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ!" ಎಂದು ಪನ್ನಾಮತಿಗೆ ಹೇಳಿದನು.

ಈ ಸುದ್ದಿಯನ್ನು ಕೇಳಿ, ಪನ್ನಾಮತಿಗೆ ಬಹಳ ದುಃಖವಾಯಿತು. ರಾತ್ರಿ ಮಿರಾನಶಹನು ಹೇಳಿದ ಒಂದೊಂದು ಮಾತುಗಳೂ ಅವಳ ಸ್ಮರಣೆಗೆ ಬರತೊಡಗಿದವು. ಮೊಗಲರೊಡನೆ ನಡೆವ ಯುದ್ಧದಲ್ಲಿ ಜಯವು ದೊರೆಯುವ ಸಂಭವವಿದ್ದಿಲ್ಲ; ಹೀಗಾಗುವದರಿಂದ ಮಿರಾನಶಹನ ಗೌರವಕ್ಕೆ ಕಲಂಕ ಹತ್ತುತಲಿತ್ತು: ತನ್ನ ಪ್ರಜೆಗಳು ಮೊಗಲರ ಅತ್ಯಾಚಾರಕ್ಕೊಳಗಾಗಿ ದುಃಖಭೋಗಿಗಳಾಗಬೇಕಾಗುತ್ತಿತ್ತು; ಇದನ್ನು ಮಿರಾನಶಹನು ನೋಡಲಾರದವನಾಗಿದ್ದನು. ಮೇಲಾಗಿ ಮೊಗಲರು ಗೆದ್ದರೆಂದರೆ, ರಾಜಪುತ್ರನಿಗೆ ತನ್ನ ಮಗಳನ್ನು ಸಮರ್ಪಿಸುವ ಪ್ರಸಂಗ ಬರುತ್ತಿದ್ದಿತು. ಈ ಚಿಂತೆ ಮಿರಾನಶಹನನ್ನು ಸದಾ ಬಾಧಿಸುತಲಿತ್ತು. ಈ ಎಲ್ಲ ಕಾರಣಗಳ ಮೂಲಕ ತನ್ನ ತಂದೆಯು ಆತ್ಮಹತ್ಯೆ ಮಾಡಿಕೊಂಡಿರುವನೆಂದು ಪನ್ನಾಮತಿಗೆ ವ್ಯಕ್ತವಾಯಿತು. ಇದರಿಂದವಳು ತನ್ನ ತಂದೆಯ ಮರಣಕ್ಕೆ ತಾನೇ ಕಾರಣೀಭೂತಳಾಗಿರುವೆನೆಂಬದನ್ನು ಮನಗಂಡಳು. ಇದು ಅವಳಿಗೆ ಬಹಳ ಕೆಡಕೆನಿಸಿತು. ಆದರೆ ಇದು ದುಃಖಿಸುತ್ತ ಕುಳಿತು

ಕೊಳ್ಳುವ ಸಮಯವಲ್ಲ. ಸ್ವದೇಶದ ಮತ್ತು ಸ್ವಜನಾಂಗದ ಕಲ್ಯಾಣಕ್ಕಾಗಿ ಅವಳು ಅನೇಕ ಕೆಲಸ ಮಾಡುವುದು ಆವಶ್ಯಕವಾಗಿತ್ತು. ಅದಕ್ಕಾಗಿ ಅವಳು ತನ್ನ ಹೃದಯವನ್ನು ಕಲ್ಲುಮಾಡಿಕೊಳ್ಳಲು ಯತ್ನಿಸಿದಳು. ಮನಸ್ಸಿಗೆ ಎಷ್ಟೋ ಸಮಾಧಾನವನ್ನು ಹೇಳಿಕೊಂಡಳು. ಆದರೂ ಅವಳ ಹೃದಯದ ಚಾಂಚಲ್ಯವೂ, ಕಳವಳವೂ ಕಡಿಮೆಯಾಗಲಿಲ್ಲ. ಪ್ರಬಲವಾದ ಬಿರುಗಾಳಿ ಎದ್ದು, ಅವಳ ಹೃದಯಕ್ಕೆ ಮರ್ಮಯಾತನೆಯನ್ನುಂಟುಮಾಡತೊಡಗಿತು. ಈ ಸ್ಥಿತಿಯಲ್ಲವಳು ತುಸುಹೊತ್ತು ವ್ಯಸನಾಕ್ರಾಂತಳಾಗಿ ಕುಳಿತು, ಕ್ರಮವಾಗಿ ಧೈರ್ಯ ತಂದುಕೊಳ್ಳತೊಡಗಿದಳು.

ಸ್ವಲ್ಪಹೊತ್ತಿನ ಮೇಲೆ ಪನ್ನಾಮತಿ ಶಾಂತಳಾಗಿ ಹಿಮ್ಮತಖಾನನನ್ನು ಕುರಿತು—"ಈಗ ನಾನು ಘೋರವಾದ ಸಂಕಟದಲ್ಲಿ ಬಿದ್ದಿದ್ದೇನೆ. ಈ ಸಮಯದಲ್ಲಿ ನೀನು ನನಗೆ ಚೆನ್ನಾಗಿ ಸಹಾಯ ಮಾಡಿದರೆ ನಾನು ಈ ವಿಪತ್ತಿನಿಂದ ಪಾರಾಗುವೆನು. ಈಗ ನೀನು ಹೋಗಿ, ಸರದಾರರನ್ನು ಗೋಪ್ಯವಾಗಿ ಇಲ್ಲಿಗೆ ಕರೆದುಕೊಂಡು ಬಾ. ಪಟ್ಟಣದಲ್ಲಿ ಈ ಸುದ್ದಿ ಯಾರಿಗೂ ತಿಳಿಯದಂತೆ ಎಚ್ಚರಿಕೆಯಿಂದಿರು." ಎಂದು ಹೇಳಿದಳು.

ಹಿಮ್ಮತಖಾನನು ಸರದಾರರ ಬಳಿಗೆ ಹೋಗಿ, ನಡೆದ ಸಂಗತಿಯನ್ನು ತಿಳುಹಿಸಿ, ಪನ್ನಾಮತಿಯ ಆಜ್ಞೆಯನ್ನು ನಿವೇದಿಸಿದನು. ಸರದಾರರು . ಪನ್ನಾಮತಿಯ ಇಚ್ಛೆಯಂತೆ ಗುಪ್ತಮಾರ್ಗದಿಂದ ಅರಮನೆಗೆ ಬಂದು ನಡೆದ ಸಂಗತಿಯನ್ನು ಪ್ರತ್ಯಕ್ಷವಾಗಿ ನೋಡಿ, ಬಹು ದುಃಖಿತರಾದರು.

ಪನ್ನಾಮತಿಯು ಅಳುತ್ತ ಕುಳಿತುಕೊಂಡಿದ್ದಳು. ಅವಳ ಮುಖವು ಬಾಡಿತ್ತು. ಇದನ್ನು ನೋಡಿ, ಅನೇಕ ಸರದಾರರ ಕಣ್ಣುಗಳಲ್ಲಿ ನೀರು ಬಂತು. ಎಲ್ಲರೂ ಅವಳನ್ನು ಸಮಾಧಾನಪಡಿಸುವದಕ್ಕಾಗಿ ಯತ್ನಿಸತೊಡಗಿದರು.

ಪನ್ನಾಮತಿಯು ಕಣ್ಣುಗಳನ್ನೊರಸಿಕೊಂಡು, ಸರದಾರರ ಬಳಿ ಬಂದು ನಿಂತಳು. ಈ ವೇಳೆಯಲ್ಲವಳ ಮುಖದಲ್ಲಿ ನಿರ್ಧಾರತೆಯ ಲಕ್ಷಣವು ಒಡೆದು ಕಾಣುತ್ತಿತ್ತು. ಸರದಾರ ರಸೂಲಖಾನನು ಪನ್ನಾಮತಿ

ಯನ್ನು ನೋಡಿ, ಸ್ನೇಹಪೂರ್ಣಸ್ವರದಿಂದ—“ಅಮ್ಮಾ, ನಮ್ಮ ಬಾದಶಹರಿಗೆ ಒಬ್ಬ ಮಗನಿದ್ದದ್ದಾಗಿದ್ದರೆ, ಅವನು ಈಗ ಈ ರಾಜ್ಯದ ಅಧಿಪತಿಯಾಗುತ್ತಿದ್ದನು; ಆದರೆ ನಮ್ಮ ಬಾದಶಹರಿಗೆ ಗಂಡು ಮಕ್ಕಳಿಲ್ಲ. ಈಗ ನಾವು ನಿನ್ನನ್ನೇ ಈ ರಾಜ್ಯದ ಅಧಿಕಾರಿಣಿಯನ್ನಾಗಿ ತಿಳಿಯುತ್ತೇವೆ: ಮತ್ತು ಬಾದಶಹರ ಮಗನಿಗೆ ತೋರಿಸಬಹುದಾಗಿದ್ದ ಮರ್ಯಾದೆಯನ್ನು ನಿನಗೆ ತೋರಿಸುವೆವು. ನೀನು ಈ ವಿಷಯವಾಗಿ ಯಾವ ಚಿಂತೆಯನ್ನು ಮಾಡಬೇಡ. ಮನುಷ್ಯನಾಗಿ ಹುಟ್ಟಿದ ಬಳಿಕ ಅವನು ಒಂದಿಲ್ಲೊಂದು ದಿನ ಸಾಯಲೇಬೇಕು. ಸೂತಿಕಾಗೃಹದಲ್ಲಿ ಅವನ ಜೀವನದ ಪ್ರಾರಂಭವಾಗುವದು; ಗೋರಿಯಲ್ಲಿ ಅವನ ಜೀವನದ ಪರಿಸಮಾಪ್ತಿಯಾಗುವದು. ಇದು ಅನಾದಿಕಾಲದಿಂದ ನಡೆದು ಬಂದ ನಿಯಮ. ಇದಕ್ಕಾಗಿ ದುಃಖಿಸಿ ಉಪಯೋಗವಿಲ್ಲ. ಆದರೂ ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ದೇವರು ನಮ್ಮ ಬಲಗೈಯನ್ನು ಕತ್ತರಿಸಿ ಹಾಕಿದುದನ್ನು ನೋಡಿ, ನಮಗೆ ಬಹಳ ವ್ಯಸನವಾಗುತ್ತಿರುವುದು. ಮೊಗಲರು ಹೊಂಚು ಹಾಕಿಕೊಂಡು ಕುಳಿತಿದ್ದಾರೆ. ನಮ್ಮ ಮೇಲೆ ಅತ್ಯಾಚಾರ ನಡೆಸುವದಕ್ಕೆ ಹಾತೊರೆಯುತ್ತಿದ್ದಾರೆ. ಅವರು ಮಿರಾನಶಹರಿರುವವರೆಗೆ ಈ ಸುಯೋಗವನ್ನು ಹೊಂದಿರಲಿಲ್ಲ. ದೇವರು ಮೊಗಲರ ವಿಷಯದಲ್ಲಿ ಪ್ರಸನ್ನನಾಗಿದ್ದಾನೆ. ಅದಕ್ಕಾಗಿಯೇ ಅವನು ಮೊಗಲರಿಗೆ ಅನೇಕ ಅನುಕೂಲತೆಗಳನ್ನು ಒದಗಿಸಿಕೊಡುತ್ತಿದ್ದಾನೆ. ಹಾಗೆಯೇ ನಮಗೆ ತೊಂದರೆಯನ್ನುಂಟುಮಾಡುತ್ತಿದ್ದಾನೆ. ಇಂತಹ ಪ್ರಸಂಗದಲ್ಲಿ ನೀನು ಏನುಮಾಡಬೇಕೆಂದು ಇಚ್ಛಿಸುತ್ತಿರುವೆ? ನಾವೆಲ್ಲಗೂ ನಿನ್ನ ಹೇಳಿಕೆಯಂತೆ ನಡೆದುಕೊಳ್ಳಲು ಸಿದ್ಧರಾಗಿದ್ದೇವೆ,” ಎಂದು ಹೇಳಿದನು.

ಪನ್ನಾಮತಿಯು ವಿಚಾರಕ್ಕೊಳಗಾದಳು. ಅವಳು ಮುಂದೇನು ಮಾಡಬೇಕೆಂಬುದನ್ನು ಗೊತ್ತು ಮಾಡಲು ಸಮರ್ಥಳಾಗಲಿಲ್ಲ. ಅವಳು ಸರದಾರರನ್ನು ಕುರಿತು—“ನೀವೆಲ್ಲರು ನನ್ನ ತಂದೆಯ ಸ್ನೇಹಿತರು, ಆದುದರಿಂದ ನನಗೆ ತಂದೆಯ ಸಮಾನರು. ಈ ಸಮಯದಲ್ಲಿ ನೀವೇ ನನಗೆ ಮಾರ್ಗದರ್ಶಕರು. ನನಗಾದರೋ ಏನೂ ತಿಳಿಯದಾಗಿದೆ. ನೀವು ವಯೋವೃದ್ಧರೂ, ಜ್ಞಾನವೃದ್ಧರೂ ಆಗಿರುವಿರಿ. ಮುಂದೇನುಮಾಡ

ಬೇಕೆಂಬುದನ್ನು ನೀವೇ ನಿರ್ಧರಿಸಿರಿ. ನಾನು ಬುದ್ಧಿಹೀನಳಾದ ಹೆಂಗಸು. ರಾಜಕಾರ್ಯದಲ್ಲಿ ನನಗೆ ಜ್ಞಾನವಿಲ್ಲ. ಆದುದರಿಂದ ನಾನು ಈ ವೇಳೆಯಲ್ಲಿ ನಿಮ್ಮ ಮತದಂತೆ ನಡೆಯುವದು ಅವಶ್ಯಕವು," ಎಂದು ಹೇಳಿದಳು.

"ಅಮ್ಮ, ಇಲ್ಲಿ ಕೂಡಿದ ಸರದಾರರಲ್ಲಿ ಏಕಮತವಿಲ್ಲ. ಕೆಲವರು ಮೊಗಲರೊಡನೆ ನಡೆದ ಯುದ್ಧವನ್ನು ಹಾಗೆಯೇ ಮುಂದರಿಸಬೇಕೆಂದು ಹೇಳುತ್ತಿರುವರು. ಬೇರೆಕೆಲವರು ಮೊಗಲರೊಡನೆ ಒಪ್ಪಂದಮಾಡಿಕೊಳ್ಳುವದು ಯೋಗ್ಯವೆಂದು ಅನ್ನುತ್ತಿರುವರು." ಎಂದು ರಸೂಲಖಾನನು ಹೇಳಿದನು.

"ಸರದಾರರೆ, ನನ್ನ ಮತವು ನಿಮಗೆ ಗ್ರಾಹ್ಯವಾಗಲಿ, ಅಥವಾ ಆಗದಿರಲಿ, ನಾನು ನನಗೆ ತೋಚಿದ ಒಂದೆರಡು ಮಾತುಗಳನ್ನು ಈ ಪ್ರಸಂಗದಲ್ಲಿ ಹೇಳದಿರಲಾರೆ. ಸದ್ಯಃಕಾಲವು ಪಠಾಣರಿಗೆ ಅನುಕೂಲ ವಾದುದಲ್ಲ. ಅದಕ್ಕಾಗಿಯೇ ನಮಗೆ ವಿಪರೀತ ಪ್ರಸಂಗಗಳು ಒದಗುತ್ತಿರುವವು. ದುರ್ಗಾಧಿಪತಿಗಳು ಆತ್ಮಹತ್ಯೆ ಮಾಡಿಕೊಂಡರು. ಅಫಶಾನನು ತಾನೇ ಹೋಗಿ ಮೊಗಲರ ಬಂದಿಯಾದನು. ಇದೆಲ್ಲವನ್ನೂ ನೋಡುತ್ತಿರಲು ಈ ಯುದ್ಧದಲ್ಲಿ ಪಠಾಣರಿಗೆ ಜಯದೊರೆಯುವ ಸಂಭವ ಕಂಡುಬರುವುದಿಲ್ಲ. ಕಾರಣ ಈ ವೇಳೆಯಲ್ಲಿ ಯುದ್ಧವನ್ನು ಮುಂದಕ್ಕೆ ಸಾಗಿಸುವದರಲ್ಲಿ ಅರ್ಥವಿಲ್ಲ. ಇದರಿಂದ ನಮಗೆ ಬಹಳ ಹಾನಿಯಾಗುವದರಲ್ಲಿ ಸಂದೇಹವಿಲ್ಲ. ನಮಗೊದಗಿದ ಈ ಶೋಚನೀಯ ಪರಿಸ್ಥಿತಿಯಲ್ಲಿ ಪ್ರಬಲರಾದ ಶತ್ರುಗಳ ಬಲಪರೀಕ್ಷೆ ಮಾಡಲಿಕ್ಕೆ ತೊಡಗುವದು ಯೋಗ್ಯವಾಗಲಾರದು. ಈಗ ನಾವು ಮೊಗಲರೊಡನೆ ಒಪ್ಪಂದ ಮಾಡಿಕೊಳ್ಳುವದೇ ವಿಹಿತವಾದದ್ದು. ಶಹಾಜಾದನು ಒಪ್ಪಂದಕ್ಕೆ ಸಿದ್ಧನಿದ್ದಾನೆ. ಅವನು ತಾನಾಗಿಯೇ ಒಪ್ಪಂದ ಮಾಡಿಕೊಳ್ಳುವದಕ್ಕೋಸ್ಕರ ದುರ್ಗಾಧಿಪತಿಗಳ ಬಳಿಗೆ ಬಂದ ಸಂಗತಿ ನಿಮಗೆ ಗೊತ್ತುಂಟು. ಈ ಪ್ರಸಂಗದಲ್ಲಿ ನಾವು ಒಪ್ಪಂದ ಮಾಡಿಕೊಳ್ಳುವೆವೆಂದು ಕೇಳಿಕೊಂಡರೆ ಅವನು ಸಮ್ಮತಿಸದಿರಲಾರನು. ನಾನು ತಮ್ಮೆಲ್ಲರ ಪ್ರತಿನಿಧಿಯಾಗಿ ಶಹಾಜಾದನ ಬಳಿಗೆ ಹೋಗುವೆನು. ಪಠಾಣರ ಗೌರವಕ್ಕೆ ಕಲಂಕಹತ್ತದ

ಕರಾರುಗಳಿಂದ ಒಪ್ಪಂದ ಮಾಡಿಕೊಳ್ಳುವದಕ್ಕೆ ಸೂಚಿಸುವೆನು; ಮತ್ತು ಶಹಾಜಾದನನ್ನು ಒಡಂಬಡಿಸಿ, ಅನುಕೂಲವಾದ ಕರಾರುಗಳಿಂದ ಒಪ್ಪಂದ ಮಾಡಿಕೊಂಡು ಬರುವೆನು. ನೀವು ಈ ವಿಷಯದಲ್ಲಿ ನಿಶ್ಚಿಂತರಾಗಿರಿ." ಎಂದು ಪನ್ನಾಮತಿ ಹೇಳಿದಳು.

ಸರದಾರರಲ್ಲಿಯು ಬಹು ಜನರು ಒಪ್ಪಂದವನ್ನಪೇಕ್ಷಿಸುವವರಾಗಿದ್ದರು. ಒಬ್ಬಿಬ್ಬರು ಯುದ್ಧಮಾಡುವ ಮನಸ್ಸುಳ್ಳವರಾಗಿದ್ದರು. ಇವರೂ ಸಹ ಪನ್ನಾಮತಿಯ ಮಾತುಗಳನ್ನು ಕೇಳಿ, ಒಪ್ಪಂದಮಾಡಿಕೊಳ್ಳುವದೇ ಉತ್ತಮವೆಂದು ಭಾವಿಸಿದರು. ಅದರಿಂದ ಎಲ್ಲರೂ ಪನ್ನಾಮತಿಯ ಮಾತಿಗೆ ಒಪ್ಪಿಕೊಂಡರು.

"ಅಮ್ಮಾ! ನಿನ್ನ ಮಾತಿನಂತೆ ನಡೆಯಲು ನಾವೆಲ್ಲರೂ ಸಿದ್ಧರಾಗಿದ್ದೇವೆ. ಆದರೆ ಒಪ್ಪಂದಕ್ಕಾಗಿ ನೀನೊಬ್ಬಳೇ ಮೊಗಲರ ಶಿಬಿರಕ್ಕೆ ಹೋಗುವುದು ಸರಿಯಾಗಿ ತೋರುವದಿಲ್ಲ. ನೀನು ನಮ್ಮೊಳಗಿನ ಕೆಲವು ಜನರನ್ನು ಕರೆದುಕೊಂಡು ಹೋಗುವುದು ಒಳಿತಾದದ್ದು. ಒಂದು ವೇಳೆ ಇದು ನಿನಗೆ ಇಷ್ಟವಾಗಿರದಿದ್ದರೆ, ನಿನ್ನ ರಕ್ಷಣೆಗಾಗಿ ಕೆಲವು ಸೈನಿಕರನ್ನಾದರೂ ಕರೆದುಕೊಂಡು ಹೋಗು" ಎಂದು ರಸೂಲಖಾನನು ಹೇಳಿದನು.

"ಸರದಾರರೆ, ಒಪ್ಪಂದದ ಕರಾರುಗಳನ್ನು ನಿಷ್ಕರ್ಷಿಸುವ ಸಮಯದಲ್ಲಿ ನಿಮ್ಮಲ್ಲಿಯ ಕೆಲವರು ನನ್ನ ಬಳಿಯಲ್ಲಿರುವದು ಇಷ್ಟವಾಗಿದ್ದರೂ, ಈ ಪ್ರಸಂಗದಲ್ಲಿ ನೀವು ಬರದಿರುವದೇ ಉತ್ತಮವೆಂದು ನನಗೆ ತೋರುತ್ತದೆ. ನಾನೊಬ್ಬಳೇ ಹೋಗುವೆನು. ನಾನು ಶಹಾಜಾದನನ್ನು ಸಂಪೂರ್ಣವಾಗಿ ಬಲ್ಲೆ. ಅವನು ನನ್ನ ವಿಷಯದಲ್ಲಿ ಅಯೋಗ್ಯಾಚರಣೆ ಆಚರಿಸುವ ಸಂಭವವಿಲ್ಲ. ಒಂದುವೇಳೆ ಮೊಗಲ ಸೈನಿಕರು ನನ್ನ ಮೇಲೆ ಅತ್ಯಾಚಾರ ನಡೆಸಲು ಮನಸ್ಸುಮಾಡಿದರೆ, ರಕ್ಷಣೆಮಾಡಿಕೊಳ್ಳಲು ನಾನು ಸಮರ್ಥಳಿದ್ದೇನೆ. ನಾನು ದರ್ಪಿತರೂ ಚಿರಸ್ವತಂತ್ರರೂ ಆದ ಮಿರಾನಶಹರವರ ಮಗಳೆಂಬದನ್ನು ನೀವು ಮರೆಯಬೇಡಿ. ನನ್ನ ವಂಶ ಗೌರವಕ್ಕೆ ಕಲಂಕ ಹತ್ತುವಂತೆ, ನಾನೆಂದೂ ವರ್ತಿಸಲಾರೆ. ನನ್ನ ತಂದೆಯವರ ಮತ್ತು ನಿಮ್ಮೆಲ್ಲರ ಮರ್ಯಾದೆಗೆ ಹಾನಿಬಾರದ ಕರಾರುಗಳಿಂದ

ಒಪ್ಪಂದಮಾಡಿಕೊಂಡುಬರುವೆನು. ನೀವು ಯಾವತರದ ಸಂದೇಹ ವನ್ನೂ ತೆಗೆದುಕೊಳ್ಳಬೇಡಿ." ಎಂದು ಪನ್ನಾಮತಿಯು ಹೇಳಿದಳು.

ಸರದಾರರು ಪನ್ನಾಮತಿಯ ಅಪ್ಪಣೆಪಡೆದು ಹೊರಟುಹೋದರು. ಹಿಮ್ಮತಖಾನನು ಪನ್ನಾಮತಿಯ ಇಂಗಿತದಂತೆ, ಉಳಿದ ಕಾವಲುಗಾರ ರನ್ನು ಹೊರಗೆಕಳುಹಿಸಿ, ಬಾಗಿಲನ್ನಿಕ್ಕಿದನು. ಕೋಣೆಯಲ್ಲಿ ಪನ್ನಾಮತಿ ಯೂ ಹಿಮ್ಮತಖಾನನೂ ಇಬ್ಬರೇ ಉಳಿದರು. ತುಸುಹೊತ್ತಿನವರೆಗೆ ಕೋಣೆಯು ನಿಶ್ಶಬ್ದವಾಗಿತ್ತು. ತರುವಾಯ ಪನ್ನಾಮತಿಯು ಹಿಮ್ಮತಖಾ ನನನ್ನು ಕುರಿತು—"ನೀನು ಬಹುದಿವಸದ ಆಪ್ತಸ್ನೇಹಿತನು. ನೀನು ಪ್ರತಿಯೊಂದು ಮಹತ್ವದಕೆಲಸದಲ್ಲಿ ನನಗೆ ಸಹಾಯಮಾಡಿರುವೆ. ಮುಂದೆ ಯೂ ಮಾಡುವೆಯೆಂಬ ಭರವಸೆ ನನಗುಂಟು. ಅದರಿಂದಲೇ ಬಹು ರಹಸ್ಯವಾದ ಸಂಗತಿಗಳನ್ನು ಕೂಡ ನಿನ್ನ ಮುಂದೆ ಹೇಳುತ್ತಬಂದಿದ್ದೇನೆ. ಸದ್ಯಕ್ಕೆ ನಾನು ಘೋರವಿಪತ್ತಿನಲ್ಲಿ ಬಿದ್ದಿದ್ದೇನೆ. ಈ ಸಂಕಟದಿಂದ ಪಾರಾ ಗಬೇಕಾದರೆ ನನಗೆ ನಿನ್ನ ಸಹಾಯವು ಅವಶ್ಯವಾಗಿಬೇಕು. ಈಗೊದ ಗಿದ ಅನರ್ಥಕ್ಕೆ ನಾನೇ ಕಾರಣಭೂತಳಾಗಿದ್ದೇನೆ. ನನ್ನ ಬುದ್ಧಿದೋಷ ದಿಂದ ತಂದೆ ಆತ್ಮಹತ್ಯೆಮಾಡಿಕೊಳ್ಳಬೇಕಾಯಿತು. ಇನ್ನು ಈ ವಿಷಯ ವಾಗಿ ಚಿಂತಿಸಿ ಫಲವಿಲ್ಲ. ತಂದೆ ಸತ್ತದ್ದರಿಂದ ನಾನು ಈ ರಾಜ್ಯದ ಅಧಿಕಾರಿಣಿಯಾಗಿದ್ದೇನೆ. ಆದುದರಿಂದ ಸದ್ಯಕ್ಕೆ ನಾನು ಪ್ರಜೆಗಳ ಕಲ್ಯಾ ಣಕ್ಕೆ ಅನೇಕ ಕೆಲಸಗಳನ್ನು ಮಾಡಬೇಕಾಗಿದೆ. ನಮ್ಮ ಈ ರಾಜ್ಯದ ರಕ್ಷಣೆಯಾಗಬೇಕು, ಮೊಗಲರಿಂದ ನಮ್ಮ ಸ್ವಾತಂತ್ರ್ಯಹರಣವಾಗಬಾ ರದು, ರಕ್ತಪಾತವಿಲ್ಲದೆ ಸದ್ಯದಯುದ್ಧವು ಮುಗಿಯಬೇಕು. ಈ ಎಲ್ಲ ಸಂಗತಿಗಳ ವ್ಯವಸ್ಥೆಗಾಗಿ ನಾನು ಶಹಾಜಾದನ ದರ್ಶನವನ್ನು ತೆಗೆದು ಕೊಳ್ಳುವದವಶ್ಯವು. ಶಹಾಜಾದನು ಸುಗುಣಿಯೂ, ಸಚ್ಚರಿತ್ರನೂ, ಉದಾ ರನೂ ಆಗಿದ್ದಾನೆ. ಮೇಲಾಗಿ ನಾನು ಬಂಧಮುಕ್ತಮಾಡಿ ಅವನಿಗೆ ದೊಡ್ಡ ಉಪಕಾರಮಾಡಿದ್ದೇನೆ. ಅವನು ನನ್ನ ಮಾತನ್ನು ಅಲ್ಲಗಳೆಯುವ ಸಂಭ ವವಿಲ್ಲ. ನಾನು ಹೋದೆನೆಂದರೆ ಪಠಾಣರ ಗೌರವಕ್ಕೆ ಕುಂದುಬಾರದಂತೆ ಒಪ್ಪಂದಮಾಡಿಕೊಂಡು ಬರುವದರಲ್ಲಿ ಸಂದೇಹವಿಲ್ಲ. ಅದಕ್ಕಾಗಿಯೇ

ಸರದಾರರ ಮುಂದೆ ಹಾಗೆ ಹೇಳಿದೆನು. ಇದಕ್ಕೆ ನೀನೇನು ಅನ್ನುವೆ?" ಎಂದು ಕೇಳಿದಳು.

"ಅಮ್ಮ, ನೀವು ಹೇಳುತ್ತಿರುವದು ಸತ್ಯವಾದದ್ದು. ಶಹಾಜಾದರು ನಿಮ್ಮ ಹೇಳಿಕೆಗೆ ಒಡಂಬಡುವದರಲ್ಲಿ ಸಂದೇಹವಿಲ್ಲ. ಆದರೂ ನೀವೊಬ್ಬರೇ ಮೊಗಲರ ಶಿಬಿರಕ್ಕೆ ಹೋಗುವದು ಯೋಗ್ಯವಲ್ಲ. ಯಾರನ್ನಾದರೂ ಸಂಗಡಕರೆದುಕೊಂಡು ಹೋದರೆ ನೆಟ್ಟಗಾಗುವದು," ಎಂದು ಹಿಮ್ಮತನಂದನು.

"ಹಿಮ್ಮತ, ನನಗೆ ಯಾರ ಅವಶ್ಯಕತೆಯೂ ಇಲ್ಲ. ಆದರೂ ನೀನು ನನ್ನೊಡನೆ ಬರಲಿಕ್ಕೆ ಅಡ್ಡಿ ಇಲ್ಲ," ಎಂದು ಪನ್ನಾಮತಿಯು ಹೇಳಿದಳು.

ಹಿಮ್ಮತನಿಗೆ ಸಮಾಧಾನವಾಯಿತು. ಅವನು—"ಅಮ್ಮಾ, ನೀವು ಶಹಾಜಾದರ ದರ್ಶನಕ್ಕೆ ಎಂದು ಹೋಗುವಿರಿ?" ಎಂದು ಕೇಳಿದನು.

"ಇಂದು ರಾತ್ರಿಯಲ್ಲಿ ತಂದೆಗಳ ದೇಹವನ್ನು ಸಮಾಧಿಮಾಡೋಣ. ಈ ಶೋಕದ ಮೂರುದಿವಸಗಳು ಕಳೆದು ಹೋಗಲಿ. ತರುವಾಯ ಸುಸಮಯ ನೋಡಿ ಶಹಾಜಾದನ ಬಳಿಗೆ ಹೋಗೋಣ. ಒಪ್ಪಂದದ ಬಗ್ಗೆ ನನಗೆ ಯಾವ ಚಿಂತೆಯೂ ಇಲ್ಲ; ಯಾಕಂದರೆ ಈ ಕೆಲಸವನ್ನು ಸಾಹಜಿಕವಾಗಿ ನೆರವೇರಿಸುವೆನೆಂಬ ವಿಶ್ವಾಸವುಂಟು. ಆದರೆ ತಂದೆ ಸತ್ತ ಸುದ್ದಿಯು ಪ್ರಜೆಗಳಿಗೆ ತಿಳಿಯದಂತೆ ಮಾಡುವದು ಕಠಿಣಕೆಲಸವಾಗಿದೆ. ಆದರೂ ಇದನ್ನು ಮಾಡಲೇಬೇಕು. ಇಲ್ಲವಾದರೆ ರಾಜ್ಯದಲ್ಲಿ ಅನರ್ಥವಾಗುವ ಸಂಭವವುಂಟು. ನಾನು ಈ ವಿಷಯವಾಗಿ ಸರದಾರರಿಗೆ ಕಟ್ಟಪ್ಪಣೆ ಮಾಡಿದ್ದೇನೆ. ಅವರು ಈ ಸುದ್ದಿಯನ್ನು ಪ್ರಕಾಶಪಡಿಸುವ ಸಂಭವವಿಲ್ಲ. ನೀನು ಕಾವಲುಗಾರರಿಗೆ ಈ ಸುದ್ದಿಯನ್ನು ಬಹಿರಂಗಪಡಿಸಲಾಗದೆಂದು ಹೇಳು. ಒಂದುವೇಳೆ ಬಹಿರಂಗಪಡಿಸಿದ್ದಾದರೆ ಮರಣದಂಡನೆ ಹೊಂದುವಿರೆಂಬ ಹೆದರಿಕೆ ಇಡು. ಈ ಹೊತ್ತು ಮಧ್ಯರಾತ್ರಿಯ ಸುಮಾರಕ್ಕೆ ನೀನು ಸರದಾರರನ್ನು ಕರೆದುಕೊಂಡು ಬಾ. ಅವರೂ, ನಾನೂ, ನೀನೂ ಕೂಡಿ, ತಂದೆಗಳ ದೇಹವನ್ನು ಸಮಾಧಿಯಲ್ಲಿರಿಸೋಣ. ತರುವಾಯ ನೀನು ಪಟ್ಟಣದಲ್ಲಿ ಬಾದಶಹರ ಪ್ರಕೃತಿಯು ನೆಟ್ಟಗಿಲ್ಲವೆಂಬ

ಸುದ್ದಿಯನ್ನು ಹರವಿಬಿಡು. ಅಂದರೆ ನನ್ನ ಕೆಲಸವಾದಂತಾಯಿತು." ಎಂದು ಪನ್ನಾಮುತಿ ಹೇಳಿದಳು.

ಹಿಮ್ಮತಖಾನನು "ಅಪ್ಪಣೆಯಂತೆ ವರ್ತಿಸುವೆನು" ಎಂದು ಹೇಳಿ ಹೊರಟುಹೋದನು. ಪನ್ನಾಮುತಿಯು ಅವನನ್ನು ಹೊರಗೆ ಕಳುಹಿಸಿ, ಬಾಗಿಲನ್ನಿಕ್ಕಿಕೊಂಡು ಒಳಗೆ ಬಂದಳು. ತರುವಾಯ ಅವಳು ತಂದೆಯ ಶವವನ್ನು ಆಲಿಂಗನಮಾಡಿಕೊಂಡು, ಬಹುಕಾಲದವರೆಗೆ ಅತ್ತಳು. ಅವಳ ಕಣ್ಣೀರುಗಳಿಂದ ಶವದಮೇಲಿರುವ ಅರಿವೆಗಳು ತೊಯ್ದುಹೋದವು. ಆದರೂ ನಿಶ್ಚಲವಾದ ಆ ಶವಕ್ಕೆ ಎಚ್ಚರವಾಗಲಿಲ್ಲ.

ಬಹುಕಾಲ ಅತ್ತಬಳಿಕ ಪನ್ನಾಮುತಿಯ ದುಃಖವು ತುಸುಕಡಿಮೆಯಾದಂತಾಯಿತು. ತರುವಾಯ ಗತಕಾಲದ ಒಂದೊಂದೇ ಸಂಗತಿಗಳು ಅವಳ ಸ್ಮರಣೆಗೆ ಬರತೊಡಗಿದವು. ಅವುಗಳಿಂದವಳು ಅತ್ಯಂತ ವ್ಯಾಕುಲಳಾದಳು.

ಪನ್ನಾಮುತಿಯು ಭಾವಿಸತೊಡಗಿದಳು—"ನಾನು ಎಂಥ ದುರ್ದೈವಿ! ಇಂದು ಈ ಜಗತ್ತಿನಲ್ಲಿ ನನ್ನವರೆನ್ನುವವರು ಯಾರೂ ಉಳಿಯಲಿಲ್ಲ. ತಂದೆ ಇಲ್ಲ. ತಾಯಿ ಇಲ್ಲ. ಸಹೋದರ-ಸಹೋದರಿಯರಂತೂ ಮೊದಲೇ ಇಲ್ಲ. ಈ ವಿಶಾಲವಾದ ಜಗತ್ತಿನಲ್ಲಿ ನಾನು ಒಬ್ಬಳೇ ಒಬ್ಬಳು! ಒಂದು ವೇಳೆ ಮೊಗಲರು ನನ್ನ ಪ್ರಸ್ತಾಪಕ್ಕೊಪ್ಪದಿದ್ದರೆ? ಅವರು ನನ್ನ ರಾಜ್ಯವನ್ನು ಕಸಿದುಕೊಂಡು ಬಿಟ್ಟರೆ? ನನಗೆ ಈ ಜಗತ್ತಿನಲ್ಲಿ ನಿಲ್ಲಲಿಕ್ಕೆ ಸ್ಥಳವೇ ಇಲ್ಲದಂತಾಗುವದು! ಆಗ ನನಗೆ ಆಶ್ರಯಕೊಡುವರಾರು? ದೇವ, ಈ ಸ್ಥಿತಿಯನ್ನೆಂದೂ ತರಬೇಡ. ಈ ಭಾವನೆಯೇ ನನ್ನನ್ನು ಅತ್ಯಂತ ವ್ಯಾಕುಲಳನ್ನಾಗಿ ಮಾಡಿಬಿಡುತ್ತಿದೆ".

ಪನ್ನಾಮುತಿ ಅನೇಕರೀತಿಯಿಂದ ತನ್ನ ಭವಿತವ್ಯವನ್ನು ವಿಚಾರಿಸಿದಳು. ಆದರಲ್ಲವಳಿಗೆ ತನಗೆ ಸುಖತರವಾದ ಒಂದುಸಂಗತಿಯೂ ಕಂಡುಬರಲಿಲ್ಲ. ವಿಚಾರಮಾಡಿಮಾಡಿ ಕ್ಲಾಂತಳಾದಳು. ಅವಳ ಶಕ್ತಿಕುಂದಿತು. ಅದರಿಂದವಳಿಗೆ ತುಸು ನಿದ್ರೆಬಂದಂತೆ ಬೋಧೆಯಾಯಿತು. ಕೂಡಲೇ

ಅವಳು ತನ್ನ ಉತ್ತರೀಯವನ್ನು ನೆಲದಮೇಲೆಹಾಕಿ, ಅಲ್ಲಿಯೇ ಒರಗಿಕೊಂಡಳು! ನಿದ್ದೆ ಹತ್ತಿದಂತಾಯಿತು.

ನಿದ್ರಾದೇವಿಯೇ, ನಿನ್ನಮಹಿಮೆ ಅಗಾಧವಿರುವದು! ಪುತ್ರವಿಯೋಗದಿಂದ ದುಃಖಿತರಾದ ಮಾತೆಯರಿಗೂ, ಪತಿಹೀನರಾದ ವಿಧವೆಯರಿಗೂ ಕ್ಷಣಕಾಲವವರೆಗಾದರೂ ಶಾಂತಿಯನ್ನು ತಂದುಕೊಡುತ್ತಿರುವೆ. ಅವರ ಯಾವತ್ತೂ ದುಃಖಗಳನ್ನು ಕೆಲವು ತಾಸುಗಳವರೆಗಾದರೂ ಮರೆಯಿಸುವೆ. ಅದಕ್ಕಾಗಿಯೇ ಜನರು ನಿನ್ನನ್ನು ವಿರಾಮದಾಯಿನಿಯೆಂದೂ, ದುಶ್ಚಿಂತನಾಶಿನಿಯೆಂದೂ, ಶಾಂತಿಮಯಿಯೆಂದೂ ಸ್ತುತಿಸುತ್ತಿರುವರು. ಆದರೆ ನೀನಿಂದು ಪನ್ನಾಮತಿಗೆ ಸಂಪೂರ್ಣವಾಗಿ ಪ್ರಸನ್ನಳಾಗಿಲ್ಲ. ಅದರಿಂದವಳು ನಿನ್ನ ಆಶ್ರಯದಲ್ಲಿದ್ದರೂ ಶಾಂತಿಯನ್ನು ಹೊಂದಲಿಲ್ಲ.

ನಿದ್ರೆಯಲ್ಲಿರುವ ಪನ್ನಾಮತಿ ಸ್ವಪ್ನವನ್ನು ನೋಡಿದಳು. ಅದರಲ್ಲವಳು ರಾಣಿಯಾಗಿದ್ದಾಳೆ. ಅವಳು ಉನ್ನತವಾದ ಸಿಂಹಾಸನದಮೇಲೆ ಕುಳಿತಿದ್ದಾಳೆ. ದಾಸದಾಸಿಯರೂ, ಯಾವತ್ತು ಅಧಿಕಾರಿಗಳೂ ಅವಳನ್ನು ಓಲೈಸುತ್ತಿದ್ದಾರೆ. ಉಪಭೋಗ್ಯ ಪದಾರ್ಥಗಳಿಗೆ ಅಭಾವವಿಲ್ಲ. ಆದರೂ ಅವಳ ಮನಸ್ಸಿಗೆ ಸಮಾಧಾನವಿಲ್ಲ. ಅದರಿಂದವಳು ಸಿಂಹಾಸನದಿಂದೆದ್ದು ಬಂದು. ತನ್ನ ಕೋಣೆಯಲ್ಲಿ ಮಲಗಿಕೊಂಡು, ದೊಡ್ಡದನಿಯಿಂದ ಕೆಲಕಾಲದವರೆಗೆ ಅತ್ತಳು. ಅವಳ ಕಣ್ಣೀರಿನಿಂದ ಹಾಸುಗೆಯಲ್ಲವೂ ತೊಯ್ದು ಹೋಯಿತು. ಈ ಸಮಯದಲ್ಲಿ ಅವಳ ತಂದೆ ಮೆಲ್ಲಮೆಲ್ಲನೆ ನಡೆದು ಬಂದು, ಹಾಸುಗೆಯ ಮೇಲ್ಭಾಗದ ಬಳಿಯಲ್ಲಿ ನಿಂತುಕೊಂಡನು. ಆಗ ಅವನಮುಖ ವಿಕಾರವಾಗಿ ಹೋಗಿದೆ. ಈಗದರಲ್ಲಿ ಮೊದಲಿನ ತೇಜವಿಲ್ಲ. ಸೌಂದರ್ಯವಿಲ್ಲ. ಅದು ಸಂಪೂರ್ಣವಾಗಿ ಬಾಡಿಹೋಗಿದೆ. ಆಯತನೇತ್ರಗಳೆರಡೂ ಒಳಸಿಕ್ಕುಹೋಗಿದ್ದವು. ಅವನು ಬಹು ಕಷ್ಟದಿಂದ ಉಸುರಾಡಿಸುತ್ತಿದ್ದನು. ಅವನ ದೃಷ್ಟಿಯಲ್ಲಿ ಕಾತರತೆ ಕಾಣುತ್ತಿತ್ತು. ಅವನಿಗೆ ಚೆನ್ನಾಗಿ ಮಾತಾಡಲಿಕ್ಕೆ ಬರುತ್ತಿದ್ದಿಲ್ಲ. ಮೆಲ್ಲಮೆಲ್ಲನೆ ನಡಗುತ್ತ ಮಾತಾಡತೊಡಗಿದನು.

"ಮಗು, ಈ ಕೋಣೆ, ಈ ಹಾಸುಗೆ, ಈ ಸಿಂಹಾಸನ, ಈ ರಾಜ್ಯ, ಈ ಐಶ್ವರ್ಯ—ಇವೆಲ್ಲವೂ ಒಂದುದಿನ ನನ್ನವಾಗಿದ್ದವು. ಇಂದು ಇವು

ನಿನ್ನವಾಗಿವೆ. ಇದಕ್ಕಾಗಿ ನನಗೆ ದುಃಖವಿಲ್ಲ. ನೀನು ನನ್ನ ಮುದ್ದು ಮಗಳು. ನೀನು ಸಂತೋಷದಿಂದಿರುವುದನ್ನು ನೋಡಿದರೆ ನನಗೆ ಆನಂದವಾಗುತ್ತದೆ. ಆದರೂ ನಾನು ನಿನಗೆ ಒಂದುಸಂಗತಿ ನೆನಪುಮಾಡಿಕೊಡುವೆನು. ನಾನು ದುಃಖಭರದಿಂದ ಆತ್ಮಹತ್ಯಮಾಡಿಕೊಳ್ಳುವುದಕ್ಕೆ ಯಾರು ಕಾರಣೀಭೂತರಾದರೆಂಬದನ್ನು ನೀನು ಬಲ್ಲೆಯಾ? ನಿನ್ನನ್ನು ಶತ್ರುವಿಗೆ ಸಮರ್ಪಿಸಬೇಕಾಗುವದೆಂಬ ಚಿಂತೆಯಿಂದ ನಾನು ಹುಚ್ಚನಾಗಿ ಹೋದೆನು. ಅದರಿಂದ ನಾನು ಆತ್ಮಹತ್ಯೆ ಮಾಡಿಕೊಂಡೆನು. ನೀನು ಮೊಗಲರ ವಿಲಾಸದ ದಾಸಿಯಾಗಿ ರಂಗಮಹಲನ್ನು ಪ್ರವೇಶಿಸುವೆ. ತರುವಾಯ ತುಸುದಿವಸಗಳಲ್ಲಿ ವೈಭವಮತ್ತನಾದ ಶಹಾಜಾದನ ಕ್ರೋಧಕ್ಕೊಳಗಾಗಿ, ದುಃಖಕ್ಕೊಳಗಾಗುವೆ. ಯಾಕಂದರೆ ರಂಗಮಹಲನ್ನು ಪ್ರವೇಶಿಸಿ ಚಿರಕಾಲ ಸುಖವನ್ನನುಭವಿಸಿದವರು ಯಾರೂ ಇಲ್ಲ. ನಿನ್ನ ಈ ಶೋಚನೀಯ ಭವಿಷ್ಯವನ್ನು ಚಿಂತಿಸಿ, ನಾನು ಉನ್ಮತ್ತನಾಗಿ ಹೋದದ್ದರಿಂದಲೇ ಮಹಾ ಪಾತಕವೆಂದೆಣಿಸುವ ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕಾಯಿತು. ಇನ್ನು ಮೇಲಾದರೂ ನೀನು ಬುದ್ಧಿವಂತಳಾಗು. ಮೊಗಲರ ವಿಲಾಸಕ್ಕೆ ಮರುಳಾಗಬೇಡ. ಅವರ ರಂಗಮಹಲನ್ನೆಂದೂ ಪ್ರವೇಶಿಸಬೇಡ. ನನ್ನ ಆತ್ಮಹತ್ಯೆಯ ಸೇಡನ್ನು ತೀರಿಸಿಕೊಳ್ಳು. ಅಂದರೆ ಮಾತ್ರ ನೀನು ನನ್ನಮಗಳಾಗಿ ಹುಟ್ಟಿದ್ದು ಸಾರ್ಥಕವಾಗುವದು. ಇಲ್ಲವಾದರೆ ನಿನ್ನ ಜನ್ಮಕ್ಕೆ ಶತಧಿಕ್ಕಾರವಿರಲಿ!"

ಸಹಸಾ ಪನ್ನಾಮತಿಯು ನಿದ್ರೆಯಿಂದೆಚ್ಚತ್ತಳು. ಅವಳು ಭಯಕಂಪಿತಳಾಗಿ ಸುತ್ತಲೂನೋಡಿದಳು. ಆದರೆ ತಂದೆ ಎಲ್ಲಿಯೂ ಕಾಣಿಸಲಿಲ್ಲ. ಸ್ನೇಹಮಯನಾದ ತಂದೆಯ ಶೀತಲವೂ, ನಿಶ್ಚಲವೂ ಆದ ಶವದೇಹವು ಮಾತ್ರ ಸಮೀಪದಲ್ಲಿರುವ ಹಾಸುಗೆಯಮೇಲೆ ಬಿದ್ದುಕೊಂಡಿತ್ತು.

ಪನ್ನಾಮತಿ ಭಯಕಂಪಿತಳಾಗಿ ಚೀರಿದಳು. ಕೋಣೆಯಲ್ಲಿ ಮತ್ತೆ ಯಾರೂ ಇದ್ದಿಲ್ಲ. ಅದರಿಂದ ಯಾರೂ ಅವಳಬಳಿಗೆ ಬರಲಿಲ್ಲ. ಪುನಃ ಪನ್ನಾಮತಿಯು ಗಟ್ಟಿಯಾಗಿ—"ಹಿಮ್ಮತ, ಹಿಮ್ಮತ," ಎಂದು ಚೀರಿದಳು.

ಚಿರವಿಶ್ವಾಸಿಯಾದ ಸೇವಕನು ಹೊರಗೆ ಬಾಗಿಲಬಳಿಯಲ್ಲಿ ಕುಳಿತುಕೊಂಡಿದ್ದನು. ಅವನು ಗಾಬರಿಯಾಗಿ ಒಳಗೆಬಂದು—"ಅಮ್ಮಾ,

ಏನಾಯಿತು? ನೀವು ಇಷ್ಟೊಂದು ಗಾಬರಿಯಾಗಿರುವುದೇಕೆ? ಶವವನ್ನು ನೋಡಿ ನಿಮಗೆ ಭಯವಾಗುತ್ತಿರುವುದೇ?" ಎಂದು ಕೇಳಿದನು.

"ಹಿಮ್ಮತ, ನಾನು ಶವವನ್ನು ನೋಡಿ ಹೆದರಲಿಲ್ಲ. ನನಗೊಂದು ಕನಸು ಬಿದ್ದಿತು. ಕನಸಿನಲ್ಲಿ ತಂದೆಗಳು ಕಾಣಿಸಿಕೊಂಡು, ಆತ್ಮಹತ್ಯೆಯ ಸೇಡನ್ನು ತೀರಿಸಿಕೊಳ್ಳಲಿಲ್ಲವೆಂದು, ನನ್ನನ್ನು ಬಹಳವಾಗಿ ತಿರಸ್ಕರಿಸಿದರು. ಅವರ ಆಕಾಲದ ಮುಖವನ್ನು ಸ್ಮರಿಸಿಕೊಂಡರೆ ಈಗಲೂ ಭಯವಾಗುತ್ತಿರುವದು!" ಎಂದು ಪನ್ನಾಮತಿಯು ಹೇಳಿದಳು.

"ಅಮ್ಮಾ, ಇದೆಲ್ಲವೂ ಕನಸು. ಕನಸು ಎಂದಾದರೂ ಸತ್ಯವಾಗುವದುಂಟೇ? ನೀವು ಸುಳ್ಳೇ ಭಯಪಟ್ಟಿರುವಿರಿ. ಇನ್ನು ಈ ಸಂಗತಿಯನ್ನು ಮರೆತುಬಿಡಿರಿ," ಎಂದು ಹಿಮ್ಮತನು ಹೇಳಿದನು.

"ಹಿಮ್ಮತ, ಸ್ವಪ್ನವು ಎಂದೂ ನಿಜವಾಗಿ ಪರಿಣಮಿಸುವದಿಲ್ಲವೇ? ನಾನಾದರೂ ಅಷ್ಟೇ ಬೇಡಿಕೊಳ್ಳುತ್ತೇನೆ. ದೇವ, ನನ್ನ ಈ ಕನಸು ನಿಜವಾಗದಂತೆ ಮಾಡು," ಎಂದು ಪನ್ನಾಮತಿ ಅಂದುಕೊಂಡಳು.

---

## ಹದಿನಾರನೆಯ ಪರಿಚ್ಛೇದ.

---

### ಶಹಾಜಾದಿಯ ವಿಚಾರತರಂಗ.

ಮಧ್ಯರಾತ್ರಿಯ ಸಮಯ. ಚರಾಚರಸೃಷ್ಟಿಯೆಲ್ಲವೂ ನಿಸ್ತಬ್ಧ. ಪ್ರಬಲವಾದ ಮೇಘವು ಆಕಾಶವನ್ನೆಲ್ಲ ವ್ಯಾಪಿಸಿಬಿಟ್ಟಿದೆ. ಭಯಂಕರವಾದ ಬಿರುಗಾಳಿ ಬೀಸುತ್ತಲಿದೆ. ದೊಡ್ಡ ಮಳೆಯಾಗುವ ಲಕ್ಷಣವು ಕಾಣುತ್ತಲಿದೆ.

ಇಂತಹ ಸಮಯದಲ್ಲಿ ಪನ್ನಾಮತಿ ಸರದಾರರನ್ನೂ ವಿಶ್ವಾಸಿಯಾದ ಹಿಮ್ಮತನನ್ನೂ ಕರೆದುಕೊಂಡು, ತನ್ನ ತಂದೆಯ ದೇಹವನ್ನು ಅರಮನೆಯ ಬಳಿಯಲ್ಲಿರುವ ಸಮಾಧಿಭವನದಲ್ಲಿಯ ಗೋರಿಯಲ್ಲಿ ಹುಗಿ

ದಳು. ತರುವಾಯ ಅವಳು ಆ ಸಮಾಧಿಗೃಹದ ಬಾಗಿಲನ್ನಿಕ್ಕಿ, ಸರ ದಾರರಿಗೆ ಅಪ್ಪಣೆಕೊಟ್ಟು ಕಳುಹಿಸಿ, ಒಬ್ಬಳೇ ತನ್ನ ಕೋಣೆಯನ್ನು ಪ್ರವೇಶಿಸಿದಳು. ಬಾಗಿಲನ್ನಿಕ್ಕಿಕೊಂಡು ಬಂದು, ಹಾಸುಗೆಯಮೇಲೆ ಬಿದ್ದು ದೇ ರೋದನಮಾಡತೊಡಗಿದಳು. ಅವಳ ಅಳುವಿಕೆಯು ಬಹು ಕಾಲದವರೆಗೆ ನಡೆಯಿತು. ಆದರೆ ಅದರಿಂದೇನೂ ಲಾಭವಾಗಲಿಲ್ಲ. ಎಷ್ಟೇ ಅತ್ತರೂ ಸತ್ತುಹೋದ ಮನುಷ್ಯರೆಂದಾದರೂ ತಿರುಗಿ ಬರುವ್ರು ದುಂಟೆ? ಆದರೂ ಮೋಹವು ವಿಚಿತ್ರವಾದುದು: ತಮ್ಮ ಅಳುವಿಕೆಯಿಂ ದೇನೂ ಲಾಭವಾಗುವುದಿಲ್ಲವೆಂದು ಗೊತ್ತಿದ್ದರೂ, ಮೋಹಕ್ಕೊಳಗಾಗಿ ಎದೆ ಎದೆ ಬಡಕೊಂಡು ಅಳುವುದುಮಾತ್ರ ತಪ್ಪಿದ್ದಲ್ಲ!

ಪನ್ನಾಮತಿ ಬಾಲ್ಯಕಾಲದಲ್ಲಿ ಅನೇಕ ಅಪರಾಧಗಳನ್ನು ಮಾಡಿದ್ದಳು. ಆದರೆ ಸ್ನೇಹಪೂರ್ಣನಾದ ತಂದೆ, ಪನ್ನಾಮತಿಯ ಈ ಅಪರಾಧಗಳನ್ನು ಗಣಿಸಿರಲಿಲ್ಲ. ಅವನು ಸಿಟ್ಟಿಗೆದ್ದು, ಪನ್ನಾಮತಿಯನ್ನು ಶಿಕ್ಷಿಸುವ ಭರಕ್ಕೆ ಹೋಗಿರಲಿಲ್ಲ. ಇದರಿಂದ ಪನ್ನಾಮತಿಯಲ್ಲಿ ಒಂದುತರದ ಸ್ವತಂತ್ರವೃತ್ತಿ ಯು ನೆಲೆಯಾಯಿತು. ಅವಳು ಯಾವುದೊಂದು ಕೆಲಸಮಾಡಬೇಕಾ ದರೂ, ತಂದೆಯನ್ನು ಕೇಳದೆಯೇ ಮಾಡಿಬಿಡುತ್ತಿದ್ದಳು. ಆದರೆ ಇವೆ ಲ್ಲವೂ ಕ್ಷುದ್ರವಾದವುಗಳಾದುದರಿಂದ, ಇವುಗಳಿಂದೇನೂ ಅನರ್ಥವಾಗಿರ ಲಿಲ್ಲ. ಮುಂದೆ ಯೌವನದಶೆಯಲ್ಲಿಯೂ ಪನ್ನಾಮತಿಯ ಪ್ರವೃತ್ತಿಯು ವ್ಯತ್ಯಾಸಗೊಳ್ಳಲಿಲ್ಲ. ಅವಳು ಯಾವ ವಿಚಾರವನ್ನೂ ಮಾಡದೆ, ಶಹಾ ಜಾದನನ್ನು ಬಂಧಮುಕ್ತಮಾಡಿದಳು. ಇದರಿಂದ ಮುಂದೆ ಬಹು ಅನ ರ್ಥವೊದಗುವದೆಂಬುದನ್ನು ಅವಳು ಭಾವಿಸಿರಲಿಲ್ಲ. ಆದರೆ ಅವಳು ಕನಸು ಮನಸಿನಲ್ಲಿ ಆಲೋಚಿಸದ ಕೆಟ್ಟಸಂಗತಿಗಳು ಸಂಧಿಸಿದವು. ಇದನ್ನುನೋಡಿ ಅವಳಿಗೆ ಬಹಳ ಪಶ್ಚಾತ್ತಾಪವಾಯಿತು. ಆದರೆ ಮಾಡುವುದೇನು?

ಪನ್ನಾಮತಿ ಮನಸ್ಸಿನಲ್ಲಿ ಭಾವಿಸತೊಡಗಿದಳು—"ನನಗೆ ಎಂಥ ವಿಷಮಯಕಾಲ ಒದಗಿತು! ನಾನಿನ್ನೂ ಬಾಲಿಕೆ! ರಾಜ್ಯಕಾರಭಾರ ವನ್ನು ವಹಿಸಿ ನಡೆಯುವ ಯೋಗ್ಯತೆ ನನಗಿಲ್ಲ. ತಂದೆ ಇದ್ದಿದ್ದರೆ, ಈ ಭಾರ ನನ್ನಮೇಲೆ ಬೀಳುತ್ತಿರಲಿಲ್ಲ; ನಾನು ಇನ್ನು ಎಷ್ಟೋದಿವಸಗಳ

ವರೆಗೆ ಬಾಲ್ಯದ ಸುಖವನ್ನನುಭವಿಸಬಹುದಾಗಿತ್ತು. ಆದರೆ ನನಗೆ ಸುಖ ಉಂಟಾಗಬಾರದೆಂದು ದೇವರು ಬಗೆದಿರಬೇಕು. ಅದರಿಂದಲೇ ಈ ಚಿಕ್ಕ ವಯಸ್ಸಿನಲ್ಲಿ ನಾನು ಮಾತಾ-ಪಿತೃವಿಹೀನಳಾಗುವಂತೆ ಮಾಡಿದನು. ಇದು ಹೇಗೇ ಇರಲಿ, ಸದ್ಯದ ನಮ್ಮ ಈ ರಾಜ್ಯದಸ್ಥಿತಿಕಡೆಗೆ ನೋಡಿದರೂ, ನಿರಾಶೆಯು ಹೊರತು ಬೇರೊಂದಿಲ್ಲ. ಮೊಗಲರು ನಮ್ಮನ್ನು ಸೋಲಿಸುವುದಕ್ಕಾಗಿ ಸಮೀಪದಲ್ಲಿಯೇ ಬಂದು, ವಾಸಮಾಡಿಕೊಂಡಿರುವರು. ನಮ್ಮ ಒಪ್ಪಂದದ ಕರಾರುಗಳಿಗವರು ಒಡಂಬಡದಿದ್ದರೆ, ನಾವು ಅವರೊಡನೆ ಯುದ್ಧಮಾಡಲೇಬೇಕು. ನಮ್ಮ ಈ ರಾಜ್ಯಕ್ಕೆ ರಾಜನಿಲ್ಲ. ಮಂತ್ರಿಗಳು ಬುದ್ಧಿಹೀನರು. ಸೈನಿಕರು ಉತ್ಸಾಹಶೂನ್ಯರು. ಈ ಸ್ಥಿತಿಯಲ್ಲಿ ಅವರೊಡನೆ ಯುದ್ಧಮಾಡುವುದು ಹೇಗೆ? ಏನಾದರೊಂದು ವಿಪರೀತಪ್ರಸಂಗ ಒದಗಿದರೆ, ಸರದಾರರು ಅದರ ದೋಷವನ್ನು ನನ್ನ ಮೇಲೆ ಹೊರಿಸತಕ್ಕವರು! ಹೀಗಿರುವಾಗ ನಾನು ಈ ಪ್ರಸಂಗದಿಂದ ಹೇಗೆ ಪಾರಾಗಲಿ?

ಒಂದುವೇಳೆ ಮೊಗಲರು ಜಯಶಾಲಿಗಳಾದರೆ, ನಮ್ಮ ಅವಸ್ಥೆ ಏನಾಗಬಹುದು? ಶಹಾಜಾದನು ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಹುದೇ? ನನ್ನನ್ನುಮೊಗಲ ಬೇಗಮರ ದಾಸಿಯನ್ನಾಗಿಮಾಡಿ, ಆಗ್ರಾದ ರಂಗಮಹಲಿಗೆ ಕಳುಹಿಸಬಹುದೇ? ಈ ವಿಶಾಲವಾದ ರಾಜ್ಯವನ್ನು ಸ್ಮಶಾನರೂಪವಾಗಿ ಮಾಡಬಹುದೇ?

ಇವುಗಳಲ್ಲಾವುದೂ ಆಗದಂತೆ ನಾನು ಮಾಡುವೆನು. ದಾನಿಯಲನು ಉದಾರಹೃದಯನಾದ ಅಕಬರನ ಮಗನು. ತಂದೆಯಂತೆ ಇವನೂ ಉದಾರನಾಗಿರುವದು ಸ್ವಭಾವ. ನಾನು ಅವನ ಕಾಲುಗಳಮೇಲೆಬಿದ್ದು ಕೃಪಾಭಿಕ್ಷೆ ಬೇಡುವೆನು: ನನ್ನ ಮಕ್ಕಳಂತಿರುವ ಪಠಾಣ ಪ್ರಜೆಗಳನ್ನು ಮೊಗಲರ ಕ್ರೋಧಾಗ್ನಿಯಿಂದ ಪಾರುಮಾಡುವೆನು; ಒಂದು ಹನಿರಕ್ತಪಾತವೂ ಆಗದಂತೆ ಮಾಡುವೆನು; ಇದರಿಂದ ಉಭಯಜನಾಂಗದವರಿಗೆ ಸುಖವಾಗುವದರಲ್ಲಿ ಸಂದೇಹವಿಲ್ಲ.

ಈ ಜಗತ್ತಿನಲ್ಲಿ ನಾರೀ-ಶಕ್ತಿಯು ಬಲವಾದುದೆಂದು ಕೆಲವರು ಹೇಳುತ್ತಿರುವರು. ಹೆಂಗಸರು ತಮ್ಮಲ್ಲಿಯ ಶಕ್ತಿಯಿಂದ ಈ ಜಗತ್ತಿನಲ್ಲಿ ಸ್ವರ್ಗವನ್ನಾಗಲಿ, ನರಕವನ್ನಾಗಲಿ ಸೃಷ್ಟಿಸಬಲ್ಲರೆಂದು ಇನ್ನು ಕೆಲವರು ಹೇಳುತ್ತಿದ್ದಾರೆ. ಇಂತಹ ಶಕ್ತಿ ನನ್ನಲ್ಲಿಲ್ಲವೇನು? ಇರದೆ ಏನು! ನನ್ನ ಈ ಶಕ್ತಿಯನ್ನುಪಯೋಗಿಸಿ, ಸದ್ಯಕ್ಕೆ ಪಠಾಣರಿಗೊದಗಿದ ವಿಪತ್ತನ್ನು ದೂರಮಾಡುವೆನು. ಹೆಂಗಸರು ತಮ್ಮಲ್ಲಿರುವ ಈ ಪ್ರಬಲಶಕ್ತಿಯು ಮೂಲಕಸದ್ಗುಣಗಳನ್ನೊಳಕೊಂಡದ್ದಾದರೆ, ಅವರು ಚಲೋ ಕೆಲಸಗಳನ್ನು ಮಾಡಿ ದೇವತೆಯರೆಂದೆನಿಸಿಕೊಳ್ಳುವರು. ದುರ್ಗುಣಗಳನ್ನೊಳಕೊಂಡದ್ದಾದರೆ, ಘೋರವಾದ ಕುಕರ್ಮಗಳನ್ನು ಮಾಡಿ ಪಿಶಾಚಿನಿಯರೆಂದೆಣಿಸಿಕೊಳ್ಳುವರು. ಈಗ ನಾನು ನನ್ನ ಯಾವತ್ತು ಶಕ್ತಿಯನ್ನುಪಯೋಗಿಸಿ ಪ್ರಜೆಗಳ ಕಲ್ಯಾಣಮಾಡುವೆನು. ಜೀವವಿರುವವರೆಗೆ ನಾನು ರಂಗಮಹಲಿನ ದಾಸಿಯಾಗಲಿಕ್ಕಿಲ್ಲ! ನನ್ನ ಈ ರಾಜ್ಯವನ್ನು ಸ್ಮಶಾನವಾಗಗೊಡಲಿಕ್ಕಿಲ್ಲ! ಇದೇ ನನ್ನ ಪ್ರತಿಜ್ಞೆ!!

ಒಂದುದಿನ ನಾನು ದರ್ಪಭರದಿಂದ ಶಹಾಜಾದನ ಮುಕುಟವನ್ನು ಹಾರಿಸಿಬಿಟ್ಟಿದ್ದೆ. ಅವನು ನನ್ನ ಈ ಕಾರ್ಯಕ್ಕಾಗಿ ಕೌತುಕಪಟ್ಟಿದ್ದನು. ಆದರೆ ಈಗ ನನ್ನಲ್ಲಿ ಆ ದರ್ಪವಿಲ್ಲ. ಅತಿದೈನ್ಯದಿಂದ ಹೋಗಿ, ನನ್ನ ಪ್ರಜೆಗಳನ್ನುದ್ಧರಿಸೆಂದು ಬೇಡಿಕೊಳ್ಳಬೇಕಾಗಿದೆ? ನನ್ನ ಈ ಪ್ರಾರ್ಥನೆಯನ್ನು ಅವನು ಮನ್ನಿಸಲಿಕ್ಕಿಲ್ಲವೇ? ನಾನು ಅವನ ಜೀವರಕ್ಷಣೆಮಾಡಿದ್ದೇನೆ. ಈ ಉಪಕಾರವನ್ನು ಅವನು ಸ್ಮರಿಸಲಾರನೆ? ಅವನು ಕೃತಘ್ನನಾಗಿರದ ಪಕ್ಷದಲ್ಲಿ ನನ್ನ ವಿನಂತಿಯನ್ನೆಂದು ಅಮಾನ್ಯಮಾಡನು. ಉಪಕಾರಕ್ಕೆ ಪ್ರತ್ಯುಪಕಾರವನ್ನು ಅಪೇಕ್ಷಿಸುವುದು ಹೀನತೆಯುಲಕ್ಷಣವೆಂಬುದನ್ನು ನಾನು ಬಲ್ಲೆ. ಆದರೆ ಉಪಾಯವಿಲ್ಲ. ಈ ವರೆಗೆ ನನ್ನ ತಂದೆಯನ್ನನುಸರಿಸಿದ ಪ್ರಜೆಗಳು ಈಗ ನನ್ನನ್ನನುಸರಿಸುತ್ತಿದ್ದಾರೆ. ಇವರ ಹಿತಕ್ಕಾಗಿ ನಾನು ಏನನ್ನಾದರೂ ಮಾಡಲೇಬೇಕು."

ರಾತ್ರಿ ಬಹಳವಾಗಿತ್ತು. ಪನ್ನಾಮತಿಯು ವಿಚಾರಮಾಡುತ್ತ ಮಾಡುತ್ತ ನಿದ್ದೆಗೊಳಗಾದಳು. ಮರುದಿವಸ ಮುಂಜಾವಿನಲ್ಲಿ ಹಿಮ್ಮತ

ಖಾನನು ಬಂದು, ಇವಳನ್ನು ಎಬ್ಬಿಸಿ,—"ಸರದಾರರು ದರಬಾರ ಗೃಹದಲ್ಲಿ ಕೂಡಿ, ನಿಮ್ಮ ಹಾದಿನೋಡುತ್ತಿರುವರು," ಎಂದು ವಿನಂತಿಮಾಡಿಕೊಂಡನು.

ಪನ್ನಾಮತಿ ಎದ್ದು, ಪ್ರಾತಃಕೃತ್ಯಗಳನ್ನು ಮುಗಿಯಿಸಿ, ಉಚಿತವಾದ ವೇಷಭೂಷಣಗಳನ್ನು ಧರಿಸಿ ದರಬಾರನ್ನು ಪ್ರವೇಶಿಸಿದಳು. ಸರದಾರರು ಎದ್ದು ನಿಂತು, ಇವಳಿಗೆ ಮರ್ಯಾದೆಯಿಂದ ಸಲಾಮು ಹಾಕಿದರು.

ಸರದಾರರು ತೋರಿಸಿದ ಈ ವಿಶೇಷ ಆದರವನ್ನು ನೋಡಿ, ಪನ್ನಾಮತಿಯು ಸಂಕೋಚಕ್ಕೊಳಗಾದಳು. ಅವಳು ಸಾಹಸದಿಂದ—"ಸರದಾರರೆ, ಈ ರಾಜ್ಯವು ನಿಮ್ಮದು. ಪ್ರಜೆಗಳು ನಿಮ್ಮ ಮುಖಗಳನ್ನು ನೋಡುತ್ತಿರುವರು. ಯುದ್ಧಾಭಿಲಾಷಿಗಳಾದ ಪಠಾಣ ಸೈನಿಕರು ನಿಮ್ಮ ಅಪ್ಪಣೆಯ ನಿರೀಕ್ಷೆಯಿಂದಿರುವರು. ತಂದೆಗಳು ಈ ಲೋಕವನ್ನು ಬಿಟ್ಟು ಹೋದಕಾರಣ ಈ ಪಠಾಣ ರಾಜ್ಯರಕ್ಷಣೆಯ ಭಾರವು ನಿಮ್ಮನ್ನವಲಂಬಿಸಿದೆ. ನಾನಾದರೋ ಅಬಲೆ. ಸಾರಾಸಾರ ವಿಚಾರರಹಿತಳಾದ ಬಾಲಿಕೆ. ನೀವು ನನ್ನ ಆಸ್ತಿತ್ವವನ್ನೇ ಮರೆತುಬಿಟ್ಟು, ಮುಂದಿನ ಕೆಲಸವನ್ನು ಸಾಗಿಸಿರಿ," ಎಂದು ಹೇಳಿ, ರಾಜಕೋಶದ ಕೀಲಿಯ ಕೈಯನ್ನು ಸರದಾರರ ಕೈಯಲ್ಲಿ ಕೊಡಹೋದಳು. ಆದರೆ ಸರದಾರರು ಅದನ್ನು ತೆಗೆದುಕೊಳ್ಳದೆ, ಪನ್ನಾಮತಿಯನ್ನು ಕುರಿತು—"ಅಮ್ಮಾ, ನಿಮ್ಮ ತಂದೆಗಳು ನಮ್ಮಗಳಿಗೆ ಬಹಳ ಉಪಕಾರಮಾಡಿದ್ದಾರೆ. ಅದರಿಂದ ನಾವೆಲ್ಲರೂ ಅವರ ವಿಷಯದಲ್ಲಿ ಕೃತಜ್ಞರಾಗಿದ್ದೇವೆ. ನೀವು ಅವರ ಮಕ್ಕಳು. ನಾವು ಈ ವರೆಗೆ ಅವರೊಡನೆ ನಡೆಯುತ್ತ ಬಂದಂತೆ, ಇನ್ನು ಮುಂದೆ ನಿಮ್ಮಸಂಗಡ ನಡೆದುಕೊಳ್ಳುವೆವು. ಇಂದಿನಿಂದ ನೀವು ಈ ರಾಜ್ಯದ ರಾಣಿಯರು. ಬೊಕ್ಕಸದ ಕೀಲಿಯ ಕೈಯು ನಿಮ್ಮಲ್ಲಿಯೇ ಇರಲಿ. ನಮಗೆ ಹಣದ ಆವಶ್ಯಕತೆ ಬಿದ್ದರೆ, ನಿಮ್ಮನ್ನು ಕೇಳಿ ತೆಗೆದುಕೊಳ್ಳುವೆವು." ಎಂದು ಹೇಳಿದರು.

ತರುವಾಯ ಸರದಾರರೆಲ್ಲರು ಕುರಾನವನ್ನು ಮುಟ್ಟಿ "ನಮ್ಮ ಜೀವವಿರುವವರೆಗೆ ಸಕಲ ಪ್ರಸಂಗಗಳಲ್ಲಿ ನಿಮ್ಮನ್ನು ಓಲೈಸುತ್ತ ನಡೆಯುವೆವು" ಎಂದು ಶಪಥಮಾಡಿದರು.

---

# ಹದಿನೇಳನೆಯ ಪರಿಚ್ಛೇದ.

## ಒಪ್ಪಂದ.

ರಾತ್ರಿ ಸುಮಾರು ಒಂದು ತಾಸು. ಅಕಬರಬಾದಶಹನ ಮಗನೂ, ಪ್ರಕೃತ ಯುದ್ಧದ ಮುಖ್ಯ ಸೇನಾಪತಿಯೂ ಆದ ಸುಲತಾನ ದಾನಿಯಲನು ತನ್ನ ಶಿಬಿರದ ಒಂದು ಕೋಣೆಯಲ್ಲಿ ಕುಳಿತುಕೊಂಡಿದ್ದಾನೆ. ಸುಗಂಧಪೂರ್ಣವೂ, ಉಜ್ವಲವೂ ಆದ ಮೂರು-ನಾಲ್ಕು ದೀಪಗಳು ಆ ಕೋಣೆಯಲ್ಲಿ ಉರಿಯುತ್ತಲಿವೆ. ಶಹಾಜಾದನ ಕೈಯಲ್ಲಿ ಒಂದು ಪತ್ರವಿದ್ದು, ಅವನದರ ಕಡೆಗೆ ದೃಷ್ಟಿಯನ್ನಿರಿಸಿ ಮುಗುಳುನಗೆ ನಗುತ್ತಲಿದ್ದಾನೆ. ಈ ಪತ್ರವು ಲಾಹೋರದಿಂದ ಬಂದದ್ದಾಗಿತ್ತು. ಇದನ್ನು ಬರೆದವಳು ಲಾಲಾ-ರುಖ-ಬೇಗಮುಳಾಗಿದ್ದಳು. ಈ ಲಾಲಾ-ರುಖ-ಬೇಗಮುಳು ಶಹಾಜಾದನ ಪ್ರಿಯಪಾತ್ರಳಾದ ಹೆಂಡತಿ. ಕೆಲವು ದಿನಗಳ ಪತಿವಿರಹದಿಂದ ಕಾತರಳಾಗಿ ತೀವ್ರವೇ ಯುದ್ಧವನ್ನು ಮುಗಿಸಿಬರುವುದಕ್ಕೆ ಶಹಾಜಾದನಿಗೆ ಇವಳು ವಿನಂತಿಮಾಡಿಕೊಂಡಿದ್ದಳು.

ಶಹಾಜಾದನು ಮನಸ್ಸಿನಲ್ಲಿಯೇ ಅಂದುಕೊಂಡನು—“ ಹೇ ಮುಗ್ಧೆ! ನೀನು ಈ ಪತ್ರವನ್ನು ಬರೆಯುವಾಗ್ಗೆ ರಣನೀತಿಗೂ, ಪ್ರೇಮನೀತಿಗೂ ಪರಸ್ಪರ ವಿರೋಧವೆಂಬುದನ್ನು ಒಮ್ಮೆಯಾದರೂ ವಿಚಾರಿಸಿ ನೋಡಿದಂತೆ ಕಂಡುಬರುವುದಿಲ್ಲ! ನಾನು ರಂಗಮಹಲಿನ ಮೇರೆಯೊಳಗಿರುವವರೆಗೆ ನಿನ್ನ ಅಪ್ಪಣೆಯ ದಾಸನೇ. ಆದರೆ, ಈ ಯುದ್ಧ ಭೂಮಿಯಲ್ಲಿ ನನ್ನ ಮೇಲೆ ನಿನ್ನ ಅಧಿಕಾರವೆಷ್ಟುಮಾತ್ರವೂ ನಡೆಯದು. ಈಗ, ನಾನು ಸಾಮ್ರಾಟ ಅಕಬರಶಹರವರ ಅಪ್ಪಣೆಯಂತೆ ನಡೆಯತಕ್ಕವನು ”.

ಪ್ರಿಯಪತ್ನಿಯ ಪತ್ರದರ್ಶನದಿಂದ ಶಹಾಜಾದನಿಗೆ ಬಹು ಆನಂದವಾಗಿತ್ತು. ಸಮೀಪದಲ್ಲಿ ಗುಲಾಬಗಂಧಪೂರ್ಣವಾದ ಬಸರಾ ಪಟ್ಟಣದ ಮದ್ಯದಿಂದ ತುಂಬಿದ ಸ್ಫಟಿಕದ ಪಾತ್ರೆಯಿತ್ತು. ಇದರ ಬಳಿಯಲ್ಲಿ ಮದ್ಯವನ್ನು ಹಾಕಿಕೊಂಡು ಕುಡಿಯುವುದಕ್ಕಾಗಿ ಬೇಕಾಗುವ ಬಂಗಾರದ

ಒಂದೆರಡು ಸಣ್ಣ ಪಾತ್ರೆಗಳಿದ್ದವು. ಶಹಾಜಾದನು ಒಂದು ಪಾತ್ರೆ ತೆಗೆದುಕೊಂಡು, ಅದರಲ್ಲಿ ಸುರೆಯನ್ನು ಹಾಕಿಕೊಂಡು, ಅದನ್ನು ಸೇವಿಸಿದನು. ಇದರಿಂದವನಿಗೆ ಉತ್ಸಾಹ ಹೆಚ್ಚಿತು. ಪುನಃ ಅವನು ಪತ್ರ ತೆಗೆದುಕೊಂಡು ನೋಡತೊಡಗಿದನು. ಈ ಸಮಯದಲ್ಲಿ ಒಬ್ಬ ಕಾವಲುಗಾರನು ಬಂದು, ಸಲಾಂಮಾಡಿ, ಶಹಾಜಾದನ ಮುಂದೆ ಒಂದು ಉಂಗುರವನ್ನು ಹಿಡಿದನು.

ಶಹಾಜಾದನು ಈ ಉಂಗುರವನ್ನು ಗುರುತಿಸಿದನು. ತರುವಾಯ ಅವನು "ಈ ಉಂಗುರವನ್ನು ಯಾರು ತಂದವರು?" ಎಂದು ಕೇಳಿದನು.

"ಒಬ್ಬ ಕುಲಮಹಿಳೆ ಇದನ್ನು ತೆಗೆದುಕೊಂಡು ಬಂದಿದ್ದಾಳೆ" ಎಂದು ಕಾವಲುಗಾರನು ಹೇಳಿದನು. ಶಹಾಜಾದನು ವಿಸ್ಮಿತನಾಗಿ—"ಏನು! ಇದನ್ನು ಹೆಂಗಸು ತಂದಿರುವಳೇ! ಇಂಥ ರಾತ್ರಿಯ ಸಮಯದಲ್ಲಿ ಅವಳು ಇಲ್ಲಿಗೆ ಏಕೆ ಬಂದಿದ್ದಾಳೆ? ಈ ಬಗ್ಗೆ ನೀನವಳನ್ನು ವಿಚಾರಿಸಿದೆಯೇನು?" ಎಂದು ಶಹಾಜಾದನು ಕೇಳಿದನು.

"ಮಹಾರಾಜ, ನಾನವಳನ್ನು ಕೇಳಿದೆನು. ಆದರೆ ಅವಳು ಏನೂ ಹೇಳಲಿಲ್ಲ; ಅವಳಿಗೆ ನಿಮ್ಮ ದರ್ಶನದ ಆವಶ್ಯಕತೆ ಇರುವುದಾಗಿಯೂ ಅದಕ್ಕಾಗಿಯೇ ತಾನು ಬಂದಿರುವುದಾಗಿಯೂ ಹೇಳಿದಳು."

"ಇಂಥ ಅಕಾಲದಲ್ಲಿ ಅವಳು ನನ್ನ ಭೇಟಿಯ ಸಲುವಾಗಿ ಏಕೆ ಬಂದಿರಬಹುದು? ನನ್ನ ಬಳಿಯಲ್ಲಿ ಅವಳ ಕೆಲಸವೇನಿರಬಹುದು?"

"ಮಹಾರಾಜ, ಇದನ್ನು ನಾನು ಹೇಗೆ ಹೇಳಲಿ. ಅವಳನ್ನು ಕೇಳಿದರೆ ತಾನೇ ತಿಳಿಯುವದು."

"ಅವಳನ್ನು ಮರ್ಯಾದೆಯಿಂದ ನನ್ನ ಬಳಿಗೆ ಕರೆದುಕೊಂಡು ಬಾ" ಎಂದು ಶಹಾಜಾದನು ಕಾವಲುಗಾರನಿಗೆ ಅಪ್ಪಣೆಮಾಡಿದನು.

ಶಹಾಜಾದನು ಮತ್ತೆ ಮದ್ಯವನ್ನು ಸೇವಿಸಿದನು. ಅದರಿಂದವನಿಗೆ ಹೆಚ್ಚು ಉತ್ಸಾಹಬಂದಂತಾಯಿತು. ಅವನು ಬಾಗಿಲ ಕಡೆಗೆ ಉತ್ಸುಕ ದೃಷ್ಟಿಯಿಂದ ನೋಡತೊಡಗಿದನು. ತುಸು ಹೊತ್ತಿನಲ್ಲಿ ಕಾವಲುಗಾರನು ಒಬ್ಬ ಹೆಂಗಸನ್ನು ಕರೆದುಕೊಂಡು ಬಂದನು. ಅವಳ ಯಾವತ್ತೂ ಅವ ಯವಗಳು ವಸ್ತ್ರಾವೃತವಾಗಿದ್ದುದರಿಂದ, ಶಹಾಜಾದನು ಅವಳನ್ನು ಗುರು ತಿಸಲು ಸಮರ್ಥನಾಗಲಿಲ್ಲ.

ಆ ರಮಣಿಯು ಶಹಾಜಾದನ ಎದುರಿನಲ್ಲಿ ಬಂದು ನಿಂತಳು. ಆದರೂ ಅವಳು ತನ್ನ ಮುಖದ ಮೇಲಿನ ಆವರಣವನ್ನು ತೆಗೆಯಲಿಲ್ಲ. ಶಹಾ ಜಾದನು ವಿಸ್ಮಯದಿಂದ ಅವಳನ್ನು ನೋಡುತ್ತ ಕುಳಿತುಕೊಂಡನು. ಆ ಸ್ತ್ರೀಯು ಕಾವಲುಗಾರನ ಕಡೆಗೆ ಬೆರಳುಮಾಡಿ ತೋರಿಸಿದಳು. ಶಹಾ ಜಾದನು ಅವಳ ಇಂಗಿತವನ್ನರಿತು ಕಾವಲುಗಾರನಿಗೆ ಹೊರಗೆ ಹೋಗು ವುದಕ್ಕೆ ಆಜ್ಞಾಪಿಸಿದನು.

ಆಗಂತುಕರಮಣಿಯು ತನ್ನ ಮುಖಾವರಣವನ್ನು ತೆಗೆದಳು. ಶಹಾಜಾದನು ಅವಳನ್ನು ಕೂಡಲೇ ಗುರುತಿಸಿದನು. ಅವನು ಆಶ್ಚರ್ಯ ದಿಂದ—“ಇದೇನು ಪನ್ನಾಮತಿ! ಇಂಥ ರಾತ್ರಿ ಸಮಯದಲ್ಲಿ ನೀನು ಇಲ್ಲಿಗೆ ಬಂದುದೇಕೆ?” ಎಂದು ಕೇಳಿದನು.

ಪನ್ನಾಮತಿ ಉತ್ತರಕೊಡಲಿಲ್ಲ. ಶಹಾಜಾದನು ಆನಂದಭರದಿಂದ ತನ್ನ ಆಸನದಿಂದೆದ್ದು, ಪನ್ನಾಮತಿಯ ಬಳಿಗೆ ಬಂದು, ಅವಳ ಕೈ ಹಿಡಿದು ಕೊಂಡು ಬಂದು, ಅವಳನ್ನೊಂದು ಆಸನದ ಮೇಲೆ ಕುಳ್ಳಿರಿಸಿ, ತಾನೂ ಸಮೀಪದಲ್ಲಿ ಕುಳಿತುಕೊಂಡನು. ತರುವಾಯ ಅವನು ನಗೆಮೊಗದಿಂದ— “ನೀನು ಇಂಥ ಸಮಯದಲ್ಲಿ ಇಲ್ಲಿಯವರೆಗೆ ಬರಲಿಕ್ಕೆ ಕಾರಣವಾದರೂ ಏನಾಯಿತು ಹೇಳು. ಅಫಶಾನನನ್ನು ಬಂಧಮುಕ್ತಮಾಡಿಕೊಂಡು ಹೋಗ ಲಿಕ್ಕೆ ಬಂದೆಯಾ?” ಎಂದು ಕೇಳಿದನು.

ಶಹಾಜಾದನು ಈ ವಾಕ್ಯವನ್ನು ಸರಳಚಿತ್ತದಿಂದುಚ್ಚರಿಸಿದನು ಆದರೆ ಪನ್ನಾಮತಿಯು ಇದಕ್ಕೆ ವಿಪರೀತಾರ್ಥವನ್ನು ಕಲ್ಪಿಸಿಕೊಂಡು

ಶಹಾಜಾದನು ತನ್ನೊಡನೆ ನಗೆಚಾಟಿಕೆಯಾಡುವನೆಂದು ಭಾವಿಸಿದಳು. ಇದರಿಂದ ಅವಳಿಗೆ ತುಸು ಸಿಟ್ಟುಬಂದಿತು. ಅವಳು ಶಹಾಜಾದನ ಪ್ರಶ್ನೆಗೆ ಏನೂ ಉತ್ತರ ಕೊಡಲಿಲ್ಲ. ಮನಸ್ಸಿನಲ್ಲಿಯೇ ಆಲೋಚಿಸಿದಳು—"ನಾನಾವರೋ ಸರದಾರರ ಬಳಿಯಲ್ಲಿ ಜಂಭ ಬಡಿದು ಇಲ್ಲಿಗೆ ಬಂದೆನು. ಇವನು ತೋರಿಕೆಯಲ್ಲಿ ಸುಂದರನೂ ಉದಾರನೂ ಎಂದು ಕಂಡುಬರುತ್ತಿದ್ದರೂ, ನಿಜವಾಗಿ ನಿಷ್ಠೂರನಿರಬಹುದೇನು? ಇಲ್ಲವಾದರೆ ವಿಪದ್ಗ್ರಸ್ತಳಾದ ನನ್ನೊಡನೆ ಇವನು ಹೀಗೆ ಹುಡುಗಾಟವಾಡುತ್ತಿರುವುದೇಕೆ?"

ಶಹಾಜಾದನು ಪನ್ನಾಮತಿಯ ಭಾವವನ್ನು ತಿಳಿದನು. ಕಾರಣ ಅವನು—"ಪನ್ನಾಮತಿ, ನನ್ನ ಮಾತಿನಿಂದ ನಿನಗೆ ಸಿಟ್ಟುಬಂದಿತೇನು?" ಎಂದು ಕೇಳಿದನು.

"ನೀನು ಹಿಂದೂಸ್ಥಾನದ ಸಾಮ್ರಾಟರಾದ ಅಕಬರಶಹರ ಪುತ್ರನು; ಮೇಲೆ ಅಸಂಖ್ಯಮೊಗಲರ ಸೈನಿಕರ ಅಧಿನಾಯಕನು. ಹೀಗಿರಲು ನಿನ್ನ ಮೇಲೆ ನನ್ನಂಥ ಕ್ಷುದ್ರಳು ಸಿಟ್ಟಿಗೆದ್ದಾದರೂ ಮಾಡುವದೇನು?" ಎಂದು ಪನ್ನಾಮತಿಯು ಅಂದಳು.

ಶಹಾಜಾದನು ಸೂಕ್ಷ್ಮದೃಷ್ಟಿಯಿಂದ ಪನ್ನಾಮತಿಯ ಮುಖವನ್ನು ನೋಡತೊಡಗಿದನು. ಅವಳ ಮುಖವು ಬಾಡಿ, ಬಿಳುಪಿಟ್ಟುಹೋಗಿತ್ತು. ಅವಳ ಈ ಬಾಡಿದ ಮೊಗದಲ್ಲಿ ನಿರಾಶೆಯ ಚಿಹ್ನೆಯು ಒಡೆದುಕಾಣುತ್ತಲಿತ್ತು. ಅವಳ ದೃಷ್ಟಿಯಲ್ಲಿ ವಿಷಾದವು ಮೂರ್ತಿಮಂತಾಗಿ ನೆಲಸಿತ್ತು. ಇದನ್ನು ನೋಡಿದ ಶಹಾಜಾದನಿಗೆ, ಈ ಮೊದಲು ನೋಡಿದ ದರ್ಪಿತಳೂ, ಪ್ರಫುಲ್ಲಮುಖಿಯೂ ಆದ ಪನ್ನಾಮತಿಯು ಇವಳಾಗಿರಲಿಕ್ಕಿಲ್ಲವೇನು! ಎಂಬ ಸಂದೇಹವು ತುಸುಕಾಲದವರೆಗೆ ಉಂಟಾಯಿತು.

ಶಹಾಜಾದನು ವ್ಯಗ್ರನಾಗಿ ಪನ್ನಾಮತಿಯ ಕೈಗಳನ್ನು ಹಿಡಿದು—"ಪನ್ನಾಮತಿ, ನಿನ್ನ ಮುಖವನ್ನು ನೋಡಿದರೆ, ಯಾವದೋ ಒಂದು ಭಯಂಕರಸಂಗತಿ ಸಂಭವಿಸಿದಂತೆ ಕಂಡುಬರುತ್ತದೆ. ನೀನು ಹೇಳಿದ ಹೊರತು, ಅದು ನನಗೆ ತಿಳಿಯುವದು ಹೇಗೆ? ನಿಜವೃತ್ತಾಂತವನ್ನು

ನನ್ನ ಮುಂದೆ ಹೇಳು. ನನ್ನಿಂದೇನಾದರೂ ಸಹಾಯವಾಗುವಂತಿದ್ದರೆ, ಅದನ್ನು ತಪ್ಪದೆ ಮಾಡುವೆನು, " ಎಂದು ಹೇಳಿದನು.

" ರಾಜಕುಮಾರ, ನಾನು ಇದ್ದೊಬ್ಬ ತಂದೆಯನ್ನೂ ಕಳೆದು ಕೊಂಡು ಬಿಟ್ಟೆನು! "

ಪನ್ನಾಮತಿಯಿಂದ ಹೆಚ್ಚಿಗೆ ಮಾತಾಡುವುದಾಗಲಿಲ್ಲ. ಅವಳಕುತ್ತಿಗೆ ಬಿಗಿದುಬಂದಿತು. ಕಣ್ಣುಗಳು ಅಶ್ರುಪೂರ್ಣವಾದವು. ಎದೆಯು ಹಾರ ಹತ್ತಿತು. ಸ್ವರವು ಶಕ್ತಿಹೀನವಾಯಿತು. ಮುಖವು ಮತ್ತಷ್ಟು ಕಳೆಗುಂದಿತು.

ಶಹಾಜಾದನು ಒಮ್ಮೇಲೆ ಎದ್ದುನಿಂತು ವಿಸ್ಮಯದಿಂದ--" ಪನ್ನಾಮತಿ, ಇದೇನು ಹೇಳುತ್ತಿರುವೆ? ನೀನು ಹುಡುಗಾಟಿಕೆಗಾಗಿ ಹೀಗೆ ಹೇಳುತ್ತಿರುವೆಯೇನು? ಈಗ ನಾಲ್ಕಾರುದಿವಸಗಳ ಹಿಂದೆ ನಾನವರ ದರ್ಶನತೆಗೆದುಕೊಂಡು ಬಂದಿದ್ದೇನೆ. ಆಗವರಿಗೆ ಏನೂ ಜಾಡ್ಯವಿರಲಿಲ್ಲ. ಅಂದಬಳಿಕ ಇಷ್ಟರೊಳಗೆ ಅವರು ಸತ್ತದ್ದು ಅಸಂಭವ! " ಎಂದನು.

" ರಾಜಪುತ್ರ, ಇಂಥ ಸಂಗತಿಯಬಗ್ಗೆ ಹುಡುಗಾಟಿಕೆ ಮಾಡುವದುಂಟೇ? ತಂದೆಗಳು ವಿಷಕುಡಿದು ಆತ್ಮಹತ್ಯೆಮಾಡಿಕೊಂಡರು. " ಎಂದು ಪನ್ನಾಮತಿಯು ಹೇಳಿದಳು.

ಪಠಾಣಬಾದಶಹರಾದ ಮಿರಾನಶಹರು ಈ ರೀತಿ ಆತ್ಮಹತ್ಯೆಮಾಡಿಕೊಳ್ಳುವದಕ್ಕೆ ಏನುಕಾರಣ? " ಎಂದು ಶಹಾಜಾದನು ಮತ್ತಿಷ್ಟು ವಿಸ್ಮಿತನಾಗಿ ಕೇಳಿದನು.

" ಅವರ ಮರಣಕ್ಕೆ ನಾವೀರ್ವರೂ ಕಾರಣರಾಗಿದ್ದೇವೆ. "

ಶಹಾಜಾದನು ಒಂದು ನಿಟ್ಟುಸಿರನ್ನು ಬಿಟ್ಟುಹೇಳಿದನು—" ಈಗ ನನಗೆ ಎಲ್ಲವೂ ತಿಳಿಯಿತು. ನಿನ್ನ ತಂದೆಯಮರಣದಿಂದ ನನಗೆ ಬಹಳ ದುಃಖವಾಗುತ್ತಿರುವದು. ಉಪಾಯವಿಲ್ಲ. ಅಫಶಾನನು ಬಂದಿಯಾದದ್ದರಿಂದ, ಪಠಾಣರ ಉತ್ಸಾಹವು ಕಡಿಮೆಯಾಯಿತು. ಮಿರಾನಶಹರ ಬಲಗೈಯೇ ಮುರಿದಂತಾಯಿತು. ಅದಕ್ಕಾಗಿ ಅವರು ಮುಂದೊದಗ ಬಹುದಾಗಿದ್ದ ಅಪಜಯವನ್ನು ನೋಡಲಾರದೆ, ಆತ್ಮಹತ್ಯೆಮಾಡಿಕೊಂಡಿರ

ಬಹುದು. ನೀನು ನನ್ನನ್ನು ಬಂಧಮುಕ್ತಮಾಡಿದ್ದರಿಂದ ಬಹಳತೊಂದರೆಗೊಳಗಾದೆಯೆಂದು, ನಾನು ಅಫಶಾನನಿಂದ ಕೇಳಿದೆನು. ಆದರೆ ನಿನ್ನನ್ನು ಆ ಕಷ್ಟದಿಂದ ತೀವ್ರವೇ ಪಾರುಮಾಡುವ ಸಾಮರ್ಥ್ಯವು ನನ್ನಲ್ಲಿರಲಿಲ್ಲ. ಆದರೂ ನಾನು ನಿನ್ನನ್ನು ಸಂಕಟದಿಂದ ಪಾರುಮಾಡುವ ಉದ್ಯೋಗದಲ್ಲಿಯೇ ತೊಡಗಿದ್ದೆನು. ಈಗ ನೀನು ಇಂಥ ರಾತ್ರಿಯಲ್ಲಿ ಇಷ್ಟೊಂದು ಕಷ್ಟಸಹಿಸಿ ಇಲ್ಲಿಯವರೆಗೆ ಬರುವಕಾರಣವಿದ್ದಿಲ್ಲ. ನೀನು ಹೇಳಿ ಕಳುಹಿಸಿದ್ದರೆ, ನಾನೇ ಬಂದು ನಿನ್ನ ದರ್ಶನತೆಗೆದುಕೊಳ್ಳುತ್ತಿದ್ದೆನು. ”

“ ರಾಜಕುಮಾರ, ತಂದೆಯು ಅಕಾಲದಲ್ಲಿ ಸತ್ತದ್ದರಿಂದ ನನ್ನ ಮೇಲೆ ದೊಡ್ಡಭಾರವು ಬಿದ್ದಿದೆ. ಈಗ ಪ್ರಜೆಗಳು ನನ್ನನ್ನವಲಂಬಿಸಿದ್ದಾರೆ. ನಾನು ಅವರಿಗೆ ಹಿತವಾಗುವಂತೆ ಆಚರಿಸುವುದು ಆವಶ್ಯಕವು. ಅದಕ್ಕಾಗಿ ರಕ್ತಪಾತವಿಲ್ಲದೆ ಈ ಯುದ್ಧವನ್ನು ಮುಗಿಸಿಬಿಡಬೇಕೆಂದು ಸಂಕಲ್ಪಿಸಿದ್ದೇನೆ. ಆದ್ದರಿಂದ ನಾನು ಒಪ್ಪಂದ ಮಾಡಿಕೊಳ್ಳುವದಕ್ಕಾಗಿ ನಿನ್ನ ಬಳಿಗೆ ಬಂದಿದ್ದೇನೆ. ”

“ ನಬಾಬನಂದಿನಿ, ಮಿರಾನಶಹರು ನಮಗೆ ಶತ್ರುಗಳಾಗಿದ್ದರು. ಅವರು ತೀರಿಹೋದಬಳಿಕ, ನಮ್ಮ ವೈರತ್ವವೂ ತೀರಿಹೋದಂತಾಯಿತು. ನಿನ್ನೊಡನೆ ನಮ್ಮದ್ವೇಷವಂತೂ ಮೊದಲಿಂದಲೂ ಇಲ್ಲ. ಅಂದಬಳಿಕ ಒಪ್ಪಂದ ಮಾಡಿಕೊಳ್ಳುವದಕ್ಕೆ ಅಡ್ಡಿಯಿಲ್ಲ. ”

“ ಸಾಮ್ರಾಟ ಅಕಬರಶಹರವರು ಇದಕ್ಕೆ ಸಮ್ಮತಿಸಬಹುದೇ? ನಾನು ಮೊಗಲರ ಕಡುಹಗೆಗಳಾದ ಪಠಾಣಬಾದಶಹ ಮಿರಾನಶಹರವರ ಮಗಳಾಗಿದ್ದೇನೆಂಬದನ್ನು ಮರೆಯಬೇಡಿರಿ. ”

“ ಅದು ಹೇಗೆ ಇರಲಿ, ನಾನು ಬಾದಶಹರಿಗೆ ಈ ಸಂಗತಿಯನ್ನು ತಿಳಿಸಿಹೇಳಿ, ಅವರು ಒಪ್ಪಂದಕ್ಕೆ ಒಪ್ಪುವಂತೆಮಾಡುವೆನು. ಒಂದುವೇಳೆ ಅವರು ನನ್ನ ಮಾತಿಗೆ ಸಮ್ಮತಿಸದೆ ಸಹಾಯಹೀನಳೂ, ನಿರಪರಾಧಿನಿಯೂ ಆದೊಬ್ಬ ಅಬಲೆಯ ರಾಜ್ಯವನ್ನಪಹರಿಸುವುದಕ್ಕೆ ಮನಸ್ಸುಮಾಡುವರಾದರೆ, ನಾನು ಈ ಸೇನಾಪತಿತ್ವವನ್ನು ತ್ಯಾಗಮಾಡುವೆನು. ”

ಶಹಾಜಾದನ ಹೃದಯದ ಉದಾರತೆಯನ್ನು ನೋಡಿ, ಪನ್ನಾಮತಿಯು ಮನಸ್ಸಿನಲ್ಲಿಯೇ ಅವನನ್ನು ಹೊಗಳಿದಳು. ತರುವಾಯ ಅವಳು ಹಾಸ್ಯಮುಖಳಾಗಿ—"ಹಾಗಾದರೆ, ನೀನು ಯಾವ ಕರಾರುಗಳಿಂದ ನಮ್ಮೊಡನೆ ಒಪ್ಪಂದಮಾಡಿಕೊಳ್ಳುವುದಕ್ಕೆ ಸಮ್ಮತಿಸುವೆ?"

"ಹೆಚ್ಚಿನ ಶರತ್ತುಗಳೇನೂ ಇಲ್ಲ. ನೀನು ಅಫಜಾಯಿದುರ್ಗದ ರಾಣಿಯಾಗಿರಬೇಕು; ಮತ್ತು ನಮ್ಮೊಡನೆ ಸ್ನೇಹದಿಂದಿರಬೇಕು."

"ಇಷ್ಟೆಯೇ?"

"ನೀನು ನನ್ನೊಡನೆ ಲಾಹೋರಕ್ಕಾಗಲಿ, ದಿಲ್ಲಿಗಾಗಲಿ ಬಂದು ಸಾಮ್ರಾಟರ ದರ್ಶನ ತೆಗೆದುಕೊಳ್ಳಬೇಕು."

"ಅದೇಕೆ?"

"ನೀನು ಬಾದಶಹರ ಬಳಿಗೆ ಬಂದು, ಅವರ ಅಧೀನತೆಯನ್ನೊಪ್ಪಿಕೊಳ್ಳಬೇಕು."

"ನಿನ್ನ ಬಳಿಯಲ್ಲಿ ಅಧೀನತ್ವವನ್ನೊಪ್ಪಿಕೊಂಡರೆ ಆಗದೇನು? ಸಾಮ್ರಾಟರ ಬಳಿಗೆ ಬಂದು ನಾನು ಮಾಡುವದಾದರೂ ಏನು?"

ಶಹಾಜಾದನು ತುಸುಕೃತ್ರಿಮ ಕೋಪವನ್ನು ತೋರ್ಪಡಿಸಿ, ಹೇಳಿದನು—"ನಬಾಬನಂದಿನಿ, ನಾನು ಸ್ವತಂತ್ರನಲ್ಲ. ದಿಲ್ಲಿಯ ಸಾಮ್ರಾಟರ ಸೇವಕ. ಅವರ ಅಪ್ಪಣೆಯಂತೆ ವರ್ತಿಸುವದು ನನ್ನ ಕರ್ತವ್ಯ. ಅವರು ಮಿರಾನಶಹರನ್ನು ಹಿಡಿದುಕೊಂಡು ಬರುವಂತೆ ಅಪ್ಪಣೆ ಮಾಡಿದ್ದರು. ಆದರೆ ಮಿರಾನಶಹರು ಸತ್ತದ್ದರಿಂದ ನಾನು ನಿನ್ನನ್ನು ಅವರ ಬಳಿಗೆ ಕರೆದುಕೊಂಡು ಹೋಗಬೇಕಾಗಿದೆ. ಸಾಮ್ರಾಟರು ಉದಾರರಾಗಿದ್ದಾರೆ. ನೀನವರ ಅಧೀನತೆಯನ್ನೊಪ್ಪಿಕೊಂಡೆಯಾದರೆ, ಅವರು ನಿನ್ನನ್ನು ಈ ರಾಜ್ಯದ ರಾಣಿಯನ್ನಾಗಿ ಮಾಡುವರು. ನಿನ್ನೊಡನೆ ಸಭ್ಯರೀತಿಯಿಂದ ನಡೆದುಕೊಳ್ಳುವರು. ಹೀಗಿರಲು ನೀನು ಅಲ್ಲಿಗೆ ಬರಲಿಕ್ಕೆ ಅಡ್ಡಿಯೇನು?"

"ಒಂದುವೇಳೆ ನಾನು ಅಲ್ಲಿಗೆ ಬಾರದಿದ್ದರೆ?"

"ನಾನು ನಿನ್ನನ್ನು ಬಂದಿಯನ್ನಾಗಿ ಮಾಡಿ ಬಾದಶಹರ ಬಳಿಗೆ ಒಯ್ಯುವೆನು. ನಾನು ನಿನ್ನನ್ನೂ, ಅಫಶಾನನನ್ನೂ ಸೆರೆಹಿಡಿದುಕೊಂಡು ಹೋದೆನಾದರೆ, ದರಬಾರದಲ್ಲಿ ನನ್ನ ಗೌರವವೂ ಮರ್ಯಾದೆಯೂ ಹೆಚ್ಚುವುವು. ನೀವಿಬ್ಬರೂ ಅನಾಯಾಸವಾಗಿ ನನ್ನ ಕೈಯಲ್ಲಿ ಸಿಕ್ಕಿರುವಿರಿ. ಇಂಥ ಸುಸಂಧಿಯನ್ನು ಯಾರಾದರೂ ವ್ಯರ್ಥವಾಗಿ ಕಳೆದುಕೊಳ್ಳುವುದುಂಟೇ?"

ಈ ಮಾತನ್ನು ಕೇಳಿ, ಪನ್ನಾಮತಿಯ ಮುಖವು ಬಾಡಿತು. ಅವಳು ಮನಸ್ಸಿನಲ್ಲಿಯೇ ವಿಚಾರಿಸಿದಳು—"ಈ ಮೊಗಲರು ಪಠಾಣರ ಚಿರ ಶತ್ರುಗಳು! ಇವರ ಬಳಿಯಲ್ಲಿ ಒಪ್ಪಂದದ ಪ್ರಾರ್ಥಿನಿಯಾಗಿ, ಈ ರೀತಿ ಏಕಾಂಗಿಯಾಗಿ ಬಂದದ್ದು ನನ್ನ ದೊಡ್ಡ ತಪ್ಪಾಯಿತು! ಇನ್ನು ಮಾಡುವುದೇನು?"

ಪನ್ನಾಮತಿಯ ಬಾಡಿದ ಮುಖವನ್ನು ನೋಡಿ, ಶಹಜಾದನಿಗೆ ದಯೆಬಂದಿತು. ಅವನು ಈ ವರೆಗೆ ಪನ್ನಾಮತಿಯೊಡನೆ ಹುಡುಗಾಟಿಕೆ ನಡೆಸಿದ್ದನು. ಆದರೆ ಪನ್ನಾಮತಿಯು ಇದನ್ನು ತಿಳಿದವಳಾಗಿರಲಿಲ್ಲ. ಆದ್ದರಿಂದ ಅವಳು ಅಸಮಾಧಾನಕ್ಕೊಳಗಾಗಬೇಕಾಯಿತು.

ಶಹಾಜಾದನು ಹಾಸ್ಯಮುಖನಾಗಿ ಹೇಳಿದನು—"ನಬಾಬನಂದಿನಿ, ನಾನು ಈ ವರೆಗೆ ವಿನೋದಕ್ಕಾಗಿ ಹಾಗೆ ಮಾತಾಡಿದೆನು. ಆದರೆ ನೀನದನ್ನು ನಿಜವೆಂದು ನಂಬಿ ಮನಸ್ಸಿಗೆ ಅಸಮಾಧಾನ ಹಚ್ಚಿಕೊಂಡಂತೆ ತೋರುತ್ತದೆ. ನೀನೀಗ ವಿಶೇಷದುಃಖದಲ್ಲಿರುವೆ. ಈ ಪ್ರಸಂಗದಲ್ಲಿ ನಾನು ವಿನೋದವಾಡಲು ಯತ್ನಿಸಿದ್ದೇ ಅನುಚಿತವು. ನಾನು ಬಾದಶಹರವರ ಪುತ್ರನು. ತಂದೆಗಳು ನನ್ನ ಕೋರಿಕೆಯನ್ನು ತಳ್ಳಲಾರರು. ನಾನು ಹೇಳಿದಂತೆ ಅವರು ನಡೆದುಕೊಳ್ಳುವರು. ಈಗ ನೀನು ಲಾಹೋರಕ್ಕೆ ಬರುವ ಆವಶ್ಯಕತೆಯಿಲ್ಲ.

ಪನ್ನಾಬೇಗಮು, ಮೊಗಲರು ಕೃತಘ್ನರೆಂದೂ ಆಗಲಾರರೆಂಬದನ್ನು ಮರೆಯದಿರು. ನೀನು ನನ್ನನ್ನು ಬಂಧಮುಕ್ತನನ್ನಾಗಿ ಮಾಡಿ,

ಉಪಕಾರಮಾಡಿರುವೆ. ಇದಕ್ಕಾಗಿ ನೀನು ಬಹಳ ಕಷ್ಟಹನ್ನನುಭವಿಸ ಬೇಕಾಯಿತೆಂಬದನ್ನು ನಾನು ಕೇಳಿದ್ದೇನೆ. ಇದಕ್ಕಾಗಿ ನಿನ್ನ ವಿಷಯ ದಲ್ಲಿ ನಾನು ಬಹಳ ಕೃತಜ್ಞನಾಗಿದ್ದೇನೆ. ದೇವರ ಸೃಷ್ಟಿಯಲ್ಲಿ ನೀನು ಅಪ್ರತಿಮಳಾಗಿರುವೆ. ಹೆಂಗಸರಲ್ಲಿ ನಿನ್ನಂತೆ ಉತ್ತಮಗುಣಗಳುಳ್ಳವರು ಅಪರೂಪ. ನಿನ್ನನ್ನು ನೋಡಿ, ನನಗೆ ಬಹಳ ಆನಂದವಾಗುತ್ತಿರುವದು. ನಿನ್ನಂಥ ಬುದ್ಧಿಶಾಲಿನಿಯೂ, ಶಕ್ತಿಶಾಲಿನಿಯೂ ಆದ ಅರ್ಧಾಂಗಿಯು ನನಗೆ ದೊರಕಿದ್ದರೆ, ಈ ಅವಧಿಯಲ್ಲಿ ನಾನು ಅರ್ಧ ಹಿಂದೂಸ್ಥಾನದ ಬಾದಶಹನಾಗುತ್ತಿದ್ದೆನು!

ಇನ್ನು ನೀನು ನಿನ್ನ ಅಂತಃಪುರಕ್ಕೆ ಹೋಗಬಹುದು. ಒಪ್ಪಂದ ಕ್ಕಾಗಿ ಯಾವ ಕರಾರುಗಳನ್ನೂ ಮಾಡಿಕೊಳ್ಳುವ ಅವಶ್ಯವಿಲ್ಲ. ಇನ್ನು ನೀನು ಸ್ವತಂತ್ರಳು. ನಿನ್ನ ರಾಜ್ಯವು ಸ್ವತಂತ್ರವು. ನಿನ್ನ ಪ್ರಜೆಗಳೂ ಸ್ವತಂತ್ರರೂ. ನಿನ್ನ ಇಚ್ಛೆಯೂ ಸ್ವತಂತ್ರವು. ನೀನು ನಿನಗಿಷ್ಟವಿರು ವಂತೆ ವರ್ತಿಸಬಹುದು. ನಾನು ಅಫಶಾನನನ್ನು ಬಿಟ್ಟುಕೊಡುವೆನು. ಈ ಅಫಶಾನನು ನಿನ್ನಲ್ಲಿ ಅನುರಕ್ತನಾಗಿರುವನೆಂದು ಕೇಳಿದ್ದೇನೆ. ಭವಿಷ್ಯ ತ್ಕಾಲದಲ್ಲಿ ನೀವಿಬ್ಬರೂ ಸುಖಿಗಳಾಗಿರೆಂದು ನಾನು ಆಶೀರ್ವಾದ ಮಾಡು ತ್ತೇನೆ. ನಿನ್ನ ಪಟ್ಟಾಭಿಷೇಕದ ದಿವಸ ನನ್ನನ್ನು ಕರೆಕಳುಹು. ಅಂದರೆ ನಾನು ಬಂದು, ಸ್ವತಃ ನಿನ್ನ ತಲೆಯಮೇಲೆ ರಾಜಮುಕುಟವನ್ನಿಡುವೆನು. ಇದೇ ನನ್ನ ಒಪ್ಪಂದದ ಕರಾರು!"

ಪನ್ನಾಮತಿಯ ಆಯತನೇತ್ರಗಳು ಆನಂದಾಶ್ರುಪೂರ್ಣವಾದವು. ಅವಳು ಮನಸ್ಸಿನಲ್ಲಿಯೇ ಅಂದುಕೊಂಡಳು—"ಅಕಬರಬಾದಶಹರ ಕೀರ್ತಿಯೂ, ಉದಾರತೆಯೂ ಜಗದ್ವಿಶ್ರುತವಾಗಿವೆ. ಅವರ ಮಗನಿವನು! ಅಂದ ಬಳಿಕ ಇವನು ಉದಾರನಾಗಿರುವುದು ಅರಿದಲ್ಲ! ಇಂಥ ಮಹಾತ್ಮನ ವಿಷಯದಲ್ಲಿ ನಾನಿದುವರೆಗೆ ಸುಳ್ಳೇ ಸಂದೇಹವನ್ನು ತೆಗೆದುಕೊಂಡೆನಲ್ಲ!"

ಪನ್ನಾಮತಿಯು ತನ್ನ ಆಸನದಿಂದೆದ್ದು, ಮೊಳಕಾಲೂರಿ, ಶಹಾ ಜಾದನ ಪಾದಗಳನ್ನು ಹಿಡಿದು—"ಶಹಾಜಾದ, ನಿಮ್ಮ ಉಪಕಾರವು ಬಹಳ ವಾಯಿತು. ಶತ್ರುಗಳ ವಿಷಯದಲ್ಲಿ ಇಷ್ಟೊಂದು ಉದಾರತೆಯಿಂದಾ

ಚರಿಸುವವರು ಅಪರೂಪ. ನಿಮ್ಮ ಈ ಶ್ರೇಷ್ಠಗುಣವನ್ನು ನೋಡಿ, ನನಗೆ ಬಹಳ ಆನಂದವಾಗುತ್ತಿದೆ. ಆದರೆ ಅಭಾಗಿನಿಯಾದ ನಾನು ನಿಮ್ಮ ಈ ಉಪಕಾರವನ್ನು ತೀರಿಸಲು ಅಸಮರ್ಥಳಾಗಿದ್ದೇನೆ. ಇದಕ್ಕಾಗಿ ನನಗೆ ಬಹಳ ಕೆಡಕೆನಿಸುತ್ತದೆ," ಎಂದು ಹೇಳಿದಳು.

ಶಹಾಜಾದನು ಈ ಮಾತನ್ನು ಇಷ್ಟಕ್ಕೇ ಮುಗಿಸುವದಕ್ಕಾಗಿ— "ಪನ್ನಾಬೇಗಮ, ಇದು ಕಾರಾಗೃಹದ ಕೀಲಿಯಕೈ. ಇದನ್ನು ತೆಗೆದುಕೊ. ನನ್ನೊಬ್ಬ ಸೇವಕನು ನಿನ್ನೊಡನೆ ಬರುವನು. ಸ್ವತಃ ನೀನೇ ಹೋಗಿ, ಅಫಶಾನನನ್ನು ಬಂಧಮುಕ್ತನನ್ನಾಗಿ ಮಾಡಿ, ಇಲ್ಲಿಗೆ ಕರೆದುಕೊಂಡುಬಾ," ಎಂದು ಹೇಳಿದನು.

ತರುವಾಯ ಶಹಾಜಾದನು ತನ್ನ ಸೇವಕನಾದ ಸಮಸೇರಖಾನನನ್ನು ಕರೆದು—"ನೀನು ಇವಳೊಡನೆ ಹೋಗಿ, ಇವಳಿಗೆ ಕಾರಾಗಾರವನ್ನು ತೋರಿಸು. ಪಠಾಣ ಸೇನಾಪತಿಯಾದ ಅಫಶಾನನನ್ನು ಬಂಧಮುಕ್ತನನ್ನಾಗಿ ಮಾಡಿದ್ದೇನೆ. ಇನ್ನು ಅವನು ಸ್ವತಂತ್ರನು. ಒಂಬತ್ತು ಜನ ಪಠಾಣಸೈನಿಕರು ನಮ್ಮಲ್ಲಿ ಬಂದಿಗಳಾಗಿರುವರು. ಅವರನ್ನೂ ಬಿಟ್ಟುಬಿಡು. ಮತ್ತು ಅವರನ್ನು ಇವಳ ಅಂಗರಕ್ಷಕರನ್ನಾಗಿ ನಿಯಮಿಸಿ, ಇವಳೊಡನೆ ಕಳುಹಿಸಿಕೊಡು," ಎಂದು ಹೇಳಿದನು.

ಪನ್ನಾಮತಿಯಿಂದ ಹೆಚ್ಚಿಗೆ ಮಾತಾಡುವುದಾಗಲಿಲ್ಲ. ಅವಳು ಶಹಾಜಾದನ ಕೈಯಿಂದ ಕೀಲಿಯ ಕೈ ತೆಗೆದುಕೊಂಡು ಸೆರೆಮನೆಯ ಕಡೆ ನಡೆದಳು. ಸಮಸೇರನು ಮಾರ್ಗದರ್ಶಕನಾಗಿ ಇವಳ ಮುಂದೆ ನಡೆದನು.

ಪನ್ನಾಮತಿಯು ಅಫಶಾನನನ್ನು ಬಂಧಮುಕ್ತನನ್ನಾಗಿ ಮಾಡಿದಳು. ಶಹಾಜಾದನ ಅಪ್ಪಣೆಯನ್ನು ಪಡೆದು, ಶಿಬಿಕಾರೋಹಣ ಮಾಡಿ, ತನ್ನ ಅರಮನೆಗೆ ನಡೆದಳು. ಸುಲತಾನ ದಾನಿಯಲನು ರಕ್ತಪಾತವಿಲ್ಲದೆ, ಯುದ್ಧ ಮಾಡದೆ, ಪರಿಶ್ರಮಗೊಳ್ಳದೆ ಈ ರೀತಿಯಿಂದ ಅಫಜಾಯಿ ದುರ್ಗವನ್ನು ಗೆದ್ದುಕೊಂಡನು.

ಶಹಾಜಾದನು ಮರುದಿವಸ ಮುಂಜಾನೆ ಈ ಸಂಗತಿಗಳನ್ನೆಲ್ಲ ಕಾಣಿಸಿ, ತಂದೆಗೆ ಪತ್ರಬರೆದನು. ಮುಂದೆ ನಾಲ್ಕುದಿವಸಗಳಾದ ಮೇಲೆ ಸಾಮ್ರಾಟನಿಂದ ಉತ್ತರವು ಬಂದಿತು. ಅದರಲ್ಲಿ ಸಾಮ್ರಾಟನು ಬರೆದದ್ದೇನಂದರೆ—"ನಾವು ಈ ಯುದ್ಧದ ಯಾವತ್ತು ಭಾರವನ್ನು ನಿನ್ನ ಮೇಲೆ ಹೊರಿಸಿದ್ದೇವೆ. ಈ ಪ್ರಸಂಗದಲ್ಲಿ ನೀನು ನಿನ್ನ ಮನಸ್ಸಿಗೆ ಬಂದಂತೆ ವರ್ತಿಸಬಹುದು. ಮಿರಾನಶಹರು ತೀರಿಕೊಂಡದ್ದನ್ನು ತಿಳಿದು, ನಮಗೆ ಬಹಳ ಅಸಮಾಧಾನವಾಗುತ್ತಿದೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ! ಪನ್ನಾಮತಿಯು ಪಟ್ಟಾಭಿಷೇಕದ ಕಾಲಕ್ಕೆ ಕೊಡಬಹುದಾದ ವಸ್ತ್ರಭೂಷಣಗಳನ್ನು ಕಳುಹಿಸಿದೆ. ನೀನು ಇವುಗಳನ್ನು ಅಭಿಷೇಕದ ದಿವಸ ಅವಳಿಗೆ ಸಮರ್ಪಿಸು."

ಶಹಾಜಾದನು ಬಾದಶಹನಿಂದ ಬಂದ ಉತ್ತರವನ್ನು ಪನ್ನಾಮತಿಗೆ ತಿಳುಹಿಸಿದನು. ಇದನ್ನು ತಿಳಿದು ಪನ್ನಾಮತಿಗೆ ಬಹಳ ಆನಂದವಾಯಿತು. ಅವಳು ಉದಾರರಾದ ಈ ತಂದೆ-ಮಕ್ಕಳನ್ನು ಬಹಳವಾಗಿ ಕೊಂಡಾಡಿದಳು.

---

## ಹದಿನೆಂಟನೆಯ ಪರಿಚ್ಛೇದ.

---

### ಪ್ರೇಮ ವಿಹ್ವಲೆ.

ಸಂಧ್ಯಾ ಸಮಯವು ಮೀರಿದೆ. ಆಗಸದಲ್ಲಿ ಪೂರ್ಣ ಚಂದ್ರನು ಉದಿತನಾಗಿದ್ದಾನೆ. ಭಗವಾನ್ ರಜನೀನಾಥನ ಉಜ್ವಲಕಿರಣಗಳು ಶ್ವೇತಶಿಲೆಯಿಂದ ನಿರ್ಮಿತವಾದ ಕಂಬಗಳಮೇಲೂ, ಅರಮನೆಯ ಶಿಖರದಮೇಲೂ ಬಿದ್ದಿವೆ. ಅದರಿಂದವು, ಪ್ರಭಾತ ಕಾಲದ ತುಷಾರ ಕಣಗಳಿಂದ ಮಂಡಿತವಾದಂತೆ ಕಾಣುತ್ತಲಿವೆ. ಅಸಂಖ್ಯದೀಪ ಕಿರಣಗಳು ಕಂಬದಲ್ಲಿ ಕೆತ್ತಿದ ಗಿಡಬಳ್ಳಿಗಳ ಮೇಲೆ ಬಿದ್ದು, ಬಹುಶೋಭೆಯನ್ನುಂಟುಮಾಡಿವೆ. ಪನ್ನಾಮತಿಯು ಅರಮನೆಯ ಅಂಗಳದಲ್ಲಿ ನಿಂತು

ಶಹಾಜಾದನ ಮಾರ್ಗ ಪ್ರತೀಕ್ಷೆಮಾಡುತ್ತಿದ್ದಾಳೆ; ಒಮ್ಮೊಮ್ಮೆ ನಿರಾಶ ಳಾಗಿ ಪೂರ್ಣಕಲೆಗಳಿಂದೊಪ್ಪುವ ಕುಮುದಿನೀಕಾಂತನನ್ನು ನೋಡು ತಲಿದ್ದಾಳೆ.

ಪನ್ನಾಮತಿಯ ಪಟ್ಟಾಭಿಷೇಕವಾಗಿ ಮೂರುದಿವಸಗಳು ಕಳೆದಿದ್ದವು. ಶಹಾಜಾದನು ಪಟ್ಟಾಭಿಷೇಕದ ದಿವಸ ಅರಮನೆಗೆ ಬಂದವನು ಅಲ್ಲಿಯೇ ಉಳಿದಿದ್ದನು. ಅದರಿಂದ ಈಗ ಶಹಾಜಾದನು ಪನ್ನಾಮತಿಯ ಅತಿಥಿ ಯಾಗಿದ್ದನು. ರಕ್ತಪಾತವಿಲ್ಲದೆ ಯುದ್ಧವು ಮುಗಿದುದಕ್ಕಾಗಿ ಪಠಾಣ ಸರದಾರರೆಲ್ಲರಿಗೆ ಆನಂದವಾಗಿತ್ತು. ಅವರೆಲ್ಲರು ಅಕಬರಬಾದಶಹನ ಆಧೀನತೆಯನ್ನೊಪ್ಪಿಕೊಂಡು, ಶಹಾಜಾದನೊಡನೆ ಸ್ನೇಹದಿಂದ ವರ್ತಿಸ ತೊಡಗಿದ್ದರು.

ಶಹಾಜಾದನು ಪನ್ನಾಮತಿಯು ಗೊತ್ತುಮಾಡಿಕೊಟ್ಟಿದ್ದ ಒಂದು ಸುಂದರವಾದ ಕೋಣೆಯಲ್ಲಿ ವಾಸಿಸುತ್ತಿದ್ದನು. ಪನ್ನಾಮತಿಯು ಪ್ರತಿ ದಿವಸ ಬಹಳ ವೇಳೆಯವರೆಗೆ ಈ ಶಹಾಜಾದನೊಡನೆ ಮಾತಾಡುತ್ತ ಕುಳಿತು ಅವನೊಡನೆ ವಿನೋದವಾಡುತ್ತಿದ್ದಳು. ಅವನ ಹಾಸಿಗೆಯನ್ನು ತಾನೇ ಹಾಸಿಕೊಡುತ್ತಿದ್ದಳು. ಅವನ ಆಹಾರಪದಾರ್ಥಗಳನ್ನು ಸಿದ್ಧಮಾಡಿ ಇರಿ ಸುತ್ತಿದ್ದಳು. ಅವನಿಗೆ ಕುಡಿಯುವದಕ್ಕೆ ಮದ್ಯವನ್ನು ಹಾಕಿಕೊಡುತ್ತಿ ದ್ದಳು. ಒಮ್ಮೊಮ್ಮೆ ವೀಣೆಬಾರಿಸಿ, ಅವನ ಮನಸ್ಸನ್ನು ಆನಂದಗೊಳಿಸು ತ್ತಿದ್ದಳು. ಬಹಳವೇನು? ಪನ್ನಾಮತಿಯು ಶಹಾಜಾದನ ಪ್ರಿಯಮೈತ್ರಿಯೂ, ವಿಶ್ವಾಸಿಕಳಾದ ದಾಸಿಯೂ ಆಗಿದ್ದಳೆಂದು ಹೇಳಬಹುದು. ಶಹಾಜಾದ ನಿಲ್ಲದಿದ್ದರೆ ಅವಳಿಗೆ ಹೊತ್ತೇಹೋಗುತ್ತಿರಲಿಲ್ಲ. ಒಂದರಕ್ಷಣ ಅವನು ಕಣ್ಣುಮರೆಯಾದನೆಂದರೆ, ಅವಳಿಗೆ ಅಸಮಾಧಾನವಾಗುತ್ತಿತ್ತು. ಅದರಿಂದ ವಳು ಚಾತಕಪಕ್ಷಿಯಂತೆ ಅವನ ಆಗಮನವನ್ನು ನೋಡುತ್ತ ಕುಳಿತು ಕೊಳ್ಳುತ್ತಿದ್ದಳು.

ಪನ್ನಾಮತಿಯು ಬಹುಕಾಲದವರೆಗೆ ಹಾದಿನೋಡಿದಳು. ಆದರೂ ದಾನಿಯಲನು ಬರಲಿಲ್ಲ. ಅದರಿಂದವಳಿಗೆ ಬಹಳ ವಿಷಾದವಾಯಿತು.

ಕಡೆಗೆ ಅವಳು ಬೇಸತ್ತು—“ಎಷ್ಟು ನಿಷ್ಠುರತೆಯಿದು!” ಎಂದು ಅಂದುಕೊಂಡಳು.

ಶಹಾಜಾದನು ಇವಳ ಈ ಸ್ಥಿತಿಯನ್ನು ನೋಡುತ್ತ ಸಮೀಪದಲ್ಲಿಯೇ ನಿಂತುಕೊಂಡಿದ್ದನು. ಆದರೆ ಇದು ಪನ್ನಾಮತಿಗೆ ಗೊತ್ತಾಗಿದ್ದಿಲ್ಲ. ಪನ್ನಾಮತಿಯು ಮಾತು ಶಹಾಜಾದನಿಗೆ ಕೇಳಿಸಿತು. ಅವನು ಪನ್ನಾಮತಿಯ ಬಳಿಗೆಬಂದು—“ಕೋಮಲೆ, ನಿನ್ನ ವಿಷಯದಲ್ಲಿ ನಿಷ್ಠುರತೆಯನ್ನಾಚರಿಸಿದವರಾರು?” ಎಂದು ಕೇಳಿದನು.

ಪನ್ನಾಮತಿಗೆ ಬಹಳ ನಾಚಿಕೆಯಾಯಿತು. ಅವಳು, ಕದ್ದೊಡವೆಯೊಂದಿಗೆ ಕಳ್ಳನು ಸಿಕ್ಕಿದಹಾಗಾಯಿತೆಂದು ಭಾವಿಸಿದಳು. ಆದರೂ ಅವಳು ಬುದ್ಧಿಮತಿಯಾದುದರಿಂದ ಹಾಸ್ಯಮುಖಳಾಗಿ—“ರಾಜಕುಮಾರ, ನನ್ನಸಂಗಡ ಕಠೋರತೆಯಿಂದಾಚರಿಸುವವರು ಯಾರೂ ಇಲ್ಲ; ಯಾಕಂದರೆ ಸಾಮ್ರಾಜ್ಞಿಯಾದ ನನ್ನ ಭೀತಿಯು ಸಕಲರಿಗೂ ಇರುವದು. ಆದರೆ ಅದೃಷ್ಟವು ಮಾತ್ರ ನನ್ನ ಅಂಕೆಯಲ್ಲಿಲ್ಲ. ಅದುಮಾತ್ರ ನನ್ನ ವಿಷಯದಲ್ಲಿ ನಿರ್ದಯವಾಗಿರುವುದು.” ಎಂದು ಹೇಳಿದಳು.

ಶಹಾಜಾದನು ಪನ್ನಾಮತಿಯ ರಹಸ್ಯವನ್ನು ತಿಳಿದನು. ಪನ್ನಾಮತಿಯು ಲಜ್ಜೆಯ ಮೂಲಕವಾಗಿ ತನ್ನ ಮನೋಭಾವವನ್ನು ಮರೆಮಾಚಲು ಯತ್ನಿಸುತ್ತಿರುವಳೆಂಬುದು ಅವನಿಗೆ ಗೊತ್ತಾಯಿತು. ಅವನು ಅವಳ ಕೈಹಿಡಿದುಕೊಂಡು, ಸಮೀಪದಲ್ಲಿರುವದೊಂದು ಚಂದ್ರಕಾಂತಶಿಲಾನಿರ್ಮಿತವಾದ ಆಸನದಮೇಲೆ ಕುಳಿತುಕೊಂಡನು. ಅವಳನ್ನು ಸಮೀಪದಲ್ಲಿ ಕುಳ್ಳಿರಿಸಿಕೊಂಡು ನಗೆಮೊಗದಿಂದ—“ನಬಾಬನಂದಿನಿ, ನೀನು ಮನೋಭಾವವನ್ನು ಎಷ್ಟೇ ಗೋಪನಮಾಡಿಕೊಳ್ಳಲು ಪ್ರಯತ್ನಿಸಿದರೂ, ಅದು ಹೊರಬೀಳದಿರದು. ಹೀಗಿರುವಲ್ಲಿ ಅದನ್ನು ಮುಚ್ಚಿಟ್ಟುಕೊಳ್ಳುವುದರಲ್ಲಿ ಅರ್ಥವೇನು? ನೀನು ನನ್ನನ್ನು ಕುರಿತು ಈ ಮಾತಾಡಿದೆಯೆಂದು ನನಗೆ ಬೋಧೆಯಾಗುತ್ತಿರುವುದು. ಇದು ನಿಜವೊ ಸುಳ್ಳೋ ಹೇಳು, ನೋಡೋಣ,” ಎಂದು ಅಂದನು.

"ರಾಜಪುತ್ರ, ಒಂದುವೇಳೆ ನಾನು ನಿನ್ನನ್ನು ಕುರಿತೇ ಈ ಮಾತಾಡಿದ್ದೆನಾದರೆ, ಇದು ತಪ್ಪಾದೀತೇನು? ಒಂದರಕ್ಷಣ ನಿನ್ನನ್ನಗಲಿದೆನಾದರೆ, ನನಗೆ ಹೊತ್ತೇಹೋಗದಂತಾಗುತ್ತದೆ. ಅತ್ಯಂತ ಪ್ರಿಯವಸ್ತುವನ್ನು ಕಳಕೊಂಡಷ್ಟು ಅಸಮಾಧಾನವಾಗುತ್ತದೆ. ಹೀಗಿರುವಾಗ ನಾನು ಮಾಡಲೇನು? ಇಂದು ನೀನು ಇಷ್ಟೇಕೆ ತಡಮಾಡಿದೆ?" ಎಂದು ಪನ್ನಾಮತಿಯು ಅಂದಳು.

"ಸಾಯಂಕಾಲದಲ್ಲಿ ಅಡ್ಡಾಡುವದಕ್ಕೆ ಹೋಗಿದ್ದೆನು. ಗುಡ್ಡದ ಮೇಲೆ ನಿಂತುನೋಡಿದರೆ, ಸೃಷ್ಟಿಸೌಂದರ್ಯವು ಬಹು ಮನೋಹರವಾಗಿ ಕಾಣುವದು. ನಾನು ಪ್ರಕೃತಿಯ ಈ ಮನೋಮುಗ್ಧಕರವಾದ ವೇಷವನ್ನು ನೋಡಿ, ವೇಳೆಯನ್ನು ಮರೆತುಬಿಟ್ಟೆನು. ಅದರಿಂದ ಮನೆಗೆ ಬರುವುದಕ್ಕೆ ತುಸು ತಡವಾಯಿತು."

"ತುಸು ಅಂದರೆ ಎಷ್ಟು?"

"ಒಂದು ತಾಸು ತಡವಾಗಿರಬಹುದು."

"ಇದು ನಿನಗೆ ಅಲ್ಪಕಾಲವಾಗಿ ಭಾಸವಾಯಿತೇನು? ನಾನಿಲ್ಲಿ ಚಾತಕ ಪಕ್ಷಿಯಂತೆ ಒಂದೇಸವನೆ ನಿನ್ನ ಹಾದಿಯನ್ನು ನೋಡುತ್ತ ನಿಂತುಕೊಂಡಿದ್ದೆನು. ಹೊತ್ತೇಹೋಗದಂತಾಗಿ, ನನಗೆ ಬಹಳ ಬೇಸರಿಕೆಯಾಗಿತ್ತು."

"ಕೋಮಲೆಯೆ, ನೀನು ನನ್ನನ್ನು ಪ್ರೀತಿಸುತ್ತಿರುವೆ. ಅದಕ್ಕಾಗಿ ನಿನಗೆ ಹೀಗೆ ಆಗುತ್ತಿರುವದು. ನಿನ್ನ ಈ ಮಮತೆಯನ್ನುನೋಡಿ, ನನಗೆ ಬಹಳ ಆನಂದವಾಗುತ್ತಿದೆ. ಆದರೆ ನಿನ್ನ ಈ ಪ್ರೇಮಕ್ಕೆ ಪ್ರತ್ಯುಪಕಾರ ಮಾಡುವ ಶಕ್ತಿಯು ನನ್ನಲ್ಲಿಲ್ಲ. ಇದಕ್ಕಾಗಿ ನನಗೆ ಬಹಳ ಅಸಮಾಧಾನವಾಗುತ್ತಿದೆ. ಉಪಾಯವಿಲ್ಲ. ಈಗ ನಾನು ಒಂದು ತಾಸು ನಿನ್ನನ್ನಗಲಿದೆನೆಂದರೆ, ನೀನು ಹೀಗೆಮಾಡುತ್ತಿರುವೆ. ನಾಳೆ ನಾನು ಲಾಹೋರಕ್ಕೆ ಹೋದೆನೆಂದರೆ, ಹೇಗೆ ಮಾಡುವೆ?"

ಈ ಪ್ರಶ್ನೆಗೆ ಪನ್ನಾಮತಿಯು ಏನೆಂದು ಉತ್ತರಹೇಳುವಳು? ಅವಳು ಬಹಳ ಇಕ್ಕಟ್ಟಿನಲ್ಲಿ ಬಿದ್ದಳು. 'ನಿಜವಾದಸಂಗತಿ ಹೇಳಿದೆನಾದರೆ,

ನೀನು ನಿರ್ಲಜ್ಜಳಿರುವೆಯೆಂದು ಅನ್ನುವ ಸಂಭವವುಂಟು; ಹೇಳದೆ ಬಿಟ್ಟರೆ ಮನಸ್ಸಿನ ತಳಮಳ ಹೋಗುವಂತಿಲ್ಲ' ಎಂದು ಆಲೋಚಿಸಿ ಅವಳು ಆದಷ್ಟುಧೈರ್ಯತಂದುಕೊಂಡು—“ರಾಜಕುಮಾರ, ಕೈಮೀರಿ ಹೋಗುತ್ತಿರುವ ವಸ್ತುಗಳನ್ನು ಆಶಿಸಿ ಫಲವೇನು? ಆದರೂ ಉತ್ತಮ ಪದಾರ್ಥಗಳನ್ನು ಪ್ರೀತಿಸುವದು ಮಾನವನ ಸಹಜಧರ್ಮವಾಗಿದೆ. ಅಲ್ಲಿ ನೋಡು, ಯಾಮಿನೀನಾಥನು ತನ್ನ ಪೂರ್ಣಕಲೆಗಳಿಂದ ಗಗನವನ್ನು ಉಜ್ವಲವಾಗಿ ಮಾಡಿಬಿಟ್ಟಿದ್ದಾನೆ. ಆದರೆ ಅಮಾವಾಸ್ಯೆಯದಿವಸ ಈ ಚಂದ್ರಮನೆಲ್ಲಿ? ಆದರೂ ಜನರು ಈ ನಿಶಾನಾಥನನ್ನು ಪ್ರೀತಿಸದಿರುವ ದುಂಟೇ? ಈ ಚಂದ್ರಿಕೆಯನ್ನೂ, ಚಂದ್ರನನ್ನೂ ಪ್ರೀತಿಸುವ ಜನರು ಅಮಾವಾಸ್ಯೆಯದಿವಸ ಏನುಮಾಡಬೇಕು? ಮತ್ತೇನು! ಮರುಗುತ್ತ ಕೂಡುವವರ ಹೊರತು ಬೇರೆ ಮಾರ್ಗವೇ ಇಲ್ಲ,” ಎಂದು ಹೇಳಿದಳು.

ಶಹಾಜಾದನು ಈ ಮಾತನ್ನು ಮರೆಯಿಸುವದಕ್ಕಾಗಿ—”ನಬಾಬ ನಂದಿನಿ, ಬಾದಶಹರಿಂದ ಪತ್ರಬಂದಿದೆ. ನಾನು ನಾಡಿದ್ದುಬೆಳಿಗ್ಗೆ ಲಾಹೋರಕ್ಕೆ ಹೊರಡಬೇಕಾಗಿದೆ.” ಎಂದು ಹೇಳಿದನು.

“ಇನ್ನು ಕೆಲವುದಿವಸವಿದ್ದರೆ ಆಗದೇನು? ಬಾದಶಹರೇನು ನಿನ್ನನ್ನು ನೋಡುತ್ತಿರುವರೇನು? ಹೋದಮೇಲೆ ಏನಾದರೊಂದು ಹೇಳಿದ ರಾಯಿತು. ನಿನಗೆ ಇಲ್ಲಿ ಏತರಿಂದಾದರೂ ತ್ರಾಸವಾಗುತ್ತಿರುವುದೇನು? ಇಲ್ಲವಾದರೆ ನೀನು ಇಷ್ಟುತೀವ್ರ ನನ್ನನ್ನು ಬಿಟ್ಟುಹೋಗಲು ಮನಸ್ಸು ಮಾಡುತ್ತಿರುವುದೇಕೆ? ಆಗ್ರಾಪಟ್ಟಣದ ಅತುಲವೈಭವವೂ, ವಿಲಾಸವೂ ಇಲ್ಲಿ ಇಲ್ಲ; ಅಸಂಖ್ಯ ಸುಂದರಿಯರಿಂದ ಪೂರ್ಣವಾದ ರಂಗಮಹಲಿನ ಹಾಸ್ಯಕೋಲಾಹಲವು ಇಲ್ಲಿ ಇಲ್ಲ; ಕೋಮಲೆಯರ ಮಧುರ ಸಂಗೀತ ಧ್ವನಿಯು ಇಲ್ಲಿ ಇರುವುದಿಲ್ಲ; ಉತ್ತಮ ವಾದ್ಯಗಳ ಇಂಪಾದಧ್ವನಿಯು ಇಲ್ಲಿ ಕೇಳಬರುವುದಿಲ್ಲ, ಇವೆಲ್ಲವನ್ನು ಬಿಟ್ಟುಬಂದು ಬಹಳದಿವಸಗಳಾದುವು. ಇವುಗಳಿಗಾಗಿ ನಿನ್ನಮನಸ್ಸು ಆಕಡೆಗೆ ಹರಿಯುತ್ತಿರುವದೇನು? ಈ ತರದ ವೈಭವವು ಈ ರಾಜಧಾನಿಯಲ್ಲಿಲ್ಲದಿದ್ದರೂ, ಇಲ್ಲಿ ಮನೋಮುಗ್ಧಕರವಾದ ಸಂಗತಿಗಳ ಅಭಾವವಿಲ್ಲ. ಈ ದೇಶದ ಪರ್ವತದ ಸ್ನಿಗ್ಧವೂ ಶೀತ

ಲವೂ ಆಗಿ ಮನೋಹರವಾದ ಗಾಳಿಯು, ಕಲ್ಲುಗಳನ್ನು ಭೇದಿಸಿಕೊಂಡು ಪ್ರವಹಿಸುತ್ತಿರುವ ನದಿಗಳ ಕಲನಾದವು, ಗಿಡಗಳ ಕೊಂಬೆಗಳಲ್ಲಡಗಿರುವ ಕೋಗಿಲೆಗಳ ಕೂಜಿತವು, ಇವು ನಿನ್ನ ಮನಸ್ಸಿಗೆ ಬರಲೊಲ್ಲವೇನು? ದಾಸಿಯಾದ ನನ್ನ ಪರಿಚರ್ಯವು ನಿನ್ನ ಮನಸ್ಸಿಗೆ ಬರಲೊಲ್ಲದೇನು? ನನ್ನ ಅಕೃತ್ರಿಮ ಪ್ರೀತಿಯು ನಿನಗೆ ಆನಂದವನ್ನುಂಟುಮಾಡುವದಿಲ್ಲವೇನು? ಈ ತರದ ಸಂಗತಿಗಳು ಸಾಮ್ರಾಟರ ರಾಜಧಾನಿಯಲ್ಲಿ ದೊರೆಯಲಾರವು. ಆದುದರಿಂದ ಇನ್ನು ಕೆಲವುದಿವಸ ಇಲ್ಲೇ ಇದ್ದು, ಇವುಗಳ ಅನುಭವವನ್ನು ತೆಗೆದುಕೊಂಡು ಹೋಗುವದು ಯೋಗ್ಯವಲ್ಲವೇನು?"

"ಕೋಮಲೆ, ನೀನು ಹೇಳುತ್ತಿರುವದು ನಿಜವಾದುದು. ನನಗಾದರೂ ಇನ್ನು ಕೆಲವು ದಿವಸ ಇಲ್ಲಿಯೇ ಇರಬೇಕೆಂಬ ಮನಸ್ಸಿದೆ. ಆದರೆ ತಂದೆಯ ಮಾತನ್ನು ಮೀರುವುದಾಗಲಿ, ಅವರನ್ನು ವಂಚಿಸಲೆಳಸುವುದಾಗಲಿ ನನ್ನ ಕೈಯಿಂದಾಗದು. ಆದುದರಿಂದ ನಾನು ಹೋಗಲೇಬೇಕಾಗಿದೆ." ಎಂದು ಶಹಾಜಾದನಂದನು.

ಪನ್ನಾಮತಿಯು ನಿಟ್ಟುಸಿರನ್ನು ಬಿಟ್ಟು ವಿಷಾದದಿಂದ—"ಶಹಾಜಾದ, ಪುನಃ ನಿನ್ನ ದರ್ಶನವು ಯಾವಾಗ?" ಎಂದು ಕೇಳಿದಳು.

"ನಬಾಬನಂದಿನಿ, ನಿನಗೆ ನನ್ನ ಅವಶ್ಯಕತೆಯುಂಟಾದರೆ ಹೇಳಿಕಳುಹಿಸು. ನಿನ್ನ ಆಜ್ಞಾಪತ್ರವನ್ನು ನೋಡಿದ ಕೂಡಲೇ ಹೊರಟು ಬರುವೆನು."

"ನೀನು ನನ್ನ ಮೇಲೆ ಇಷ್ಟೊಂದು ಅನುಗ್ರಹಮಾಡಬಹುದೇ? ನೀನು ಆಗ್ರಾ, ದಿಲ್ಲಿ ಪಟ್ಟಣಗಳಲ್ಲಿಯ ರಂಗಮಹಲಿನಲ್ಲಿರತಕ್ಕವನು. ರಂಗಮಹಲು ದಾಸದಾಸಿಯರಿಂದಲೂ, ಸುಂದರಿಯರಾದ ನವಯುವತಿಯರಿಂದಲೂ ಪರಿಪೂರ್ಣವಾದುದು. ಇಂಥ ಸ್ಥಳದಲ್ಲಿ ವಾಸಮಾಡುವ ನಿನ್ನ ಕಿವಿಗೆ, ನನ್ನ ಕಾತರಧ್ವನಿ ಕೇಳಬಹುದೇನು? ನೂರಾರು ರಾಜಕಾರ್ಯಗಳಲ್ಲಿ ತೊಡಗಿಹೋದ ನಿನಗೆ ನನ್ನ ನೆನಪು ಆಗಬಹುದೇನು?"

" ಪನ್ನಾಬೇಗಮು, ನಾನು ನಿನ್ನನ್ನು ಎಂದೂ ಮರೆಯಲಾರೆನು. ನನ್ನನ್ನೇ ನಾನು ಮರೆತಂದು ಮಾತ್ರ ನಿನ್ನನ್ನು ಮರೆಯಬಹುದಾಗಿದೆ. ಈ ವಿಷಯದಲ್ಲಿ ನೀನು ಸಂದೇಹ ತೆಗೆದುಕೊಳ್ಳಬೇಡ."

" ನೀನು ಹೋಗುವ ಮುಂದೆ, ನನ್ನದೊಂದು ಸಾಮಾನ್ಯ ವಾದ ಮನವಿಯನ್ನು ಕೇಳಲಿಕ್ಕೆಬೇಕು."

" ಅದೇನು ಹೇಳು. ನಾನು ನಿನ್ನ ಮಾತನ್ನು ಕೇಳಲಿಕ್ಕೆ ಸದಾ ತತ್ಪರನಿದ್ದೇನೆ."

" ದಿಲ್ಲಿಯ ಬಾದಶಹರು ಪಟ್ಟಾಭಿಷೇಕದ ಕಾಲಕ್ಕೆ ನನಗೆ ಬಹು ಮೂಲ್ಯವಾದ ವಸ್ತ್ರಾಭರಣಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಅವರಿಗೆ ಈ ವರೆಗೆ ಯಾವ ತರದ ಕಾಣಿಕೆಯನ್ನೂ ಕೊಟ್ಟಿಲ್ಲ. ಹಿಂದುಸ್ಥಾನದ ಸಾಮ್ರಾಟರಿಗೆ ಸಮರ್ಪಿಸುವಂಥ ವಸ್ತುಗಳು ನನ್ನ ಬಳಿಯಲ್ಲಿ ಇಲ್ಲವೇ ಇಲ್ಲ. ಆದರೂ ಏನೂ ಕೊಡದಿರುವುದು ಸರಿಯಲ್ಲ. ಅದಕ್ಕಾಗಿ ನನ್ನಲ್ಲಿರುವ ಕೆಲವು ವಸ್ತುಗಳನ್ನು ಅವರಿಗೆ ಕಾಣಿಕೆಯಾಗಿ ಕೊಡಬೇಕೆಂದು ಮಾಡಿದ್ದೇನೆ. ನೀನು ಅವುಗಳನ್ನು ತೆಗೆದುಕೊಂಡು ಹೋಗಿ, ಬಾದಶಹರಿಗೆ ಮುಟ್ಟಿಸಬೇಕು."

" ನೀನು ಕೊಡತಕ್ಕ ಕಾಣಿಕೆಯಾದರೂ ಯಾವುದು? ತೆಗೆ, ನೋಡೋಣ."

" ನೀನು ಇಲ್ಲಿಯೇ ಸ್ವಲ್ಪ ಹೊತ್ತು ಕುಳಿತಿರು. ನಾನು ಒಳಗೆ ಹೋಗಿಬರುವೆನು," ಎಂದು ಹೇಳಿ ಪನ್ನಾಮತಿಯು ತನ್ನ ಕೋಣೆಯ ಕಡೆಗೆ ನಡೆದಳು. ಶಹಾಜಾದನು ಪನ್ನಾಮತಿಯು ಯಾವ ವಸ್ತುಗಳನ್ನು ತರುವಳೋ ಎಂದು ಕುತೂಹಲನಾಗಿ ಅವಳ ಹಾದಿಯನ್ನು ನೋಡುತ್ತ ಕುಳಿತುಕೊಂಡನು.

ಸ್ವಲ್ಪಹೊತ್ತಿನಮೇಲೆ ಪನ್ನಾಮತಿಯು ಹಸ್ತಿದಂತನಿರ್ಮಿತವಾದುದೊಂದು ಸಣ್ಣ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಶಹಾಜಾದನ ಬಳಿಗೆ ಬಂದಳು. ತರುವಾಯ ಅವಳು ಆ ಪೆಟ್ಟಿಗೆಯನ್ನು ತೆರೆದು,—

"ನಾನು ಈ ರತ್ನಗಳನ್ನು ದಿಲ್ಲೀಶ್ವರರಿಗೆ ಕಾಣಿಕೆಯಾಗಿ ಕೊಡಬೇಕೆಂದು ಮಾಡಿದ್ದೇನೆ. ನೀನು ಇವುಗಳನ್ನು ತೆಗೆದುಕೊಂಡು ಹೋಗಿ, ಪನ್ನಾ ಮತಿಯು ತನ್ನ ರಾಜ್ಯಾಭಿಷೇಕದ ಕಾಣಿಕೆರೂಪವಾಗಿ ಕೊಟ್ಟಳೆಂದು ಹೇಳಿ, ಅವರಿಗೆ ಸಮರ್ಪಿಸು." ಎಂದು ಹೇಳಿದಳು.

ಆ ಪೆಟ್ಟಿಗೆಯಲ್ಲಿ ಬೇರೆಬೇರೆ ತರದ ಎಂಟು–ಹತ್ತು ರತ್ನಗಳಿದ್ದವು. ಅವುಗಳ ಬೆಲೆಯು ಏನಿಲ್ಲೆಂದರೂ ಸುಮಾರು ಒಂದು ಲಕ್ಷ ರೂಪಾಯಿ ಯಾಗಿರಬಹುದು.

ಶಹಾಜಾದನು ಆ ರತ್ನಗಳಲ್ಲೊಂದೆರಡನ್ನು ಚನ್ನಾಗಿ ನೋಡಿ,— "ಪನ್ನಾಬೇಗಮ, ನೀನು ಇವುಗಳನ್ನು ಎಲ್ಲಿ ದೊರಕಿಸಿದೆ?" ಎಂದು ಕೇಳಿದನು.

"ನನ್ನ ಹುಟ್ಟಿದ ದಿವಸ ತಂದೆಯು ಉಪಹಾರ ರೂಪವಾಗಿ ಒಂದೊಂದು ರತ್ನವನ್ನು ತಂದುಕೊಡುತ್ತಿದ್ದನು. ಕೆಲವು ವರುಷಗಳಿಂದ ನಾನವುಗಳನ್ನು ಕೂಡಿಹಾಕಿ, ಈ ಪೆಟ್ಟಿಗೆಯಲ್ಲಿ ಇರಿಸಿದ್ದೇನೆ."

"ಇವುಗಳನ್ನು ತೆಗೆದುಕೊಳ್ಳುವ ಇಚ್ಛೆ ನನಗಿಲ್ಲ."

"ಅದೇಕೆ?"

"ನಿನ್ನ ತಂದೆಯು ಇವುಗಳನ್ನು ನಿನಗಾಗಿ ಕೊಟ್ಟಿದ್ದಾನೆ. ಇವುಗಳನ್ನು ನೋಡಿದೆಯೆಂದರೆ ನಿನಗೆ ನಿನ್ನತಂದೆಯ ಸ್ಮರಣೆಯಾಗದಿರಲಾರದು. ಅದಕ್ಕಾಗಿ ನೀನು ಇವುಗಳನ್ನು ನಿನ್ನಬಳಿಯಲ್ಲಿಯೇ ಇಟ್ಟುಕೊಳ್ಳುವುದು ಯೋಗ್ಯವು. ಮೇಲಾಗಿ ದಿಲ್ಲಿಯಬಾದಶಹರಿಗೆ ರತ್ನಗಳ ಕೊರತೆಯಿಲ್ಲ. ಇದಕ್ಕಿಂತಲೂ, ಶ್ರೇಷ್ಠವಾದ ಅಸಂಖ್ಯರತ್ನಗಳು ಅವರ ಬಳಿಯಲ್ಲಿವೆ. ಹೀಗಿರಲು ನೀನು ಬಹುದಿವಸಗಳಿಂದ ಕೂಡಿಹಾಕಿಟ್ಟ ಪಿತೃದತ್ತ ವಸ್ತುಗಳನ್ನು ಅವರಿಗೆ ಕೊಡುವುದು ತರವಲ್ಲ."

"ಬಾದಶಹರಬಳಿಯಲ್ಲಿ ರತ್ನಗಳಿಲ್ಲವೆಂದು ನಾನಿವುಗಳನ್ನು ಅವರಿಗೆ ಕೊಡಬೇಕೆಂದು ಇಚ್ಛಿಸಿಲ್ಲ. ದಿಲ್ಲಿಯ ಬಾದಶಹರ ವೈಭವವು ಜಗ

ದ್ವಿಶ್ರುತವಾಗಿದೆ. ಇಂಥವರಿಗೆ ಕೊಡಲು ಯೋಗ್ಯವಾದ ವಸ್ತುಗಳು ದೊರೆಯುವದು ಅಪರೂಪ. ನನ್ನಬಳಿಯಲ್ಲಂತೂ ಇಂಥ ಪದಾರ್ಥಗಳಿಲ್ಲವೆಂಬುದು ನಿನಗೆ ಗೊತ್ತೇ ಇದೆ. ಇದು ಗುಡ್ಡಗಾಡುಪ್ರದೇಶವು. ಧನಾಢ್ಯವಾದುದಲ್ಲ. ಹೀಗಿದ್ದರೂ ಮರ್ಯಾದೆಗಾಗಿ ಏನಾದರೂ ಕೊಡಲೇಬೇಕು. ಕಾರಣ ಇವುಗಳನ್ನು ನೀನು ತೆಗೆದುಕೊಂಡು ಹೋಗು.”

ಶಹಾಜಾದನಿಗೆ ನಿರ್ವಾಹವಿಲ್ಲದಾಯಿತು. ಅದರಿಂದವನು ಹೋಗುವ ಮುಂದೆ ಇವುಗಳನ್ನು ಒಯ್ಯುವೆನೆಂದು ಹೇಳಿ, ಸದ್ಯಕ್ಕೆ ಪಾರಾದನು.

“ರಾಜಕುಮಾರ, ರಾತ್ರಿಯು ಬಹಳವಾದಂತೆ ಕಾಣುತ್ತದೆ. ಇನ್ನು ನೀನು ಕೋಣೆಗೆ ಹೋಗಬಹುದು. ನಾನೂ ಹೋಗುವೆನು. ನಡೆ, ನಿನ್ನನ್ನು ಕೋಣೆಯವರೆಗೆ ಕಳುಹಿಸಿಬರುವೆನು,” ಎಂದು ಪನ್ನಾಮತಿಯು ಹೇಳಿದಳು.

ಶಹಾಜಾದನು ಪನ್ನಾಮತಿಯ ಕೈಗಳನ್ನು ಹಿಡಿದುಕೊಂಡು ಹಾಸ್ಯಮುಖನಾಗಿ—“ನೀನು ನನ್ನ ಕೋಣೆಯವರೆಗೆ ಕಳಿಸಲಿಕ್ಕೆ ಬರುವಕಾರಣವಿಲ್ಲ. ನಾನು ನನ್ನ ಕೋಣೆಯ ಮಾರ್ಗವನ್ನು ಬಲ್ಲೆನು. ನೀನು ಹೋಗು. ನಾನು ನನ್ನ ಕೋಣೆಗೆ ಹೋಗುವೆನು,” ಎಂದು ಹೇಳಿದನು.

ಇಬ್ಬರೂ ತಮ್ಮ ತಮ್ಮ ಕೋಣೆಯ ಕಡೆಗೆ ಹೊರಟುಹೋದರು.

---

## ಹತ್ತೊಂಬತ್ತನೆಯ ಪರಿಚ್ಛೇದ.

---

### ಪ್ರೇಮಪರಿಹಾಸ.

ಮಹಾಮಹಿಮನಾದ ಭಗವಂತನಿಂದ ನಿರ್ಮಿತವಾದ ಈ ಜಗತ್ತಿನಲ್ಲಿ ಮನುಷ್ಯಮಾತ್ರರೆಲ್ಲರೂ ಒಂದೇಸ್ಥಿತಿಯಲ್ಲಿಲ್ಲ. ಒಬ್ಬನು ಶ್ರೀಮಂತ, ಇನ್ನೊಬ್ಬನು ಬಡವನು, ಒಬ್ಬನು ಅರಸು, ಬೇರೊಬ್ಬನು ಆಳು; ಒಬ್ಬನು ಸಶಕ್ತ, ಇನ್ನೊಬ್ಬನು ಅಶಕ್ತ, ಹೀಗೆ ಸ್ಥಿತಿಯಲ್ಲಿ ಅಂತರವಿರುವುದರಿಂದ ಇವರ ಸುಖ—ದುಃಖಗಳೂ ಭಿನ್ನಭಿನ್ನವಾಗಿವೆ.

ದೇವರು ಹೀಗೆ ಮನುಷ್ಯರನ್ನು ಬೇರೆಬೇರೆ ಸ್ಥಿತಿಯಲ್ಲಿ ಏಕೆ ಸೃಜಿಸುತ್ತಿರಬಹುದು? ಎಲ್ಲರೂ ಒಂದೇ ಸ್ಥಿತಿಯವರು ಏಕಾಗಿರಬಾರದು? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವುದು ಸುಲಭಸಾಧ್ಯವಲ್ಲ. ದೇವರು ತನ್ನ ಸೃಷ್ಟಿರಾಜ್ಯದ ಸುಶಾಸನಕ್ಕಾಗಿ ಮಾಡಿಕೊಂಡ ಅನುಕೂಲತೆಯ ಪರಿಣಾಮವಿದಾಗಿರಬಹುದೇ? ಇಲ್ಲವಾದರೆ ಮತ್ತೇನು?

ದೇವರು ಏನೂ ಮಾಡುವದಿಲ್ಲವೆಂದೂ, ಮನುಷ್ಯನು ತನ್ನ ಪೂರ್ವಾರ್ಜಿತ ಕರ್ಮಗಳಿಗನುರೂಪವಾದ ಸ್ಥಿತಿಯನ್ನು ಪಡೆದು, ಆ ಸ್ಥಿತಿಗೆ ತಕ್ಕ ಸುಖ-ದುಃಖಗಳನ್ನನುಭವಿಸುವನೆಂದೂ ಪ್ರಾಜ್ಞರು ಹೇಳುವರು. ನಮ್ಮ ಪೂರ್ವಜನ್ಮದ ಕರ್ಮಗಳಾವುವು? ಎಂಬುದನ್ನು ಗೊತ್ತುಮಾಡಿಕೊಳ್ಳುವ ಶಕ್ತಿಯು ನಮಗಿಲ್ಲ. ಅದರಿಂದ ಈ ಮಾತಿನ ಸತ್ಯಾ-ಸತ್ಯತೆಯನ್ನು ಕಂಡುಕೊಳ್ಳುವುದು ಸಾಧ್ಯವಲ್ಲ.

ಇನ್ನು ಕೆಲವರು ಅನುಕೂಲ ಪರಿಸ್ಥಿತಿಯಲ್ಲಿ ಜನ್ಮವೆತ್ತಿದ್ದರೂ, ಅವರೆಲ್ಲ ಸದಾಸುಖಿಗಳೇ ಆಗಿರುವರೆಂದು ಹೇಳಲಿಕ್ಕೆ ಬರುವಂತಿಲ್ಲ. ಪರಿಸ್ಥಿತಿಯು ಹೇಗೆ ಇರಲಿ, ನಮ್ಮಲ್ಲಿಯ ಸುವಿಚಾರಗಳು ನಮ್ಮನ್ನು ಸುಖಿಗಳನ್ನಾಗಿಯೂ, ಕುವಿಚಾರಗಳು ದುಃಖಿಗಳನ್ನಾಗಿಯೂ ಮಾಡುವವೆಂದು ಕೆಲವರು ಹೇಳುತ್ತಾರೆ-ಇದರಿಂದ ಒಂದೇ ಸ್ಥಿತಿಯಲ್ಲಿ, ಒಂದೇ ಸ್ಥಳದಲ್ಲಿ, ಒಂದೇಸಮಯದಲ್ಲಿ ಇದ್ದ ಇಬ್ಬರಲ್ಲಿ ಒಬ್ಬನು ಸುಖಿಯಾಗಿಯೂ, ಮತ್ತೊಬ್ಬನು ದುಃಖಿಯಾಗಿಯೂ ಇರುತ್ತಿರುವದನ್ನು ನಾವು ನೋಡುತ್ತೇವೆ.

ಅಫಶಾನನು ಬುದ್ಧಿಹೀನತೆಯ ಕೆಲಸಮಾಡಿದ್ದನು. ಅದರಿಂದ ಅವನನ್ನು ಪುನಃ ಸೇನಾಪತಿಯನ್ನಾಗಿ ಮಾಡುವುದು ಸರದಾರರ ಮನಸ್ಸಿನಲ್ಲಿದ್ದಿಲ್ಲ. ಪನ್ನಾಮತಿಯ ಮನಸ್ಸಿನಲ್ಲಾದರೂ ಅಫಶಾನನನ್ನು ಸೇನಾಧಿಪತಿಯನ್ನಾಗಿ ಮಾಡಿಕೊಳ್ಳುವುದಿದ್ದಿಲ್ಲ. ಆದರೆ ಶಹಾಜಾದನು ಅಫಶಾನನಿಗೆ ಅನುಕೂಲನಾದನು. ಅವನು ಅಫಶಾನನನ್ನು ಪುನಃ ಸೈನ್ಯಾಧಿಪತಿಯನ್ನಾಗಿ ಮಾಡಬೇಕೆಂದು ಎಲ್ಲರಿಗೂ ಹೇಳಿಕೊಂಡನು. ಅದರಿಂದ ಅಫಶಾನನು ಪುನಃ ಮೊದಲಿನ ಗೌರವದ ಅಧಿಕಾರ ಪಡೆದನು.

ಪನ್ನಾಮತಿಯು ಒಬ್ಬಳೇ ಅಂಗಳದಲ್ಲಿ ಕುಳಿತಿದ್ದನ್ನು ಅಫಶಾನನು ನೋಡಿದನು. ಅವನು ಪನ್ನಾಮತಿಯ ಬಳಿಗೆ ಬರತೊಡಗಿದನು. ಇಷ್ಟರಲ್ಲಿ ಶಹಾಜಾದನು ಅವಳ ಬಳಿಗೆ ಬಂದನು. ಅಫಶಾನನು ಇವರಿಬ್ಬರಲ್ಲಿ ಏನುರಹಸ್ಯವು ನಡೆಯುವದೋ ನೋಡಬೇಕೆಂದು ಭಾವಿಸಿ, ಮರೆಯಲ್ಲಿ ನಿಂತುಕೊಂಡನು.

ಪನ್ನಾಮತಿ-ಶಹಾಜಾದರ ಮಾತು-ಕಥೆಗಳನ್ನು ಅಫಶಾನನು ಕೇಳಿದನು; ಇವರ ಹಾವಭಾವಗಳನ್ನು ನೋಡಿದನು. ಇದರಿಂದ ಪನ್ನಾಮತಿಯು ಶಹಾಜಾದನನ್ನು ಪ್ರೀತಿಸುತ್ತಿರುವಳೆಂಬದನ್ನು ಅವನು ಮನಗಂಡನು. ಇದರಿಂದವನಿಗೆ ಬಹಳ ದುಃಖವಾಯಿತು. ಅವನು ಶಹಾಜಾದನ ಮೇಲೆ ಬಹಳ ಸಿಟ್ಟಾದನು. ಈ ಸಮಯದಲ್ಲಿ ಕುವಿಚಾರಗಳು ಅವನನ್ನಾಶ್ರಯಿಸಿದವು. ಅವನು ಆಲೋಚಿಸತೊಡಗಿದನು—" ಈ ಪನ್ನಾಮತಿ ನನ್ನವಳು. ಇವಳ ತಂದೆ ಇವಳನ್ನು ನನಗೆ ಕೊಡುತ್ತೇನೆಂದು ಹೇಳಿದ್ದನು. ಇವಳಾದರೂ ಈ ವರೆಗೆ ನನ್ನೊಡನೆ ಆದರದಿಂದ ನಡೆದುಕೊಂಡು, ನನ್ನ ಪ್ರೇಮಕ್ಕೆ ಉತ್ತೇಜನಕೊಡುತ್ತ ಬಂದಿದ್ದಾಳೆ. ಆದರೆ ಈಗ? ಇನ್ನೇನು? ಇವಳು ಶಹಾಜಾದನ ರೂಪಕ್ಕೂ, ಸವಿಮಾತುಗಳಿಗೂ ಮರುಳಾಗಿ ಹೋಗಿದ್ದಾಳೆ. ಈ ಸಮಯದಲ್ಲಿ ನಾನು ಸುಮ್ಮನೆ ಇರುವುದಾದರೆ, ನನ್ನ ಆಸೆಯು ಸಮೂಲವಾಗಿ ನಾಶವಾಗುವುದರಲ್ಲಿ ಸಂದೇಹವಿಲ್ಲ. ಇವಳನ್ನು ನಾನು ಲಗ್ನವಾಗುವೆನಾದರೆ ಈ ರಾಜ್ಯದ ಬಾದಶಹನಾಗುವೆನು. ಆದರೆ ಇವಳು ದಾಸಿಯುಲನನ್ನು ವರಿಸಿದ್ದಾದರೆ ನನಗೆ ಏನೂ ಇಲ್ಲ. ಹೀಗಾಗಗೊಡುವದು ತರವಲ್ಲ. ನನ್ನ ಮನೋರಥಕ್ಕೆ ಇವನು ವಿಘ್ನವಾಗಿ ಬಂದಿದ್ದಾನೆ. ಇವನನ್ನು ಮುಗಿಯಿಸಬೇಕು. ಹಾಗೆಮಾಡುವೆನಾದರೆ ನಾನು ಭವಿಷ್ಯತ್ಕಾಲದ ಸುಖವನ್ನು ಪಡೆಯಬಹುದಾಗಿದೆ. ಶಹಾಜಾದನನ್ನು ಹೇಗೆ ನಾಶಮಾಡಲಿ? "

ಪನ್ನಾಮತಿಯು ಶಹಾಜಾದನನ್ನು ಅವನ ಕೋಣೆಗೆ ಕಳುಹಿಸಿ, ತಾನು ತನ್ನ ಕೋಣೆಯನ್ನು ಪ್ರವೇಶಿಸಿ, ಬಂದು ಕುಳಿತುಕೊಂಡಳು. ಅಫಶಾನನು ಇವಳ ಹಿಂದೆಯೇ ಬಂದು, ಇವಳ ಮುಂದೆ ನಿಂತು

ಕೊಂಡನು. ಪನ್ನಾಮತಿ ಈ ಸಮಯದಲ್ಲಿ ಶಹಾಜಾದನ ವಿಚಾರಗಳಲ್ಲಿ ಮಗ್ನಳಾಗಿಹೋಗಿದ್ದುದರಿಂದ ಅಫಶಾನನು ಬಂದದ್ದು ಅವಳಿಗೆ ಗೊತ್ತಾಗಲಿಲ್ಲ. ಇದನ್ನು ನೋಡಿ ಅಫಶಾನನಿಗೆ ಬಹಳಸಿಟ್ಟುಬಂದಿತು. ತಾನು ಇದುರಿನಲ್ಲಿ ಬಂದುನಿಂತಿದ್ದರೂ, ತನ್ನನ್ನು ಮಾತನಾಡಿಸದಿರುವುದಕ್ಕೆ, ಇವಳು ತನ್ನ ವಿಷಯದಲ್ಲಿ ತಳೆದ ಅನಾದರವೇ ಕಾರಣವೆಂದು ಅವನು ಭಾವಿಸಿದನು; ಆದರೆ ತನ್ನ ಸಿಟ್ಟನ್ನು ಅವಳಮೇಲೆ ತೀರಿಸಿಕೊಳ್ಳು ವಂತಿರಲಿಲ್ಲ. ಅದರಿಂದವನು ಆದಷ್ಟುಶಾಂತತೆ ತಂದುಕೊಂಡು—" ಪನ್ನಾಬೇಗಮ, ದಾಸನ ಸಲಾಂ ಸ್ವೀಕರಿಸಬೇಕು." ಎಂದನು.

ಪನ್ನಾಮತಿಯು ಚಮಕಿತಳಾಗಿ ಮುಖವೆತ್ತಿನೋಡಿದಳು. ಇದಿರಿನಲ್ಲಿ ಅಫಶಾನನು ಬಂದುನಿಂತಿದ್ದಾನೆ; ಹೇಳಿದಳು—"ಇದೇನು? ಅಫಶಾನ, ಈ ಸಮಯದಲ್ಲಿ ನೀನು ಇಲ್ಲಿಗೇಕೆಬಂದೆ?"

"ಅದೇಕೆ? ಈ ಸಮಯದಲ್ಲಿ ನಾನು ಇಲ್ಲಿಗೆ ಬರಬಾರದಾಗಿತ್ತೇನು? ಸ್ವರ್ಗೀಯನಬಾಬರು ನನಗೆ ಬೇಕಾದಸಮಯದಲ್ಲಿ, ಬೇಕಾದಸ್ಥಳದಲ್ಲಿ ಪ್ರವೇಶಮಾಡುವದಕ್ಕೆ ಅಧಿಕಾರಕೊಟ್ಟಿದ್ದರು. ಈಗ ತಾವು ನನ್ನ ಅಧಿಕಾರವನ್ನು ಕಸಿದುಕೊಳ್ಳಬೇಕೆಂದು ಮಾಡಿರುವಿರೇನು?"

"ಅದೇನೂ ಇಲ್ಲ, ರಾತ್ರಿ ಬಹಳವಾದುದರಿಂದ ಹಾಗೆ ಕೇಳಿದೆ."

"ಪನ್ನಾಬೇಗಮ, ಈ ಮೊದಲು ನಾನು ಎಷ್ಟೋಬಾರಿ ಇದಕ್ಕೂ ಹೆಚ್ಚುಹೊತ್ತಿನಲ್ಲಿ ನಿಮ್ಮ ಕೋಣೆಗೆ ಬಂದಿದ್ದೆನು. ಆಗ ನೀವು ನನಗೆ ಹೀಗೆ ಕೇಳಲಿಲ್ಲ. ಇದನ್ನು ನೋಡುತ್ತಿರಲು ಈಗ ನೀವು ನನ್ನ ವಿಷಯದಲ್ಲಿ ಅನಾದರ ತಳೆದಂತೆ ತೋರುತ್ತಲಿದೆ. ಇದರಲ್ಲಿ ನಿಮ್ಮದೇನೂ ತಪ್ಪಿಲ್ಲ. ಜನರು ಪರರ ಸಹಾಯದ ಆವಶ್ಯಕತೆ ಇರುವವರೆಗೆ ಮಾತ್ರ ಅವರನ್ನು ಓಲೈಸುವರು; ಮುಂದೆ ತಮ್ಮ ಕೆಲಸವಾಯಿತೆಂದರೆ ತೀರಿತು. ಸಹಾಯಮಾಡಿದ ಜನರನ್ನು ಮಾತಾಡಿಸುವುದಿಲ್ಲ. ಇದುಲೋಕರೂಢಿಯಾಗಿರುವದು. ನೀವೂ ಈ ಲೋಕವ್ಯವಹಾರವನ್ನನುಸರಿಸಿ, ಈಗ ನನ್ನನ್ನು ತಿರಸ್ಕರಿಸುತ್ತಿರುವಿರಿ. ಮೊಗಲರೊಡನೆ ಯುದ್ಧನಡೆದ ಸಮಯದಲ್ಲಿ

ನಿಮಗೆ ನನ್ನ ಸಹಾಯದ ಆವಶ್ಯಕತೆ ಇತ್ತು. ಅದರಿಂದಾಗ ನನ್ನ ವಿಷಯದಲ್ಲಿ ಆದರವನ್ನು ತೋರಿಸುತ್ತಿದ್ದಿರಿ. ಈಗ ಒಪ್ಪಂದವಾಗಿ ಹೋಗಿದೆ. ರಾಜ್ಯದಲ್ಲಿ ಶಾಂತತೆ ನೆಲೆಗೊಂಡಿದೆ. ಈಗ ನಿಮಿಗೆ ನನ್ನ ಆವಶ್ಯಕತೆ ಯಾದರೂ ಏನಿದೆ? ಅದರಿಂದಲೇ ಈಗ ನನ್ನನ್ನು ಉಪೇಕ್ಷಿಸುತ್ತಿರುವಿರಿ."

ಈ ಮಾತುಗಳನ್ನು ಕೇಳಿ ಪನ್ನಾಮತಿಗೆ ಬಹಳ ಸಿಟ್ಟುಬಂತು. ಅವಳು—"ಅಫಶಾನ, ನಾನು ಈ ರಾಜ್ಯದ ಅರಸಿಯೆಂಬದನ್ನು ಮರೆತು . . . ." ಎಂದು ಹೇಳುತ್ತಿರುವಾಗಲೇ ಅಫಶಾನನು ನಡುವೇ ಬಾಯಿ ಹಾಕಿ—"ಪನ್ನಾಬೇಗಮ, ಇಲ್ಲ, ನಾನಿದನ್ನು ಮರೆತಿಲ್ಲ. ಈಗ ನೀವು ಈ ರಾಜ್ಯದ ಸಾಮ್ರಾಜ್ಞಿಯರು. ನಾನು ನಿಮ್ಮ ಸಂಬಳದಿಂದ ಜೀವಿಸ ತಕ್ಕ ನವುಕರನು. ನೀವು ಈಗ ನನ್ನಮೇಲೆ ತುಸು ಸಿಟ್ಟುಗೇಳುವಿ ರಾದರೆ, ನನ್ನ ಅವಸ್ಥೆ ನೆಟ್ಟಗಾಗುವಂತಿಲ್ಲ. ನಿಮಗೆ ಈಗ ಬೇಕಾದಶಿಕ್ಷೆ ವಿಧಿಸುವ ಅಧಿಕಾರವಿದೆ. ನನ್ನನ್ನು ಕೆಲಸದಿಂದ ತೆಗೆದುಹಾಕಬಹುದು; ಇಲ್ಲವೆ ಕೊಲ್ಲಿಸಬಹುದು. ನೀವು ಏನೇಮಾಡಿರಿ ಆದರೂ ನಾನು ಈ ಪ್ರಸಂಗದಲ್ಲಿ ನಿಮಗೊಮ್ಮೆ ನಿಮ್ಮ ಪೂರ್ವಪ್ರದತ್ತವಚನವನ್ನು ಸ್ಮರಿಸಿ ರೆಂದು ಹೇಳದಿರಲಾರೆ," ಎಂದು ಹೇಳಿದನು.

"ಅಫಶಾನ, ನಾನು ನಿನಗೆ ಯಾವ ವಚನವನ್ನೂ ಕೊಟ್ಟಿಲ್ಲ." ಎಂದು ಪನ್ನಾಮತಿ ಸಿಟ್ಟಿನಿಂದ ಹೇಳಿದಳು.

"ಒಂದುವೇಳೆ ನೀವು ಕೊಟ್ಟಿರದಿದ್ದರೂ ಚಿಂತೆಯಿಲ್ಲ, ನಿಮ್ಮ ಸ್ವರ್ಗೀಯ ತಂದೆಗಳು ಕೊಟ್ಟ ವಚನವನ್ನಾದರೂ ನೆನ ಪಿಗೆ ತಂದುಕೊಳ್ಳಿ."

ಪನ್ನಾಮತಿಗೆ ಮತ್ತಿಷ್ಟು ಸಿಟ್ಟುಬಂದಿತು. ಸಿಟ್ಟಿನಿಂದ ಅವಳ ಮುಖ ವು ಕೆಂಪಾಯಿತು; ಅವಳ ದೇಹದ ರಕ್ತವು ಒತ್ತರದಿಂದ ಹರಿಯಹತ್ತಿತು. ಅವಳು ಕಠೋರಸ್ವರದಿಂದ—"ಅಫಶಾನ, ಆಗಿಹೋದ ಸಂಗತಿಯನ್ನು ಇನ್ನು ಮರೆತುಬಿಡು. ಅದನ್ನು ಈಗ ನೆನಸುವದರಿಂದ ಏನೂ ಉಪ ಯೋಗವಿಲ್ಲ. ತಂದೆಗಳು ಕೊಟ್ಟ ವಚನವು ಈಗ ಉಪಯೋಗಕ್ಕೆ ಬರಲಾ ರದು. ಅದು ಅವರೊಡನೆಯೇ ಹೋಗಿಬಿಟ್ಟಿತು." ಎಂದು ಹೇಳಿದಳು.

" ಈಗ ನೀವು ಅವರ ವಚನದಂತೆ ನಡೆಯುವದಿಲ್ಲವೇ? "

" ಅಫಶಾನ, ತಂದೆಗಳ ಬಳಿಯಲ್ಲಿ ವಚನವನ್ನು ಪಡೆದ ಅಫಶಾನನು ಬೇರೆ. ಈಗ ನನ್ನ ಬಳಿಯಲ್ಲಿ ನಿರ್ಲಜ್ಜತನದಿಂದ ನಿಂತುಕೊಂಡಿರುವ ಅಫಶಾನನು ಬೇರೆ. ಇವರಿಬ್ಬರಲ್ಲಿ ಭೂವ್ಯಾಕಾಶಗಳಷ್ಟು ಅಂತರವಿದೆ. ಆ ಅಫಶಾನನು ವೀರನಾಗಿದ್ದನು. ಅವನು ತನ್ನ ಯಾವತ್ತು ಕಾರ್ಯವನ್ನೂ, ಬುದ್ಧಿಮತ್ತೆಯನ್ನೂ ಕೇವಲ ಬಾದಶಹರ ಸೇವೆಗಾಗಿ ಉಪಯೋಗಮಾಡುತ್ತಿದ್ದನು. ಆ ಅಫಶಾನನಲ್ಲಿ ಮತ್ಸರವಿದ್ದಿಲ್ಲ. ನೀಚತೆಯಿರಲಿಲ್ಲ. ಹಟವಿರಲಿಲ್ಲ. ದುರ್ಬಲತೆಯಿರಲಿಲ್ಲ. ಆ ಅಫಶಾನನು ಈಗ ಮಡಿದುಹೋಗಿದ್ದಾನೆ. ನೀನು ಆ ಅಫಶಾನನ ಛಾಯಾಮೂರ್ತಿಮಾತ್ರ! ನಾಚಿಕೆಯಿಲ್ಲದೆ ಇಲ್ಲಿಬಂದು, ನನಗೆ ದುಃಖವನ್ನುಂಟುಮಾಡುವ ಮಾತುಗಳನ್ನಾಡುತ್ತಿರುವೆ. ಇನ್ನು ನೀನಿಲ್ಲಿ ನಿಲ್ಲಬೇಡ. ನಡೆ, ಹೊರಡು. "

ಅಫಶಾನನಿಗೆ ತನ್ನ ತಪ್ಪು ತಿಳಿಯಬಂದಿತು. ಪನ್ನಾಮತಿಯನ್ನು ಇನ್ನು ಹೆಚ್ಚಿಗೆ ಸಿಟ್ಟಿಗೆಬ್ಬಿಸುವದರಲ್ಲಿ ಅರ್ಥವಿಲ್ಲ. ಇಷ್ಟೆ ಅಲ್ಲ; ಅದರಿಂದ ತನಗೆ ಬಹಳ ಹಾನಿಯಾಗುವದೆಂಬದನ್ನು ಅವನು ಗೊತ್ತುಮಾಡಿಕೊಂಡನು. ಇವಳನ್ನು ತನಗೆ ಅನುಕೂಲಳನ್ನಾಗಿ ಮಾಡಿಕೊಳ್ಳಬೇಕಾದರೆ, ಸೌಮ್ಯರೀತಿಯಿಂದ ವರ್ತಿಸುವುದು ಅತ್ಯವಶ್ಯವಾದದ್ದೆಂಬದನ್ನು ಮನಗಂಡನು. ಅದಕ್ಕಾಗಿ ಅವನು ಪಶ್ಚಾತ್ತಾಪಪಟ್ಟವನಂತೆ ನಟಿಸಿ, ದೀನತೆಯಿಂದ—" ಪನ್ನಾಬೇಗಮ, ನನ್ನನ್ನು ಕ್ಷಮಿಸು. ನಾನು ಅದೇ ಅಫಶಾನನು. ಈಗಲೂ ನಾನು ನನ್ನ ಶೌರ್ಯವನ್ನು ಈ ಪಠಾಣರಾಜ್ಯದ ಹಿತಕ್ಕಾಗಿ ವೆಚ್ಚಮಾಡಲು ಸಿದ್ಧನಿದ್ದೇನೆ. ನೀನು ನನ್ನ ಹೃದಯದ ಆರಾಧ್ಯದೇವಿ. ನಾನು ನಿನ್ನ ಸೇವಕರ ಸೇವಕನು. ನನ್ನಲ್ಲಿ ದಯೆ ಇಡು, " ಎಂದು ಬೇಡಿಕೊಂಡನು.

ಪನ್ನಾಮತಿಯು ಯಾವ ಉತ್ತರವನ್ನೂ ಕೊಡಲಿಲ್ಲ. ಅವಳ ಸಿಟ್ಟು ಇನ್ನೂ ಕಡಮೆಯಾಗಿರಲಿಲ್ಲ. ಅಫಶಾನನು ಅವಳ ಸಮೀಪಕ್ಕೆ ಹೋಗಿ— " ಪನ್ನಾಬೇಗಮ, ದಯವಿಟ್ಟು ಕ್ಷಮಿಸಿದೆನೆಂದು ಹೇಳು. ನಿನ್ನ ಕೈಗಳನ್ನು ತಾ, ನಾನವುಗಳನ್ನು ಪ್ರೇಮಭರದಿಂದ ಕಣ್ಣಿಗೆ ಒತ್ತಿಕೊಳ್ಳು

ಪೆನು. ಅಲ್ಲಿಗೆ ನೀನು ನನ್ನನ್ನು ಕ್ಷಮಿಸಿದೆಯೆಂದು ಮನವರಿಕೆಯಾಗುವದು," ಎಂದು ಹೇಳಿದನು.

ಅಫಶಾನನು ಅವಳ ಕೈಗಳನ್ನು ಹಿಡಿಯುವುದಕ್ಕೆ ಹೋದನು. ಪನ್ನಾಮತಿ ದೂರ ಸರಿದುನಿಂತಳು. ಅಫಶಾನನು ಅವಳ ಬಳಿಗೆಹೋಗಿ ಮೊಳಕಾಲೂರಿ ಕುಳಿತು—"ನಬಾಬನಂದಿನಿ, ನನ್ನ ಸಕಲ ಅಪರಾಧಗಳನ್ನು ಕ್ಷಮಿಸು," ಎಂದು ಬೇಡಿಕೊಂಡನು.

ಪನ್ನಾಮತಿಯು ತಿರಸ್ಕಾರದಿಂದ ಅವನನ್ನು ಒತ್ತಟ್ಟಿಗೆ ಸರಿಸಿ, ಬೇರೆಕಡೆಗೆ ಹೊರಟುಹೋದಳು. ಅಪಮಾನಿತನೂ, ಲಾಂಛಿತನೂ ಆದ ಅಫಶಾನನು ಹಲ್ಲುಕಡಿಯುತ್ತ—"ದುಷ್ಟಳೇ, ಈ ರಾಜ್ಯದ ಅಧಿಕಾರಿಣಿಯಾದೆಯೆಂದು ಇಷ್ಟೊಂದು ಗರ್ವಿಷ್ಠಳಾಗಿರುವೆಯೇನು? ಬೇಡ, ಇದು ಯಾರಿಗೂ ಸ್ಥಿರವಲ್ಲ! ಇಂದು ಅರಸನಾದವನು ನಾಳೆ ತಿರುಕನು, ಇಂದು ಬಿಕ್ಷುಕನಾದವನು ನಾಳೆ ಅರಸನೂ ಆಗುವದು ಜಗತ್ತಿನ ವ್ಯವಹಾರವಾಗಿದೆ. ಹೀಗಿರುವದರಿಂದ ಒಣಹೆಮ್ಮೆಗೆ ಎಲ್ಲಿಯೂ ಆಸ್ಪದವಿಲ್ಲ. ಎಷ್ಟಾದರೂ ನೀನು ಹೆಂಗಸು! ನಿನ್ನಲ್ಲಿ ಉದಾತ್ತವಿಚಾರಗಳೆಲ್ಲ ಬರಬೇಕು. ಮೇಲಾಗಿ ನಿನಗೆ ಉತ್ತೇಜನ ಕೊಡುವದಕ್ಕೆ ಶಹಜಾದನೊಬ್ಬನು ದೊರಕಿದ್ದಾನೆ. ನೀವಿಬ್ಬರೂಕೂಡಿ, ನನ್ನ ಮನೋರಥದ ಕಟ್ಟಡವನ್ನು ಸಮೂಲನಾಶಮಾಡಲು ತೊಡಗಿರುವಿರಿ. ಆದರೆ ಈ ಅಫಶಾನನ ಸಾಮರ್ಥ್ಯವನ್ನು ನೀವು ಅರಿಯರಿ. ಅದಕ್ಕಾಗಿಯೇ ಹೀಗೆ ಮಾಡುತ್ತಿರುವಿರಿ. ಇರಲಿ, ನೋಡಿಯೇ ಬಿಡುವೆನು. ನಿಮ್ಮಿಬ್ಬರನ್ನೂ ಸಂಪೂರ್ಣವಾಗಿ ನಾಶಮಾಡದಿದ್ದರೆ ನಾನು ಅಫಶಾನನೇ ಅಲ್ಲ!" ಎಂದು ಮನಸ್ಸಿನಲ್ಲಿಯೇ ಅಂದುಕೊಂಡನು.

# ಇಪ್ಪತ್ತನೆಯ ಪರಿಚ್ಛೇದ.

## ಪ್ರಬಲನಾದ ಮತ್ಸರಿಯು.

ಸಾಯಂಕಾಲದ ಸಮಯ. ಸೂರ್ಯಾಸ್ತವಿನ್ನು ಆಗಿಲ್ಲ. ರಕ್ತರಾಗಮಯವಾದ ರವಿಕಿರಣಗಳು ಪರ್ವತದಮೇಲೆ ಬಿದ್ದಿವೆ. ಇದರಿಂದ ಪರ್ವತದ ನೋಟವು ಬಹು ಮನೋಹರವಾಗಿದೆ. ಶಹಾಜಾದನು ಗಿರಿನದಿಯ ದಂಡೆಯಲ್ಲಿರುವ ಒಂದು ಬಂಡೆಯಮೇಲೆ ಕುಳಿತಿದ್ದಾನೆ. ಕ್ಷಣ ಕ್ಷಣಕ್ಕೆ ಬದಲಾಗುತ್ತಿರುವ ಪ್ರಕೃತಿಯ ಬೇರೆಬೇರೆ ನೋಟವನ್ನು ತಲ್ಲೀನ ಚಿತ್ತನಾಗಿ ನೋಡುತ್ತಿದ್ದಾನೆ. ಈ ಸಮಯದಲ್ಲಿ ಒಬ್ಬಹುಡುಗನು ಬಂದು, ಅವನ ಕೈಯಲ್ಲೊಂದು ಪತ್ರವನ್ನು ಕೊಟ್ಟು, ಕೂಡಲೇ ಹೊರಟು ಹೋದನು.

ಶಹಾಜಾದನು ಈ ಹುಡುಗನನ್ನು ಎಂದೂ ನೋಡಿದ್ದಿಲ್ಲ. ಅವನು ಆ ಹುಡುಗನನ್ನು ಕುರಿತು ನೀನು ಯಾರು? ಈ ಪತ್ರವನ್ನು ಯಾರು ಕೊಟ್ಟರು? ಎಂಬದಾಗಿ ವಿಚಾರಿಸಬೇಕೆಂದು ಮಾಡಿದನು. ಆದರೆ ಆ ಹುಡುಗನು ತೀವ್ರವೇ ಕಾಣದಂತಾದುದರಿಂದ ಶಹಾಜಾದನು ತನ್ನ ಕುತೂಹಲವನ್ನು ತಡೆಯಬೇಕಾಯಿತು. ಅವನು ವಿಸ್ಮಯದಿಂದ ಆಪತ್ರವನ್ನೊಡೆದು ಓದತೊಡಗಿದನು. ಅದರಲ್ಲಿ ಬರೆದಿದ್ದುದೇನಂದರೆ:—"ಸುಲತಾನ ದಾನಿಯಲ, ನೀವು ದಿಲ್ಲಿಯ ಸಾಮ್ರಾಟರಾದ ಅಕಬರಶಹರ ಮಕ್ಕಳು. ಸಾಮ್ರಾಟರು ಸಾಹಸಿಗಳೂ ವೀರರೂ ಆಗಿರುವದು ಜಗದ್ವಿಖ್ಯಾತವಾಗಿದೆ. ಅವರ ಮಕ್ಕಳಾದ ನಿಮ್ಮಲ್ಲಿಯೂ ಈ ಗುಣಗಳಿರುವವೆಂದು ನಾನು ಭಾವಿಸುವೆನು. ನೀವು ಇಂದು ಮಧ್ಯರಾತ್ರಿಯ ಸಮಯಕ್ಕೆ ಇಲ್ಲಿಗೆ ಬರಬೇಕು. ನಾನು ನಿಮ್ಮ ಹಾದೀನೋಡುತ್ತ ಕುಳಿತುಕೊಂಡಿರುವೆನು. ಒಂದು ವೇಳೆ ನೀವು ನನ್ನ ಆಮಂತ್ರಣದಂತೆ ಇಲ್ಲಿಗೆ ಬರದಿದ್ದರೆ, ದುರ್ಬಲರೂ, ಪುಕ್ಕರೂ ಆಗಿರುವಿರೆಂದು ನಾನು ತಿಳಿಯುತ್ತೇನೆ."

ಪತ್ರದಲ್ಲಿ ಬರೆದವನ ಹೆಸರು ಇಲ್ಲ. ಅದರಿಂದ ಈ ಪತ್ರವನ್ನು ಯಾರು ಬರೆದಿರುವರೆಂಬದನ್ನು ಗೊತ್ತುಮಾಡಲಿಕ್ಕೆ ಬರುವಂತಿಲ್ಲ. ಶಹಾಜಾದನು ವಿಚಾರಕ್ಕೊಳಗಾದನು—"ಈ ಪತ್ರವನ್ನು ಯಾರು ಬರೆದಿರಬಹುದು? ಮಧ್ಯರಾತ್ರಿಯಲ್ಲಿ ಇಂಥ ನಿರ್ಜನಸ್ಥಳದಲ್ಲಿ ಅವರು ನನ್ನ ದರ್ಶನ ತೆಗೆದುಕೊಳ್ಳುವದಕ್ಕೆ ಯಾಕೆ ಮನಸ್ಸು ಮಾಡಿರಬಹುದು? ಇದು ಯಾವನಾದರೊಬ್ಬ ಗುಪ್ತ ಶತ್ರುವಿನ ಮೋಸದ ವ್ಯಾಪಾರವಾಗಿರಬಹುದೇನು? ಈ ರಾಜ್ಯದಲ್ಲಿ ನನ್ನ ಶತ್ರುಗಳು ಯಾರೂ ಇಲ್ಲ. ಪಠಾಣರು ನನ್ನ ಆಧೀನತೆಯನ್ನೊಪ್ಪಿಕೊಂಡು, ನನ್ನೊಡನೆ ಸ್ನೇಹದಿಂದ ವರ್ತಿಸುತ್ತಿರುವರು. ನಾನು ಪಠಾಣಸರದಾರರಲ್ಲಿ ಯಾರಿಗೂ ಕೆಡಕನ್ನು ಮಾಡಿಲ್ಲ. ಇದರಿಂದ ಇವರಲ್ಲಿ ಯಾರೂ ನನ್ನನ್ನು ದ್ವೇಷಿಸುವಂತಿಲ್ಲ. ಹೀಗಿರಲು ಈ ರೀತಿಯಿಂದ ನನಗೆ ಪತ್ರಬರೆದವರು ಯಾರಾಗಿರಬಹುದು?

ಅಫಶಾನನು ಈ ಪತ್ರವನ್ನು ಬರೆದಿರಬಹುದೇನು? ಛೇ! ಅವನು ನನ್ನನ್ನು ದ್ವೇಷಿಸುವದಕ್ಕೆ ಯಾವ ಕಾರಣವೂ ಇಲ್ಲ. ನಾನವನಿಗೆ ಅನೇಕ ಉಪಕಾರ ಮಾಡಿದ್ದೇನೆ. ನಾನವನನ್ನು ಲಾಹೋರಕ್ಕೆ ಕಳುಹಿಸಿದ್ದಾದರೆ, ಬಾದಶಹರು ಅವನಿಗೆ ಪ್ರಾಣದಂಡನೆ ವಿಧಿಸುತ್ತಿದ್ದರು; ಆದರೆ ನಾನುಹಾಗೆ ಮಾಡದೆ, ಅವನಿಗೆ ಯಾವ ಶಿಕ್ಷೆಯನ್ನೂ ವಿಧಿಸದೆ, ಬಂಧಮುಕ್ತನಮಾಡಿ ಬಿಟ್ಟುಬಿಟ್ಟಿದ್ದೇನೆ. ಅವನನ್ನು ಪುನಃ ಸೇನಾಪತಿಯನ್ನಾಗಿ ಮಾಡಿಕೊಳ್ಳುವದು ಪನ್ನಾಮತಿಯ ಮನಸ್ಸಿನಲ್ಲಿರಲಿಲ್ಲ; ಆದರೆ ಅವಳು ನನ್ನ ಒತ್ತಾಯದಿಂದ ಅವನನ್ನು ಸೇನಾಪತಿಯನ್ನಾಗಿ ಮಾಡಿಕೊಂಡಳು. ಇದನ್ನು ಅಫಶಾನನು ಅರಿಯನೆಂದಲ್ಲ! ಅಂದಬಳಿಕ ಅವನು ನನ್ನ ಶತ್ರುವಾಗುವ ಸಂಭವವಿಲ್ಲ. ಹಾಗಾದರೆ ಈ ಪತ್ರವನ್ನು ಯಾರು ಬರೆದಿರಬೇಕು!"

ಶಹಾಜಾದನಿಗೆ ಬೇರೊಂದು ಸಂಗತಿ ಸ್ಮರಣೆಗೆಬಂದಿತು. ಅದರಿಂದವನ ವಿಚಾರಪ್ರವಾಹವು ಬೇರೆ ಕಡೆಗೆ ಒಲಿಯಿತು—"ಅಫಶಾನನು ಪನ್ನಾಮತಿಯನ್ನು ಪ್ರೀತಿಸುತ್ತಿರುವನು. ಪನ್ನಾಮತಿಯು ನನ್ನಸಂಗಡ ಸಲುಗೆಯಿಂದ ವರ್ತಿಸುತ್ತಿರುವಳು. ನಮ್ಮಿಬ್ಬರ ಈ ವ್ಯವಹಾರವು ಅಫಶಾನನ

ಮನಸ್ಸಿಗೆ ಹಿತವಾಗಿರುವ ಸಂಭವವಿಲ್ಲ. ಮೇಲಾಗಿ ಪನ್ನಾಮತಿಯು ಅಫ ಶಾನನ ವಿಷಯವಾಗಿ ಉಪೇಕ್ಷಿತಾಳಿದಂತೆಯೂ ಕಂಡುಬರುವದು. ಈ ಕಾರಣಗಳಿಂದ ಅಫಶಾನನು ನನ್ನಮೇಲೆ ಸಿಟ್ಟಿಗೇಳುವ ಸಂಭವವುಂಟು. ನಾನು ಅವನ ಪ್ರಣಯುಪಂಥಾನದಲ್ಲಿ ಅಡ್ಡಾಗಿ ಬಂದಿರುವೆನೆಂಬ ತಿಳುವ ಳಿಕೆ ಅವನಿಗಾಗಿರಬಹುದು. ಅದಕ್ಕಾಗಿ ಅವನು ಈ ರೀತಿ ನನ್ನನ್ನು ಏಕಾಂತದಲ್ಲಿ ಕರೆದು, ನಾಶಮಾಡುವ ಪ್ರಯತ್ನ ಮಾಡುತ್ತಿರಬಹುದು. ಏನೇ ಇರಲಿ, ಮನೆಗೆಹೋಗಿ, ಈ ಬಗ್ಗೆ ವಿಚಾರಮಾಡಿದರೆ ಎಲ್ಲವೂ ತಿಳಿ ಯುಬಹುದಾಗಿದೆ,"ಎಂದು ಆಲೋಚಿಸಿ, ಶಹಾಜಾದನು ಮನೆಯ ಕಡೆಗೆ ಹೊರಟನು.

ಶಹಾಜಾದನು ತನ್ನ ಕೋಣೆಗೆ ಬಂದು, ಒಂದು ಆಸನದ ಮೇಲೆ ಕುಳಿತು, ಆಪತ್ರವನ್ನು ಪುನಃ ಓದಿಕೊಂಡನು. ಆದರೂ ಅವನ ಮನ ಸ್ಸಿನ ಸಂದೇಹವು ದೂರವಾಗಲಿಲ್ಲ. ಅದಕ್ಕಾಗಿ ಅವನು ಆ ಪತ್ರವನ್ನು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಣಮಾಡತೊಡಗಿದನು.

ಈ ಸಮಯದಲ್ಲಿ ಪನ್ನಾಮತಿಯು ಶಹಾಜಾದನ ಕೋಣೆಗೆ ಬಂದು—"ರಾಜಕುಮಾರ, ಪತ್ರದಲ್ಲಿ ಮನಸ್ಸು ವ್ಯಗ್ರವಾದಂತಿದೆ. ಆಪತ್ರ ವೆಲ್ಲಿಯದು? ಲಾಹೋರದಿಂದ ಬಂದಿರುವದೇನು?" ಎಂದು ಕೇಳಿದಳು.

ಶಹಾಜಾದನು ಮುಖವೆತ್ತಿ ನೋಡಿದನು; ಪನ್ನಾಮತಿಯನ್ನು ಕುರಿತು ಅವನು—"ನಬಾಬನಂದಿನಿ, ಈ ಪತ್ರವು ದಿಲ್ಲಿಯದೂ ಅಲ್ಲ; ಲಾಹೋರಿನದೂ ಅಲ್ಲ. ಇದು ಇದೇ ಊರಿನದು. ಯಾರು ಬರೆದಿರುವರೋ ತಿಳಿಯಲೊಲ್ಲದು. ಇದರಲ್ಲಿ ವಿಚಿತ್ರವಾದ ಸಂಗತಿ ಬರೆಯಲ್ಪಟ್ಟಿದೆ. ಬೇಕಾದರೆ ನೀನಿದನ್ನು ನೋಡಬಹುದು." ಎಂದು ಹೇಳಿ, ಅದನ್ನು ಪನ್ನಾ ಮತಿಯ ಕೈಯಲ್ಲಿ ಕೊಟ್ಟು—"ಇದನ್ನು ಯಾರು ಬರದಿರಬಹುದೆಂಬದನ್ನು ನೀನು ಹೇಳಬಲ್ಲೆಯಾ?" ಎಂದು ಕೇಳಿದನು.

"ಇದರಲ್ಲಿಯ ಅಕ್ಷರಗಳು ನನ್ನ ಪರಿಚಯದವಲ್ಲ. ಆದರಿಂದ ಈ ಪತ್ರವನ್ನು ಯಾರು ಬರೆದಿರುವರೆಂಬದನ್ನು ನಾನು ಹೇಳಲಾರೆ"

"ನೀನು ಅಫಶಾನನ ಅಕ್ಷರಗಳನ್ನು ಗುರುತಿಸಬಲ್ಲೆಯಾ?

"ಅವನ ಅಕ್ಷರಗಳು ನನಗೆ ಸಂಪೂರ್ಣ ಪರಿಚಯವುಳ್ಳವು. ನಾನವುಗಳನ್ನು ಗೊತ್ತು ಹಿಡಿಯಲಾರೆನೇ?"

"ಇದರ ಅಕ್ಷರಗಳು ಅಫಶಾನನದಲ್ಲವೇನು?"

"ನಿಶ್ಚಯವಾಗಿಯೂ ಅಲ್ಲ."

"ಆ ಮನುಷ್ಯನು ಬಹುಶ್ರಮಪಟ್ಟು ನನಗೆ ಆಮಂತ್ರಣ ಕೊಟ್ಟಿದ್ದಾನೆ. ಅವನ ಬರಹದಂತೆ ನಾನು ಹೋಗಲೇಬೇಕು. ಇಲ್ಲವಾದರೆ ನಾನೊಬ್ಬ ಹೇಡಿಯಾಗಿರುವೆನೆಂದು ಅವನು ತಿಳಿಯುವನು. ಇದಕ್ಕೆ ನೀನೇನು ಹೇಳುವೆ."

"ನೀನು ಹೋಗುವದು ನನಗೆ ಇಷ್ಟವಾಗಿಲ್ಲ. ನೀನು ಹೋಗದಿರುವದೇ ಒಳಿತಾದದ್ದು. ಯಾಕಂದರೆ ಇದು ನಿನ್ನ ಗುಪ್ತ ಶತ್ರುವಿನಿಂದ ಬರೆಯಲ್ಪಟ್ಟ ಪತ್ರ. ಅವನು ಯಾರಿಗೂ ತಿಳಿಯದಂತೆ ನಿನ್ನನ್ನು ಕೊಂದು ಬಿಡುವ ಮನಸ್ಸುಮಾಡಿರಬಹುದು."

"ನಾನೇನು ಕೈಯಲ್ಲಿ ಬಳೆ ತೊಟ್ಟಿಲ್ಲ. ಶಸ್ತ್ರಧಾರಿಯಾಗಿ ಹೋಗುವೆನು. ಅಂದಬಳಿಕ ನಾನವನಿಗೆ ಹೆದರುವುದೇಕೆ? ಮೇಲಾಗಿ ಪಠಾಣರಲ್ಲಿ ನನ್ನ ಶತ್ರುಗಳು ಯಾರೂ ಇಲ್ಲ; ಯಾಕಂದರೆ ನಾನು ಯಾರಿಗೂ ಅಹಿತವನ್ನಾಚರಿಸಿಲ್ಲ."

"ರಾಜಪುತ್ರ, ನೀನು ಹೀಗೆ ತಿಳಿಯುತ್ತಿರುವದು ತಪ್ಪಾದುದು. ಈ ಜಗತ್ತಿನಲ್ಲಿ ಪರರ ಉತ್ಕರ್ಷವನ್ನು ನೋಡಿ, ಸಹಿಸುವ ಜನರು ಅಪರೂಪ. ಅದರಿಂದ ಎಂಥ ಮನುಷ್ಯನಾಗಿದ್ದರೂ ಅವನಿಗೆ ಶತ್ರುಗಳಿದ್ದೇ ಇರುವರು. ಅಫಶಾನನು ನಿನ್ನ ಪ್ರಬಲಶತ್ರುವಾಗಿದ್ದಾನೆ. ಬಹುತರವಾಗಿ ಅವನೇ ಈ ಕೆಲಸ ಮಾಡಿರಬಹುದು"

"ಏನು! ಅಫಶಾನನೆ! ಅವನು ನನ್ನನ್ನು ದ್ವೇಷಿಸಲಿಕ್ಕೆ ಕಾರಣವೇನು? ನಾನಾದರೋ ಅವನ ಅಹಿತ ಕೆಲಸವಾವುದನ್ನೂ ಮಾಡಿಲ್ಲ; ಮೇಲಾಗಿ ಅವನಿಗೆ ಅನೇಕ ಉಪಕಾರಗಳನ್ನು ಮಾಡಿದ್ದೇನೆ."

"ತನಗೆ ಹಾಲೆರೆದವರನ್ನೇ ಕಚ್ಚಲೆಳಿಸುವದು ಹಾವಿನ ಹುಟ್ಟುಗುಣವಲ್ಲವೆ?"

"ಅಫಶಾನನು ಅಂತಹ ನೀಚ ಪ್ರಕೃತಿಯವನೆ!"

"ಇದರಲ್ಲಿ ಸಂದೇಹವೇ ಇಲ್ಲ. ಅವನೊಬ್ಬ ಪಿಶಾಚಿ!"

"ಹಾಗಾದರೆ, ಈಗ ನೀನೇನು ಹೇಳುವೆ? ಅವನು ಎಂಥವನೇ ಆಗಲಿ, ನಾನು ಅವನ ಇಷ್ಟದಂತೆ, ಮಧ್ಯರಾತ್ರಿಯಲ್ಲಿ, ಆ ಸ್ಥಳಕ್ಕೆ ಹೋಗುವದು ಉಚಿತ."

"ಬೇಡ, ನೀನು ಈ ಸಾಹಸಕ್ಕೆ ಹೋಗಬೇಡ. ಇದರಲ್ಲೇನೂ ಅರ್ಥವಿಲ್ಲ. ನೀನು ಹೋಗುವುದಿಲ್ಲೆಂದು ವಚನಕೊಟ್ಟ ಹೊರತು, ನಾನು ಈ ಸ್ಥಳವನ್ನು ಬಿಟ್ಟು ಹೋಗುವದಿಲ್ಲ."

"ಯಾಕಾಗವೊಲ್ಲದು, ನೀನು ಹೇಳಿದಂತೆ ನಡೆದುಕೊಳ್ಳುತ್ತೇನೆ."

ಪನ್ನಾಮತಿಯು ಹೊರಟುಹೋದಳು. ಶಹಾಜಾದನು ಪುನಃ ವಿಚಾರಪರನಾಗಿ ಕುಳಿತುಕೊಂಡನು.

* * * *

ಸುಮಾರು ಮೂರು ತಾಸುರಾತ್ರಿಯಾಗಿರಬಹುದು. ಪನ್ನಾಮತಿಯು ತನ್ನ ಕೋಣೆಯಲ್ಲಿ ಒಬ್ಬಳೇ ಕುಳಿತಿದ್ದಾಳೆ. ಇಂದು ಅವಳ ಮನಸ್ಸಿಗೆ ಸಮಾಧಾನವಿಲ್ಲ; ಶಹಾಜಾದನು ಅಫಶಾನನ ದರ್ಶನಕ್ಕೆ ಹೋಗುವದಿಲ್ಲೆಂದು ಹೇಳಿದ್ದರೂ, ಅವಳಿಗೆ ವಿಶ್ವಾಸವಿಲ್ಲ. ಶಹಾಜಾದನು ವೀರಪುರುಷನು. ಶತ್ರುವು ಯುದ್ಧಕ್ಕಾಗಿ ಆಮಂತ್ರಣ ಕೊಟ್ಟಬಳಿಕ, ಹೋಗದಿರುವದು ವೀರರಧರ್ಮವಲ್ಲ; ಇದನ್ನು ತಿಳಿದ ಶಹಾಜಾದನು ಪನ್ನಾಮತಿಯ ಹೇಳಿಕೆಯಂತೆ, ಸುಮ್ಮನೆ ಕುಳಿತುಕೊಳ್ಳುವ ಸಂಭವವಿಲ್ಲ. ಶಹಾಜಾದನು ಹೋಗಿ, ಅಫಶಾನನಿಗೆ ಬಲಿಯಾದನೆಂದರೆ, ಮುಂದೇನಾಗುವುದೋ, ಎಂಥ ಅನರ್ಥಘಟಿಸುವದೋ ಎಂಬದರ ನಿಯಮವಿದ್ದಿಲ್ಲ. ಅದಕ್ಕಾಗಿ ಪನ್ನಾಮತಿಯು ಒದಗಬಹುದಾಗಿದ್ದ ಈ ಅನಿಷ್ಟಪ್ರಸಂಗವನ್ನು ಹೇಗೆ ತಪ್ಪಿಸಬೇಕೆಂದು ವಿಚಾರಮಾಡತೊಡಗಿದಳು. ಅವಳು ವಿಚಾರಾಂತ್ಯದಲ್ಲಿ ಏನನ್ನೋ ನಿರ್ಧರಿಸಿಕೊಂಡು ಹಿಮ್ಮತಖಾನನ್ನು ಕೂಗಿದಳು.

ಕೂಡಲೇ ಹಿಮ್ಮತನು ಅವಳ ಬಳಿಗೆ ಬಂದು 'ಅಪ್ಪಣೆಯೇನು' ಎಂದು ಕೇಳಿದನು.

ಪನ್ನಾಮತಿಯು—"ಹಿಮ್ಮತ, ನೀನು ಪಿಶಾಚಿಯನ್ನು ನೋಡಿರುವಿಯಾ?" ಎಂದು ಕೇಳಿದಳು.

"ಇಲ್ಲ, ನಾನು ಪಿಶಾಚಿಯನ್ನು ನೋಡಿಲ್ಲ, ನೋಡುವ ಸಂಭವವೂ ಇಲ್ಲ. ಯಾಕಂದರೆ ಪಿಶಾಚಿಗಳು ಮನುಷ್ಯರ ಕಣ್ಣಿಗೆ ಕಾಣಿಸುವದಿಲ್ಲ."

"ಹಾಗಾದರೆ ನಾನು ನೋಡಿರುವೆನಲ್ಲ!"

"ಎಲ್ಲಿ? ಈ ಪಟ್ಟಣದಲ್ಲಿಯೇ ಪಿಶಾಚಿಗಳಿರುವವೇನು?"

"ಒಂದು ಪಿಶಾಚಿ ಇದೆ."

"ನೀವೇನು ಹೇಳುತ್ತಿರುವಿರೋ ಅದು ನನಗೆ ತಿಳಿಯದು. ಸರಿಯಾಗಿ ಹೇಳಿ."

"ಅಫಶಾನನನ್ನು ನೀನು ನೋಡಿರುವಿಯಷ್ಟೇ? ಅವನು ಪ್ರತ್ಯಕ್ಷ ಪಿಶಾಚಿ."

"ಅದೇಕೆ? ತಾವು ಹೀಗೆ ಹೇಳುತ್ತಿರುವಿರಿ?"

"ಪಿಶಾಚಿಯ ನಡವಳಿಗೂ, ಅವನ ಆಚರಣೆಗೂ ಭೇದವಿಲ್ಲ!"

"ಅವನು ಏನುಮಾಡಿದನು. ಈ ಬಗ್ಗೆ ನನಗೇನು ಗೊತ್ತಿಲ್ಲ."

ಪನ್ನಾಮತಿಯು ಅಫಶಾನನು ಪತ್ರಬರೆದ ಸಂಗತಿಯನ್ನು ಹೇಳಿದಳು. ಅದನ್ನು ಕೇಳಿ ಹಿಮ್ಮತನು—"ನೀವು ಹೇಳುತ್ತಿರುವದು ನಿಜವಾದದ್ದು. ಅಫಶಾನನು ಬಹುನೀಚನು. ಅವನು ಮಾಡದ ಕೆಟ್ಟಕೆಲಸಗಳಿಲ್ಲ. ಅವನು ಪಠಾಣಕುಲಕಲಂಕನು!" ಎಂದು ಹೇಳಿದನು.

"ಹಿಮ್ಮತ, ಅದಿರಲಿ ಬಿಡು. ಶಹಾಜಾದನು ಹೋಗುವದಿಲ್ಲೆಂದು ನನ್ನ ಮುಂದೆ ಹೇಳಿದ್ದರೂ, ಅವನು ತಪ್ಪದೆ ಹೋಗುವನು. ದುಷ್ಟನಾದ ಅಫಶಾನನು ಅವನನ್ನು ಕೊಲ್ಲಲೆಳಸುವನು. ನಾವು ಈಗ ಶಹಾಜಾದನನ್ನು ಉಳಿಸಿಕೊಳ್ಳುವದು ಆವಶ್ಯಕವು. ಇದಕ್ಕಾಗಿ ಏನುಮಾಡಬೇಕೆಂಬುದನ್ನು ಹೇಳು."

"ಶಹಾಜಾದನು ಒಳಗೆ ಕುಳಿತಿರುವಾಗ, ನಾನು ಹೋಗಿ ಅವನ ಕೋಣೆಯ ಬಾಗಿಲನ್ನಿಕ್ಕಿಕೊಂಡು, ಕೀಲಿಯನ್ನು ಹಾಕಿಕೊಂಡು ಬರುವೆನು. ಅಂದರೆ ಶಹಾಜಾದನು ಹೊರಬೀಳುವ ಸಂಭವವೇ ಇಲ್ಲ. ಇದರಿಂದ ಅಫಶಾನನ ಉದ್ದೇಶವು ಈಡೇರುವುದೂ ಇಲ್ಲ."

"ಬೇಡ, ಹೀಗೆ ಮಾಡುವದು ಒಳಿತಲ್ಲ. ಇದರಿಂದ ಮುಂದೆ ಶಹಾಜಾದನ ಮನಸ್ಸಿನಲ್ಲಿ ವಿಪರೀತ ಕಲ್ಪನೆಗಳುಂಟಾಗುವ ಸಂಭವವುಂಟು."

"ಹಾಗಾದರೆ ಮತ್ತೇನು ಮಾಡಲಿ?"

"ನಾನು ಈ ರಾಜ್ಯದ ರಾಣಿ. ಅಫಶಾನನು ನನ್ನ ನವುಕರನು. ನಾನು ಈಗ ಅವನನ್ನು ಸೆರೆ ಹಿಡಿಯಲು ಮನಸ್ಸು ಮಾಡಿದ್ದೇನೆ. ನೀನು ಗುಪ್ತ ರೀತಿಯಿಂದ ಹೋಗಿ, ಅಫಶಾನನು ತನ್ನಕೋಣೆಯಲ್ಲಿರುವನೋ ಇಲ್ಲವೋ ನೋಡು. ಇದ್ದದ್ದಾದರೆ, ನಾಲ್ವರು ಸೈನಿಕರನ್ನು ಕರೆದುಕೊಂಡುಹೋಗಿ, ಅವನನ್ನು ಬಂದಿಯನ್ನಾಗಿ ಮಾಡಿಕೊಂಡು ಬಾ. ಶಹಾಜಾದನು ನಮ್ಮ ಅತಿಥಿ. ಅತಿಥಿಗಳ ರಕ್ಷಣೆ ಮಾಡುವದು ಪಠಾಣರ ಮುಖ್ಯ ಧರ್ಮವು. ಇನ್ನು ನೀನು ಹೋಗು. ತಡಮಾಡಬೇಡ."

"ನಿಮ್ಮ ಅಪ್ಪಣೆಯಂತೆ ನಡೆದುಕೊಳ್ಳುವೆನು. ಆದರೆ......"

"ನಾನು ನಿನ್ನ ಮನಸ್ಸಿನ ಅಭಿಪ್ರಾಯವನ್ನು ತಿಳಿದೆ. ಅಫಶಾನನು ಸುಮ್ಮನೆ ಬಂದಿಯಾದರೆ ನೆಟ್ಟಗಾಯಿತು! ಇಲ್ಲದೆ ಹೋದರೆ ಅವನ ಶವವನ್ನು ನನ್ನ ಮುಂದೆ ತಂದಿರಿಸು. ಅವನು ಅತಿಥಿಯನ್ನು ಕೊಂದು ಪಠಾಣರ ಧರ್ಮಕ್ಕೆ ಕಲಂಕ ಹಚ್ಚಲು ಯತ್ನನಡೆಸಿದ್ದಾನೆ. ಅವನ ವಿಷಯದಲ್ಲಿ ಎಷ್ಟು ಮಾತ್ರವೂ ದಯೆದೋರುವಂತಿಲ್ಲ."

ಹಿಮ್ಮತನು ಬೇರೆ ಮಾತಾಡದೆ, ಅಫಶಾನನ ಕೋಣೆಯ ಕಡೆಗೆ ಹೊರಟನು. ಪನ್ನಾಮತಿಯು ಪುನಃ ವಿಚಾರಕ್ಕೊಳಗಾಗಿ ಕುಳಿತುಕೊಂಡಳು.

ಹಿಮ್ಮತನು ಅಫಶಾನನ ಕೋಣೆಗೆ ಬಂದನು. ಬಾಗಲಲ್ಲಿ ಸೇವಕನು ಕುಳಿತುಕೊಂಡಿದ್ದನು. ಹಿಮ್ಮತನು ಅವನನ್ನು ಕುರಿತು—"ನಿಮ್ಮ ಧನಿ ಎಲ್ಲಿದ್ದಾರೆ?" ಎಂದು ಕೇಳಿದನು.

"ಸಾಯಂಕಾಲದ ಪೂರ್ವದಲ್ಲಿಯೇ ಅವರು ಮನೆಬಿಟ್ಟು ಹೋಗಿದ್ದಾರೆ. ಈಗೆಲ್ಲಿರುವರೆಂಬುದನ್ನು ನಾನರಿಯೆ," ಎಂದು ಸೇವಕನು ಉತ್ತರಕೊಟ್ಟನು.

"ಪನ್ನಾಮತಿಬೇಗಮರು ಅವರನ್ನು ಕರೆಯುತ್ತಿದ್ದಾರೆ. ಬಹಳ ಜರೂರಿಯ ಕೆಲಸವಿದೆಯಂತೆ. ಬಂದಕೂಡಲೆ ಅವರನ್ನು ಕಳುಹಿಸಿಕೊಡು."

ಹಿಮ್ಮತನು ಪನ್ನಾಮತಿಯ ಬಳಿಗೆ ಬಂದನು. ಹಿಮ್ಮತನೊಬ್ಬನೇ ಬಂದುದನ್ನು ನೋಡಿ, ಪನ್ನಾಮತಿಯು:— "ಅಫಶಾನನೆಲ್ಲಿ ?" ಎಂದು ಕೇಳಿದಳು.

"ಅವನು ಹೊತ್ತು ಮುಣುಗುವ ಮೊದಲೇ ಮನೆಬಿಟ್ಟು ಹೋಗಿದ್ದಾನೆಂದು ಸೇವಕನು ಹೇಳಿದನು. ನಾನವನನ್ನು ಬಹಳ ಕಡೆ ಹುಡುಕಿದೆ; ಎಲ್ಲಿಯೂ ಸಿಗಲಿಲ್ಲ."

"ಈಗ ನೀನು ಹೋಗಿ, ಬಲಿಷ್ಠರಾದ ನಾಲ್ವರು ಸೈನಿಕರನ್ನು ಕರೆದುಕೊಂಡು ಬಾ. ನಾನೂ ಬರುವೆನು. ಅಫಶಾನನನ್ನು ಹುಡುಕಲಿಕ್ಕೆ ಹೋಗೋಣ. ಮುಂದೆ ಮಾಡಬೇಕಾದ ಕೆಲಸವನ್ನು ಹಾದಿಯಲ್ಲಿ ಹೇಳುವೆನು."

ಹಿಮ್ಮತನು ಮರುಮಾತಾಡದೆ, ಪನ್ನಾಮತಿಯ ಅಪ್ಪಣೆ ಪಾಲಿಸುವುದಕ್ಕೆ ಹೊರಟುಹೋದನು.

* * * * * *

ಶಹಾಜಾದನೂ ತನ್ನ ಕೋಣೆಯಲ್ಲಿ ಕುಳಿತು ಬಹುಕಾಲ ವಿಚಾರ ಮಾಡಿದನು. ಪನ್ನಾಮತಿಯ ಹೇಳಿಕೆಯಂತೆ ನಡೆದುಕೊಳ್ಳುವದು ಅವನಿಗೆ ಸರಿಯಾಗಿ ಕಾಣಿಸಲಿಲ್ಲ. ಅದಕ್ಕಾಗಿ ಅವನು ಶಸ್ತ್ರಧಾರಿಯಾಗಿ ಹೊರಟನು. ಪಟ್ಟಣದ ಜನರೆಲ್ಲರೂ ಮಲಗಿದ್ದರು. ಗಭೀರವಾದ ಶಾಂತತೆ ಎಲ್ಲ ಕಡೆಯಲ್ಲಿ ಹಬ್ಬಿತ್ತು. ಶಹಾಜಾದನು ಮೆಲ್ಲಮೆಲ್ಲನೆ ನಡೆದು, ಪಟ್ಟಣದಿಂದ ಹೊರಬಿದ್ದನು. ತರುವಾಯ ಅವನು ನಿಯಮಿತ ಸ್ಥಳಕ್ಕೆ

ಬಂದು ಮುಟ್ಟಿದನು. ಆದರೆ ಅಲ್ಲಿ ಯಾರೂ ಇರಲಿಲ್ಲ. ಕಾರಣ ಶಹಾಜಾದನು—"ಯಾರು ಇರುವಿರಿ? ನನ್ನ ಬಳಿಗೆ ಬನ್ನಿ," ಎಂದು ಗಟ್ಟಿಯಾಗಿ ಕೂಗಿದನು.

ತನ್ನ ಯಾವತ್ತು ಅವಯುವಗಳನ್ನು ಕಪ್ಪುವಸ್ತ್ರದಿಂದ ಮುಚ್ಚಿಕೊಂಡಿದ್ದ ಒಬ್ಬ ಮನುಷ್ಯನು ಶಹಾಜಾದನ ಬಳಿಯಲ್ಲಿ ಬಂದು ನಿಂತನು. ಶಹಾಜಾದನು ಅವನನ್ನು ವಿಸ್ಮಯದಿಂದ ನೋಡುತ್ತ ನಿಂತುಕೊಂಡನು. ಆ ಆಗಂತುಕನು ತನ್ನಮುಖಾವರಣವನ್ನು ತೆಗೆದು—"ಶಹಾಜಾದ, ನೀವು ನನ್ನನ್ನು ಗುರುತಿಸಲಿಲ್ಲವೇ?" ಎಂದು ಕೇಳಿದನು.

ಶಹಾಜಾದನು ತನ್ನೆದುರಿನಲ್ಲಿ ನಿಂತವನು ಅಫಶಾನನೆಂಬದನ್ನು ಕಂಡುಹಿಡಿದನು. ಪನ್ನಾಮತಿಯು ಹೇಳಿಕೆ ಸತ್ಯವಾದ್ದೆಂದು ಅವನಿಗೆ ಮನವರಿಕೆಯಾಯಿತು. ಅವನು ತಿರಸ್ಕಾರಸೂಚಿತ ಧ್ವನಿಯಿಂದ—"ನನಗೆ ಪತ್ರವನ್ನು ಬರೆದವನು ನೀನೇ ಏನು?" ಎಂದು ಕೇಳಿದನು.

"ಅಹುದು."

"ಏತಕ್ಕಾಗಿ?"

"ನನಗೆ ನಿಮ್ಮ ಬಳಿಯಲ್ಲಿ ಒಂದು ಮಹತ್ವದ ಕೆಲಸವಿತ್ತು."

"ಕೆಲಸವಿರಬಹುದು. ಅದಕ್ಕಾಗಿ ಇಂಥ ಸಮಯದಲ್ಲಿ, ಈ ಸ್ಥಳದಲ್ಲಿ ನನ್ನನ್ನು ಬರಮಾಡಿಕೊಳ್ಳುವ ಕಾರಣವೇನಿತ್ತು? ಅರಮನೆಯಲ್ಲಿಯೇ ನನ್ನ ಭೇಟಿಯನ್ನು ತೆಗೆದುಕೊಂಡರೆ, ಆಗುತ್ತಿರಲಿಲ್ಲವೇನು?"

"ಹಾಗೆ ಮಾಡುವದು ಸಾಧ್ಯವಿರಲಿಲ್ಲ. ನನ್ನ ಕೆಲಸವು ಅತಿ ಗುಪ್ತ ರೀತಿಯಿಂದ ನೆರವೇರಬೇಕಾಗಿದೆ."

"ಒಳ್ಳೇದು, ನೀನು ಹೇಳತಕ್ಕದ್ದೇನು? ಅದನ್ನು ಹೇಳಿಬಿಡು."

"ನಾನು ಇಲ್ಲಿ ಹೇಳುವಂತಿಲ್ಲ. ನನ್ನೊಡನೆ ದಯಮಾಡಿಸಿ?" ಎಂದು ಹೇಳಿ ಅಫಶಾನನು ಮುಂದೆ ಮುಂದೆ ನಡೆದನು. ಶಹಾಜಾದನು ಅವನನ್ನು ಹಿಂಬಾಲಿಸಿದನು. ತುಸು ಹೊತ್ತಿನಲ್ಲಿ ಅವರು ದಟ್ಟವಾದದ್ದೊಂದು

ಅರಣ್ಯವನ್ನು ಹೊಕ್ಕರು. ಅಫಶಾನನು ಒಂದು ಗಿಡದ ಬುಡದಲ್ಲಿ ನಿಂತು ಕೊಂಡನು. ಶಹಾಜಾದನೂ ನಿಂತುಕೊಳ್ಳಬೇಕಾಯಿತು.

ಶಹಾಜಾದನು—"ಅಫಶಾನ್, ಇಲ್ಲಿ ನಿನ್ನ ಅಭಿಪ್ರಾಯವನ್ನು ಹೇಳಲಿಕ್ಕೆ ಏನೂ ಅಡ್ಡಿಇಲ್ಲವಲ್ಲ! ಹೇಳಿಬಿಡು, ನೋಡೋಣ," ಎಂದು ಅಂದನು.

"ಶಹಾಜಾದ, ನನ್ನ ಮಾತು ತಮಗೆ ಬಹಳ ಕಠೋರವಾಗಿ ತೋರಬಹುದು. ಆದರೆ ಉಪಾಯವಿಲ್ಲ. ಅದನ್ನು ನಾನು ಹೇಳಲೇಬೇಕಾಗಿದೆ. ನೀವು ನನ್ನ ಸುಖಮಾರ್ಗದಲ್ಲಿ ಅಡ್ಡವಾಗಿ ಬಂದು ನಿಂತಿರುವಿರಿ! ನಿಮ್ಮನ್ನು ಇಲ್ಲದಂತೆ ಮಾಡಿದ ಹೊರತು ನನಗೆ ಸುಖ ದೊರೆಯುವಂತಿಲ್ಲ!"

"ಅಫಶಾನ, ವಿಚಾರಮಾಡು. ನಾನು ನಿನ್ನ ಸುಖಕ್ಕೆ ಅಡ್ಡಿಯಾಗುವುದೆಂದರೇನು? ನನ್ನ ದಯೆಯಿಂದಲೇ ನೀನು ಪುನಃ ಸೇನಾಪತಿ ಪದವಿ ಹೊಂದಿರುವೆ. ಇದನ್ನು ಈಗಾಗಲೇ ಮರೆತೆಯಾ?"

"ಇದನ್ನು ಮರೆಯುವುದು ಹೇಗೆ? ಆದರೂ ಇದೊಂದು ಕ್ಷುದ್ರ ಸಂಗತಿ. ಒಂದುವೇಳೆ ನಾನು ಸೇನಾಪತಿಯಾಗದಿದ್ದರೂ ದುಃಖಿತನಾಗುತ್ತಿರಲಿಲ್ಲ."

"ಹಾಗಾದರೆ, ನೀನು ನನ್ನನ್ನು ದ್ವೇಷಿಸುತ್ತಿರುವದೇಕೆ? ನಾನು ಮಾಡಿದ ಅಂತಹ ದೊಡ್ಡ ಅಹಿತವಾದರೂ ಯಾವುದು?"

"ಶಹಾಜಾದ, ನಾನು ಪನ್ನಾಮತಿಯನ್ನು ಅತೀವಪ್ರೀತಿಸುವೆನು."

"ಇರಬಹುದು. ಇದರಲ್ಲಿ ವಿಶೇಷವೇನು?"

"ನೀವು ನನ್ನ ಪ್ರಣಯ ಮಾರ್ಗಕ್ಕೆ ಕಂಟಕರಾಗಿರುವಿರಿ."

"ಆದು ಹೇಗೆ? ನಾನು ಪನ್ನಾಮತಿಯನ್ನು ವಿವಾಹಮಾಡಿಕೊಳ್ಳಲು ಇಚ್ಛಿಸುತ್ತಿರುವೆನೆಂದು ನೀನು ಭಾವಿಸುತ್ತಿರುವೆಯೇನು?

ನೀನು ವೃಥಾ ಭ್ರಮೆಗೊಂಡಿರುವೆ. ಪನ್ನಾಮತಿಗಿಂತಲೂ ಸುಂದರಿಯರಾದ ಆನೇಕ ರಮಣಿಯರು ಆಗ್ರಾ ಪಟ್ಟಣದ ರಂಗಮಹಲಿನಲ್ಲಿದ್ದಾರೆ. ನಾನು ಇಚ್ಛಿಸುವೆನಾದರೆ, ಈಗಲೂ ಪನ್ನಾಮತಿಯನ್ನು ಸೆರೆಹಿಡಿದುಕೊಂಡು ಲಾಹೋರಕ್ಕೆ ಒಯ್ಯಬಲ್ಲೆನು. ಈ ರಾಜ್ಯವನ್ನು ಆಕ್ರಮಿಸಬಲ್ಲೆನು. ಆದರೆ ಇವುಗಳಲ್ಲಿ ಯಾವದೂ ನನಗೆ ಬೇಕಾಗಿಲ್ಲ."

"ನೀವು ನಿಮ್ಮ ದೃಷ್ಟಿಯಿಂದ ಮಾತ್ರ ವಿಚಾರಿಸುತ್ತಿರುವಿರಿ. ನೀವು ಪನ್ನಾಮತಿಗೆ ಮನಸೋತಿರಲಿಕ್ಕಿಲ್ಲ; ಇವಳಿಗಿಂತಲೂ ರೂಪಸಿಯರಾದ ನಾರಿಯರು ನಿಮ್ಮ ಅಂಕೆಯಲ್ಲಿರುತ್ತಿರಬಹುದು. ಆದರೆ ಇವುಗಳಿಂದ ನನಗೆ ಉಪಯೋಗವೇನು! ನೀವು ಪನ್ನಾಮತಿಯನ್ನು ಪ್ರಣಯದೃಷ್ಟಿಯಿಂದ ನೋಡದಿದ್ದರೂ ಅವಳು ನಿಮ್ಮನ್ನು ಪ್ರೀತಿಸುತ್ತಿರುವುದು ಸುಳ್ಳಲ್ಲ."

"ಇದರಲ್ಲಿ ನನ್ನ ಅಪರಾಧವೇನು?"

"ನೀವು ಪ್ರತ್ಯಕ್ಷವಾಗಿ ಅಪರಾಧಿಗಳಾಗಿರದಿದ್ದರೂ, ನಿಮ್ಮಿಂದ ನಾನು ನಿರಾಶನಾಗುವ ಪ್ರಸಂಗ ಬಂದಿರುವುದು ಸುಳ್ಳಲ್ಲ. ನೀವು ನಿಮ್ಮ ಮನೋಹರರೂಪದಿಂದಲೂ, ಸವಿಮಾತುಗಳಿಂದಲೂ ಅವಳನ್ನು ಮೋಹಗೊಳಿಸದಿದ್ದರೆ, ಅವಳು ನಿಮ್ಮಲ್ಲಿ ಇಷ್ಟೊಂದು ಅನುರಕ್ತಳಾಗುತಿದ್ದಳೇ? ಬಹುದಿವಸಗಳಿಂದ ಪ್ರಣಯದೃಷ್ಟಿಯಿಂದ ನೋಡುತ್ತ ಬಂದಿದ್ದ ನನ್ನನ್ನು ಉಪೇಕ್ಷಿಸಿ, ನಿಮ್ಮನ್ನು ವರಿಸಲು ಮುಂದುವರಿಯುತ್ತಿದ್ದಳೇ? ಇದು ಹೇಗೆ ಇರಲಿ, ಈಗ ನೀವು ನನ್ನೊಡನೆ ದ್ವಂದ್ವಯುದ್ಧ ಮಾಡಲು ಸಿದ್ಧರಾಗಿರಿ. ಇಂದು ನಮ್ಮಿಬ್ಬರಲ್ಲಿ ನೀವೇ ಆಗಲಿ, ನಾನೇ ಆಗಲಿ ಈ ಲೋಕವನ್ನು ಬಿಟ್ಟು ಹೋಗಲಿಕ್ಕೆ ಬೇಕು. ಇಲ್ಲವಾದರೆ......"

ಶಹಾಜಾದನು ಅಫಶಾನನ ಮುಖದ ಕಡೆಗೆ ನೋಡಿದನು. ಅವನ ಕಣ್ಣುಗಳೆರಡೂ ಉರಿಯುತಲಿದ್ದವು. ಕ್ರುದ್ಧವ್ಯಾಘ್ರವು ಕೈಯಲ್ಲಿ ಸಿಕ್ಕ ಪ್ರಾಣಿಯಮೇಲೆ ಬೀಳುವಾಗ ತಾಳಿರುವ ಮುಖಭಾವದಂತೆ, ಅಫಶಾನನ ಮುಖವೂ ಹಿಂಸಾಪರಾಯಣ ಭಾವವನ್ನು ವ್ಯಕ್ತಮಾಡುತಲಿತ್ತು.

ಅಫಶಾನನ ಮಾತನ್ನು ಕೇಳಿ, ಶಹಾಜಾದನಿಗೆ ಬಹಳ ಸಿಟ್ಟು ಬಂದಿತು. ತಾನು ಪನ್ನಾಮತಿಯ ಮಾತು ಮೀರಿ, ಈ ಸ್ಥಳಕ್ಕೆ ಬಂದದ್ದು

ಅನುಚಿತವಾಯಿತೆಂದು ಭಾವಿಸಿದನು. ಶಹಾಜಾದನು ಅಫಶಾನನೊಡನೆ ಯುದ್ಧಮಾಡುವದಕ್ಕೆ ಹೆದರಿದ್ದಿಲ್ಲ. ಆದರೆ, ತಿಳಿಗೇಡಿಯಾದ ಅಫಶಾನನೊಡನೆ ಯುದ್ಧ ಮಾಡುವ ಮನಸ್ಸು ಅವನಿಗಿದ್ದಿಲ್ಲ. ಅದಕ್ಕಾಗಿ ಅವನು—"ಅಫಶಾನ, ನೀನು ಕೃತಘ್ನ! ಪಿಶಾಚಿ. ನಿನ್ನಂಥ ಹೀನ ಮನುಷ್ಯನೊಡನೆ ಯುದ್ಧ ಮಾಡುವುದು, ದಿಲ್ಲೀಶ್ವರರ ಮಗನಾದ ನನಗೆ ಅಪಮಾನಕರ."

ಅಫಶಾನನು ಬೇರೆ ಮಾತಾಡಲಿಲ್ಲ. ಒರೆಯಿಂದ ಕತ್ತಿಯನ್ನು ಹಿರಿದು, ಶಹಜಾದನ ಮೇಲೆ ಪ್ರಯೋಗಿಸುವದಕ್ಕೆ ಕೈಯೆತ್ತಿದನು. ಈ ಸಮಯದಲ್ಲೊಬ್ಬ ವೃದ್ಧ ಪಠಾಣಸೈನಿಕನು ಅವನ ಕೈಯನ್ನು ಗಟ್ಟಿಯಾಗಿ ಹಿಡಿದುಬಿಟ್ಟನು. ಇದರಿಂದ ಅಫಶಾನನ ಉದ್ದೇಶವು ಈಡೇರಲಿಲ್ಲ. ಅವನು ನಿರುಪಾಯನಾಗಿ ಸುಮ್ಮನೆ ನಿಂತುಕೊಳ್ಳಬೇಕಾಯಿತು.

"ಸೈನಿಕರೆ, ಅಫಶಾನನನ್ನು ಸೆರೆಹಿಡಿಯಿರಿ. ಒಂದುವೇಳೆ ಅವನು ಒಳ್ಳೇಮಾತಿನಿಂದ ನಿಮ್ಮ ಹಸ್ತಗತನಾಗದಿದ್ದರೆ, ಅವನನ್ನು ಕೊಂದುಬಿಡಿರಿ" ಎಂದು ಸಮೀಪದಲ್ಲಿಯೇ ಪನ್ನಾಮತಿ ತನ್ನ ಸೇವಕರಿಗೆ ಅಪ್ಪಣೆ ಮಾಡಿದಳು.

ಹೀಗೆ ಅಕಸ್ಮಾತ್ತಾಗಿ ಪನ್ನಾಮತಿಯು ಬಂದುದನ್ನು ನೋಡಿ, ಶಹಾಜಾದನಿಗೆ ಬಹಳ ಆಶ್ಚರ್ಯವಾಯಿತು. ಅವನು—"ನಬಾಬನಂದಿನಿ, ಇದೇನು? ಈ ಸಮಯದಲ್ಲಿ ನೀನು ಇಲ್ಲಿಗೆ ಹೇಗೆ ಬಂದೆ?" ಎಂದು ಕೇಳಿದನು.

ಅಫಶಾನನು ಹತಬುದ್ಧಿಯಾಗಿ ಸುಮ್ಮನೆ ನಿಂತುಬಿಟ್ಟನು. ತಾನು ಮಾಡಲೆಳಸಿದ ಕೆಲಸದ ಪರಿಣಾಮವು ಈರೀತಿಯಾದೀತೆಂದು ಅವನು ಭಾವಿಸಿರಲಿಲ್ಲ.

"ಶಹಜಾದ, ಈ ಅಫಶಾನನು ಅತ್ಯಂತ ನೀಚನು! ನೀನು ಸರಳಚಿತ್ತನು! ಇವನು ನಿನ್ನನ್ನು ಮೋಸಗೊಳಿಸಿ, ಕೊಲ್ಲಲುದ್ಯುಕ್ತನಾಗಿರುವನೆಂದು ನಾನು ಮೊದಲೇ ತರ್ಕಿಸಿದ್ದೆ. ಇಲ್ಲಿಗೆ ಬಂದುನೋಡಲು ನನ್ನ

ಅನುಮಾನವು ನಿಜವಾದದ್ದೆಂದು ಗೊತ್ತಾಯಿತು. ಈ ಮೊದಲೇ ನಾನು ಹೋಗಬೇಡವೆಂದು ನಿನಗೆ ಹೇಳಿದ್ದೆ. ನೀನು ಹಾಗೆಯೇ ವಚನ ಕೊಟ್ಟಿದ್ದೆ. ಆದರೆ ನಿನ್ನ ಮಾತಿನಲ್ಲಿ ನನಗೆ ಭರವಸೆಯುಂಟಾಗಲಿಲ್ಲ. ಯಾಕಂದರೆ ನೀನು ವೀರಧರ್ಮವನ್ನು ಅನುಸರಿಸಿ, ಪತ್ರದಂತೆ ನಿಯಮಿತಸ್ಥಳಕ್ಕೆ ಹೋಗದಿರಲಾರೆಯೆಂದು ನಿನ್ನ ಮುಖಚರ್ಯೆಯಿಂದ ನನಗೆ ಗೊತ್ತಾಯಿತು. ಅದಕ್ಕಾಗಿ ನಾನು ಈರೀತಿ ಇಲ್ಲಿಗೆ ಬರಬೇಕಾಯಿತು. ನಡೆ, ಇನ್ನು ನಾವು ಮನೆಗೆ ಹೋಗೋಣ," ಎಂದು ಹೇಳಿ ಪನ್ನಾಮತಿಯು ತನ್ನ ಸೇವಕರನ್ನು ಕುರಿತು—"ಅಫಶಾನನನ್ನು ತೆಗೆದುಕೊಂಡುಹೋಗಿ ಕಾರಾಗಾರದಲ್ಲಿರಿಸಿರಿ. ನಾಳೆ ಇವನ ವಿಚಾರಣೆಯನ್ನು ಶಹಾಜಾದರೇ ಮಾಡುವರು." ಎಂದು ಹೇಳಿದಳು.

ಸೈನಿಕರು ಅಫಶಾನನನ್ನು ಹಿಡಿದುಕೊಂಡು ಹೊರಟರು. ಶಹಾಜಾದನೂ ಪನ್ನಾಮತಿಯೂ ಮಾತಾಡುತ್ತ ಅರಮನೆಗೆ ನಡೆದರು.

---

## ಇಪ್ಪತ್ತೊಂದನೆಯ ಪರಿಚ್ಛೇದ.

---

### ಶಹಾಜಾದನ ಉದಾರತೆ.

ಮಧ್ಯಾಹ್ನ ಸಮಯ. ಸೂರ್ಯನ ಪ್ರಖರ ಕಿರಣಮಾಲೆಯಿಂದ ಜನರು ತಳಮಳಗೊಳ್ಳುತಲಿದ್ದಾರೆ. ಶ್ರೀಮಂತರು ತಮ್ಮ ಮನೆಯಲ್ಲಿ ಕುಳಿತು, ಶೀತೋಪಚಾರಗಳಿಂದ ಸಮಾಧಾನಪಡೆಯಲು ಯತ್ನಿಸುತ್ತಿದ್ದಾರೆ. ಬಡವರು ಯಾವದನ್ನೂ ಲಕ್ಷಿಸದೆ, ನಿತ್ಯದ ದುಡಿತಗಳನ್ನು ದುಡಿಯುತ್ತಿದ್ದಾರೆ.

ಪನ್ನಾಮತಿಯೊಬ್ಬಳೇ ತನ್ನ ಕೋಣೆಯಲ್ಲಿ ಕುಳಿತಿದ್ದಾಳೆ. ಅವಳ ಇದಿರಾಗಿ ಒಂದು ಚಿತ್ರವಿದೆ. ಈ ಚಿತ್ರವು ಶಹಾಜಾದನದು; ಹಸ್ತಿದಂತದ

ಹಲಿಗೆಯಲ್ಲಿ ಬಹು ಕೌಶಲದಿಂದ ನಿರ್ಮಿತವಾಗಿರುವುದು. ಶಹಾಜಾದನು ಇದನ್ನು ಪನ್ನಾಮತಿಯ ಪಟ್ಟಾಭಿಷೇಕದ ದಿವಸ ತನ್ನ ಸ್ಮೃತಿ ಚಿಹ್ನವೆಂದು ಕೊಟ್ಟಿದ್ದನು. ಪನ್ನಾಮತಿಯು ತದೇಕಧ್ಯಾನದಿಂದ ಈ ಚಿತ್ರವನ್ನು ನೋಡುತ್ತಿದ್ದಳು. ಬಾಹ್ಯಸೃಷ್ಟಿಯ ಜ್ಞಾನವೇ ಅವಳಿಗೆ ಇರಲಿಲ್ಲ.

ಸ್ವಲ್ಪ ಹೊತ್ತಿನಮೇಲೆ, ಪನ್ನಾಮತಿ ಆಚಿತ್ರವನ್ನು ತನ್ನಕೈಯಲ್ಲಿ ತೆಗೆದುಕೊಂಡು, ಅದನ್ನು ಪುನಃ ನೋಡಿ, ಒಂದು ನಿಟ್ಟುಸಿರನ್ನು ಬಿಟ್ಟು— "ಎಂಥ ಸುಂದರರೂಪವಿದು! ಎಷ್ಟು ನೋಡಿದರೂ ತೃಪ್ತಿಯಿಲ್ಲ! ಪ್ರತಿಮೆಯನ್ನು ನೋಡಿದರೆ, ಇಷ್ಟೊಂದು ಆನಂದವಾಗುತ್ತಿರುವದು! ಅಂದ ಬಳಿಕ ನಿನ್ನ ಚಿರಸಹವಾಸವು ದೊರಕುವದಾದರೆ, ನನ್ನ ಆನಂದಕ್ಕೆ ಮೇರೆಯೇ ಇರುವುದಿಲ್ಲ! ಆದರೆ ಇದು ಸಾಧ್ಯವೆ? ಶಹಾಜಾದ, ನೀನು ಅತ್ಯಂತ ನಿಷ್ಠುರನು!" ಎಂದು ಅಂದಳು.

ಶಹಾಜಾದನು ಸಮೀಪದಲ್ಲಿಯೇ ನಿಂತುಕೊಂಡಿದ್ದನು. ಪನ್ನಾಮತಿಯು ಏಕಚಿತ್ತಳಾಗಿ ಚಿತ್ರವನ್ನು ನೋಡುವದರಲ್ಲಿ ಮಗ್ನಳಾಗಿ ಹೋದುದರಿಂದ ಆತನ ಅಸ್ತಿತ್ವವನ್ನೇ ಮರೆತಿದ್ದಳು. ಶಹಾಜಾದನು ಪನ್ನಾಮತಿಯ ಮುಖಭಾವವನ್ನು ನೋಡಿದನು; ಮಾತನ್ನೂ ಕೇಳಿದನು. ಇದರಿಂದ ಅಂತರಂಗಾಭಿಪ್ರಾಯವನ್ನು ಕಂಡುಹಿಡಿಯಲಿಕ್ಕೆ ತಡವಾಗಲಿಲ್ಲ. ಆದರೆ ಪನ್ನಾಮತಿಯ ಪ್ರಣಯಕ್ಕೆ ಉತ್ತೇಜನಕೊಡುವುದು ಅವನ ಮನಸ್ಸಿನಲ್ಲಿಲ್ಲ; ಅವನಿಗೆ ಸುಂದರಿಯರಾದ ರಮಣಿಯರ ಕೊರತೆಯಿಲ್ಲ. ಅಪ್ರತಿಮರೂಪ ಲಾವಣ್ಯಮಂಡಿತರಾದ ಅನೇಕ ನವಯುವತಿಯರು ಆಗ್ರಾದ ರಂಗಮಹಲಿನಲ್ಲಿದ್ದರು. ಪನ್ನಾಮತಿಯು ಇವರ ದಾಸಿಯಾಗಲಿಕ್ಕೂ ಕೂಡ ಯೋಗ್ಯಳಾಗಿರಲಿಲ್ಲ. ಪನ್ನಾಮತಿಯ ಗುಣಗಳು ಮಾತ್ರ ಶಹಾಜಾದನ ಮನಸ್ಸನ್ನು ಆಕರ್ಷಿಸಿದ್ದವು. ಅದರಿಂದ ಶಹಾಜಾದನು ಅವಳೊಡನೆ ಸ್ನೇಹದಿಂದಲೂ, ಸಲುಗೆಯಿಂದಲೂ ವರ್ತಿಸುತ್ತಿದ್ದನು; ಮತ್ತು ಮನಃಪೂರ್ವಕವಾಗಿ ಅವಳಿಗೆ ಒಳಿತಾಗಬೇಕೆಂದು ಇಚ್ಛಿಸುತ್ತಿದ್ದನು.

ಅಫಶಾನನು ಪನ್ನಾಮತಿಯನ್ನು ಪ್ರೀತಿಸುತ್ತಿದ್ದನು. ಆದರೆ ಶಹಾಜಾದನ ರೂಪಕ್ಕೂ ಗುಣಗಳಿಗೂ ಮುಗ್ಧಳಾದ ಪನ್ನಾಮತಿ ಅವನನ್ನು

ಉಪೇಕ್ಷಿಸುತ್ತಿದ್ದಳು. ಇದನ್ನು ಶಹಾಜಾದನೂ ಅರಿತವನಾಗಿದ್ದನು. ಒಂದುವೇಳೆ ತಾನು ಪನ್ನಾಮತಿಯನ್ನು ವಿವಾಹಮಾಡಿಕೊಳ್ಳದಿದ್ದರೆ, ಅವಳು ನಿರಾಶೆಯಿಂದಾದರೂ ಕಡೆಗೆ ಅಫಶಾನನನ್ನು ಲಗ್ನಮಾಡಿಕೊಳ್ಳಲು ಒಪ್ಪಬಹುದೆಂದೂ, ಹೀಗಾಗುವುದೇ 'ಪಠಾಣರಾಜ್ಯಕ್ಕೂ ಪನ್ನಾಮತಿಗೂ ಹಿತಕರವೆಂದೂ ಶಹಾಜಾದನು ಯೋಚಿಸುತ್ತಿದ್ದನು.

ಅಫಶಾನನ ಮಾತೊತ್ತಟ್ಟಿಗಿರಲಿ, ತಾನು ಪನ್ನಾಮತಿಯನ್ನು ಲಗ್ನವಾದರೆ, ಅನೇಕ ಪಠಾಣಸರದಾರರು ತನಗೆ ವಿರೋಧಿಗಳಾಗುವರೆಂಬುವನ್ನು ಶಹಾಜಾದನು ತಿಳಿದಿದ್ದನು; ಯಾಕಂದರೆ ಪನ್ನಾಮತಿ ಸದ್ಯದಲ್ಲಿ ಪಠಾಣರಾಜ್ಯದ ಅರಸಿ. ಅವಳು ಶಾಹಾಜಾದನನ್ನು ವಿವಾಹಮಾಡಿಕೊಂಡದ್ದಾದರೆ, ಪಠಾಣರಾಜ್ಯಕ್ಕೆ ಶಹಾಜಾದನು ಅರಸನಾಗಬೇಕು. ಇದು ಪಠಾಣರಿಗೆ ಇಷ್ಟವಾಗಿರಲಿಲ್ಲ. ಅದರಿಂದವರು ಶಹಾಜಾದನನ್ನೂ ಪನ್ನಾಮತಿಯನ್ನೂ ಕೂಡಿಯೇ ದ್ವೇಷಿಸುವ ಸಂಭವವಿತ್ತು. ಇದು ಪನ್ನಾಮತಿಗೂ ಹಿತಕರವಾದುದಲ್ಲ. ಕಾರಣ ಶಹಾಜಾದನು ಈ ವಿಷಯದಲ್ಲಿ ಆದಷ್ಟು ಉದಾಸೀನನಾಗಿರುವದೇ ಯೋಗ್ಯವೆಂದು ಭಾವಿಸಿದ್ದನು.

"ನಬಾಬನಂದನಿ, ನಿಷ್ಟುರರಾರು?" ಎಂದು ಶಹಾಜಾದನು ಮೆಲ್ಲನೆ ಕೇಳಿದನು.

ಪನ್ನಾಮತಿಯು ಮುಖವನ್ನೆತ್ತಿನೋಡಿದಳು. ತನ್ನಿದಿರಿಗೆ ಶಹಾಜಾದನು. ಅವಳು ಅತೀವ ಲಜ್ಜಿತಳಾದಳು. ಅವಳು ತಾನು ಬಾಗಿಲನ್ನಿಕ್ಕದೆ, ಮೈಮರೆತು ಈ ರೀತಿಮಾತಾಡಿದ್ದು ಅನುಚಿತವಾಯಿತೆಂದು ಎಣಿಸಿದಳು. ತನ್ನ ಕೈಯಲ್ಲಿರುವ ಚಿತ್ರವನ್ನು ಒತ್ತಟ್ಟಿಗೆ ಮುಚ್ಚಿರಿಸಿ, ದಾಸಿಯುಲನನ್ನು ಕುರಿತು—"ರಾಜಕುಮಾರ, ಮತ್ತಾರು? ನೀನೇ ಅತಿ ನಿಷ್ಟುರನು! ನಿನ್ನನ್ನು ನೋಡಿದರೆ, ಸೌಂದರ್ಯವೂ ಕಠೋರತೆಯು ಒತ್ತಟ್ಟಿಗೇ ವಾಸಮಾಡುತ್ತಿರುವವೆಂದು ನನಗೆ ಬೋಧೆಯಾಗುತ್ತಿದೆ!" ಎಂದು ಹೇಳಿದಳು.

"ನಬಾಬನಂದಿನಿ, ನನ್ನ ಅಪರಾಧವೇನು? ನೀನು ನನ್ನನ್ನು ಹೀಗೆ ದೂಷಣೆಯನ್ನೇಕೆ ಮಾಡುತ್ತಿರುವೆ?"

“ನೀನು ಇಷ್ಟು ತೀವ್ರವಾಗಿ ನನ್ನನ್ನು ಬಿಟ್ಟುಹೋಗಲು ಇಚ್ಛಿಸುತ್ತಿರುವುದೇಕೆ? ನೀನಿಲ್ಲದಿದ್ದರೆ ನನಗೆ ಹೊತ್ತುಹೋಗದು. ಇನ್ನು ಕೆಲವು ದಿವಸಗಳವರೆಗಾದರೂ ಇರಬೇಕೆಂದು ನಾನು ಬೇಡಿಕೊಳ್ಳುವೆನು. ಆದರೂ ನೀನು ನನ್ನ ಮಾತನ್ನು ಲಕ್ಷಕ್ಕೆ ತಾರದೆ, ಹೋಗಲೇಬೇಕೆಂದು ಹಟಹಿಡಿದಿರುವೆ.”

ಶಹಾಜಾದನು ವಿನೋದಕ್ಕಾಗಿ ಮೃದುಹಾಸದಳೆದು ಮಾತಾಡಿದನು—“ನಬಾಬನಂದನೆ, ನಿನ್ನ ಈ ರಾಜ್ಯದಲ್ಲಿ ಇರುವದಕ್ಕೆ ನನಗೆ ಬಹಳ ಅಂಜಿಕೆಯಾಗಿದೆ. ಅಫಶಾನನಂತಹ ಮತ್ತೊಬ್ಬ ನೀಚನು ನನ್ನನ್ನು ಕೊಲ್ಲುವದಕ್ಕೆ ಸಿದ್ಧನಾದರೆ, ನಾನು ಮಾಡುವುದೇನು? ಆದುದರಿಂದ ಶೀಘ್ರವೇ ನಿನ್ನ ರಾಜಧಾನಿಯನ್ನು ಬಿಟ್ಟುಹೋಗುವದು ಒಳಿತಲ್ಲವೆ?”

ಅಫಶಾನನು ಮಾಡಿದಕೆಲಸವು ಇಡೀಪಠಾಣ ಜನಾಂಗಕ್ಕೆ ಕಲಂಕವನ್ನು ತರುವದಾಗಿತ್ತು. ಕಾರಣ ಪನ್ನಾಮತಿಯು ಅವನ ಮೇಲೆ ಬಹಳವಾಗಿ ಸಿಟ್ಟಾಗಿದ್ದಳು; ಆದರೆ ಶಹಾಜಾದನು ತೀವ್ರವೇ ತನ್ನನ್ನಗಲಿ ಹೋಗುವನೆಂಬ ಚಿಂತೆಯಲ್ಲಿ, ಅಫಶಾನನ ವಿಷಯವನ್ನು ಮರೆತುಬಿಟ್ಟಿದ್ದಳು. ಈಗ ಶಹಾಜಾದನಾಡಿದ ಮಾತನ್ನು ಕೇಳಿ, ಅವಳಿಗೆ ಪುನಃ ಅಫಶಾನನ ಕೃತಘ್ನತೆಯು ಸ್ಮರಣೆಯಾಯಿತು. ಅಫಶಾನನ ವಿಷಯಕವಾದ ಅವಳ ಕ್ರೋಧವು ಪ್ರಜ್ವಲಿತವಾಯಿತು. ಅವಳು—“ರಾಜಕುಮಾರ, ಒಳ್ಳೆನೆನಪುಮಾಡಿದೆ. ಅಫಶಾನನ ವಿಚಾರಣೆ ಮಾಡುವ ಭಾರವನ್ನು ನಿನ್ನ ಮೇಲೆ ಹೊರಿಸಿದೆ. ನೀನು ಅವನಿಗೆ ನಿನ್ನ ಮನಸ್ಸಿಗೆ ಬಂದ ಶಿಕ್ಷೆವಿಧಿಸಬಹುದು,” ಎಂದು ಹೇಳಿದಳು.

“ನೀನು ಈ ರಾಜ್ಯದ ಅರಸಿ. ಪ್ರಜೆಗಳ ಅಪರಾಧದ ವಿಚಾರಣೆ ಮಾಡುವದು ನಿನ್ನ ಕರ್ತವ್ಯ. ಈ ದೇಶದಲ್ಲಿ ನನ್ನದೇನಿದೆ?”

“ಹಾಗೆಂದರೇನು? ನೀನಿರುವಾಗ ನನ್ನದೇನಿದೆ? ನಾನು ಕೇವಲ ನಿನ್ನದಾಸಿ! ನೀನು ಯಾವ ಸಂಕೋಚವನ್ನೂ ತಾರದೆ, ಅಫಶಾನನಿಗೆ ತಕ್ಕ ಶಿಕ್ಷೆಯನ್ನು ವಿಧಿಸಬಹುದು.”

"ನಾನು ಅಫಶಾನನಿಗೆ ಯಾವ ಶಿಕ್ಷೆಯನ್ನು ಕೊಡಬೇಕೆಂಬದನ್ನು ವಿಚಾರಿಸಿಟ್ಟು ಬಹಳ ಹೊತ್ತಾಯಿತು."

"ಹಾಗಾದರೆ ಹೇಳೋಣವಾಗಲಿ."

"ನಾಳೆ ಮುಂಜಾವಿನಲ್ಲಿಯೇ ಅವನನ್ನು ಬಂಧಮುಕ್ತನನ್ನಾಗಿ ಮಾಡಿಬಿಡು."

"ಇದೇನು? ನೀನು ಹೀಗೇಕೆ ಹೇಳುತ್ತಿರುವೆ? ಅವನು ಮಹಾ ನೀಚನು. ಪ್ರತ್ಯಕ್ಷಪಿಶಾಚಿಯ ಅವತಾರನು! ಅವನು ನಿನ್ನನ್ನು ಕೊಲ್ಲುವದಕ್ಕೆ ಉದ್ಯುಕ್ತನಾಗಿದ್ದನು. ಇದನ್ನು ನೀನು ಇಷ್ಟರಲ್ಲಿಯೇ ಮರೆದೆಯಾ?"

"ದೇವರ ಮನಸ್ಸಿನಲ್ಲಿ ಕೊಲ್ಲುವದಿಲ್ಲದಿರಲು, ಮನುಷ್ಯನು ಸಾಯಹೊಡೆಯಲು ಸಮರ್ಥನಾದಾನೇ? ನಾನು ಇನ್ನೂ ಕೆಲವು ದಿವಸ ಬದುಕಿರಬೇಕೆಂದು ದೇವರ ಇಚ್ಛೆ. ಅಂದಬಳಿಕ ಅಫಶಾನನು ನನ್ನನ್ನು ಕೊಲ್ಲಲಿಕ್ಕೆ ಹೇಗೆ ಶಕ್ತನಾದಾನು? ಮೂರ್ಖನಾದ ಅವನು ಇದನ್ನರಿಯದೆ, ಕೃತಘ್ನನಾಗಿ ನೀಚಕೆಲಸಕ್ಕೆ ತೊಡಗಿದ್ದನು. ಅದಕ್ಕೆ ತಕ್ಕ ಫಲವನ್ನು ಹೊಂದಿದನು. ಮನುಷ್ಯನು ಭ್ರಮೆಗೊಳಗಾಗಿ ಅನೇಕ ಅಪರಾಧಗಳನ್ನು ಮಾಡುತ್ತಿರುವನು. ಭ್ರಮೆಗೊಳಗಾಗದವರು ಯಾರೂ ಇಲ್ಲ. ನಮ್ಮ ಕೈಯಿಂದ ತಪ್ಪಾಗಲಿಕ್ಕಿಲ್ಲೆಂದು ಯಾರು ಹೇಳಬೇಕು? ಅದರಿಂದ ಅಪರಾಧಿಗಳನ್ನು ಶಿಕ್ಷಿಸಲು ನಾವು ಸಮರ್ಥರಲ್ಲ. ಈ ಭಾರವನ್ನು ಸ್ವತಃ ದೇವರೇ ಹೊತ್ತುಕೊಂಡಿದ್ದಾನೆ. ಕೃತಘ್ನನಿಗೆ ಕ್ಷಮೆದೋರುವದೂ ಅತಿಹೀನಕೃತ್ಯಗಳನ್ನು ಮಾಡಿದವನಿಗೆ ಕರುಣೆಯನ್ನು ತೋರಿಸುವದೂ ಉಪಯುಕ್ತವಾದ ಶಿಕ್ಷೆಗಳೆಂದು ನನಗೆ ತೋರುತ್ತದೆ. ಅದಕ್ಕಾಗಿ ನಾನು ಅಫಶಾನನನ್ನು ಬಂಧಮುಕ್ತಮಾಡುವದೇ ಯೋಗ್ಯವೆಂದು ನಿರ್ಧರಿಸಿದ್ದೇನೆ."

ಪನ್ನಾಮತಿಯು ಕೆಲಕಾಲದವರೆಗೆ ದಾನಿಯಲನ ಮುಖವನ್ನು ನೋಡಿ, ಸ್ನೇಹಭರದಿಂದ ಅವನ ಕೈಯನ್ನು ಹಿಡಿದು—"ರಾಜಕುಮಾರ,

ನಿನ್ನಂಥ ಶ್ರೇಷ್ಠಗುಣಿಯನ್ನು ನಾನೆಂದೂ ನೋಡಿರಲಿಲ್ಲ! ನಿನ್ನನ್ನು ನೋಡಿ ನನಗೆ ಅತೀವ ಆನಂದವಾಗುತ್ತಿರುವದು. ” ಎಂದು ಹೇಳಿದಳು. ಅವಳ ಕಣ್ಣುಗಳಿಂದ ಆನಂದಾಶ್ರುಗಳು ಉದುರಿದವು.

ಶಹಾಜಾದನು ಸ್ನೇಹಭರದಿಂದ ಅವಳ ಕೈಯನ್ನು ಹಿಡಿದು, ಮುಂಜಾವಿನಲ್ಲಿ ಬಾದಶಹರಿಂದ ಬಂದ ಪತ್ರವನ್ನವಳಿಗೆ ತೋರಿಸಿದನು. ಅದರಲ್ಲಿ ಸಾಮ್ರಾಟರು ತೀವ್ರವೇ ಬರಬೇಕೆಂದು ಶಹಾಜಾದನಿಗೆ ಅಪ್ಪಣೆ ಮಾಡಿದ್ದರು. ಇದನ್ನು ನೋಡಿ, ಪನ್ನಾಮತಿಗೆ ದುಃಖವಾಯಿತು. ಶಹಾಜಾದನು ಹೋಗುವವಕ್ಕೆ ಅಪ್ಪಣೆಯನ್ನು ಕೇಳಿದನು. ಪನ್ನಾಮತಿಯು ವಿಷಾದದಿಂದ ಅವನನ್ನು ಬಾಗಿಲವರೆಗೆ ಕಳುಹಿಬಂದಳು. ಈ ಸಮಯದಲ್ಲಿ ಶಹಾಜಾದನ ಕಣ್ಣುಗಳಲ್ಲಿಯೂ ಅಶ್ರುಬಿಂದುಗಳು ಕಾಣಿಸಿದವು.

---

## ಇಪ್ಪತ್ತೆರಡನೆಯ ಪರಿಚ್ಛೇದ.

---

### ವಿರಹಾವಸ್ಥೆಯಲ್ಲಿ!

ಶಹಾಜಾದನು ಲಾಹೋರಕ್ಕೆ ಹೊರಟುಹೋಗಿ, ಹದಿನೈದು ದಿವಸಗಳಾದವು. ಪನ್ನಾಮತಿಯ ಅವಸ್ಥೆಯು ದಿನಕ್ರಮವಾಗಿ ಶೋಚನೀಯವಾಗುತ್ತಿದೆ. ಹೃದಯ ವ್ಯಥೆಯಿಂದ ಅವಳು ಕೊರಗುತ್ತಿದ್ದಾಳೆ. ಈಗ ಅವಳಿಗೆ ರಾಜ್ಯಕಾರಭಾರದಲ್ಲಿ ಮನಸ್ಸಿಲ್ಲ. ಅದರ ವ್ಯವಸ್ಥೆಯನ್ನು ಸರದಾರರಮೇಲೆ ಒಪ್ಪಿಸಿ, ಸದಾ ಶಹಾಜಾದನ ಚಿಂತೆಯಲ್ಲಿ ಮಗ್ನಳಾಗಿ ಕುಳಿತುಕೊಂಡುಬಿಡುವಳು.

ಯೌವನದ ಸಾಹಚರ್ಯದಿಂದ ದಿನದಿನವು ಹೆಚ್ಚುತ್ತಲಿರುವ ಅವಳ ಲಾವಣ್ಯವು, ರವಿಯ ಉಗ್ರಕಿರಣಗಳಿಂದ ಸುಡುತ್ತಲಿರುವ ವನಕುಸುಮದಂತೆ ಬಾಡುತ್ತಲಿದೆ. ಅವಳ ಕಣ್ಣುಗಳಲ್ಲಿ ಮೊದಲಿನ ಆ ಚಂಚ

ಲತೆಯಿಲ್ಲ. ಅವುಗಳ ಹೊಳಪು ಕಡಿಮೆಯಾಗುತ್ತಿದೆ. ಮುಖದಲ್ಲಿ ಮೊದಲಿನ ಆ ಮಂದಹಾಸವಿಲ್ಲ. ಚಿಂತಾಭರದಿಂದ ಅವಳ ಮುಖವು ಕಂದಿಕುಂದಿ ಹೋಗುತ್ತಲಿದೆ.

ಬಹುಮೂಲ್ಯವಸ್ತ್ರಭೂಷಣಗಳಿಂದ ಅವಳ ಪೆಟ್ಟಿಗೆ ತುಂಬಿದೆ; ಆದರೆ ಅವುಗಳಲ್ಲಾವುದನ್ನೂ ಧರಿಸುವ ಮನಸ್ಸು ಅವಳಿಗಿಲ್ಲ. ಉತ್ತಮವಾದ ಸುಗಂಧದ್ರವ್ಯಗಳಿಗೆ ಕೊರತೆಯುದ್ದಿಲ್ಲ; ಆದರೆ ಇವುಗಳ ಉಪಭೋಗವನ್ನು ತೆಗೆದುಕೊಳ್ಳುವ ಮನಸ್ಸು ಅವಳಿಗಿರಲಿಲ್ಲ.

ಅವಳಿಗೆ ಆಹಾರದಲ್ಲಿ ರುಚಿಯಿಲ್ಲ; ನಿದ್ರೆಯಲ್ಲಿ ಶಾಂತಿಯಿಲ್ಲ. ಗುಡ್ಡವಮೇಲೆ ಅಡ್ಡಾಡಲಿಕ್ಕೆ ಹೋಗಿ ಸೃಷ್ಟಿಸೌಂದರ್ಯವನ್ನು ನಿರೀಕ್ಷಿಸಿ ಆನಂದಪಡುವ ಇಚ್ಛೆಯಿಲ್ಲ. ಗಿರಿನದಿಯ ತೀರದಲ್ಲಿ ಕುಳಿತು ಕೋಕಿಲೆಯ ಮನೋಹರ ಕೂಜಿತವನ್ನು ಕೇಳುವ ಮನಸ್ಸಿಲ್ಲ. ಅವಳು ಯಾವಾಗಲೂ ಉದಾಶೀನತೆಯಿಂದ ಕಾಲಹಾಕುತ್ತಿದ್ದಾಳೆ. ಸಮಾಧಾನವೆಂದರೆ ಹೇಗೆ ಇರುವುದೆಂಬದನ್ನವಳು ಮರೆತಳು. ಅವಳು ಪ್ರಯತ್ನಪೂರ್ವಕವಾಗಿ ನಿರ್ಮಿಸಿದ ತೋಟದಲ್ಲಿಯ ಗುಲಾಬಿಯ ಗಿಡಗಳು ಒಣಗಿದವು. ದ್ರಾಕ್ಷೆಯಗಿಡಗಳು ನೀರನ್ನು ಕಾಣದೆ ಬಾಡಿದವು. ಆದರೆ ಇವುಗಳ ಕಡೆಗೆ ಅವಳ ಲಕ್ಷ್ಯವೇ ಇರಲಿಲ್ಲ.

ಜಗತ್ತೆಲ್ಲವೂ ಅವಳಿಗೆ ಶೂನ್ಯಮಯವಾಗಿ ಭಾಸವಾಗುತಲಿತ್ತು. ಪೂರ್ಣಚಂದ್ರನು ಗಗನಾಂಗಣದಲ್ಲಿ ಉಜ್ವಲನಾಗಿ ಪ್ರಕಾಶಿಸುತ್ತಲಿದ್ದನು. ಇವನನ್ನು ನೋಡಿದರೆ ಪನ್ನಾಮತಿಗೆ ಆನಂದವಾಗುತ್ತಿರಲಿಲ್ಲ. ಅವಳಿಗೆ ಮತ್ತಿಷ್ಟು ದುಃಖವಾಗುತ್ತಿತ್ತು. ಅಸಂಖ್ಯನಕ್ಷತ್ರಗಳು ಆಗಸದಲ್ಲಿ ಮಿನಗುತಲಿದ್ದವು. ಪನ್ನಾಮತಿ ಇವುಗಳನ್ನು ನೋಡಿ, ಇವು ತನ್ನನ್ನು ನೋಡಿ, ಚೇಷ್ಟೆಮಾಡಿ ನಗುತ್ತಿರುವವೆಂದು ಸಿಟ್ಟಿಗೇಳುತ್ತಿದ್ದಳು. ಅನೇಕ ಪಕ್ಷಿಗಳು ತಮ್ಮ ಮಧುರಸ್ವರದಿಂದ ಗಾನಮಾಡುತಲಿದ್ದವು; ಆದರೆ ಇವುಗಳ ಗಾನವು ಪನ್ನಾಮತಿಗೆ ಕರ್ಣಕಠೋರವಾಗಿ ತೋರುತಲಿತ್ತು. ಅವಳ ಹೃದಯದಲ್ಲಿಯ ಆಸೆಯ ಕ್ಷೀಣಪ್ರಕಾಶವು ಕಡಿಮೆಯಾಗುತಲಿತ್ತು. ನಿರಾಶೆಯ ಅಂಧಕಾರವು ಅವಳ ಹೃದಯವನ್ನು ವ್ಯಾಪಿಸುತಲಿದ್ದಿತು.

ಪನ್ನಾಮತಿಯು ನಿರ್ಜನವಾದ ಸ್ಥಳದಲ್ಲಿ ಕುಳಿತು ಆಲೋಚಿಸು ವಳು—"ಇಚ್ಛಿತರತ್ನವು ಅಪ್ರಾಪ್ಯವೆಂದು ನನಗೆ ಮೊದಲೇ ತಿಳಿದಿತ್ತು. ಆದರೂ ನಾನು ಆ ರತ್ನದ ಆಶೆಯಿಂದ ಅಪಾರವಾದ ಸಮುದ್ರದಲ್ಲಿ ಮುಳುಗಿದ್ದೇಕೆ? ನನ್ನ ಆ ಇಚ್ಛಿತ ರತ್ನವು ಈಗ ಯಾರ ಕೊರಳಹಾರದಲ್ಲಿ ಮೆರೆಯುತ್ತಿರಬಹುದು? ಲಾಲ- ರುಖ- ಬೇಗಮುಳು ಎಷ್ಟೊಂದು ಪುಣ್ಯಮಾಡಿ ಹುಟ್ಟಿರಬಹುದು? ನಾನು ಅಂಥ ಪುಣ್ಯವನ್ನು ಮಾಡಿರಲಾರೆನೆ? ರಂಗಮಹಲಿನಲ್ಲಿ ರಾಣಿಯಾಗಿ ವಾಸಿಸುವ ಸೌಭಾಗ್ಯವನ್ನು ಹೊಂದಬೇಕಾದರೆ, ಎಂಥ ಪುಣ್ಯ ಮಾಡಬೇಕಾಗುತ್ತಿದ್ದೀತು? ನಾನು ಈ ಭಾಗ್ಯವನ್ನು ಹೊಂದಲಾರೆನೇನು?

ನಾಥ, ಪುನಃ ನಿನ್ನ ದರ್ಶನವೆಂದು? ನಿನ್ನ ಆ ಸುಂದರವೂ, ಸೌಮ್ಯವೂ, ಮನೋಹರವೂ, ಆದ ರೂಪನ್ನು ನೋಡಲು ನನ್ನ ಮನಸ್ಸು ಹಾತೊರೆಯುತ್ತಿದೆ. ನಿನ್ನ ಇನಿಮಾತುಗಳನ್ನು ಕೇಳಲು ಉತ್ಸುಕಳಾಗಿದ್ದೇನೆ. ನನ್ನ ಈ ಇಚ್ಛೆಯನ್ನು ಪೂರ್ಣಮಾಡಲಾರೆಯೇನು? ನೀನು ಅತ್ಯಂತ ಉದಾರನು; ಪರದುಃಖಕಾತರನು. ನನ್ನ ಈ ಕ್ಷುದ್ರಭಿಕ್ಷೆಯನ್ನು ಅಲ್ಲಗಳೆಯುವೆಯಾ?

ಪ್ರಿಯ, ನಿನ್ನದೇನೂ ತಪ್ಪಿಲ್ಲ. ನಾನೇ ಈ ಹಾಳು ಲಜ್ಜೆಗೊಳಗಾಗಿ, ಸುಖಕ್ಕೆರವಾದೆನು. ಈ ಕೆಟ್ಟ ನಾಚಿಕೆ ನನ್ನನ್ನು ಮುಂದೆ ಹೋಗಗೊಡಲಿಲ್ಲ. ಇಲ್ಲವಾದರೆ ನಾನು ಆಗಲೇ ನಿನ್ನನ್ನಾಲಿಂಗಿಸಿ, ನೀನು ನನ್ನ ಸರ್ವಸ್ವನಾಗಿರುವೆಯೆಂದೂ, ದಯವಿಟ್ಟು ನನ್ನನ್ನು ಸ್ವೀಕರಿಸೆಂದೂ ಹೇಳಿಬಿಡುತ್ತಿದ್ದೆನು. ಹಾಗೆ ಮಾಡಿದ್ದ ಪಕ್ಷದಲ್ಲಿ ನೀನು ನನ್ನನ್ನು ಎಂದೂ ಉಪೇಕ್ಷಿಸುತ್ತಿರಲಿಲ್ಲ. ಆದರೆ ನನಗಾಗ ಬುದ್ಧಿಯಿರಲಿಲ್ಲ. ಮುಂದೆ ಇಷ್ಟೊಂದು ದುಃಖಕ್ಕೊಳಗಾದೇನೆಂಬ ಕಲ್ಪನೆಯುಂಟಾಗಲೂ ಇಲ್ಲ. ಇದು ನನ್ನ ತಪ್ಪೇ ಅಲ್ಲವೇ?

ಪ್ರಾಣನಾಥ, ಈಗ ನೀನು ಬಹು ಆನಂದದಿಂದ ಆಗ್ರಾದ ರಂಗ ಮಹಲಿನಲ್ಲಿ ವಿರಾಜಮಾನನಾಗಿರಬಹುದಲ್ಲವೆ? ನಾನು ಇಚ್ಛಿಸುತ್ತಿರುವ

ಆಲಿಂಗನವನ್ನು ನೀನು ಬೇರೊಬ್ಬಳಿಗೆ ಕೊಡುತ್ತಿರಬಹುದು. ನನ್ನ ಇಚ್ಛಿತ ವಸ್ತುವನ್ನು ಬೇರೊಬ್ಬಳು ನೋಡಿ, ಆನಂದನರ್ತನ ಮಾಡುತ್ತಿರಬಹುದು. ನಾನು ಬಯಸುತ್ತಿರುವ ನಿನ್ನ ಇನಿವಾತುಗಳನ್ನು ಬೇರೊಬ್ಬಳು ಕೇಳಿ, ಸಂತೋಷ ಪಡುತ್ತಿರಬಹುದು. ಆದರೆ ನಾನು? ಕೇವಲ ಹೃದಯ ವ್ಯಥೆಯಿಂದ ಬೆಂದು ಹೋಗುತಲಿದ್ದೇನೆ. ಇದು ನಿನಗೆ ತಿಳಿಯುವುದು ಹೇಗೆ?

ನಾನು ಹೀಗೆ ಸದಾ ಚಿಂತೆಗೊಳಗಾಗಿ ಕುಳಿತುಕೊಂಡರೇನಾಗುವುದು? ನನ್ನ ಪ್ರಿಯವಸ್ತುವಾದರೋ ನನ್ನಿಂದ ಬಹು ದೂರದಲ್ಲಿದೆ. ಅದನ್ನು ಸಂಪಾದಿಸುವುದು ಸಾಧ್ಯವಿಲ್ಲ. ಈ ಪ್ರಸಂಗದಲ್ಲಿ ನಾನು ಮಾಡಬೇಕಾದುದೇನು? ಆಸೆಯನ್ನು ಬಿಟ್ಟುಬಿಡುವದಾದೀತೇನು? ಎಂದಿಗೂ ಸಾಧ್ಯವಿಲ್ಲ. ಹಾಗಾದರೆ ಹೀಗೆಯೇ ನಿರಾಶೆಯಲ್ಲಿ ಕುದಿಯುತ್ತ ಕುಳಿತುಕೊಳ್ಳಬೇಕಲ್ಲವೇ?

ಸೂರ್ಯಾಸ್ತವಾಗುತ್ತಲೇ ನಲಿನಿಯು ವಿರಹಾತಿರೇಕದಿಂದ ಬಾಡುವಳು. ಪ್ರಿಯನ ತದೇಕಧ್ಯಾನದಲ್ಲಿ ಕಾಲ ಕಳೆಯುವಳು. ಭಗವಾನ್ ಸಹಸ್ರರಶ್ಮಿಯು ಪ್ರಿಯಳ ಈ ದುಃಖವನ್ನು ತಿಳಿದು, ಪುನಃ ಕಾಣಿಸಿಕೊಳ್ಳುವನು. ನಲಿನಿಗೆ ಆನಂದವನ್ನುಂಟುಮಾಡುವನು. ರಜನೀನಾಥನು ಅಸ್ತನಾಗುತ್ತಲೇ ಕುಮುದಿನಿಯು ಮುಖತಗ್ಗಿಸಿ, ಪ್ರಿಯನ ಧ್ಯಾನ ಮಾಡುವಳು. ಚಂದ್ರಮನು ಪ್ರಿಯಳ ಈ ಕಾತರತೆಯನ್ನು ತಿಳಿದು ಪುನಃ ಜಗತ್ತಿನಲ್ಲಿ ತಲೆಯೆತ್ತಿ ತನ್ನ ಅನಂತಕರಗಳಿಂದ ಅವಳನ್ನಾಲಿಂಗಿಸಿ ಸಂತೋಷ ಪಡಿಸುವನು. ಇವರಂತೆ ನಾನೂ, ಪುನಃ ಪ್ರಿಯನ ದರ್ಶನವನ್ನು ಹೊಂದಬಹುದೇನು? ಇಲ್ಲವೆ ಚಾತಕ ಪಕ್ಷಿಯು ಸ್ವಾತಿ ಮಳೆಯ ಪ್ರಥಮಜಲಬಿಂದುವಿನ ಮಾರ್ಗ ಪ್ರತೀಕ್ಷೆ ಮಾಡುತ್ತ ಕುಳಿತುಕೊಳ್ಳುವಂತೆ, ನಾನು ಬಹುಕಾಲ ಪ್ರಿಯನ ದರ್ಶನೋತ್ಸುಕಳಾಗಿ ಕುಳಿತುಕೊಳ್ಳಬೇಕಾದೀತೇನು? ಏನೇ ಆಗಲಿ, ಚಾತಕವು ಒಂದಿಲ್ಲೊಂದು ದಿನ ತನ್ನ ಇಚ್ಛಿತವನ್ನು ಹೊಂದುವ ಸಂಭವವಿದೆ. ಆದರೆ ನಾನು? ನನಗೆ ಆ ಭರವಸೆಯಂತೂ ಇಲ್ಲವೇ ಇಲ್ಲ. ನನ್ನ ಭಾಗ್ಯದಲ್ಲೇನಿರುವುದೋ ಯಾರು ಬಲ್ಲರು?

ನನ್ನ ಪ್ರಣಯ ಪಕ್ಷಿಯು ಬಹುದೂರ ಹಾರಿ ಹೋಗಿದೆ. ನನ್ನ ಕಣ್ಣಿಗಂತೂ ಕಾಣಲೊಲ್ಲದು. ಆಕಾಶದಲ್ಲಿ ಸಂಚರಿಸುವ ಅಪ್ಸರೆಯರೊಡನೆ ಅದು ಕ್ರೀಡಿಸುತ್ತ ಕುಳಿತುಕೊಂಡಿರಬಹುದೇನು? ಏನೂ ಸಂದೇಹವಿಲ್ಲ. ಉತ್ತಮವಾದ ವಸ್ತುಗಳನ್ನು ಯಾರು ಇಚ್ಛಿಸುವುದಿಲ್ಲ? ಅಪ್ಸರೆಯರಾದರೇನಾಯಿತು? ನನ್ನ ಪ್ರಿಯತಮಪಕ್ಷಿಯನ್ನು ಮೋಹಗೊಳಿಸಿ, ತಮ್ಮ ನಂದನವನದ ಪಂಜರದಲ್ಲಿರಿಸಿ, ಅದರೊಡನೆ ದಿನವೂ ಕ್ರೀಡಿಸುತ್ತಿರಬಹುದು. ಹೀಗಾದಲ್ಲಿ ಆ ಪಕ್ಷಿಗೆ ನನ್ನ ಸ್ಮರಣೆಯಾಗುವುದು ಹೇಗೆ? ನನಗಾದರೋ ಅಲ್ಲಿಗೆ ಹೋಗುವುದಕ್ಕೆ ಬರುವಂತಿಲ್ಲ. ಅಂಥ ಬಳಿಕ ಚಿಂತೆಯ ಹೊರತು ನನಗೆ ಬೇರೆ ಉಪಾಯವೇ ಇಲ್ಲ.

ಅನಾಥರ ನಾಥನಾದ ದೇವ, ನಾನು ಅಬಲೆ; ಸಹಾಯರಹಿತಳು; ಅತೀವ ದುಃಖಿತಳು. ನೀನು ನನ್ನ ಆ ಪ್ರಿಯತಮ ಪಕ್ಷಿಯನ್ನು ನನಗೆ ತಂದುಕೊಟ್ಟು. ನನ್ನ ದುಃಖವನ್ನು ಹೋಗಲಾಡಿಸು. ನನಗೆ ನಿನ್ನ ಹೊರತು ಸಹಾಯಕರಿಲ್ಲ. ನಾನು ಶತಶಃ ನಿನ್ನನ್ನು ವಂದಿಸುವೆನು."

---

## ಇಪ್ಪತ್ತಮೂರನೆಯ ಪರಿಚ್ಛೇದ.

---

### ಕರ್ಮಕ್ಕೆ ತಕ್ಕ ಫಲ.

ಶಹಾಜಾದನ ದಯೆಯಿಂದ ಅಫಶಾನನು ಪುನಃ ಕಾರಾಮುಕ್ತನಾಗಿದ್ದಾನೆ. ಅವನು ತಾನು ಶಹಾಜಾದನಿಂದಲೇ ಬಿಡುಗಡೆಯನ್ನು ಹೊಂದಿರುವೆನೆಂಬದನ್ನು ತಿಳಿದವನಾದರೂ, ಶಹಾಜಾದನ ವಿಷಯಕವಾದ ದ್ವೇಷವನ್ನು ಬಿಟ್ಟುಬಿಡಲು ಸಮರ್ಥನಾಗಲಿಲ್ಲ. ಅವನ ಮತ್ಸರವು ಮತ್ತಿಷ್ಟು ಹೆಚ್ಚಾಯಿತು. ಯಾವದಾದರೊಂದು ರೀತಿಯಿಂದ ಶಹಾಜಾದನಿಗೆ ಊನಮಾಡಿ, ಪನ್ನಾಮತಿಯನ್ನು ಸ್ವಾಧೀನಮಾಡಿಕೊಳ್ಳಬೇಕೆಂದು ಎಣಿಕೆಹಾಕತೊಡಗಿದನು. ಇದಕ್ಕಾಗಿ ಅವನು

ತಾನು ಪ್ರಕಾಶರೀತಿಯಿಂದ ಜನರಲ್ಲಿ ಇರುವುದು ಯೋಗ್ಯವಲ್ಲವೆಂದು ತಿಳಿದು, ಗುಪ್ತರೀತಿಯಿಂದಿರುತ್ತಿದ್ದನು. ಅಫಶಾನನು ಎಲ್ಲಿ ಹೋದನೆಂಬುದು ಯಾರಿಗೂ ತಿಳಿಯದು. ಪನ್ನಾಮತಿಯಾದರೋ ಅಫಶಾನನ ಯೋಚನೆಯನ್ನೇ ಬಿಟ್ಟು ಬಿಟ್ಟಿದ್ದಳು. ಅವಳು ಅಫಶಾನನು ಎಲ್ಲಿರುವನೆಂಬದರ ವಿಚಾರಣೆಯನ್ನೇ ಮಾಡಲಿಲ್ಲ.

ಮುಂದೆ ಒಂದೆರಡು ದಿವಸಗಳಲ್ಲಿ ಶಹಾಜಾದನು ಅಫಶಾಯಿ ದುರ್ಗವನ್ನು ಬಿಟ್ಟುಹೋದನು. ಈ ಸುದ್ದಿಯು ಅಫಶಾನನಿಗೆ ತಿಳಿಯಿತು. ಇದರಿಂದ ಅಫಶಾನನಿಗೆ ಆನಂದವಾಯಿತು; ಯಾಕೆಂದರೆ ಶಹಾಜಾದನನ್ನು ನಾಶಮಾಡುವ ಸಂಕಲ್ಪವನ್ನು ಅಫಶಾನನು ಮಾಡಿದ್ದರೂ, ಇದು ಸುಲಭ ಕೆಲಸವಾಗಿರಲಿಲ್ಲ. ಈಗ ತನ್ನ ಮಾರ್ಗದಲ್ಲಿಯ ಕಂಟಕವು ತಾನಾಗಿಯೇ ಸರಿದು ಹೋದದ್ದನ್ನು ತಿಳಿದು, ಅಫಶಾನನಿಗೆ ಸಂತೋಷವಾದದ್ದು ಅರಿದಲ್ಲ. ಅವನು ಇನ್ನುಮೇಲೆ ಪನ್ನಾಮತಿಯನ್ನು ಸುಲಭವಾಗಿ ಕೈಯಲ್ಲಿ ತೆಗೆದುಕೊಳ್ಳಬಹುದೆಂದು ಯೋಚಿಸಿ, ಹಿರಿಹಿರಿ ಹಿಗ್ಗಿದನು.

ಅಫಶಾನನು ಗುಪ್ತರೀತಿಯಿಂದ ರಾಜಧಾನಿಯಲ್ಲಿಯೇ ವಾಸಿಸಿ, ಪನ್ನಾಮತಿಯ ದಾಸಿಯನ್ನು ಧನದಾಸೆಯಿಂದ ತನ್ನ ಅಂಕೆಯಲ್ಲಿ ತೆಗೆದುಕೊಂಡನು. ಅವಳಿಂದ ಅರಮನೆಯ ಯಾವತ್ತೂ ಸುದ್ದಿಗಳನ್ನು ತಿಳಿದುಕೊಳ್ಳಲಾರಂಭಿಸಿದನು. ಒಂದುದಿನ ಸಮೀಪದಲ್ಲಿ ನಡೆಯುತ್ತಿರುವ ಒಂದು ಉತ್ಸವಕ್ಕೆ ಅರಮನೆಯೊಳಗಿನ ದಾಸದಾಸಿಯರಲ್ಲಿಯ ಬಹು ಜನರು ಹೋಗಿದ್ದರು. ಅರಮನೆಯಲ್ಲಿ ಪನ್ನಾಮತಿಯೂ ಮೂರು - ನಾಲ್ಕು ಮಂದಿ ಸೇವಕ---ಸೇವಕಿಯರೂ ಉಳಿದಿದ್ದರು. ಇವರಲ್ಲಿ ಅಫಶಾನನ ಹಸ್ತಗತಳಾದ ದಾಸಿಯೂ ಇದ್ದಳು. ಅವಳು ಈ ಸುದ್ದಿಯನ್ನು ಅಫಶಾನನಿಗೆ ತಿಳುಹಿಸಿದಳು.

ಅಫಶಾನನು ಈ ಸಂಧಿಯು ತನಗೆ ಅನುಕೂಲವಾದದ್ದೆಂದು ಭಾವಿಸಿ, ಸುಮಾರು ಮಧ್ಯರಾತ್ರಿಯಲ್ಲಿ ಅರಮನೆಯನ್ನು ಹೊಕ್ಕನು. ಪಹರೆ ಕೊಡುತ್ತಿರುವ ಒಬ್ಬ ಕಾವಲುಗಾರನನ್ನು ಕೊಂದು, ಪನ್ನಾಮತಿಯ ಕೋಣೆಯಲ್ಲಿ ಪ್ರವೇಶಿಸಿದನು.

14

ಪನ್ನಾಮತಿಯು ತನ್ನ ಹಾಸುಗೆಯಲ್ಲಿ ಮಲಗಿಕೊಂಡಿದ್ದಳು. ಸಮೀಪದಲ್ಲಿ ಯಾರೂ ಇದ್ದಿಲ್ಲ. ಅವಳು ಬಹುಕಾಲ ಶಹಾಜಾದನ ವಿಚಾರ ಮಾಡಿಮಾಡಿ ಬೇಸತ್ತು, ಈಗ ಮಲಗಿದ್ದಳು. ಅವಳಿಗೆ ತುಸು ನಿದ್ರೆ ಹತ್ತಿದಂತಾಗಿತ್ತು. ಈ ನಿದ್ರೆಯಲ್ಲಿ ಅವಳೊಂದು ಸ್ವಪ್ನವನ್ನು ಕಂಡಳು. ಅವಳೆದಿರಿನಲ್ಲಿ ಎರಡು ದೊಡ್ಡ ಚಿತ್ರಗಳಿದ್ದು, ಅವು ಒಂದರ ಬಳಿಯಲ್ಲೊಂದು ಇರಿಸಲ್ಪಟ್ಟಿವೆ. ಇವುಗಳಲ್ಲೊಂದು ಶಹಾಜಾದನದು, ಬೇರೊಂದು ಅಫಶಾನನದು. ಪನ್ನಾಮತಿಯು ಮೊದಲು ಶಹಾಜಾದನ ಚಿತ್ರವನ್ನು ನೋಡಿದಳು. ಇದರಿಂದವಳಿಗೆ ಬಹಳ ಆನಂದವಾಯಿತು. ಅವಳು ಆ ಚಿತ್ರವನ್ನು ಕುರಿತು—"ನಾಥ, ದಿನವೂ ನಿನ್ನ ಸೌಂದರ್ಯವು ಬಳೆಯುತ್ತಲಿದೆ. ನಾನು ನೋಡಿದ ನಿನ್ನ ರೂಪಕ್ಕೂ, ಈಗಿನ ನಿನ್ನ ರೂಪಕ್ಕೂ ಬಹಳ ಅಂತರವಿದೆ. ನೀನು ನನಗಾಗಿ ಇಂಥ ಮೋಹನರೂಪವನ್ನಾಂತು ಬಂದಿರುವೆಯೇನು! ಇತ್ತ ಬಾ. ನನಗೆ ಪ್ರೇಮಾಲಿಂಗನವನ್ನು ಕೊಡು. ನನ್ನೊಡನೆ ಪ್ರಣಯದ ಮಾತುಗಳನ್ನಾಡು. ಅಂದರೆ ನಾನು ಧನ್ಯಳಾಗಿ ಹೋಗುವೆನು. ಏಕೆ, ಸಮೀಪಕ್ಕೆ ಬರಲೊಲ್ಲೆಯಲ್ಲ! ನೀನು ನನ್ನವನಾಗುವದಿಲ್ಲವೇನು? ನಿಲ್ಲು, ನಾನೇ ಬರುವೆನು," ಎಂದು ಅಂದಳು. ಕೂಡಲೇ ಅವಳ ದೃಷ್ಟಿಯು ಎರಡನೆಯ ಚಿತ್ರದಕಡೆಗೆ ಹೋಯಿತು. ಅವಳಿಗೆ ಬಹಳ ಸಿಟ್ಟುಬಂದಿತು. ಅವಳು ಆ ಚಿತ್ರವನ್ನು ಕುರಿತು—"ದುಷ್ಟ, ನೀನು ಇಲ್ಲಿಗೇಕೆ ಬಂದೆ! ನಾನು ಈಸಾರಿ ನಿನ್ನನ್ನು ಬಂಧಮುಕ್ತನನ್ನಾಗಿಮಾಡುತ್ತಿದ್ದಿಲ್ಲ! ಆದರೆ ಉದಾರಹೃದಯನಾದ ಶಹಾಜಾದನ ದಯೆಯಿಂದ ನೀನು ಪುನಃ ಸ್ವಾತಂತ್ರತೆ ಪಡೆದಿರುವೆ. ನಾನು ನಿನಗೆ ಇನ್ನೊಮ್ಮೆ ನಿನ್ನ ಮೋರೆಯನ್ನು ತೋರಿಸಬೇಡವೆಂದು ಹೇಳಿರಲಿಲ್ಲವೆ? ಮತ್ತೇಕೆಬಂದೆ? ನಿನಗೆ ನಾಚುಕೆಯಿಲ್ಲವೆ? ಇತ್ತನೋಡು, ಉದಾರಚರಿತನಾದ ಶಹಾಜಾದನು ಕುಳಿತುಕೊಂಡಿದ್ದಾನೆ. ಇವನ ಬಳಿಯಲ್ಲಿ ಕೂಡುವುದಕ್ಕೆ ನೀನು ಯೋಗ್ಯನಲ್ಲ, ಅತ್ತನಡೆ," ಎಂದು ಅಂದಳು. ಆದರೂ ಆ ಚಿತ್ರವು ಚಲಿಸಲಿಲ್ಲ. ಅವಳು ಕ್ರೋಧವಶಳಾಗಿ ಆ ಚಿತ್ರವನ್ನು ಒಡೆಯುವುದಕ್ಕೆ ಮುಂದುವರಿದಳು. ಇದರಿಂದವಳಿಗೆ ಎಚ್ಚರವಾ

ಯಿತು. ಆಶ್ಚರ್ಯಚಕಿತಳಾಗಿ ನೋಡಿದಳು. ಸಮೀಪದಲ್ಲಿ ಎರಡು ಚಿತ್ರಗಳಿರಲಿಲ್ಲ. ಅಫಶಾನನು ಮಾತ್ರ ನಗುತ್ತ ಸಮೀಪದಲ್ಲಿ ನಿಂತು ಕೊಂಡಿದ್ದನು.

ಪನ್ನಾಮತಿ ಎದ್ದು ಕುಳಿತು—"ಇದೇನು? ಅಫಶಾನ, ನೀನು ಇಲ್ಲಿ ಏಕೆ? ನನ್ನ ಕೋಣೆಯಲ್ಲಿ ಹೇಗೆಬಂದೆ? ಏತಕ್ಕಾಗಿ ಇಂಥ ರಾತ್ರಿ ಯಲ್ಲಿ ಹೀಗೆ ಬರಲು ಮನಸ್ಸುಮಾಡಿದೆ? ನಿನಗಿದು ಎಷ್ಟು ಮಾತ್ರವೂ ತರವಲ್ಲ! ನೀನು ಬುದ್ಧಿವಂತನಾಗಿದ್ದರೆ. ಈಗಲೇ ಈ ಸ್ಥಳವನ್ನು ಬಿಟ್ಟು ಹೊರಟು ಹೋಗು," ಎಂದು ಹೇಳಿದಳು.

ಅಫಶಾನನು ಗಹಗಹಿಸಿ ನಕ್ಕು ಹೇಳಿದನು—"ತಿರುಗಿ ಹೋಗುವು ದಕ್ಕಾಗಿ ನಾನಿಲ್ಲಿಗೆ ಬಂದಿಲ್ಲ! ನಾನೊಂದು ಸರೋವರದ ದಂಡೆ ಯಲ್ಲಿ ನಿಂತಿರುವೆನಾದರೂ, ನೀರಡಿಕೆಯಿಂದ ಸತ್ತುಹೋಗುವ ಪ್ರಸಂಗ ಬಂದಿದೆ. ನವಾಬನಂದಿನಿ, ಇದಕ್ಕೆ ನೀನೇ ಕಾರಣ. ನಿನ್ನ ಹೃದ ಯವು ಎಷ್ಟು ಕಠೋರವಾಗಿದೆ! ಹೀಗೆ ನಿರ್ದಯಳಾಗಬೇಡ. ನನ್ನ ಮೇಲೆ ದಯೆದೋರು."

ಅಫಶಾನನು ಏಕೆ ಬಂದಿರುವನೆಂಬದು ಪನ್ನಾಮತಿಗೆ ಗೊತ್ತಾ ಯಿತು. ಅದರಿಂದವಳಿಗೆ ಬಹಳ ಹೆದರಿಕೆಯಾಯಿತು; ಆದರೆ ಹೆದರಿ ದರೆ ಪಾರಾಗುವಂತಿದ್ದಿಲ್ಲ. ಅದಕ್ಕಾಗಿ ಅವಳು ಧೈರ್ಯವನ್ನವಲಂಬಿಸು ವದು ಯೋಗ್ಯವೆಂದು ಭಾವಿಸಿ—"ಅಫಶಾನ, ಹೆಚ್ಚಿಗೆ ಮಾತಾಡಬೇಡ. ಸುಮ್ಮನೆ ಇಲ್ಲಿಂದ ಎರಡನೆಯ ಕಡೆಗೆ ಹೊರಟು ಹೋಗು. ಇಲ್ಲವಾದರೆ ನನ್ನ ದಾಸದಾಸಿಯರನ್ನು ಕೂಗುವೆನು. ಪುನಃ ನಿನ್ನನ್ನು ಸೆರೆಮನೆ ಯಲ್ಲಿರಿಸುವೆನು." ಎಂದು ಹೇಳಿದಳು.

"ನಾನು ಅವರೆಲ್ಲರ ವ್ಯವಸ್ಥೆಯನ್ನು ಈ ಮೊದಲೇ ಮಾಡಿಟ್ಟು ಬಂದಿದ್ದೇನೆ. ನೀನು ಎಷ್ಟೇ ಕೂಗಿದರೂ ಅವರು ಇಲ್ಲಿಗೆ ಬರಲಾರರು. ನೀನು ಸುಮ್ಮನೆ ಹೀಗೆ ಬಡಬಡಿಸುತ್ತ ಕುಳಿತುಕೊಳ್ಳುವದರಲ್ಲಿ ಅರ್ಥ ವಿಲ್ಲ. ನನಗೆ ಅನುಕೂಲಳಾಗು," ಎಂದು ಅಫಶಾನನು ಹೇಳಿದನು.

ಪನ್ನಾಮತಿಯು ಭಯದಿಂದ ನಡುಗಿ—"ಪಿಶಾಚಿಯೇ, ನೀನು ಹೇಳುವುದೇನು? ಯಾವ ಉದ್ದೇಶದಿಂದ ಇಲ್ಲಿಗೆ ಬಂದಿರುವೆ?" ಎಂದು ಕೇಳಿದಳು.

"ನಾನು ಪಿಶಾಚಿಯಲ್ಲ. ಪಿಶಾಚಿಯ ದಾಸನು. ಪಿಶಾಚಿಯು ಹೇಳಿದ್ದನ್ನು ಮಾಡುವುದಕ್ಕಾಗಿಯೇ ನಾನಿಲ್ಲಿಗೆ ಬಂದಿದ್ದೇನೆ."

"ದುಷ್ಟನೆ, ನಿನಗೆ ಶತಧಿಕ್ಕಾರವಿರಲಿ! ಕಳ್ಳನಂತೆ ನನ್ನ ಕೋಣೆಯನ್ನು ಪ್ರವೇಶಿಸುವುದಕ್ಕೆ ನಿನಗೆ ನಾಚಿಗೆಯುಂಟಾಗಲಿಲ್ಲವೇ?"

"ನಾಚಿಕೆ ಏಕೆ? ನಾನು ನಿನಗಾಗಿಯೇ ಇಲ್ಲಿಗೆ ಬಂದಿದ್ದೇನೆ. ನನ್ನ ಹೃದಯವು ನಿರಾಶೆಯಿಂದ ಸುಟ್ಟು ಹೋಗುತ್ತಲಿದೆ! ನೀನು ಪ್ರೇಮಾಲಿಂಗನವನ್ನು ಕೊಟ್ಟು ನನ್ನ ಹೃದಯವನ್ನು ಶಾಂತಪಡಿಸು. ಸುಂದರಿ, ನಿನ್ನ ವಿರಹವನ್ನು ತಾಳಲಾರದವನಾಗಿದ್ದೇನೆ. ನನ್ನನ್ನು ತಿರಸ್ಕರಿಸಬೇಡ. ದಯವಿಟ್ಟು ನೀನು ನನ್ನವಳಾಗು."

ಪನ್ನಾಮತಿಯು ಹೀಗೆ ನಿರರ್ಥಕವಾಗಿ ಇವನೊಡನೆ ಮಾತಾಡುತ್ತ ಹೋಗುವುದರಲ್ಲಿ ಏನೂ ಅರ್ಥವಿಲ್ಲವೆಂದು ಇವನಿಗೆ ಮದ್ಯಕುಡಿಸಿ ಎಚ್ಚರತಪ್ಪಿಸಿದರೆ, ತಾನು ಸಾಹಜಿಕರೀತಿಯಿಂದ ಪಾರಾಗುವೆನೆಂದು ಯೋಚಿಸಿದಳು. ಕೂಡಲೇ ಅವಳು ಮುಖದಲ್ಲಿ ಪ್ರಸನ್ನತೆಯನ್ನು ತಂದುಕೊಂಡು,—"ಅಫಜಾನ, ಹೀಗೇಕೆ ಮಾತಾಡುವೆ? ನಿನಗೆ ಬೇಕಾದದ್ದಾದರೂ ಏನು?" ಎಂದು ಕೇಳಿದಳು.

ಅಫಜಾನನು ಈ ಮೊದಲೇ ಸಾಕಷ್ಟು ಮದ್ಯಪಾನ ಮಾಡಿ ಬಂದಿದ್ದನು. ನಿಂತುನಿಂತು ಅವನಿಗೆ ಸಾಕಾಗಿ ಹೋಗಿತ್ತು. ಕಾರಣ ಅವನು ಸಮೀಪದಲ್ಲಿರುವದೊಂದು ಆಸನದಮೇಲೆ ಕುಳಿತು—"ನವಾಬನಂದಿನಿ, ನನಗೆ ಮತ್ತೇನೂ ಬೇಕಾಗಿಲ್ಲ. ನೀನೇ ಬೇಕಾಗಿದೆ. ಈಗ ನೀನು ನನ್ನೊಡನೆ ನಡೆ. ಮೊದಲಿನ ಪ್ರತಿಜ್ಞೆಯನ್ನು ಸ್ಮರಿಸಿಯಾದರೂ, ನೀನು ನನ ಕೋರಿಕೆಯಂತೆ ನನ್ನವಳಾಗು," ಎಂದು ಹೇಳಿದನು.

"ನಾನು ಮಾಡಿದ ಪ್ರತಿಜ್ಞೆ ಯಾವುದು?"

"ನೀನು ನನ್ನನ್ನು ಲಗ್ನಮಾಡಿಕೊಳ್ಳುತ್ತೇನೆಂದು ಹೇಳಿರಲಿಲ್ಲವೇ?"

"ಈಗ ನಾನು ಹಾಗೆ ವರ್ತಿಸಲು ಅಶಕ್ತಳಾಗಿದ್ದೇನೆ."

"ಅದೇಕೆ?"

"ನಾನು ಈಗ ನಿನ್ನನ್ನು ಸಹೋದರನೆಂದು ತಿಳಿಯುತ್ತೇನೆ. ನಾನು ಮನಸಾ ಒಬ್ಬನನ್ನು ವರಿಸಿದ್ದೇನೆ. ಶಹಾಜಾದನು ನನ್ನ ಪ್ರಿಯಪತಿಯು. ನಾನವನನ್ನು ಈ ಮೊದಲೇ ಮನಸಾ ವಿವಾಹ ಮಾಡಿಕೊಂಡದ್ದರಿಂದ, ನಿನ್ನ ಇಚ್ಛೆಯಂತೆ ವರ್ತಿಸುವುದು ಸಾಧ್ಯವಿಲ್ಲ."

"ನಾನು ಜೀವಂತನಾಗಿರುವವರೆಗೆ ನೀನು ಶಹಾಜಾದನ ಹೆಂಡತಿಯೆಂದೂ ಆಗಲಾರೆ. ನಾನೇನು ಹೇಡಿಯಲ್ಲ. ಪಠಾಣರ ಹಿಂಸ್ರರಕ್ತವು ನನ್ನ ಮೈಯಲ್ಲಿ ಹರಿಯುತ್ತಲಿದೆ. ನಾನು ನನ್ನ ಪ್ರಣಯಪಾತ್ರಳನ್ನು ಅವನಿಗೆ ಸಮರ್ಪಿಸಲೇ? ನನ್ನ ಪ್ರಿಯತಮೆಯು ಎರಡನೆಯವನ ಅಂಕಶಾಯಿಯಾಗುವುದನ್ನು ನೋಡಿ, ಸುಮ್ಮನೆ ಕುಳಿತುಕೊಳ್ಳಲೇ? ಎಂದಿಗೂ ಸಾಧ್ಯವಿಲ್ಲ. ಶಹಾಜಾದನು ನಿನ್ನ ಸಜೀವದೇಹವನ್ನೆಂದೂ ಹೊಂದುವಂತಿಲ್ಲ."

ಅಫಶಾನನು ಬಹಳ ಮಾತಾಡಿದ್ದನು. ಅದರಿಂದವನಿಗೆ ನೀರಡಿಕೆಯಾದಂತಾಯಿತು. ಕಾರಣ ಅವನು—"ನವಾಬನಂದಿನಿ, ನನಗೆ ದಾಹವಾಗುತ್ತಲಿದೆ. ತಣ್ಣನೆಯ ನೀರಿದ್ದರೆ ಕುಡಿಯಲಿಕ್ಕೆ ಕೊಡಬಾರದೆ?" ಎಂದು ಅಂದನು.

ಈ ಮಾತನ್ನು ಕೇಳಿ ಪನ್ನಾಮತಿಗೆ ಆನಂದವಾಯಿತು. ಅವಳು ದೇವರು ತನಗೆ ಸಹಾಯ ಮಾಡಿದನೆಂದು ಭಾವಿಸಿದಳು. ಅವಳು ಪ್ರಸನ್ನಮುಖಿಯಾಗಿ—"ಅಫಶಾನ, ಇಂಥ ವೇಳೆಯಲ್ಲಿ ನೀರು ಕುಡಿಯಬಾರದು. ಮೇಲಾಗಿ ಇಲ್ಲಿ ಚಲೋ ನೀರೂ ಇಲ್ಲ. ಇಂದೇ ಬಸರಾ

ಪಟ್ಟಣದಿಂದ ಬಂದ ಉತ್ತಮ ಸಾರಾಯಿಯಿದೆ. ಕುಡಿಯುತ್ತೀ ಏನು? ಬೇಕಾದರೆ ಕೊಡುವೆನು," ಎಂದು ಹೇಳಿದಳು.

ಪನ್ನಾಮತಿಯ ಪ್ರಸನ್ನಮುಖಭಾವವನ್ನೂ, ಅನುಕೂಲವಾದ ಮಾತುಗಳನ್ನೂ ಕೇಳಿ, ಅಫಶಾನನು ಆಶಾನ್ವಿತನಾದನು. ಅವನು ನಗೆ ಮೊಗದಿಂದ—"ನವಾಬನಂದಿನಿ, ಪುನಃ ಮದ್ಯವನ್ನು ಕುಡಿಯಲೇ! ಒಮ್ಮೆ ನಿನ್ನ ಕೈಯಿಂದ ಸುರೆಯನ್ನು ಸೇವಿಸಿದ್ದಕ್ಕಾಗಿ ಮಹಾನರ್ಥಕ್ಕೆ ಒಳಗಾಗಿ ಹೋಗಿದ್ದುದು ನಾನು ಇನ್ನೂ ಮರೆತಿಲ್ಲ!" ಎಂದು ಹೇಳಿದನು.

"ಅಫಶಾನ. ನನ್ನ ವಿಷಯದಲ್ಲಿ ನಿನಗೆ ಇಷ್ಟೊಂದು ಅವಿಶ್ವಾಸವೆ? ಹಾಗಾದರೆ ನಾನು ನಿನ್ನವಳು ಹೇಗೆ ಆಗಲಿ? ಎಷ್ಟಾದರೂ ಪುರುಷರು ಮಹಾ ಅವಿಶ್ವಾಸಿಗಳು!" ಎಂದು ಹೇಳಿದಳು.

ಪನ್ನಾಮತಿಯು ಬಟ್ಟಲಲ್ಲಿ ಮದ್ಯವನ್ನುಹಾಕಿ, ಅಫಶಾನನ ಮುಂದಿರಿಸಿದಳು. ಅಫಶಾನನು ಮರುಮಾತಾಡದೆ, ಅದನ್ನು ಕುಡಿದು ಬಿಟ್ಟನು. ಇದರಿಂದವನಿಗೆ ತುಸು ಸಮಾಧಾನವಾದಂತಾಯಿತು. ಅವನು ಮಾತಾಡ ತೊಡಗಿದನು.—"ಕೋಮಲೆ, ನಿನ್ನಿಂದಲೇ ನನಗೆ ಅಸ್ತಿತ್ವವಿರುವುದು. ನೀನು ನನ್ನನ್ನು ಧಿಕ್ಕರಿಸುವೆಯಾದರೆ, ನಾನು ಆತ್ಮಹತ್ಯ ಮಾಡಿಕೊಂಡು ಬಿಡುವೆನು. ಆದರೆ ಹೀಗೆ ಮಾಡುವ ಮೊದಲು, ಯಾವುದೇ ಉಪಾಯದಿಂದಾಗಲಿ, ನಿನ್ನನ್ನು ಕೈವಶಮಾಡಿಕೊಳ್ಳುವ ಪ್ರಯತ್ನಮಾಡುವೆನು. ಈ ಪ್ರಸಂಗದಲ್ಲಿ ರಹಾಜಾದನನ್ನು ಕೊಲ್ಲುವ ಪ್ರಸಂಗಬಂದರೂ ಅಡ್ಡಿಯಿಲ್ಲ. ನಾನು ಹಿಂದೆಮುಂದೆ . . . . "

ಪನ್ನಾಮತಿಯು ಗಡಗಡನೆ ನಡುಗಿದಳು. ಆದರೂ ಅವಳು ತನ್ನ ಮನಸ್ಸಿನ ಭಾವವನ್ನು ವ್ಯಕ್ತಮಾಡದೆ, ಪುನಃ ಬಟ್ಟಲಲ್ಲಿ ಮದ್ಯವನ್ನು ಹಾಕಿ, ಅಫಶಾನನ ಕೈಯಲ್ಲಿ ಕೊಟ್ಟಳು. ಅಫಶಾನನದನ್ನು ಕುಡಿದನು. ಪನ್ನಾಮತಿಯು ಅಫಶಾನನು ಎಚ್ಚರದಪ್ಪಿ ಬೀಳಬಹುದೆಂದು ಯೋಚಿಸಿದ್ದಳು. ಆದರೆ ಅವಳ ಆಲೋಚನೆಯಂತೆ ಆಗಲಿಲ್ಲ. ಅಫಶಾನನು ಹೆಚ್ಚುಹೆಚ್ಚು ಉತ್ತೇಜಿತನಾಗುತ್ತಲಿದ್ದನು.

## ಇಪ್ಪತ್ತಮೂರನೆಯ ಪರಿಚ್ಛೇದ.

ಅಫಶಾನನು ಪನ್ನಾಮತಿಯ ಮುಖವನ್ನು ನೋಡಿದನು. ಉಜ್ವಲವಾದ ದೀಪದ ಬೆಳಕು ಅವಳ ಮುಖದಮೇಲೆ ಬಿದ್ದಿತ್ತು. ಅವಳ ಸುಂದರವಾದ ರೂಪವು ಅಫಶಾನನನ್ನು ಬಹಳವಾಗಿ ಮೋಹಗೊಳಿಸಿತು.

ಅಫಶಾನನು ಉನ್ಮಾದನಂತೆ ಆಸನದಿಂದೆದ್ದು ನಿಂತು--" ಪ್ರಿಯೆ, ನೀನು ಎಷ್ಟು ಸುಂದರಿಯೆ! ನಾನು ನಿನ್ನಂತಹ ಸುಂದರಿಯನ್ನೆಲ್ಲಿಯೂ ನೋಡಿಲ್ಲ!" ಎಂದು ಅಂದನು.

ಪನ್ನಾಮತಿಗೆ ಮತ್ತಿಷ್ಟು ಹೆದರಿಕೆಯಾಯಿತು. ಅವಳಿಗೆ ಸಹಾಯಕರು ಯಾರೂ ಇರಲಿಲ್ಲ. ಉತ್ತೇಜನಾವಶದಿಂದ ಅಫಶಾನನು ಏನು ಮಾಡುವನೆಂಬದರ ನಿಯಮವಿರಲಿಲ್ಲ. ಅವಳು ಸ್ವಲ್ಪಹೊತ್ತು ವಿಚಾರಪರಳಾಗಿ ಸುಮ್ಮನೆ ನಿಂತುಕೊಂಡಳು.

ಅಫಶಾನನು ಜೋಲಿ ಹೊಡೆಯುತ್ತ ಹೆಜ್ಜೆಗಳನ್ನಿಕ್ಕಿ, ಪನ್ನಾಮತಿಯ ಸಮೀಪಕ್ಕೆ ಬಂದು, ಅವಳ ಕೈಯನ್ನು ಹಿಡಿಯುವುದಕ್ಕೆ ಯತ್ನಿಸಿದನು. ಪನ್ನಾಮತಿಯು ಜೇಡನ ಕೈಯಲ್ಲಿ ಸಿಕ್ಕಹರಿಣಿಯಂತೆ ಭಯಪಟ್ಟು, ದೂರಸರಿದು ನಿಂತಳು. ಅಫಶಾನನು ಮುಂದುವರಿದು, ಅವಳನ್ನು ಆಲಿಂಗಿಸುವುದಕ್ಕೆ ಪ್ರಯತ್ನಿಸಿದನು.

ಪನ್ನಾಮತಿಯು ಓಡುತ್ತ ಬಾಗಿಲ ಬಳಿಗೆ ಬಂದು ನೋಡಿದಳು. ಬಾಗಿಲು ಬಂದುಮಾಡಲ್ಪಟ್ಟಿತ್ತು. ಅಫಶಾನನು ತಾನು ಬರುವಾಗ ಒಂದು ಕೀಲಿಯ ಕೈಯನ್ನು ತೆಗೆದುಕೊಂಡು ಬಂದಿದ್ದನು. ಅವನು ಒಳಹೊಕ್ಕಕೂಡಲೆ ಬಾಗಿಲನ್ನಿಕ್ಕಿ ಕೀಲಿ ಹಾಕಿಕೊಂಡು ಪನ್ನಾಮತಿಯ ಹತ್ತಿರಬಂದಿದ್ದನು. ಪನ್ನಾಮತಿಗೆ ಪಾರಾಗುವ ಯಾವ ಮಾರ್ಗವೂ ಉಳಿದಿರಲಿಲ್ಲ.

ಪನ್ನಾಮತಿಯು ಇನ್ನು ತನ್ನ ಸತೀತ್ವಕ್ಕೆ ಭಂಗಬರುವದೆಂದೂ, ಈ ಸಮಯದಲ್ಲಿ ತಾನು ಧೈರ್ಯದಿಂದ ಏನಾದರೊಂದು ಯುಕ್ತಿಯನ್ನು ಮಾಡಬೇಕೆಂದೂ ಆಲೋಚಿಸಿದಳು. ಅವಳ ಹಾಸುಗೆಯ ಕೆಳಗೆ ಒಂದು ತೀಕ್ಷ್ಣವಾದ ಚೂರಿಯಿತ್ತು. ಅವಳು ಓಡುತ್ತ ಹೋಗಿ, ಆ ಚೂರಿಯನ್ನು

ಕೈಯಲ್ಲಿ ತೆಗೆದುಕೊಂಡಳು. ಮತ್ತು ಅಫಶಾನನ ಬಳಿಗೆ ಬಂದು— "ದುಷ್ಟನೇ, ಎಚ್ಚರದಿಂದಿರು. ಮುಂದೆ ಒಂದು ಹೆಜ್ಜೆಯನ್ನಿಕ್ಕುವೆಯಾದರೂ, ಈ ಆಯುಧಕ್ಕೆ ಆಹುತಿಯಾಗುವೆ!" ಎಂದು ಹೇಳಿದಳು.

ಅಫಶಾನನು ಬೀಳುತ್ತೇಳುತ್ತ ಹೋಗಿ, ಪನ್ನಾಮತಿಯನ್ನು ಆಲಿಂಗಿಸಿಕೊಳ್ಳುವುದಕ್ಕೆ ಮುಂದುವರಿದನು. ಪನ್ನಾಮತಿಯು ಉಪಾಯಹೀನೆಯಾಗಿ, ಕೈಯಲ್ಲಿರುವ ಆಯುಧವನ್ನು ಅಫಶಾನನ ಎದೆಯಲ್ಲಿ ಚುಚ್ಚಿದಳು. ಅಫಶಾನನ ಎದೆಯಿಂದ ರಕ್ತವು ಹೊರಚಿಮ್ಮತೊಡಗಿತು. ಅವನು ಗತಪ್ರಾಣನಾಗಿ ಭೂಮಿಯ ಮೇಲೆ ಬೀಳುವ ಸಮಯದಲ್ಲಿ—"ದು-ಷ್ಟ-ಳೇ-ಇ-ದೇ-ನು-ಮಾ-ಡಿ-ದೆ?" ಎಂದು ಅಂದನು. ಕೂಡಲೇ ಅವನ ಪ್ರಾಣವಾಯುವು ಹಾರಿಹೋಯಿತು.

ಪನ್ನಾಮತಿಯು ಉನ್ಮಾದಿನಿಯಂತೆ ಚೀತ್ಕಾರಮಾಡಿ—"ಪಿಶಾಚಿಯೇ, ಇದು ನಿನ್ನ ಕ್ರೂರಕರ್ಮಕ್ಕೆ ತಕ್ಕ ಫಲ!" ಎಂದು ಚೀರಿ ಅಲ್ಲಿಯೇ ಮೈಮರೆದು ಬಿದ್ದುಬಿಟ್ಟಳು.

ಸಮಾಪ್ತ.

## ಇದೇ ಗ್ರಂಥಕರ್ತರಿಂದ.

೧. **ಮಹಾರಾಣಾ ಪ್ರತಾಪಸಿಂಹ.**—ಬೆಲೆ ೧-೪-೦. ರಾಜಸ್ಥಾನದ ಸಂಕ್ಷಿಪ್ತ ಇತಿಹಾಸ ಭೂಗೋಳಗಳನ್ನೊಳಗೊಂಡ ಈ ಪುಸ್ತಕದಲ್ಲಿ ಪ್ರತಾಪನ ಅಪ್ರತಿಮಚರಿತೆ ಚಿತ್ರಿತವಾಗಿದೆ.

೨. **ಬೇಗಮುಸಮುರು.**—ಬೆಲೆ ೭ ಆ. ಅಪರಿಚಿತಳಾದೊಬ್ಬ ರಮಣಿಯ ರಹಸ್ಯಮಯವಾದ ಜೀವನಚರಿತೆ. **ವಿಕಾರ ವಿನಾಶ, ಸಾಧ್ವೀಹೃದಯ, ಪ್ರೇಮಪರಿಹಾಸ, ಸ್ವಸುಧಾರಣೆ, ಕೇವಲ—ಸ್ವದೇಶಕ್ಕಾಗಿ, ಗಂಗಾಲಹರಿ,**—ಇತ್ಯಾದಿ ಅಚ್ಚಿನಲ್ಲಿವೆ.

**ಎಂ. ಎಸ್. ರಾವ್ ಕಂಪೆನಿ,** ಬೆಂಗಳೂರು ಸಿಟಿ.

# ಹೊಸಗ್ರಂಥಗಳು.

---

**ಕರ್ಣಾಟಕ ಗ್ರಂಥಾವಳಿ**—ಈಗ ರೂಢಿಯಲ್ಲಿರುವ ಅನೇಕ ಪುಸ್ತಕಗಳು ತುಂಬ ಅಶುದ್ಧಗಳಾಗಿವೆ. ಕಾಗದ, ಮುದ್ರಣ, ಬೈಂಡು ಮುಂತಾದವುಗಳಲ್ಲಿಯೂ ಕೊರತೆಗಳು ಹೆಚ್ಚು. ಆದುದರಿಂದ ಓದುವವರಿಗೆ ಅನುಕೂಲವಾಗಿರುವ ಉತ್ತಮತರದ ಪುಸ್ತಕಗಳನ್ನು ಸುಲಭಕ್ರಯಕ್ಕೆ ಒದಗಿಸಬೇಕೆಂದು **ಬೆಂಗಳೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಕಂಪೆನಿ**ಯವರು ನಿರ್ಣಯಿಸಿ "ಕರ್ನಾಟಕಗ್ರಂಥಾವಳಿ" ಎಂಬ ಹೆಸರಿನಿಂದ ಕೆಲವು ಪುಸ್ತಕಗಳನ್ನು ಪ್ರಕಟಿಸ ತೊಡಗಿರುವರು. ಇದರ ಮೊದಲನೆಯ ಸಂಪುಟದಲ್ಲಿ—

| | ರೂ. ಆ. ಪೈ. |
|---|---|
| ನೀತಿಸಾರ, ಭಾಗ ೧ (೪೮ ಪುಟಗಳು) ಸೋಮೇಶ್ವರ ಶತಕ, ಸಿದ್ಧನೀತಿ, ವಿರೂಪಾಕ್ಷನೀತಿ ಇವು ಸೇರಿವೆ .. | 0—3—0 |
| ಡಿಟೋ ಭಾಗ ೨ (೫೬ ಪುಟಗಳು) ಶಿವಭಕ್ತಿಸಾರ, ನಿಜಲಿಂಗ ಶತಕ ಇವು ಸೇರಿವೆ .. .. .. | 0—3—6 |
| ಡಿಟೋ ಭಾಗ 3 (೧೨೦ ಪುಟಗಳು) ಸರ್ವಜ್ಞಪದಗಳು | 0—6—0 |
| ಈ 3 ಭಾಗಗಳೂ ಸೇರಿದ ಸಮಗ್ರಪ್ರತಿ ಉತ್ತಮ ಬೈಂಡು ಲೈಬ್ರರಿಗೆ ತಕ್ಕುದು .. .. .. | 1—0—0 |

---

# ಹೊಸಪುಸ್ತಕಗಳು.

| | ರೂ. ಆ. ಪೈ. | | |
|---|---|---|---|
| | | ಅಬಲಾಸಚ್ಚರಿತ್ರರತ್ನಮಾಲೆ | 2—0—0 |
| ರಾಜಪುತ್ರರಮಣಿಯರು | 0—8—0 | ಚಂದ್ರಶೇಖರ .. | 1—12—0 |
| ಜೀರ್ಣವಿಜಯನಗರದರ್ಶ | 0—6—0 | ಸೀತಾರಾಮ .. | 1—12—0 |
| ಕೆಲವು ಸಣ್ಣ ಕತೆಗಳು .. | 1—0—0 | ಮೃಣ್ಮಯಿ .. | 1—8—0 |
| ಮಾಡಿದ್ದುಣ್ಣೋ ಮಹಾ | | ವಿಲಾಸಿನಿ .. | 0—10—0 |
| ರಾಯ .. | 0—13—0 | ರನು .. | 0—5—0 |
| ಕರ್ನೆಗಲ್ ರಾಮಶಾಸ್ತ್ರಿಗಳ | | ಹರಿದಾಸಿ .. | 0—4—0 |
| ಚರಿತ್ರೆ ... | 1—4—0 | ಪದ್ಮಿನಿ .. | 0—12—0 |
| ಸ್ವಾಮಿವಿವೇಕಾನಂದರ | | ಚಂದ್ರಮತಿ .. | 0—8—0 |
| ರಾಜಯೋಗ .. | 1—0—0 | ಸಂತಾಪಕ .. | 0—6—0 |
| ನಾಗರಾಜ ಅಥವಾ ರಾಜಾ | | ಕವಿಚರಿತ್ರೆ, ಸಂ. ೧ .. | 3—0—0 |
| ರಾಮನಾಥ .. | 1—8—0 | ಡಿಟೊ ,, ೨ .. | 5—0—0 |

ವಿಳಾಸ—**ಎಂ. ಎಸ್. ರಾವ್ ಕಂಪೆನಿ,**

**ಪುಸ್ತಕಪ್ರಕಾಶಕರು ಮತ್ತು ವ್ಯಾಪಾರಿಗಳು, ಬೆಂಗಳೂರು ಸಿಟಿ.**